ಶನಿವಾರ, ಸೆಪ್ಟೆಂಬರ್ 6, 2025| ₹ 7.00
prajavani.net prajavani
www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಓಣಂ ಸಂಭ್ರಮ**

ಓಣಂ ಹಬ್ಬ ಆಚರಣೆಯ ಅಂಗವಾಗಿ ಚಿಕ್ಕಮಗಳೂರಿನಲ್ಲಿ ಮಹಿಳೆಯರು ಪೂಕಳಂ (ಹೂವಿನ ರಂಗೋಲಿ) ರಚಿಸಿದರು

**ಗುರುವಿಗೆ ನಮನ**

ಶಿಕ್ಷಕರ ದಿನಾಚರಣೆ ಅಂಗವಾಗಿ ಮರಳು ಶಿಲ್ಪಿ ಸುದರ್ಶನ್ ಪಟ್ನಾಯಕ್ ಅವರು ಪುರಿಯ ಕಡಲ ತಡಿಯಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಮರಳು ಶಿಲ್ಪ ರಚಿಸಿದರು



Pure Since 1925
ರಾಸ ಲೀಲಾ
ಕಲೆಕ್ಷನ್
ದೈವಿಕ ಪ್ರೀತಿಯ
ಒಂದು ವ್ಯಾಖ್ಯಾನ.
ರಾಧಾ ಕೃಷ್ಣರ ನೃತ್ಯದ ಪ್ರತೀಕವಾಗಿರುವ ಈ ಸಂಗ್ರಹವು,
ಭಕ್ತಿ ಮತ್ತು ಬಯಕೆಯಿಂದ ನೇಯ್ದ ಸ್ವರ್ಣ, ವಜ್ರ ಹಾಗೂ ರತ್ನಗಳು,
ನಿಧಿವನ್ ನ ಮಂತ್ರಮುಗ್ಧ ರಾತ್ರಿಗಳು, ಹಾಗೂ ಅವರ ಕಾಲಾತೀತ ಬಾಂಧವ್ಯದಿಂದ
ಪ್ರೇರಿತರಾಗಿ ಮಾಡಿದ ಪ್ರತಿ ಆಭರಣದಲ್ಲೂ ಉತ್ಸಾಹ, ಸಂಕೀರ್ಣ ಕರಕುಶಲತೆ
ಮತ್ತು ಎಂದಿಗೂ ಮರೆಯಾಗದ ಪ್ರೀತಿಯ ಸಂತೋಷವಿರುತ್ತದೆ,
ಇದು ಆಭರಣಗಳಿಗಿಂತ ಹೆಚ್ಚು ಮತ್ತು ದೈವಿಕ ಉಡುಗೆಯನ್ನು
ಧರಿಸಲು ಆಹ್ವಾನವಾಗಿದೆ.
ಭೀಮ

prajavani.net prajavani www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಲುಕ್‌ಔಟ್ ನೋಟಿಸ್**
ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಹಾಗೂ ಅವರ ಪತಿ ರಾಜ್ ಕುಂದ್ರಾ ಅವರಿಗೆ ಮುಂಬೈ ಪೊಲೀಸರು ₹60 ಕೋಟಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಲುಕ್‌ಔಟ್ ನೋಟಿಸ್ ನೀಡಿದ್ದಾರೆ.

**ಕೌಶಲ ಪ್ರದರ್ಶನ**
ಚೆನ್ನೈನ ಅಧಿಕಾರಿಗಳ ತರಬೇತಿ ಅಕಾಡೆಮಿಯಲ್ಲಿ ಪದವಿ ಪ್ರದಾನ ಸಮಾರಂಭಕ್ಕೂ ಮುನ್ನ ನಡೆದ ವ್ಯಾಯಾಮದಲ್ಲಿ ಕೆಡೆಟ್‌ಗಳು ಕೌಶಲ ಪ್ರದರ್ಶಿಸಿದರು

ಸೆನ್ಸೆಕ್ಸ್ 80,710 | ನಿಫ್ಟಿ 24,741 | $/₹ 88.09 | ಚಿನ್ನ (Std. 10g) ₹1,12,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,31,200 (ಬೆಂಗಳೂರು)

# ‘ಅತಿಥಿ’ಗಳಿಲ್ಲದೇ ಬೋಧನೆ ಸ್ಥಗಿತ

## ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ತೊಡಕು

| 440 | 6,295 | 10,972 | 4,068 | 6,904 |
|---|---|---|---|---|
| ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು | ಕಾಯಂ ಅಧ್ಯಾಪಕರು | 2024-25ರಲ್ಲಿದ್ದ ಅತಿಥಿ ಉಪನ್ಯಾಸಕರು | ಯುಜಿಸಿ ವಿದ್ಯಾರ್ಹತೆ ಹೊಂದಿದವರು | ಯುಜಿಸಿ ವಿದ್ಯಾರ್ಹತೆ ಪಡೆಯದವರು |

• ಚಂದ್ರಹಾಸ ಹಿರೇಮಳಲಿ

**ಬೆಂಗಳೂರು:** ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಗದಿಪಡಿಸಿದ ‘ಅರ್ಹತೆ’ ವಿಷಯ ಕೋರ್ಟ್‌ನಲ್ಲಿರುವ ಕಾರಣಕ್ಕೆ ಅತಿಥಿ ಉಪನ್ಯಾಸಕರ ನೇಮಕ ವಿಳಂಬವಾಗಿದೆ. ಇದರಿಂದಾಗಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ತರಗತಿಗಳು ಸುಗಮವಾಗಿ ನಡೆಯದೇ ವಿದ್ಯಾರ್ಥಿಗಳ ಕಲಿಕೆಗೆ ತೊಡಕಾಗಿದೆ.

ಶೇ 50ಕ್ಕೂ ಹೆಚ್ಚು ಪ್ರಥಮ ದರ್ಜೆ ಕಾಲೇಜುಗಳು ಬೋಧನೆಗಾಗಿ ಅತಿಥಿ ಉಪನ್ಯಾಸಕರನ್ನೇ ಅವಲಂಬಿಸಿವೆ. ಎರಡು ದಶಕಗಳಿಗೂ ಹೆಚ್ಚು ಸಮಯದಿಂದ ಅತಿಥಿ ಉಪನ್ಯಾಸಕರ ಸೇವೆಯನ್ನು ಕಾಲೇಜು ಶಿಕ್ಷಣ ಇಲಾಖೆ ಬಳಸಿಕೊಳ್ಳುತ್ತಾ ಬಂದಿದೆ. ನಿಯಮದಂತೆ, ಅವರನ್ನು ಶೈಕ್ಷಣಿಕ ವರ್ಷದ ಆರಂಭದಲ್ಲಿ ನೇಮಕ ಮಾಡಿಕೊಂಡು, ವರ್ಷದ ಅಂತ್ಯಕ್ಕೆ ಕರ್ತವ್ಯದಿಂದ ಬಿಡುಗಡೆ ಮಾಡಲಾಗುತ್ತದೆ. 2024–25ನೇ ಸಾಲಿನಲ್ಲಿ ನೇಮಕವಾದ ಅತಿಥಿ ಉಪನ್ಯಾಸಕರನ್ನು ಇದೇ ಆಗಸ್ಟ್ 2ರಂದು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿತ್ತು. ಮತ್ತೆ ಆ.2ಕ್ಕೆ ಮರು ನೇಮಕ ಮಾಡಿಕೊಳ್ಳಬೇಕಿತ್ತು. ಆದರೆ, ಒಂದು ತಿಂಗಳು ಕಳೆದರೂ ನೇಮಕ ಮಾಡಿಕೊಂಡಿಲ್ಲ. ಇದರಿಂದ ಪದವಿ ತರಗತಿಗಳ 1, 3 ಹಾಗೂ 5ನೇ ಸೆಮಿಸ್ಟರ್ ವಿದ್ಯಾರ್ಥಿಗಳು ಪಾಠಗಳು ನಡೆಯದೆ ನಿತ್ಯವೂ ಪರಿತಪಿಸುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಂತೂ ಶೈಕ್ಷಣಿಕ ಚಟುವಟಿಕೆಗಳಿಗೆ ತೀವ್ರ ತೊಂದರೆಯಾಗಿದೆ. ▶9

**ತೀರ್ಪು ಎರಡು ದಿನಗಳಲ್ಲಿ ಹೊರ ಬರುವ ನಿರೀಕ್ಷೆ ಇದ್ದು, ಆದೇಶದ ಬಳಿಕ ನೇಮಕಾತಿ ಮಾಡಲಾಗುವುದು. ಕಾಲಮಿತಿ ಒಳಗೆ ಪತ್ಯ ಚಟುವಟಿಕೆ ಮುಗಿಸಲು ಕ್ರಮವಹಿಸಲಾಗುವುದು**

**ಡಾ.ಎಂ.ಸಿ.ಸುಧಾಕರ್,**
ಉನ್ನತ ಶಿಕ್ಷಣ ಸಚಿವ

### ಕೋರ್ಟ್ ತೀರ್ಪಿನತ್ತ ಸರ್ಕಾರದ ಚಿತ್ತ

ಯುಜಿಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿದವರು ಮತ್ತು ಹೊಂದದವರ ಮಧ್ಯೆ ನಡೆಯುತ್ತಿರುವ ಕಾನೂನು ಹೋರಾಟ ಉನ್ನತ ಶಿಕ್ಷಣ ಇಲಾಖೆಯನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಈ ಪ್ರಕರಣದ ವಿಚಾರಣೆ ಹೈಕೋರ್ಟ್‌ನಲ್ಲಿ ಸೆ.8ರಂದು ವಿಚಾರಣೆಗೆ ಬರಲಿದ್ದು, ನಂತರ ನಿರ್ಧಾರ ತೆಗೆದುಕೊಳ್ಳಲು ಇಲಾಖೆ ನಿರ್ಧರಿಸಿದೆ.

‘ಯುಜಿಸಿ ವಿದ್ಯಾರ್ಹತೆಯ ನಿಯಮ ಕಡ್ಡಾಯಗೊಳಿಸುವುದಕ್ಕೂ ಹಿಂದಿನಿಂದಲೂ ಸ್ನಾತಕೋತ್ತರ ಪದವಿ ಪಡೆದ ಸಾವಿರಾರು ಉಪನ್ಯಾಸಕರು ಕೆಲಸ ಮಾಡುತ್ತಾ ಬಂದಿದ್ದಾರೆ. ಒಮ್ಮೆಲೇ ಅವರನ್ನು ಕೆಲಸದಿಂದ ಕೈಬಿಡುವುದು ಸಹಜ ನ್ಯಾಯಕ್ಕೆ ವಿರುದ್ಧವಾದುದು. ಈ ಅಂಶವನ್ನು ಕೋರ್ಟ್‌ಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಲಾಗಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ‘ಪ್ರಜಾವಾಣಿ’ಗೆ ತಿಳಿಸಿದರು.

### ಒಂದು ತರಗತಿಗೆ 75 ವಿದ್ಯಾರ್ಥಿಗಳು

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಒಂದು ತರಗತಿಯಲ್ಲಿ ಗರಿಷ್ಠ ವಿದ್ಯಾರ್ಥಿಗಳ ಸಂಖ್ಯೆ 90 ಇತ್ತು. ಇದರಿಂದ ಸುಗಮ ಕಲಿಕೆಗೆ ಅಡ್ಡಿಯಾಗುತ್ತದೆ ಎಂದು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಮನವಿಗೆ ಸ್ಪಂದಿಸಿದ ಉನ್ನತ ಶಿಕ್ಷಣ ಇಲಾಖೆ ಒಂದು ತರಗತಿಯ ವಿದ್ಯಾರ್ಥಿಗಳ ಸಂಖ್ಯೆಯನ್ನು 75ಕ್ಕೆ ಇಳಿಸಿದೆ.

‘ಹೊಸ ಆದೇಶ 2025–26ನೇ ಸಾಲಿನಿಂದ ಅನ್ವಯವಾಗುತ್ತಿದ್ದು, ತರಗತಿಗಳ ಸಂಖ್ಯೆ ಹೆಚ್ಚಾಗಲಿದೆ. ಹೆಚ್ಚುವರಿಯಾಗಿ ಸುಮಾರು 2,000 ಅತಿಥಿ ಉಪನ್ಯಾಸಕರಿಗೆ ಕೆಲಸ ಸಿಗಲಿದೆ. ಆದರೆ, ಯುಜಿಸಿ ವಿದ್ಯಾರ್ಹತೆಯ ಆಧಾರದಲ್ಲೇ ನೇಮಕ ಮಾಡಿಕೊಂಡರೆ ಸಾಕಷ್ಟು ಕಾರ್ಯಭಾರ ಉಳಿಯಲಿದ್ದು, ಬೋಧನೆಗೆ ಮತ್ತೂ ತೊಡಕಾಗಲಿದೆ’ ಎನ್ನುತ್ತಾರೆ ರಾಜ್ಯ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಹನುಮಂತಗೌಡ ಕಲ್ಮನಿ.

## ಸ್ಮೈಲ್ ಪ್ಲೀಸ್...

ಪ್ರಜಾವಾಣಿ ಚಿತ್ರ: **ಗೋವಿಂದರಾಜ ಜವಳಿ**

ಈದ್ ಮಿಲಾದ್ ಪ್ರಯುಕ್ತ ಶುಕ್ರವಾರ ಹುಬ್ಬಳ್ಳಿಯಲ್ಲಿ ಹಮ್ಮಿಕೊಂಡಿದ್ದ ಮೆರವಣಿಗೆ ವೇಳೆ ಮುಸ್ಲಿಮರು ದುರ್ಗದಬೈಲ್‌ನ ಗಣೇಶ ಪೆಂಡಾಲ್ ಎದುರು ಸೆಲ್ಫಿ ಕ್ಲಿಕ್ಕಿಸಿಕೊಂಡರು

# ಮುಂಬೈ: 34 ಕಡೆ ಸ್ಫೋಟ ಬೆದರಿಕೆ

**ಮುಖ್ಯಾಂಶಗಳು**
- ನಗರ ಪ್ರವೇಶಿಸಿರುವ ಪಾಕ್‌ನ 14 ಉಗ್ರರು
- ವಾಹನಗಳಲ್ಲಿ ಆರ್‌ಡಿಎಕ್ಸ್ ಇರಿಸಿರುವ ಬೆದರಿಕೆ
- ಗಣೇಶ ವಿಗ್ರಹ ವಿಸರ್ಜನೆಗೆ ಬಿಗಿ ಬಂದೋಬಸ್ತ್

**ಮುಂಬೈ:** ‘ಲಷ್ಕರ್–ಎ–ಜಿಹಾದಿ’ ಸಂಘಟನೆಯ 14 ಭಯೋತ್ಪಾದಕರು ನಗರ ಪ್ರವೇಶಿಸಿದ್ದು, ಸುಮಾರು 400 ಕೆ.ಜಿಯಷ್ಟು ಆರ್‌ಡಿಎಕ್ಸ್ ಅನ್ನು 34 ವಾಹನಗಳಲ್ಲಿ ಇರಿಸಿದ್ದಾರೆ ಎಂಬ ಬೆದರಿಕೆ ಸಂದೇಶ ಬಂದ ಬೆನ್ನಲ್ಲೇ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ.

‘ಈ ವಾಹನಗಳನ್ನು ಸ್ಫೋಟಿಸುವ ಮೂಲಕ ದೇಶವನ್ನು ಬೆಚ್ಚಿ ಬೀಳಿಸಲಾಗುವುದು’ ಎಂಬ ಸಂದೇಶವು ನಗರದ ಸಂಚಾರ ಪೊಲೀಸರ ನಿಯಂತ್ರಣ ಕೊಠಡಿಯ ವಾಟ್ಸ್‌ಆ್ಯಪ್ ಸಹಾಯವಾಣಿಗೆ ಬಂದಿದೆ.

ಈ ಬೆದರಿಕೆ ಸಂದೇಶ ಕುರಿತು ಅಪರಾಧ ವಿಭಾಗ ತನಿಖೆ ಕೈಗೊಂಡಿದೆ. ಅಲ್ಲದೆ ಈ ಕುರಿತು ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಮತ್ತು ಇತರ ಸಂಸ್ಥೆಗಳಿಗೂ ಮಾಹಿತಿ ನೀಡಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಸಂದೇಶ ಕಳಿಸಿದ ವ್ಯಕ್ತಿಯು ತನ್ನನ್ನು ಲಷ್ಕರ್–ಎ–ಜಿಹಾದಿ ಸಂಘಟನೆಗೆ ಸೇರಿದವನು ಎಂದು ಉಲ್ಲೇಖಿಸಿಕೊಂಡಿದ್ದು, ಪಾಕಿಸ್ತಾನದಿಂದ 14 ಭಯೋತ್ಪಾದಕರು ಮುಂಬೈಗೆ ಬಂದಿದ್ದಾರೆ ಎಂದು ಮಾಹಿತಿ ನೀಡಿದ್ದಾನೆ. ಅಲ್ಲದೆ ಸ್ಫೋಟಕ್ಕೆ 400 ಕೆ.ಜಿ ಆರ್‌ಡಿಎಕ್ಸ್ ಬಳಸಲಾಗುತ್ತಿದ್ದು, 1 ಕೋಟಿ ಜನರನ್ನು ಕೊಲ್ಲಲಾಗುತ್ತದೆ ಎಂದೂ ತಿಳಿಸಿದ್ದಾನೆ’ ಎಂದು ಅವರು ವಿವರಿಸಿದರು.

‘ಸಂದೇಶದ ಮೂಲ ಯಾವುದು ಎನ್ನುವ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಅದರ ಜತೆಗೆ ಪ್ರಮುಖ ಪ್ರದೇಶಗಳಲ್ಲಿ ಶೋಧ ಕಾರ್ಯವನ್ನೂ ನಡೆಸಲಾಗಿದೆ. ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ವಿವಿಧೆಡೆ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ’ ಎಂದು ಅವರು ಹೇಳಿದರು.

ಯಾವುದೇ ಸಂಶಯಾಸ್ಪದ ವಸ್ತುಗಳು ಕಂಡುಬಂದರೆ ಕೂಡಲೇ ಮಾಹಿತಿ ನೀಡುವಂತೆ ಹಾಗೂ ವದಂತಿಗಳಿಗೆ ಕಿವಿಗೊಡದಂತೆ ಪೊಲೀಸರು ಮುಂಬೈ ಜನರಲ್ಲಿ ಮನವಿ ಮಾಡಿದ್ದಾರೆ.

ಗಣೇಶ ಉತ್ಸವದ 10ನೇ ದಿನವಾದ ಅನಂತ ಚತುರ್ಥಿಯಂದು (ಶನಿವಾರ) ಲಕ್ಷಾಂತರ ಜನರು ನಗರದ ರಸ್ತೆಗಳಲ್ಲಿ ಸೇರಲಿದ್ದಾರೆ. ಇದೇ ವೇಳೆ ಬೆದರಿಕೆ ಸಂದೇಶ ಬಂದಿರುವುದರಿಂದ ಹೆಚ್ಚಿನ ಭದ್ರತಾ ವ್ಯವಸ್ಥೆ ಮಾಡಲಾಗಿದೆ.

‘ಭದ್ರತೆ ಮತ್ತು ನಿಗಾ ಕಾರ್ಯಕ್ಕಾಗಿ ಕೃತಕ ಬುದ್ಧಿಮತ್ತೆಯನ್ನೂ ಬಳಸಲಾಗುತ್ತಿದೆ’ ಎಂದು ಮಹಾರಾಷ್ಟ್ರದ ಸಚಿವ ಯೋಗೇಶ್ ಕದಂ ತಿಳಿಸಿದ್ದಾರೆ. ಬೆದರಿಕೆ ಬೆನ್ನಲ್ಲೇ ಮುಂಬೈ ಪಕ್ಕದ ಪಾಲ್ಘರ್, ಠಾಣೆ ಮತ್ತು ರಾಯಗಡ ಜಿಲ್ಲೆಗಳಲ್ಲೂ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ.

**ಚಿನಕುರುಳಿ** ಪ್ರಕಾಶ್ ಶೆಟ್ಟಿ

# 6 ಬಾರಿ ಸೀಟ್ ಬೆಲ್ಟ್ ಧರಿಸದ ಸಿ.ಎಂ: ದಂಡ ಪಾವತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಳಸುವ ಕಾರು 2024ರಿಂದ ಈವರೆಗೆ ಏಳು ಬಾರಿ ಸಂಚಾರ ನಿಯಮಗಳನ್ನು ಉಲ್ಲಂಘಿಸಿರುವುದು ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಕ್ಯಾಮೆರಾಗಳಲ್ಲಿ ದಾಖಲಾಗಿದೆ.

ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರವು ಅವಕಾಶ ಕಲ್ಪಿಸಿದ್ದು, ಸಿದ್ದರಾಮಯ್ಯ ಅವರು ಬಳಸುತ್ತಿರುವ ಕಾರಿನ ಮೇಲಿನ ಪ್ರಕರಣಗಳ ಸಂಬಂಧ ದಂಡ ಪಾವತಿಯಾಗಿದೆ ಎಂದು ಸಂಚಾರ ಪೊಲೀಸ್ ಮೂಲಗಳು ತಿಳಿಸಿವೆ.

ಆರು ಪ್ರಕರಣಗಳಲ್ಲಿ ಮುಖ್ಯಮಂತ್ರಿ ಸೀಟ್ ಬೆಲ್ಟ್ ಧರಿಸದೇ ನಿಯಮ ಉಲ್ಲಂಘಿಸಿದ್ದಾರೆ. ಶೇ 50ರಷ್ಟು ರಿಯಾಯಿತಿ ಅನುಸಾರ ₹2,500 ದಂಡವಿತ್ತು. ಸಿದ್ದರಾಮಯ್ಯ ಅವರು ಕಾರಿನ ಮುಂಭಾಗದಲ್ಲಿ ಕುಳಿತುಕೊಂಡಾಗ ಸೀಟ್ ಬೆಲ್ಟ್ ಧರಿಸದೇ ನಿಯಮ ಉಲ್ಲಂಘಿಸಿರುವ ದೃಶ್ಯಾವಳಿ ಐಟಿಎಂಎಸ್‌ನಲ್ಲಿ ಸೆರೆಯಾಗಿದೆ. ▶3A

ಇಂಟಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂನಲ್ಲಿ (ಐಟಿಎಂಎಸ್) ಸೆರೆಯಾದ ದೃಶ್ಯ

# ರವಿಕುಮಾರ್ ರಾಜೀನಾಮೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನಕ್ಕೆ ಎಸ್.ರವಿಕುಮಾರ್ ಶುಕ್ರವಾರ ರಾಜೀನಾಮೆ ಸಲ್ಲಿಸಿದ್ದಾರೆ.

‘ಹಿಂದಿನ ಸರ್ಕಾರದ ಅವಧಿಯಲ್ಲಿ ನಡೆದಿದ್ದ ಅಕ್ರಮಗಳ ಬಗ್ಗೆ ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿವೆ. ನಿಗಮದಲ್ಲಿ ಹಿಂದಿನಿಂದಲೂ ನಡೆದು ಕೊಂಡು ಬಂದಿದ್ದ ಕೆಲ ಅವ್ಯವಹಾರ ಗಳನ್ನು ಪತ್ತೆ ಹಚ್ಚಿ, ಅಶಿಸ್ತಿಗೆ ಕಡಿವಾಣ ಹಾಕಲು ಮುಂದಾಗಿದ್ದೆ. ಇದನ್ನು ಸಹಿಸದ ಕೆಲವರು ನನ್ನ ವಿರುದ್ಧ ಪಿತೂರಿ ನಡೆಸಿದ್ದಾರೆ’ ಎಂದಿದ್ದಾರೆ. ▶3A

**ಹವಾಮಾನ ಮುನ್ಸೂಚನೆ:** ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

# ನಾಳೆ ಚಂದ್ರಗ್ರಹಣ: ವೀಕ್ಷಣೆಗೆ ಅವಕಾಶ

## ನಗರದ ವಿವಿಧೆಡೆ ಉಪನ್ಯಾಸ, ರಸಪ್ರಶ್ನೆ, ಗ್ರಹಣ ಮಾದರಿ ಪ್ರದರ್ಶನಗಳ ಆಯೋಜನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಂಪೂರ್ಣ ಚಂದ್ರಗ್ರಹಣವು ಇದೇ ಭಾನುವಾರ ಸಂಭವಿಸಲಿದ್ದು, ಜವಾಹರಲಾಲ್ ನೆಹರೂ ತಾರಾಲಯ ಸೇರಿ ವಿವಿಧೆಡೆ ಗ್ರಹಣ ವೀಕ್ಷಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಇಲ್ಲಿ ವೀಕ್ಷಕರ ವೇದಿಕೆ ಕರ್ನಾಟಕ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜವಾಹರಲಾಲ್ ನೆಹರೂ ತಾರಾಲಯದ ನಿರ್ದೇಶಕ ಬಿ.ಆರ್. ಗುರುಪ್ರಸಾದ್, 'ಕರ್ನಾಟಕ ಸೇರಿದಂತೆ ದೇಶದಾದ್ಯಂತ ಈ ಗ್ರಹಣ ಗೋಚರಿಸಲಿದೆ. ಅಪರೂಪದ ಈ ಘಟನೆಯನ್ನು ಬರಿಗಣ್ಣಿನಿಂದ ಸುಲಭವಾಗಿ ವೀಕ್ಷಿಸಬಹುದು. ಚಂದ್ರ ಮತ್ತು ಸೂರ್ಯನ ನಡುವೆ ಭೂಮಿ ಬಂದಾಗ ನಡೆಯುವ ಈ ನೆರಳಿನ ಆಟವನ್ನು ಎಲ್ಲರೂ ಮನೆಯಿಂದ ಹೊರಬಂದು ಕಣ್ತುಂಬಿಕೊಳ್ಳಬಹುದು' ಎಂದರು.

'ಭಾನುವಾರ ರಾತ್ರಿ 9.57ರಿಂದ ಗ್ರಹಣ ಪ್ರಕ್ರಿಯೆ ಆರಂಭವಾಗಲಿದೆ. 11.01ರಿಂದ 12.23ರ ಅವಧಿಯಲ್ಲಿ ಸಂಪೂರ್ಣ ಚಂದ್ರಗ್ರಹಣ ಸಂಭವಿಸಲಿದ್ದು, ಸೋಮವಾರ

ಮುಂಜಾನೆ 2.25ಕ್ಕೆ ಅಂತ್ಯಗೊಳ್ಳುತ್ತದೆ. ಗ್ರಹಣದ ಸಮಯ ತಡ ರಾತ್ರಿವರೆಗೂ ಈ ಪ್ರಕ್ರಿಯೆಯನ್ನು ಬರಿಗಣ್ಣಿನಿಂದ ವೀಕ್ಷಿಸಬಹುದು. ವಿವಿಧ ಸಂಸ್ಥೆಗಳು ಸಹ ಗ್ರಹಣ ವೀಕ್ಷಣಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಿವೆ. ಮುಂದಿನ ಸಂಪೂರ್ಣ ಚಂದ್ರಗ್ರಹಣ 2028ರ ಡಿ.31ರಂದು ನಡೆಯಲಿದೆ' ಎಂದರು.

**ಸಾರ್ವಜನಿಕ ಕಾರ್ಯಕ್ರಮ:** ಗ್ರಹಣ ವೀಕ್ಷಣೆಗೆ ನಗರದ ವಿವಿಧೆಡೆ ಸಾರ್ವಜನಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಉಪನ್ಯಾಸ, ರಸಪ್ರಶ್ನೆ, ಗ್ರಹಣ ಮಾದರಿ ಪ್ರದರ್ಶನಗಳು ನಡೆಯಲಿವೆ. ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಭಾನುವಾರ ಸಂಜೆ 7 ಗಂಟೆಯಿಂದ ಗ್ರಹಣ ವೀಕ್ಷಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 200 ಮಂದಿಗೆ ಅವಕಾಶ ಕಲ್ಪಿಸಲಾಗಿದೆ.

ವಿಜಯನಗರದಲ್ಲಿ ಯಂಗ್ ಇನ್ನೋವೇಟರ್ಸ್ ಎಜುಕೇಷನಲ್ ಸರ್ವಿಸಸ್ ಸಂಸ್ಥೆ ರಾತ್ರಿ 9 ಗಂಟೆಯಿಂದ, ಕೋರಮಂಗಲದಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ ಹಾಗೂ ಲಾಲ್‌ಬಾಗ್ ರಸ್ತೆಯಲ್ಲಿರುವ ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ ರಾತ್ರಿ 8.30ರಿಂದ ಹಾಗೂ ರಾಜಾಜಿನಗರದಲ್ಲಿರುವ ಬ್ರೇಕಥ್ರೂ ಸೈನ್ಸ್ ಸೊಸೈಟಿ ಸಂಜೆ 7 ಗಂಟೆಯಿಂದ ಗ್ರಹಣ ವೀಕ್ಷಣೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

## 'ಬ್ಯಾಲೆಟ್ ಮತದಾನ, ಗೆಲ್ಲಲು ಕಸರತ್ತು'

**ಹುಬ್ಬಳ್ಳಿ:** 'ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಿಲ್ಲ ಎನ್ನುವುದು ಕಾಂಗ್ರೆಸ್‌ಗೆ ಖಚಿತವಾಗಿದೆ. ಅದಕ್ಕೆ ಮತಪತ್ರದ (ಬ್ಯಾಲೆಟ್) ಮೂಲಕ ಕುತಂತ್ರದಿಂದ ಗೆಲ್ಲಲು ಹವಣಿಸುತ್ತಿದೆ' ಎಂದು ಸಂಸದ ಜಗದೀಶ ಶೆಟ್ಟರ್ ಆರೋಪಿಸಿದರು. 'ಮತಪತ್ರಗಳನ್ನು ಬಳಸಿ ಮತ ಚಲಾಯಿಸುವ ವ್ಯವಸ್ಥೆ ಜಾರಿಗೊಳಿಸಲು ಪ್ರಯತ್ನಿಸುತ್ತಿರುವುದು ಮೂರ್ಖತನದ ಪರಮಾವಧಿ ಎಂದರು.

## 'ಅಭಿಮಾನ್ ಸ್ಟುಡಿಯೊ ಜಾಗಕ್ಕೆ ಹೋರಾಟ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಅಭಿಮಾನ್ ಸ್ಟುಡಿಯೊ ಜಾಗವನ್ನು ಮುಟ್ಟುಗೋಲು ಹಾಕಿಕೊಳ್ಳುವ ಸರ್ಕಾರದ ಕ್ರಮದ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು. ಈ ಹಿಂದೆ 10 ಎಕರೆ ಜಮೀನು ಮಾರಾಟದಲ್ಲಿ ಅವ್ಯವಹಾರ ನಡೆದಿದ್ದು, ಸರ್ಕಾರವೂ ಇದರಲ್ಲಿ ಭಾಗಿಯಾಗಿದೆ' ಎಂದು ಹಾಸ್ಯನಟ ಟಿ.ಎನ್. ಬಾಲಕೃಷ್ಣ ಅವರ ಪುತ್ರಿ ಗೀತಾ ಬಾಲಿ ಆರೋಪಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಉತ್ತರಹಳ್ಳಿ-ಕೆಂಗೇರಿ ರಸ್ತೆಯಲ್ಲಿರುವ ಅಭಿಮಾನ್ ಸ್ಟುಡಿಯೊ ಭೂಮಿಯನ್ನು ಅರಣ್ಯ ಇಲಾಖೆ ಮರಳಿ ಪಡೆಯುತ್ತಿರುವ ಆದೇಶ ಪ್ರತಿ ನನಗೆ ತಲುಪಿಲ್ಲ. ಸರ್ಕಾರವು ಈ ಜಮೀನನ್ನು ಮುಟ್ಟುಗೋಲು ಹಾಕಿಕೊಂಡರೆ, ಕಾನೂನು ಹೋರಾಟ ಮಾಡಲಾಗುವುದು. ನಮ್ಮ ತಂದೆಯ ಹೆಸರಿನಲ್ಲಿ ಇರುವ ಜಾಗವನ್ನು ಉಳಿಸಿಕೊಂಡು, ಅದನ್ನು ಅಭಿವೃದ್ಧಿ ಪಡಿಸಲು ಶ್ರಮಿಸುತ್ತೇನೆ' ಎಂದು ಹೇಳಿದರು.

'ತಂದೆಯ ಜಾಗ ತಂದೆಯ ಹೆಸರಿನಲ್ಲಿಯೇ ಉಳಿಯಬೇಕು. ನಾನು ಅದನ್ನು ಮಾರಾಟ ಮಾಡುವುದಿಲ್ಲ. ಅಲ್ಲಿ ವಿಷ್ಣುವರ್ಧನ್ ಅವರ ಸ್ಮಾರಕ ನಿರ್ಮಿಸಲು ನನ್ನ ಬೆಂಬಲವಿದೆ' ಎಂದರು.

**ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್**
(CIN: U70102KA1937PLC001292)
ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, ನಂ. 51, 1ನೇ ಕ್ರಾಸ್, ಜೆ. ಸಿ. ರಸ್ತೆ, ಬೆಂಗಳೂರು 560027 ಫೋನ್: 080-41575566
ಇಮೇಲ್: ed_secretary@bgse.co.in; Website:www.bgse.co.in

**62ನೇ ವಾರ್ಷಿಕ ಸರ್ವಸದಸ್ಯರ ಸಭೆಯ (AGM) ಸೂಚನೆ**

**ಎಜಿಎಮ್ ಸೂಚನೆ: ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್** (ಕಂಪನಿ), **ತನ್ನ ಅರವತ್ತೆರಡನೆಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು (ಎಜಿಎಮ್) ಸೋಮವಾರ, 29ನೇ ಸೆಪ್ಟೆಂಬರ್, 2025 ರಂದು ಬೆಳಿಗ್ಗೆ 09.30 ಗಂಟೆಗೆ** ಒಂದು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದೆಯೇ, ಕಂಪನಿಗಳ ಅಧಿನಿಯಮ, 2013ರ ಅನ್ವಯವಾಗುವ ನಿಬಂಧನೆಗಳನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (MCA) ಹೊರಡಿಸಿರುವ ಸಂ. 14/2020 ದಿ.08 ಏಪ್ರಿಲ್ 2020, 17/2020 ದಿ.13 ಏಪ್ರಿಲ್ 2020, 20/2020 ದಿ.05 ಮೇ 2020, 10/2022 ದಿ.28 ಡಿಸೆಂಬರ್ 2022, ದಿ. 09/2023 ದಿ. ಸೆಪ್ಟೆಂಬರ್ 25, 2023 ಮತ್ತು ನಂತರದ ಸುತ್ತೋಲೆಗಳು ಅದರಲ್ಲಿ ಇತ್ತೀಚಿನದೆಂದರೆ 09/2024 ದಿ. ಸೆಪ್ಟೆಂಬರ್ 19, 2024 (ಇವುಗಳನ್ನು ಒಟ್ಟಾಗಿ 'ಎಂಸಿಎ ಸುತ್ತೋಲೆಗಳು' ಎಂದು ಉಲ್ಲೇಖಿಸಿದ್ದೇವೆ) ಈ ಎಲ್ಲ ಸುತ್ತೋಲೆಗಳ ಜೊತೆ ಓದಿಕೊಂಡ ಪ್ರಕಾರ ವಿಡಿಯೊ ಕಾನ್ಫರೆನ್ಸ್ (VC) ಅಥವಾ ಇತರೆ ಶ್ರವಣ-ದೃಶ್ಯ ಮಾಧ್ಯಮಗಳ (OAVM) ಮೂಲಕ ನಡೆಸಲು ಉದ್ದೇಶಿಸಿದೆ ಎಂದು ಈ ಮೂಲಕ ಕಂಪನಿಯ ಸದಸ್ಯರೆಲ್ಲರಿಗೂ ಸೂಚನೆಯನ್ನು ನೀಡಲಾಗುತ್ತಿದೆ.

**ದಾಖಲೆಗಳ ಲಭ್ಯತೆ:** ಯಾರೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಡಿಪಾಸಿಟರಿ ಪಾರ್ಟಿಸಿಪೆಂಟರು (DPs) ಮತ್ತು ಕಂಪನಿಯೊಂದಿಗೆ/ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರೊಂದಿಗೆ (RTA) ನೋಂದಾಯಿಸಿಕೊಂಡಿದ್ದಾರೋ ಅಂತಹ ಸದಸ್ಯರೆಲ್ಲರಿಗೂ 05ನೇ ಸೆಪ್ಟೆಂಬರ್, 2025 ರಂದು ಕಂಪನಿಯ 62ನೇ ಎಜಿಎಮ್ ಸೂಚನೆಯ ಮತ್ತು 2024-25 ಸಾಲಿನ ವಾರ್ಷಿಕ ವರದಿಯ ಪ್ರತಿಗಳನ್ನು ಕಳುಹಿಸಲಾಗಿದೆ. ಜೊತೆಗೆ, ಈ ದಾಖಲೆಗಳು ಕಂಪನಿಯ ವೆಬ್‌ಸೈಟ್ www.bgse.co.in ನಲ್ಲೂ ಲಭ್ಯವಿರುವಂತೆ ವ್ಯವಸ್ಥೆ ಮಾಡಲಾಗಿದೆ.

**ಇ-ಮತದಾನ:** ಸಿಡಿಎಸ್‌ಎಲ್ ಸಂಸ್ಥೆಯು ರಿಮೋಟ್ ಇ-ಮತದಾನದ ಸೌಲಭ್ಯವನ್ನು ಒದಗಿಸುತ್ತಿದೆ ಮತ್ತು ರಿಮೋಟ್ ಇ-ಮತದಾನವು ಶುಕ್ರವಾರ, ಸೆಪ್ಟೆಂಬರ್ 26, 2025 ರಂದು ಬೆಳಗ್ಗೆ 09.00ಕ್ಕೆ (ಭಾ.ಕಾ) ಆರಂಭವಾಗಿ ಗುರುವಾರ, ಭಾನುವಾರ, ಸೆಪ್ಟೆಂಬರ್ 28, 2025 ರಂದು ಸಂಜೆ 05.00ಕ್ಕೆ (ಭಾ.ಕಾ) ಕೊನೆಯಾಗುತ್ತದೆ. ಈ ಅವಧಿಯಲ್ಲಿ, ಅಂತಿಮ ದಿನಾಂಕವಾದ ಶುಕ್ರವಾರ, ಸೆಪ್ಟೆಂಬರ್ 19, 2025 ರಂದು ಕಂಪನಿಯ ಷೇರುಗಳನ್ನು ಭೌತಿಕ ರೂಪದಲ್ಲೋ ಅಥವಾ ಡೀಮ್ಯಾಟ್ ರೂಪದಲ್ಲೋ ಹೊಂದಿರುವ ಷೇರುದಾರರು ತಮ್ಮ ಮತಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಚಲಾಯಿಸಬಹುದಾಗಿರುತ್ತದೆ.

ಯಾವ ಸದಸ್ಯರು ಡೀಮ್ಯಾಟ್ ಅಥವಾ ಭೌತಿಕ ರೂಪದಲ್ಲಿ ತಮ್ಮ ಷೇರುಗಳನ್ನು ಹೊದಿರುವರೋ, ಅಥವಾ ಯಾರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಂಡಿಲ್ಲವೋ, ಅಂತಹ ಸದಸ್ಯರು ಸಭೆಯು ನಡೆಯುವ ಅವಧಿಯಲ್ಲಿ ರಿಮೋಟ್ ಇ-ಮತದಾನ ಅಥವಾ ಇ-ಮತದಾನದ ಮೂಲಕ ತಮ್ಮ ಮತಗಳನ್ನು ಚಲಾಯಿಸಬಹುದು. ಭೌತಿಕ ರೂಪದಲ್ಲಿ ಷೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯ ed_secretary@bgse.co.in ಇಮೇಲ್ ವಿಳಾಸಕ್ಕೆ ಬರೆದು ತಾವು ಹೊಂದಿರುವ ಷೇರುಗಳ ಕುರಿತಾದ ಅಗತ್ಯ ವಿವರಗಳನ್ನು ಮತ್ತು ದಾಖಲೆಗಳನ್ನು ನೀಡಿ ತಮ್ಮ ಇಮೇಲ್ ಐಡಿಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಳ್ಳಬಹುದು; ವಿದ್ಯುನ್ಮಾನ ರೂಪದಲ್ಲಿ ಷೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯಿಂದ ಬರುವ ಎಲ್ಲ ಸಂವಹನವನ್ನೂ ವಿದ್ಯುನ್ಮಾನ ರೂಪದಲ್ಲಿ ಸ್ವೀಕರಿಸಲು ಸಾಧ್ಯವಾಗುವಂತೆ ತಮಗೆ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ (DPs) ತಮ್ಮ ಇಮೇಲ್ ವಿಳಾಸಗಳನ್ನು ದಾಖಲಿಸಿಕೊಳ್ಳಬೇಕಾಗಿ / ನವೀಕರಿಸಬೇಕಾಗಿ ಕೋರುತ್ತೇವೆ.

ಯಾವ ಸದಸ್ಯರಿಗೆ VC ಮೂಲಕ ಸಭೆಯನ್ನು ಪ್ರವೇಶಿಸಲು ಮತ್ತು ಅದರಲ್ಲಿ ಭಾಗವಹಿಸಲು ತಾಂತ್ರಿಕ ನೆರವು ಅಗತ್ಯವೋ ಅಂತಹ ಸದಸ್ಯರು ಇ-ಮತದಾನ ಸೇವೆಯನ್ನು ಒದಗಿಸುತ್ತಿರುವ ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಅನ್ನು ಸಂಪರ್ಕಿಸಬಹುದು; ಸಂಪರ್ಕ ವ್ಯಕ್ತಿಗಳು: ಶ್ರೀಯುತರಾದ ನಿತಿನ್ ಕುಂದರ್ (022-23058738); ಭವೇಶ್ ಪಿಂಪುತ್ಕರ್ (022-23058543); ರಾಕೇಶ್ ದಲ್ವಿ (022-23058542) ಇಮೇಲ್ ಐಡಿ: helpdesk.evoting@cdslindia.com

ನಿರ್ದೇಶಕರ ಮಂಡಲಿಯ ಆದೇಶದ ಮೇರೆಗೆ
ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್ ಪರವಾಗಿ
ಸಹಿ/-
(ವಿನೋದ್ ಜಿ ಜೈನ್)
ಕಾರ್ಯನಿರ್ವಾಹಕ ನಿರ್ದೇಶಕರು
DIN: 00248275

ಸ್ಥಳ: ಬೆಂಗಳೂರು
ದಿನಾಂಕ: 28/08/2025

ಜೆಡ್-28015/45/2025-ಪಿಎಂಎಸ್‌ಎಸ್‌ವೈ-4(8323809)
ಭಾರತ ಸರ್ಕಾರ
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ**
(ಪಿಎಂಎಸ್‌ಎಸ್‌ವೈ ಡಿವಿಜನ್)
ಕೊಠಡಿ ಸಂ. 409-ಡಿ,
ನಿರ್ಮಾಣ ಭವನ, ನವದೆಹಲಿ-110011

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ (ಪಿಎಂಎಸ್‌ಎಸ್‌ವೈ ಡಿವಿಜನ್) ಇವರು, ಎಐಐಎಂಎಸ್ ಹೃಷಿಕೇಶದಲ್ಲಿ (ಉತ್ತರಾಖಂಡ) ಹಂತ-13 ರಲ್ಲಿ (ರೂ. 123100-215900) (7ನೇ ಸಿಪಿಸಿ ಮೇರೆಗೆ) ಡೆಪ್ಯೂಟಿ ಡೈರೆಕ್ಟರ್ (ಆಡಳಿತ) ಹುದ್ದೆಯನ್ನು ಟ್ರಾನ್ಸ್‌ಫರ್ ಆನ್ ಡೆಪ್ಯುಟೇಶನ್ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

2. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಚಿವಾಲಯದ https://mohfw.gov.in ಮತ್ತು ಸದರಿ ಡಿವಿಜನ್‌ನ https://pmssy.mohfw.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ.

3. ವಿವರವಾದ ಜಾಹೀರಾತನ್ನು ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 45ನೇ ದಿನವು, ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕವಾಗಿರುತ್ತದೆ.

ಸಹಿ/-
ಡೆಪ್ಯೂಟಿ ಸೆಕ್ರೆಟರಿ
CBC17101/11/0022/2526
ಫೋನ್: 011-23062980

**ಅಂತರಾಷ್ಟ್ರೀಯ ಪುಷ್ಪ ಹರಾಜು ಬೆಂಗಳೂರು ನಿಯಮಿತ**
ನಂ.24, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು - 560024, ಫೋನ್ ನಂ. . 8431235867 / 8431235858
ಇ-ಮೇಲ್ : : ifablimited@gmail.com, ವೆಬ್‌ಸೈಟ್ :-www.ifabindia.org
No.IFAB/2025-26/SE0029 DATE: 30.08.2025

**ಅಂತರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ, ಬೆಂಗಳೂರು ಸಂಸ್ಥೆಯ ಗುಲಾಬಿ ಮತ್ತು ಇತರೆ ಹೂಗಳ ಡಚ್ ಹರಾಜು ಸಾಫ್ಟ್‌ವೇರ್ / ರಿಮೋಟ್ ಬಿಡ್ಡಿಂಗ್ ಸಾಫ್ಟ್‌ವೇರ್ (RBS) AMC ಗಾಗಿ ಟೆಂಡರ್ ಕುರಿತು**

ಅಂತರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ, ಬೆಂಗಳೂರು ಸಂಸ್ಥೆಯ ಗುಲಾಬಿ ಮತ್ತು ಇತರೆ ಹೂಗಳ ಡಚ್ ಹರಾಜು ಸಾಫ್ಟ್‌ವೇರ್ / ರಿಮೋಟ್ ಬಿಡ್ಡಿಂಗ್ ಸಾಫ್ಟ್‌ವೇರ್ AMC ಗಾಗಿ ಎರಡು ಬಿಡ್ ಸಿಸ್ಟಮ್ ಆನ್‌ಲೈನ್ ಟೆಂಡರ್ ಕುರಿತು ಆಸಕ್ತಿಯುಳ್ಳ ವಹಿವಾಟುದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ವಿವರ ಮತ್ತು ದಾಖಲೆಗಳು ದಿನಾಂಕ: **30-08-2025** ರಿಂದ ಕರ್ನಾಟಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಲ್ಲಿ ಮಾತ್ರ ಲಭ್ಯವಿರುತ್ತದೆ, ಟೆಂಡರ್ ಸಲ್ಲಿಸಲು **09.09.2025** ರಂದು ಸಂಜೆ **5.00** ಗಂಟೆಗೆ ಕೊನೆಯ ದಿನಾಂಕ ಆಗಿರುತ್ತದೆ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ವಾ.ಸಾ.ಸಂ.ಇ/ವಾಪ್ರ/2663/ಎಸ್‌ಎಸ್‌ಸಿ/2025-26

## ಹಟ್ಟಿಲಕ್ಕಮ್ಮ ವಾರ್ಷಿಕೋತ್ಸವ ಕಾರ್ಯಕ್ರಮ

**ರಾಜರಾಜೇಶ್ವರಿ ನಗರ:** ಜ್ಞಾನಭಾರತಿ ಬಡಾವಣೆಯಲ್ಲಿರುವ ಮಹಾಲಕ್ಷ್ಮಿ ಹಟ್ಟಿಲಕ್ಕಮ್ಮ ದೇವಿಯ 17ನೇ ವಾರ್ಷಿಕೋತ್ಸವ, ದೇವರ ಉತ್ಸವ, ಮೆರವಣಿಗೆ ಶುಕ್ರವಾರ ಜರುಗಿತು.

ವಿವಿಧ ಹೋಮ, ಹವನ, ಸಾಂಸ್ಕೃತಿಕ ಕಾರ್ಯಕ್ರಮ, ದೇವರ ನಾಮಸ್ಮರಣೆ, ಭಕ್ತಿ ಗೀತೆಗಳ ಗಾಯನ, ಅನ್ನಪ್ರಸಾದ ನಡೆಯಿತು. ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಎಸ್ ಸಿ ಮೋರ್ಚಾ ಅಧ್ಯಕ್ಷ ಜಿ. ಮುನಿರಾಜು, ದೇವಸ್ಥಾನದ ಪ್ರಧಾನ ಅರ್ಚಕರಾದ ಸುಶೀಲಮ್ಮ, ಮುಖಂಡರಾದ ಜಿ. ಮುತ್ತಯ್ಯ, ವೆಂಕಟೇಶ್, ಜಗದೀಶ್, ರಾಜಣ್ಣ ಪಾಲ್ಗೊಂಡಿದ್ದರು.

**ಸಾರ್ವಜನಿಕ ಪ್ರಕಟಣೆ**

ನಮ್ಮ ಕಕ್ಷಿದಾರರಾದ **ಶ್ರೀ. ಎಮ್. ನೀಲಕಂಠ ನಾಯ್ಡು**, ಬಿನ್ ಗಂಗಮ್ಮನಾಯ್ಡು ಸುಮಾರು ವಯಸ್ಸು 82 ವರ್ಷ, ವಾಸ: ನಂ.381, 12 ಕ್ರಾಸ್, 4ನೇ ಡಿ. ಮುಖ್ಯ ರಸ್ತೆ, 2ನೇ ಹಂತ, ಮಹಾಲಕ್ಷ್ಮಿಪುರಮ್ ಬಡಾವಣೆ, ಬೆಂಗಳೂರು ಉತ್ತರ-560086, ರವರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಉದ್ದೇಶಿಸಿದ್ದು, ಸದರಿ ಷೆಡ್ಯೂಲ್ ಸ್ವತ್ತನ್ನು **ಶ್ರೀ. ವೈ. ಧನಶೇಖರನ್** ಬಿನ್ ಎ.ವಿ. ಯಸೀನ್, **ಶ್ರೀಮತಿ. ಎ. ಜಯಶೀಲ**, ಕೋಂ. ವೈ. ಧನಶೇಖರನ್, **ಶ್ರೀಮತಿ. ಷರನ್ ಶೆನೈ. ಡಿ,** ಬಿನ್ ವೈ. ಧನಶೇಖರನ್ ಮತ್ತು **ಶ್ರೀ ಸುಮನ್.ಡಿ. ಶೇಖರ್**, ಬಿನ್ ವೈ. ಧನಶೇಖರನ್ ವಯಸ್ಸು ಸುಮಾರು 29 ವರ್ಷ, ವಾಸ: ನಂ.256/3, ಪೀಸ್ ಚರ್ಚ್, ಪೀಸ್ ಗಾರ್ಡನ್, ಬಾಗಲೂರು, ಜಾಲಾ ಹೋಬಳಿ, ಯಲಹಂಕ ತಾಲ್ಲೂಕು, ಬೆಂಗಳೂರು -562149, ರವರಿಂದ ಶುದ್ಧ ಕ್ರಯಕ್ಕೆ ಪಡೆಯಲು ಇಚ್ಛಿಸಿ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿದ್ದು, ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಮತ್ತು ಇನ್ನಿತರರಿಗೆ ಈ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ರೀತಿಯ ಹಕ್ಕು, ಆಸಕ್ತಿ, ಹಿತಾಸಕ್ತಿ ಹಾಗೂ ಯಾವುದೇ ರೀತಿಯ ಇನ್ನಿತರ ಹಕ್ಕು ಬಾಧ್ಯತೆಗಳು, ಸಾಲ-ಸೋಲಗಳು ಹಾಗೂ ಯಾವುದೇ ರೀತಿಯ ಕಾನೂನಿನ ಪ್ರತಿಫಲಗಳು ತಮಗೆ ಬರುವಂತಿದ್ದರೆ ಈ ಸಾರ್ವಜನಿಕ ಪ್ರಕಟಣೆ ಹೊರಡಿಸಿದ **7 ದಿವಸಗಳ** ಒಳಗಡೆ ಈ ಕೆಳಕಂಡ ವಿಳಾಸಕ್ಕೆ ಲಿಖಿತ ಮೂಲಕ ತಮ್ಮ ಆಕ್ಷೇಪಗಳನ್ನು ಹಾಗೂ ತಮಗಿರುವ ಹಕ್ಕು ಹಿತಾಸಕ್ತಿಗಳನ್ನು ಸೂಕ್ತ ದಾಖಲೆಗಳ ಮೂಲಕ ಕಳುಹಿಸಿಕೊಡಬೇಕಾಗಿ ಕೋರಿಕೊಳ್ಳುತ್ತೇವೆ. ಒಂದು ವೇಳೆ **7 ದಿನಗಳ** ಒಳಗಡೆ ಯಾವುದೇ ರೀತಿಯ ಆಕ್ಷೇಪಗಳು, ದಾಖಲೆಗಳನ್ನು ನೀವುಗಳು ಸಲ್ಲಿಸದೇ ಇದ್ದರೆ ಇನ್ನು ಮುಂದೆ ನೀವುಗಳು ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳಲ್ಲಿ ಯಾವುದೇ ರೀತಿಯ ಹಕ್ಕೊತ್ತಾಯಕ್ಕಾಗಿ ಸ್ಥಾಪಿತ ಕಾನೂನು ಇಲಾಖೆ ಮತ್ತು ನ್ಯಾಯಾಲಯಗಳಲ್ಲಿ ನಮ್ಮ ಕಕ್ಷಿದಾರರ ವಿರುದ್ಧ ಯಾವುದೇ ರೀತಿಯ ಅರ್ಜಿ ಮತ್ತು ದಾವೆಗಳನ್ನು ಸಲ್ಲಿಸಿದರೆ ಅವುಗಳು ನಮ್ಮ ಕಕ್ಷಿದಾರರ ವಿರುದ್ಧ ಅಸಿಂಧುವಾಗಿರುತ್ತವೆಂದು ಈ ಸಾರ್ವಜನಿಕ ಪ್ರಕಟಣೆಯ ಮೂಲಕ ಜಾಹಿರಾತು ಪಡಿಸಿರುತ್ತಾರೆ, ನಮ್ಮ ಕಕ್ಷಿದಾರರು ಕಾನೂನಿನ ನಿಯಮಗಳನ್ನು ಪಾಲಿಸಲು ಈ ಪ್ರಕಟಣೆಯನ್ನು ಹೊರಡಿಸಿರುತ್ತಾರೆ.

**ಷೆಡ್ಯೂಲ್ ಸ್ವತ್ತು**

ಬೆಂಗಳೂರು ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಬಾಗಲೂರು ಗ್ರಾಮಕ್ಕೆ ಸೇರಿದ ಸರ್ವೆ ನಂ.256/3, ವಿಸ್ತೀರ್ಣ 2 ಎಕರೆ 27 ಗುಂಟ ಪೈಕಿ ಎಲ್.ಶೇಪ್ 2 ಎಕರೆ ಈ ಮಧ್ಯೆಯಿರುವ ಜಮೀನಿಗೆ ಇರುವ ಚೆಕ್ಕುಬಂದಿ: **ಪೂರ್ವಕ್ಕೆ:** ಅಂಜಿನಪ್ಪ ನವರ ಜಮೀನು, **ಪಶ್ಚಿಮಕ್ಕೆ:** ರಸ್ತೆ ನಂತರ ಇದೇ ಸರ್ವೆ ನಂ.256/3 ಉಳಿಕೆ ಜಮೀನು, **ಉತ್ತರಕ್ಕೆ:** ರಸ್ತೆಯಿಂದ ಪಶ್ಚಿಮ-ಪೂರ್ವಾಭಿಮುಖವಾಗಿ ಇದೇ ನಂಬರ್ ಪೈಕಿ ಸ್ಮಶಾನದ ವರೆಗೆ 2 ಅಡಿ ಪ್ಯಾಸೇಜ್, ನಂತರ ಮೀಸಗಾನಹಳ್ಳಿ ಬಚ್ಚಪ್ಪನವರ ಜಮೀನು, **ದಕ್ಷಿಣಕ್ಕೆ:** ರಾಜಣ್ಣನವರ ಜಮೀನು ಮತ್ತು ಇದೇ ಸರ್ವೆ ನಂ.256/3 ರ ಉಳಿಕೆ ಜಮೀನು.

ಮೂರ್ತಿ. ಎ, ವಕೀಲರು
ನಂ.1, 5ನೇ ಮುಖ್ಯರಸ್ತೆ, ಬಿಗ್ ಮಾರ್ಕೆಟ್ ಮತ್ತು ಐಸಿಐಸಿಐ ಬ್ಯಾಂಕ್ ಎದುರು, ಬಾಗಲೂರು ಮುಖ್ಯರಸ್ತೆ, ವಿನಾಯಕನಗರ, ಐಎಎಫ್ ಅಂಚೆ, ಬೆಂಗಳೂರು- 560063, ಮೊ.ನಂ: 9620511295.
ದಿನಾಂಕ: 06.09.2025

## ನೇತ್ರದಾನ ಪಾಕ್ಷಿಕ: ನಾರಾಯಣ ನೇತ್ರಾಲಯ ಜಾಗೃತಿ

**ಬೆಂಗಳೂರು:** ನಾರಾಯಣ ನೇತ್ರಾಲಯ 40ನೇ ವರ್ಷದ ನೇತ್ರದಾನ ಪಾಕ್ಷಿಕದ ಪ್ರಯುಕ್ತ ನಗರದಲ್ಲಿ ಕಣ್ಣುಗಳ ದಾನದ ಬಗ್ಗೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಸೀತಾರಾಮಪಾಳ್ಯ ಮೆಟ್ರೊ ನಿಲ್ದಾಣ ಬಳಿ ಇರುವ ವೈಟ್‌ಫೀಲ್ಡ್ ನಾರಾಯಣ ನೇತ್ರಾಲಯ ಶಾಖೆ ಇದೇ 7ರಂದು 'ರೈಡ್ ಫಾರ್ ಸೈಟ್' ಶೀರ್ಷಿಕೆಯಡಿ ಸೈಕ್ಲೋಥಾನ್ ಹಮ್ಮಿಕೊಂಡಿದೆ. ನೇತ್ರ ದಾನ ಪ್ರತಿಜ್ಞೆ ಕೈಗೊಳ್ಳುವಂತೆ ಈ ಸೈಕ್ಲೋಥಾನ್‌ನಲ್ಲಿ ಜಾಗೃತಿ ಮೂಡಿಸಲಾಗುತ್ತದೆ. ನೇತ್ರದಾನ ಕೇಂದ್ರೀಕೃತ ವಿಷಯಗಳ ಮೇಲೆ ಮಕ್ಕಳು ಸೇರಿ ವಿವಿಧ ವಯೋಮಾನದವರಿಗೆ ಆನ್‌ಲೈನ್ ವೇದಿಕೆ ಮೂಲಕ ಚಿತ್ರಕಲೆ ಸ್ಪರ್ಧೆಯನ್ನೂ ಹಮ್ಮಿಕೊಳ್ಳಲಾಗಿದೆ. ಈ ಸ್ಪರ್ಧೆಯ ವಿವರಗಳು ನಾರಾಯಣ ನೇತ್ರಾಲಯದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ ಎಂದು ನಾರಾಯಣ ನೇತ್ರಾಲಯದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಎಸ್.ಕೆ. ಮಿತ್ತಲ್ ತಿಳಿಸಿದ್ದಾರೆ.

'ನಾರಾಯಣ ನೇತ್ರಾಲಯ ಐ ಫೌಂಡೇಷನ್ ಸದ್ಯ ಡಾ. ರಾಜ್‌ಕುಮಾರ್ ಐ ಬ್ಯಾಂಕ್ ಮತ್ತು ಶಂಕರ್ ಸಿಂಗ್ ಐ ಬ್ಯಾಂಕ್ ನಿರ್ವಹಿಸುತ್ತಿದೆ. ನೇತ್ರದಾನ ಪ್ರತಿಜ್ಞೆ ಕೈಗೊಳ್ಳುವವರು 8884018800 ಸಂಖ್ಯೆಗೆ ಮಿಸ್‌ಕಾಲ್ ನೀಡಬಹುದು' ಎಂದು ಹೇಳಿದ್ದಾರೆ.

ಬೃಹತ್ ಮಾರಾಟ
Radisson BLU
ಹೋಟೆಲ್‌ನಲ್ಲಿ
ಶೇ.90% ವರೆಗೆ ರಿಯಾಯಿತಿ

ಕೇವಲ 2 ದಿನಗಳು 6 & 7 ಸೆಪ್ಟೆಂಬರ್
ಶನಿವಾರ & ಭಾನುವಾರ

ಬ್ರ್ಯಾಂಡೆಡ್ ಉಡುಪುಗಳು, ಪಾದರಕ್ಷೆಗಳು & ಗೃಹಾಲಂಕಾರ

ಸಾಕಷ್ಟು ಸ್ಟಾಕ್‌ನಿಂದಾಗಿ ಕಂಪನಿಯ ಗೋದಾಮು ತುಂಬಿ ತುಳುಕುತ್ತಿರುವುದರಿಂದ ಇಷ್ಟೊಂದು ಭಾರೀ ರಿಯಾಯಿಯನ್ನು ನಿಮಗೆ ನೀಡುತ್ತಿದ್ದೇವೆ

ಹೋಟೆಲ್ ರ್‍ಯಾಡಿಸನ್ ಬ್ಲೂನಲ್ಲಿ ನಮ್ಮ ಎಲ್ಲಾ ಬ್ರ್ಯಾಂಡೆಡ್ ಉಡುಪುಗಳು, ಪಾದರಕ್ಷೆಗಳು ಮತ್ತು ಗೃಹಾಲಂಕಾರ ವಸ್ತುಗಳು ಸೇರಿದಂತೆ ಎಲ್ಲಾ ಸ್ಟಾಕ್ ಮೇಲ್ ಶೇ. 90 ವರೆಗೆ ರಿಯಾಯಿತಿ ಘೋಷಿಸುತ್ತಿದ್ದೇವೆ.

ಬೆಂಗಳೂರಿನ ಹೊರವರ್ತುಲ ರಸ್ತೆಯಲ್ಲಿರುವ ಹೋಟೆಲ್ ರ್‍ಯಾಡಿಸನ್ ಬ್ಲೂನಲ್ಲಿ
ಸುಮಾರು ರೂ. 2 ರಿಂದ 3 ಕೋಟಿ ಮೌಲ್ಯದ ಸ್ಟಾಕ್ ಅನ್ನು
ಕ್ಯಾಷ್ & ಕ್ಯಾರಿ ಮೂಲಕ ರೂ. 50 ಲಕ್ಷಕ್ಕಿಂತ ಕಡಿಮೆ ಮೊತ್ತಕ್ಕೆ ಮಾರಾಟ ಮಾಡಲಾಗುವುದು

ರೂ.8000/-, 10000/-15000/- ಮೌಲ್ಯದ ರಾಷ್ಟ್ರೀಯ, ಅಂತರಾಷ್ಟ್ರೀಯ ಬ್ರ್ಯಾಂಡ್‌ಗಳು ಕೇವಲ ರೂ.800/-, 1200/-, 1500/-.ಕ್ಕೆ ದೊರೆಯುತ್ತದೆ

**ಪುರುಷರ ಉಡುಪು**
ಈ ಮೆಗಾ ಮಾರಾಟದಲ್ಲಿ ₹2000 ರಿಂದ ₹20,000ವರೆಗಿನ ಮೌಲ್ಯದ ಜೀನ್ಸ್, ಶರ್ಟ್, ಟಿ-ಶರ್ಟ್, ಪ್ಯಾಂಟ್, ಲೋವರ್ ಶಾರ್ಟ್ಸ್, ಕುರ್ತಾ, ಪೈಜಾಮ, ಶೇರ್ವಾನಿ, ಕೋಟಿ, ಬ್ಲೇಜರ್‌ಗಳು ಕೆಳಕಂಡ ಮೊತ್ತಕ್ಕೆ ಲಭ್ಯ.
₹250 ರಿಂದ ₹750 & ₹1200 ರಿಂದ ₹3000

**ಬಾಲಕಿಯರ & ಮಹಿಳೆಯರ ಉಡುಪು**
ಈ ಮೆಗಾ ಮಾರಾಟದಲ್ಲಿ ₹1000 ರಿಂದ ₹7000ವರೆಗಿನ ಮೌಲ್ಯದ ಟಾಪ್, ಕುರ್ತಿ, ಪ್ಲಾಜೊ, ಜೀನ್ಸ್, ಶರ್ಟ್, ಟಿ ಶರ್ಟ್, ಪ್ಯಾಂಟ್, ಲೋವರ್, ಶಾರ್ಟ್ಸ್ & ಲೆಗ್ಗಿಂಗ್ಸ್, ಒನ್ ಪೀಸ್, ಪಾರ್ಟಿ ವೇರ್ ಸೂಟ್ ಕೆಳಕಂಡ ಮೊತ್ತಕ್ಕೆ ಲಭ್ಯ.
₹100 ರಿಂದ ₹299 & ₹400 ರಿಂದ ₹850

**ಮಕ್ಕಳ ಉಡುಪು**
ಈ ಮೆಗಾ ಮಾರಾಟದಲ್ಲಿ ₹1000 ರಿಂದ ₹5000ವರೆಗಿನ ಮೌಲ್ಯದ ಜೀನ್ಸ್, ಶರ್ಟ್, ಟಿ ಶರ್ಟ್, ಪ್ಯಾಂಟ್, ಲೋವರ್, ಫ್ರಾಕ್, ಶಾರ್ಟ್ಸ್ ಮತ್ತು ಇನ್ನೂ ಅನೇಕ ಉಡುಪುಗಳು ಕೆಳಕಂಡ ಮೊತ್ತಕ್ಕೆ ಲಭ್ಯ.
₹299 ರಿಂದ ₹499

**ಬ್ರ್ಯಾಂಡೆಡ್ ಪಾದರಕ್ಷೆಗಳು**
ಪುರುಷರು, ಮಹಿಳೆಯರು, ಮಕ್ಕಳಿಗಾಗಿ ಈ ಮೆಗಾ ಮಾರಾಟದಲ್ಲಿ ರೂ.1000 ರಿಂದ ರೂ.5000 ವರೆಗಿನ ಮೌಲ್ಯದ ಸ್ಪೋರ್ಟ್ಸ್ ಶೂ, ಲೆದರ್ ಶೂ ಟ್ರೆಕ್ಕಿಂಗ್ ಶೂ ಸ್ಯಾಂಡಲ್ಸ್, ಸ್ಲೀಪರ್, ಬೆಲ್ಲಿ ವಸ್ತುಗಳು ರೂ.350 ರಿಂದ ರೂ.1999ರ ವರೆಗೆ ಲಭ್ಯ.

**ಗೃಹಾಲಂಕಾರ ಮತ್ತು ವಿಶೇಷ ಕೌಂಟರ್**
ಈ ಮೆಗಾ ಮಾರಾಟದಲ್ಲಿ ರೂ.1000 ರಿಂದ ರೂ.7500 ವರೆಗಿನ ಮೌಲ್ಯದ ಲೇಡೀಸ್ ಪರ್ಸ್, ಲೇಡೀಸ್ ಡಿಸೈನರ್ ಬ್ಯಾಗ್‌ಗಳು ಟವೆಲ್‌ಗಳು, ಕರ್ಟೈನ್‌ಗಳು, ಕಂಫರ್ಟರ್, ಆಮದು ಮಾಡಿದ ಬೆಡ್ ಶೀಟ್, ವ್ಯಾಲೆಟ್, ಬೆಲ್ಟ್, ಸ್ಕೂಲ್ ಬ್ಯಾಗ್, ಆಫೀಸ್ ಬ್ಯಾಗ್, ಡೋರ್‌ಮ್ಯಾಟ್, ಗಾಗಲ್ಸ್, ಪರ್ಫ್ಯೂಮ್ ಮತ್ತು ಇನ್ನೂ ಹಲವು ವಸ್ತುಗಳ ಬೆಲೆ ರೂ.250 ರಿಂದ ಆರಂಭ

ಅತ್ಯಂತ ರಿಯಾಯಿತಿ ದರದಲ್ಲಿ ಫ್ಯಾನ್ಸಿ ಸೀರೆಗಳ ಬೃಹತ್ ಸಂಗ್ರಹ ಕೂಡ ಲಭ್ಯ.

ಸ್ಥಳ: ಹೋಟೆಲ್ Radisson BLU
90/4, ಹೊರವರ್ತುಲ ರಸ್ತೆ, ಮಾರತ್ತಹಳ್ಳಿ ಗ್ರಾಮ, ಬೆಂಗಳೂರು

ಪ್ರವೇಶ ಶುಲ್ಕವಿಲ್ಲ, ಪಾರ್ಕಿಂಗ್ ಶುಲ್ಕವಿಲ್ಲ | ಇಂದು ಮತ್ತು ನಾಳೆ ಬೆಳಿಗ್ಗೆ 10 ರಿಂದ ರಾತ್ರಿ 10ರ ವರೆಗೆ ಮೆಗಾ ಮಾರಾಟ

*Terms & Condition Apply

ಟಿಪ್ಪಣಿ: 1 ಕಂಪನಿಗಳ ಒತ್ತಡದಿಂದಾಗಿ ನಾವು ಎಲ್ಲಾ ಉತ್ಪನ್ನಗಳ ಬ್ರ್ಯಾಂಡ್ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲು ಸಾಧ್ಯವಿಲ್ಲ. 2. ಯಾವುದೇ ಕಾರಣಕ್ಕೂ ಈ ಮಾರಾಟದಿಂದ ತಪ್ಪಿಸಿಕೊಳ್ಳದಂತೆ ಬೆಂಗಳೂರಿನ ಜನರಲ್ಲಿ ವಿನಂತಿಸಲಾಗಿದೆ. 3. ಈ ಮೆಗಾ ಮಾರಾಟದ ಬಳಿಕ ಅಗ್ಗದ ಬೆಲೆಗೆ ಖರೀದಿಸಲು ಇಂತಹ ಬಿಗ್ ಬ್ರ್ಯಾಂಡ್‌ಗಳು ಲಭ್ಯವಿರುವುದಿಲ್ಲ ಎಂದು ತಿಳಿಸಲು ಬಯಸುತ್ತೇವೆ. 4. ಸ್ಟಾಕ್ ಖಾಲಿಯಾಗುವ ಕೌಂಟರ್ ಅನ್ನು ತಕ್ಷಣವೇ ಮುಚ್ಚಲಾಗುವುದು. 5 ಸಭಾಂಗಣದಲ್ಲಿ ನಿಶ್ಶಬ್ದತೆ ಕಾಪಾಡಿ.

ಶನಿವಾರ, ಸೆಪ್ಟೆಂಬರ್ 6, 2025 | ₹ 7.00
prajavani.net prajavani
www.prajavani.net

# ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಫೈನಲ್‌ಗೆ ಅರಿನಾ**

ಹಾಲಿ ಚಾಂಪಿಯನ್ ಅರಿನಾ ಸಬಲೆಂಕಾ ಅವರು ಶುಕ್ರವಾರ ಅಮೆರಿಕ ಓಪನ್ ಟೆನಿಸ್ ಫೈನಲ್ ತಲುಪಿದ್ದಾರೆ. ಪ್ರಶಸ್ತಿ ಸುತ್ತಿನಲ್ಲಿ ಅವರಿಗೆ ಅಮಂಡಾ ಅನಿಸಿಮೋವಾ ಎದುರಾಳಿ ಆಗಲಿದ್ದಾರೆ

**ಸ್ಪೈಸ್ ಜೆಟ್‌ಗೆ ನಷ್ಟ**

ವೆಚ್ಚದ ಹೆಚ್ಚಳ, ಪ್ರಯಾಣದ ಬೇಡಿಕೆ ಕಡಿಮೆ ಆಗಿರುವುದರಿಂದ ವಿಮಾನಯಾನ ಸಂಸ್ಥೆ ಸ್ಪೈಸ್ ಜೆಟ್ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ₹238 ಕೋಟಿ ನಷ್ಟ ಅನುಭವಿಸಿದೆ

‘ಜಿಎಸ್‌ಟಿ ಪರಿಷ್ಕರಣೆ: ಲಾಭ ಗ್ರಾಹಕರಿಗೆ’ 8 | ಸಾಮಾಜಿಕ ನ್ಯಾಯ: ಶಿಕ್ಷಕರಿಗೆ ಸಿ.ಎಂ ಪಾಠ 2B

# 4,346 ಹುದ್ದೆ ಭರ್ತಿಗೆ ಸಿದ್ಧತೆ

## 18 ಸಾವಿರ ಹುದ್ದೆಗಳು ಖಾಲಿ

## ● 1 ಲಕ್ಷ ಜನರ ರಕ್ಷಣೆಗೆ 165 ಪೊಲೀಸರು!

● ಆದಿತ್ಯ ಕೆ.ಎ.

**ಬೆಂಗಳೂರು:** ಪರಿಶಿಷ್ಟ ಜಾತಿಯ ಒಳಮೀಸಲಾತಿ ಅಳವಡಿಸಿಕೊಂಡು ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಬೇಕೆಂದು ರಾಜ್ಯ ಸರ್ಕಾರವು ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಿದ ಬೆನ್ನಲ್ಲೇ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಚಾಲನೆ ಸಿಕ್ಕಿದೆ.

ನೇರ ನೇಮಕಾತಿ ವೇಳೆ ಅನುಸರಿಸಬೇಕಾದ ‘ಪರಿಷ್ಕೃತ ಮೀಸಲಾತಿ ರೋಸ್ಟರ್’ ನಿಗದಿಪಡಿಸಲಾಗಿದ್ದು, ಪೊಲೀಸ್ ಇಲಾಖೆಯಲ್ಲಿ 4,346 ಹುದ್ದೆಗಳ ಭರ್ತಿಗೆ ಸಿದ್ಧತೆಗಳು ಆರಂಭವಾಗಿವೆ. ಪೊಲೀಸ್ ಇಲಾಖೆಯಲ್ಲಿ ವಿವಿಧ ಹಂತದ ಸಿಬ್ಬಂದಿ ಒಳಗೊಂಡು ಒಟ್ಟು 1,11,330 ಮಂಜೂರಾದ ಹುದ್ದೆಗಳಿವೆ. ಆ ಪೈಕಿ 18,581 ಹುದ್ದೆಗಳು ಖಾಲಿ ಇವೆ. ಹೀಗಾಗಿ, ಕರ್ತವ್ಯದಲ್ಲಿರುವ ಸಿಬ್ಬಂದಿ ಹಾಗೂ ಅಧಿಕಾರಿಗಳ ಮೇಲೆ

ಒತ್ತಡ ಸೃಷ್ಟಿಯಾಗಿದೆ. ತಕ್ಷಣವೇ ಕೆಲವು ಹುದ್ದೆಗಳನ್ನಾದರೂ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಂಡು ಸಿಬ್ಬಂದಿ ಮೇಲಿನ ಒತ್ತಡ ಕಡಿಮೆ ಮಾಡಲು ಇಲಾಖೆ ಮುಂದಾಗಿದೆ.

ಈ ಸಂಬಂಧ ನೇಮಕಾತಿ ವಿಭಾಗದ (ಪೊಲೀಸ್) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿರುವ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ, ಒಳಮೀಸಲಾತಿ ಜಾರಿಗೆ ಬಂದಿರುವ ಕಾರಣ ಹುದ್ದೆಗಳನ್ನು ಮರು ಹಂಚಿಕೆ ಮಾಡಿ, ಆ ಪಟ್ಟಿಯನ್ನು ನೇಮಕಾತಿ ವಿಭಾಗಕ್ಕೆ ರವಾನಿಸಿದ್ದಾರೆ.

ಸದ್ಯ, ಡಿಟೆಕ್ಟಿವ್ ಸಬ್ ಇನ್‌ಸ್ಪೆಕ್ಟರ್, ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್, ಸಿವಿಲ್

**ಕ್ರೀಡಾ ಮೀಸಲಾತಿ ಸೇರಿ ಸಂಬಂಧಿಸಿದ ಘಟಕಗಳಿಂದ ವರ್ಗೀಕರಣದ ಮಾಹಿತಿ ಪಡೆದು ಹುದ್ದೆಗಳ ಭರ್ತಿಗೆ ಪ್ರಕ್ರಿಯೆ ಆರಂಭಿಸಲಾಗಿದೆ. ಶೀಘ್ರ ಅಧಿಸೂಚನೆ ಪ್ರಕಟವಾಗಲಿದೆ**

**ಎಂ.ಎ.ಸಲೀಂ,**
ರಾಜ್ಯ ಪೊಲೀಸ್ ಮಹಾನಿರ್ದೇಶಕ

ಪೊಲೀಸ್ ಕಾನ್‌ಸ್ಟೆಬಲ್, ವಿಶೇಷ ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್ (ಕೆಎಸ್‌ಆರ್‌ಪಿ), ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಗೆ ನೇಮಕ ಮಾಡಿಕೊಳ್ಳಲಾಗುತ್ತಿದೆ. ಕಲ್ಯಾಣ ಕರ್ನಾಟಕ,ಕಲ್ಯಾಣ ಕರ್ನಾಟಕೇತರ ಭಾಗಕ್ಕೆ ಹುದ್ದೆಗಳನ್ನು ಮರು ಹಂಚಿಕೆ ಮಾಡಲಾಗಿದೆ.

2024ರ ನವೆಂಬರ್‌ನಲ್ಲೂ 4,115 ಹುದ್ದೆಗಳ ನೇಮಕಾತಿಗೆ ಇಲಾಖೆ ಮುಂದಾಗಿತ್ತು. ಆದರೆ, ಒಳಮೀಸಲಾತಿ ನಿಗದಿ ಆಗುವವರೆಗೂ ಹೊಸದಾಗಿ ಯಾವುದೇ ಅಧಿಸೂಚನೆ ಪ್ರಕಟಿಸಬಾರದು ಎಂದು ರಾಜ್ಯ ಸರ್ಕಾರ ಸೂಚಿಸಿತ್ತು. ಹೀಗಾಗಿ ಅಧಿಸೂಚನೆ ಕಾಯ್ದಿರಿಸಲಾಗಿತ್ತು. ‘ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗ (ಬಿಪಿಆರ್‌ಡಿ) ಪ್ರತಿ ವರ್ಷ ಎಲ್ಲ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸರ ಮಾಹಿತಿಯನ್ನು ಪ್ರಕಟಿಸುತ್ತದೆ. ಆ ಪ್ರಕಾರ ರಾಜ್ಯದಲ್ಲಿ 1 ಲಕ್ಷ ಜನರಿಗೆ ಕೇವಲ 165 ಪೊಲೀಸರಷ್ಟೇ ಕೆಲಸ ಮಾಡುತ್ತಿದ್ದಾರೆ. ಅಖಿಲ ಭಾರತ ಮಟ್ಟದಲ್ಲಿ ಒಂದು ಲಕ್ಷ ಜನರಿಗೆ 196 ಪೊಲೀಸರಿದ್ದಾರೆ. ಉತ್ತರ ಭಾರತದ ಕೆಲ ರಾಜ್ಯಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪೊಲೀಸರಿದ್ದಾರೆ. ಕರ್ನಾಟಕದಲ್ಲೂ ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ವಹಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

▶8

**ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್(ಎಪಿಸಿ) ಹುದ್ದೆಗಳ ಹಂಚಿಕೆ ವಿವರ**

| ಘಟಕದ ಹೆಸರು | ಒಟ್ಟು | | | | |
|---|---|---|---|---|---|
| ಬೆಂಗಳೂರು ನಗರ | 760 | ಚಾಮರಾಜನಗರ | 17 | ಧಾರವಾಡ ಜಿಲ್ಲೆ | 18 |
| ಮೈಸೂರು ನಗರ | 62 | ಹಾಸನ | 8 | ವಿಜಯಪುರ | 7 |
| ಹುಬ್ಬಳ್ಳಿ–ಧಾರವಾಡ | 35 | ಕೊಡಗು | 31 | ಬಾಗಲಕೋಟೆ | 18 |
| ಬೆಳಗಾವಿ ನಗರ | 29 | ಮಂಡ್ಯ | 30 | ಕಲಬುರಗಿ | 21 |
| ಕಲಬುರಗಿ ನಗರ | 57 | ದಾವಣಗೆರೆ | 9 | ರಾಯಚೂರು | 11 |
| ಕೋಲಾರ | 3 | ಶಿವಮೊಗ್ಗ | 54 | ಬೀದರ್ | 9 |
| ಕೆಜಿಎಫ್ | 21 | ಚಿತ್ರದುರ್ಗ | 41 | ಕೊಪ್ಪಳ | 7 |
| ರಾಮನಗರ | 2 | ಹಾವೇರಿ | 11 | ಯಾದಗಿರಿ | 24 |
| ಚಿಕ್ಕಬಳ್ಳಾಪುರ | 36 | ಉಡುಪಿ | 36 | ಬಳ್ಳಾರಿ | 29 |
| ಮೈಸೂರು | 29 | ಉತ್ತರ ಕನ್ನಡ | 20 | ವಿಜಯನಗರ | 121 |
| | | ಚಿಕ್ಕಮಗಳೂರು | 17 | ಕೆಎಸ್‌ಆರ್‌ಪಿ ಮೌಂಟೆಡ್ ಕಂಪನಿ | 32 |
| | | ಬೆಳಗಾವಿ | 25 | | |
| | | ಗದಗ | 20 | | |

## ತಂತಿ ಮೇಲೆ ಕೋತಿ

ಪಿಟಿಐ ಚಿತ್ರ

ಜಲಾವೃತಗೊಂಡಿದ್ದ ದೆಹಲಿಯ ಯಮುನಾ ಬಜಾರ್‌ನಲ್ಲಿ ಕೋತಿಯೊಂದು ತಂತಿಯ ಮೇಲೆ ಸಾಗಿತು

# ಮತ ಕಳವು: ಜಟಾಪಟಿ

ಬೆಂಗಳೂರು: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇವಿಎಂ ಬದಲು ಬ್ಯಾಲಟ್ ಪೇಪರ್ ಬಳಸಲು ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಬಿಜೆಪಿ ಟೀಕಿಸಿದ್ದರೆ, ಸರ್ಕಾರ ತನ್ನ ನಿಲುವನ್ನು ಬಲವಾಗಿ ಸಮರ್ಥಿಸಿಕೊಂಡಿದೆ.

## ತನ್ನ ತಪ್ಪನ್ನು ಪ್ರಮಾಣೀಕರಿಸಿದ ಕಾಂಗ್ರೆಸ್: ವಿಜಯೇಂದ್ರ

‘ಇವಿಎಂಗಳನ್ನು ಬದಿಗಿಟ್ಟು ರಾಜ್ಯ ಸರ್ಕಾರವು ಬ್ಯಾಲಟ್ ಪೇಪರ್ ಬಳಕೆಗೆ ಮುಂದಾಗಿದೆ. ರಾಜ್ಯದಲ್ಲಿ ತಾನು ಅಧಿಕಾರಕ್ಕೆ ಬಂದಿದ್ದು ಮತಗಳ್ಳತನದಿಂದ ಎಂಬುದನ್ನು ಸ್ವತಃ ಕಾಂಗ್ರೆಸ್ ಪ್ರಮಾಣೀಕರಿಸಿದಂತಾಗಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ‘ಎಕ್ಸ್’ನಲ್ಲಿ ಶುಕ್ರವಾರ ಪೋಸ್ಟ್ ಮಾಡಿದ್ದಾರೆ.



‘ಇವಿಎಂ ಮೇಲೆ ಕಾಂಗ್ರೆಸ್‌ಗೆ ಅಪನಂಬಿಕೆ ಇದೆ ಎಂಬುದನ್ನು ಇದು ತೋರಿಸುತ್ತದೆ. ಇವಿಎಂ ಮೂಲಕ ನಡೆದ ಮತದಾನದಲ್ಲಿ ಗೆದ್ದು ಬಂದ ಕಾಂಗ್ರೆಸ್‌ನ ಎಲ್ಲ 136 ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ಲೋಕಸಭಾ ಸದಸ್ಯರು ರಾಜೀನಾಮೆ ನೀಡಲಿ, ಮತಪತ್ರದ ಮೂಲಕ ಚುನಾವಣೆ ನಡೆಸಿ, ಮತ್ತೆ ಗೆದ್ದುಬರಲಿ. ಬ್ಯಾಲಟ್ ಪೇಪರ್ ಮೂಲಕ ಅಕ್ರಮ ನಡೆಸಿದ್ದಾರೆ ಎಂದೇ ಇಂದಿರಾ ಗಾಂಧಿ ವಿರುದ್ಧ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದನ್ನು ದೇಶದ ಜನರು ಮರೆತಿಲ್ಲ’ ಎಂದಿದ್ದಾರೆ.

## ಅನುಭವದ ಮೇಲೆ ಮಾಡಿದ ತೀರ್ಮಾನ: ಸಿದ್ದರಾಮಯ್ಯ

‘ಇವಿಎಂ ಬದಲಿಗೆ ಬ್ಯಾಲಟ್ ಪೇಪರ್ ಮೂಲಕ ಚುನಾವಣೆ ಮಾಡಬೇಕು ಎನ್ನುವ ತೀರ್ಮಾನವನ್ನು ನಮ್ಮ ಅನುಭವದ ಮೇಲೆ ತೆಗೆದುಕೊಂಡಿದ್ದೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

‘ಇವಿಎಂ ಬಳಸಿದ ಹಲವು ದೇಶಗಳು ಮತ್ತೆ ಬ್ಯಾಲಟ್ ಪೇಪರ್ ಮೂಲಕ ಚುನಾವಣೆ ಮಾಡುತ್ತಿದ್ದಾರೆ’ ಎಂದೂ ಅವರು ಹೇಳಿದರು.



‘ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಬ್ಯಾಲಟ್ ಪೇಪರ್ ಬಳಸಲು ರಾಜ್ಯ ಸರ್ಕಾರ ತೀರ್ಮಾನಿಸಿದರೆ, ಬಿಜೆಪಿ ಮುಖಂಡರು ಏಕೆ ಗಾಬರಿಯಾಗಬೇಕು? ಇದು ಕರ್ನಾಟಕ ಸರ್ಕಾರದ ತೀರ್ಮಾನ. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ರಾಜ್ಯ ಸರ್ಕಾರಕ್ಕೆ ಅವಕಾಶವಿದೆ. ಈ ಕುರಿತು ಬಿಜೆಪಿ ಅವಧಿಯಲ್ಲೇ ಕಾನೂನು ರೂಪಿಸಲಾಗಿತ್ತು’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

# ₹44.59 ಲಕ್ಷ ಶುಲ್ಕ ಪಾವತಿಗೆ ಗಡುವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಳೆ ಹುಬ್ಬಳ್ಳಿ ಗಲಭೆ ಪ್ರಕರಣದಲ್ಲಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದ ಹೈಕೋರ್ಟ್‌ನ ಹಿರಿಯ ವಕೀಲ ವಿಜಯಕುಮಾರ್ ಎಂ.ಶೀಲವಂತ ಅವರ ಶುಲ್ಕದ ಮೊತ್ತ ₹44.59 ಲಕ್ಷವನ್ನು ನಾಲ್ಕು ವಾರದೊಳಗಾಗಿ ಪಾವತಿಸುವಂತೆ ಆದೇಶಿಸಿರುವ ಹೈಕೋರ್ಟ್, ಪಾವತಿಯಲ್ಲಿ ವಿಳಂಬ ಸಲ್ಲ ಎಂದಿದೆ.

‘ರಾಜ್ಯ ಸರ್ಕಾರ ನನಗೆ ಪಾವತಿಸಬೇಕಾದ ಶುಲ್ಕವನ್ನು ಇನ್ನೂ ಪಾವತಿಸಿಲ್ಲ’ ಎಂದು ಆಕ್ಷೇಪಿಸಿ ವಿಜಯಕುಮಾರ್ ಎಂ.ಶೀಲವಂತ ಅವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಪುರಸ್ಕರಿಸಿದೆ.

ಶುಲ್ಕದ ಮೊತ್ತ ₹44.59 ಲಕ್ಷವನ್ನು ಪಾವತಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿರುವ ಪೀಠ, ಈ ಕುರಿತ ಅನುಪಾಲನಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದೂ ತಾಕೀತು ಮಾಡಿದೆ.

‘ಅಡ್ವೊಕೇಟ್ ಜನರಲ್, ಹೆಚ್ಚುವರಿ ಅಡ್ವೊಕೇಟ್ ಜನರಲ್‌ಗಳು, ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು, ಸರ್ಕಾರಿ ವಕೀಲರು ಅಥವಾ ಹೈಕೋರ್ಟ್‌ನ ಸರ್ಕಾರಿ ಪ್ಲೀಡರ್‌ಗಳು... ಇತ್ಯಾದಿ ಸರ್ಕಾರದ ಪರ ವಾದ ಮಂಡಿಸುವ ವಕೀಲರ ಶುಲ್ಕ ಪಾವತಿಯಲ್ಲಿ ಸರ್ಕಾರ ವಿಳಂಬ ಮಾಡಬಾರದು’ ಎಂದೂ ಆದೇಶಿಸಿದೆ.

**ಮಾರ್ಗದರ್ಶಿ ಸೂತ್ರ:** ‘ಸರ್ಕಾರದ ಪರ ವಾದ ಮಂಡಿಸುವ ವಕೀಲರಿಗೆ ಸಕಾಲದಲ್ಲಿ ಶುಲ್ಕ ಪಾವತಿ ಮಾಡುವ ನಿಟ್ಟಿನಲ್ಲಿ ಮತ್ತು ಶುಲ್ಕ ಪಾವತಿ ವ್ಯವಸ್ಥೆ ಪಾರದರ್ಶಕವಾಗಿರುವಂತೆ ಅಗತ್ಯ ಡಿಜಿಟಲ್ ವ್ಯವಸ್ಥೆ ರೂಪಿಸಿ’ ಎಂದು ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ನಿರ್ದೇಶಿಸಿದ್ದು, ಮಾರ್ಗದರ್ಶಿ ಸೂತ್ರಾಂಶಗಳನ್ನೂ ವಿವರಿಸಿದೆ.

# ಭಾರತವನ್ನು ‘ಕಳೆದುಕೊಂಡ’ ಭಾವದಲ್ಲಿ ಟ್ರಂಪ್ ಸಂದೇಶ!

**ವಾಷಿಂಗ್ಟನ್ (ಪಿಟಿಐ):** ‘ನಾವು ಭಾರತ ಮತ್ತು ರಷ್ಯಾವನ್ನು ಅತ್ಯಂತ ನಿಗೂಢವಾದ ಚೀನಾಕ್ಕೆ ಕಳೆದುಕೊಂಡಂತೆ ಕಾಣುತ್ತಿದೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೇಸರ ವ್ಯಕ್ತಪಡಿಸಿದ್ದಾರೆ.

ಡೊನಾಲ್ಡ್ ಟ್ರಂಪ್

ಶಾಂಘೈ ಸಹಕಾರ ಶೃಂಗದಲ್ಲಿ ಪ್ರಧಾನಿ ನರೇಂದ್ರ ಮೋದಿ, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ಸಮಾಗಮದ ಬೆನ್ನಲ್ಲೇ, ಟ್ರಂಪ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಈ ರೀತಿ ಬರೆದುಕೊಂಡಿದ್ದಾರೆ.

‘ಅವರು (ಮೂರು ದೇಶಗಳು) ದೀರ್ಘವೂ ಸಮೃದ್ಧವೂ ಆದ ಭವಿಷ್ಯ ಹೊಂದಲಿ!’ ಎಂದು ಟ್ರಂಪ್ ‘ಟ್ರುತ್’ನಲ್ಲಿ ವ್ಯಂಗ್ಯದ ಶೈಲಿಯಲ್ಲಿ ಹೇಳಿದ್ದಾರೆ. ಮೋದಿ, ಪುಟಿನ್ ಮತ್ತು ಜಿನ್‌ಪಿಂಗ್ ಅವರಿರುವ ಚಿತ್ರವನ್ನೂ ಅವರು ಹಂಚಿಕೊಂಡಿದ್ದಾರೆ. ಪ್ರತಿಸುಂಕದ ಕಾರಣದಿಂದಾಗಿ ಅಮೆರಿಕ ಜೊತೆಗೆ ಭಾರತದ ಸಂಬಂಧವು ಇತ್ತೀಚೆಗೆ ತೀವ್ರವಾಗಿ ಹದಗೆಟ್ಟಿದೆ.

ಟ್ರಂಪ್ ಅವರ ಈ ಹೇಳಿಕೆ ಕುರಿತು ಯಾವುದೇ ಪ್ರತಿಕ್ರಿಯೆ ನೀಡಲು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ನಿರಾಕರಿಸಿದ್ದಾರೆ.

ಆದರೆ ಟ್ರಂಪ್ ಅವರ ವ್ಯಾಪಾರ ಸಲಹೆಗಾರ ಪೀಟರ್ ನವಾರೋ ‘ಭಾರತದ ಬಗ್ಗೆ ನೀಡಿದ್ದ ಹೇಳಿಕೆಯು ದಾರಿ ತಪ್ಪಿಸುವಂತಹದ್ದು’ ಎಂದಿದ್ದಾರೆ.

# ಸಾಮಾಜಿಕ ನ್ಯಾಯ: ಶಿಕ್ಷಕರಿಗೆ ಸಿ.ಎಂ ಪಾಠ

## ಉತ್ತಮ ಶಿಕ್ಷಕರು, ಶಾಲೆಗಳಿಗೆ ಪ್ರಶಸ್ತಿ ಪ್ರದಾನ ● ಡಾಕ್ಟರೇಟ್ ಪದವಿ ಪಡೆದವರೂ ಜಾತಿವಾದಿಗಳು: ಸಿದ್ದರಾಮಯ್ಯ ಬೇಸರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶಿಕ್ಷಕರ ದಿನಾಚರಣೆಯ ಅಂಗವಾಗಿ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಶಿಕ್ಷಕರಿಗೆ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಪಾಠ ಮಾಡಿದರು.

ನಗರದ ದೊಡ್ಡಬೊಮ್ಮಸಂದ್ರದ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯ 1, 2, 3ನೇ ತರಗತಿಯ ಪುಟಾಣಿಗಳು ಸಂವಿಧಾನ ಪ್ರಸ್ತಾವನೆಯನ್ನು ಬೋಧಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಉತ್ತಮ ಶಿಕ್ಷಕ ಪ್ರಶಸ್ತಿ, ಮಲೆನಾಡ ಗಾಂಧಿ ಎಚ್.ಜಿ.ಗೋವಿಂದೇಗೌಡ ಪ್ರಶಸ್ತಿ, ನ್ಯಾಕ್ ಮಾನ್ಯತೆ ಪಡೆದ ಸರ್ಕಾರಿ ಕಾಲೇಜುಗಳಿಗೆ ಅಭಿನಂದನಾ ಪತ್ರ ಪ್ರದಾನ ಮಾಡಿ ಮಾತು ಆರಂಭಿಸಿದ ಸಿದ್ದರಾಮಯ್ಯ, 'ಶಾಲೆಗಳಲ್ಲಿ ಪ್ರತಿದಿನ ಸಂವಿಧಾನದ ಪ್ರಸ್ತಾವನೆಯನ್ನು ಓದಿಸಿದರಷ್ಟೇ ಸಾಲದು. ವಿದ್ಯಾರ್ಥಿಗಳಿಗೆ ಅದನ್ನು ಅರ್ಥಮಾಡಿಸಬೇಕು. ಮಕ್ಕಳು ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಪರಧರ್ಮ ಸಹಿಷ್ಣತೆ ರೂಢಿಸಿಕೊಳ್ಳುವಂತಾಗಬೇಕು' ಎಂದರು.

'ದೇಶದಲ್ಲಿ ಮೊದಲು ಶೂದ್ರರಿಗೆ ಶಿಕ್ಷಣದ ಅವಕಾಶ ಇರಲಿಲ್ಲ. ಜಾತಿ-ವ್ಯವಸ್ಥೆಯ ಕಾರಣಕ್ಕೆ ಅವರಿಗೆ ಶಿಕ್ಷಣ ನಿಷೇಧಿಸಲಾಗಿತ್ತು. ಶಿಕ್ಷಣ ಪಡೆದ ನಂತರ ಜಾತಿ ವ್ಯವಸ್ಥೆ ಹೋಗಬೇಕಾಗಿತ್ತು. ಹೋಗಿದೆಯೇ? ವೈದ್ಯಕೀಯ ಪದವಿ ಪಡೆದವರು, ಡಾಕ್ಟರೇಟ್ ಪದವಿ ಪಡೆದವರು ಇಂದಿಗೂ ಕಡು ಜಾತಿ-ವಾದಿಗಳಾಗಿದ್ದಾರೆ. ಶಿಕ್ಷಕರು ಅವರಿಗೆ ಸರಿಯಾದ ಪಾಠ ಮಾಡಿಲ್ಲ ಎಂದು ಅರ್ಥವಲ್ಲವೇ' ಎಂದು ಪ್ರಶ್ನಿಸಿದರು.

'ಶಿಕ್ಷಕರ ಮತಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಬಂದಿರುವವರು ಈ ವೇದಿಕೆಯಲ್ಲಿ ಕುಳಿತಿದ್ದಾರೆ' ಎಂದು ಪುಟ್ಟಣ್ಣ ಅವರತ್ತ ಸಿದ್ದರಾಮಯ್ಯ ನೋಡಿದರು. 'ವಿದ್ಯಾವಂತರಾದ, ಮಕ್ಕಳಿಗೆ ಸಂವಿಧಾನದ ಪ್ರಸ್ತಾವನೆ ಓದಿಸುವ ಶಿಕ್ಷಕರ ಕ್ಷೇತ್ರದಲ್ಲೇ ಅಭ್ಯರ್ಥಿಯ ಜಾತಿಯನ್ನು ನೋಡಿ ಮತಹಾಕುವ ಸ್ಥಿತಿ ಇದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಮಕ್ಕಳು ಶಿಕ್ಷಕರನ್ನು ನೋಡಿ ಕಲಿಯುತ್ತಾರೆ. ಹೀಗಾಗಿ ನೀವು ಒಳ್ಳೆಯ ನಡೆ, ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು. ನಿಮ್ಮನ್ನು ನೋಡಿ, ನಿಮ್ಮ ಪಾಠ ಕೇಳಿ ವಿದ್ಯಾರ್ಥಿಗಳು ಸಾಮಾಜಿಕ ನ್ಯಾಯವನ್ನು ರೂಢಿಸಿಕೊಂಡರಷ್ಟೇ ನಿಮ್ಮ ಬದುಕು ಸಾರ್ಥಕವಾಗುತ್ತದೆ. ನನ್ನ ಈ ಮಾತಿಗೆ ಯಾವ ಶಿಕ್ಷಕರೂ ಬೇಸರ ಮಾಡಿಕೊಳ್ಳಬೇಡಿ. ಸಂವಿಧಾನದ ಪ್ರಸ್ತಾವನೆಯನ್ನು ನೀವು ಅಳವಡಿಸಿಕೊಂಡರೆ, ವಿದ್ಯಾರ್ಥಿಗಳೂ ಅನುಕರಿಸುತ್ತಾರೆ. ಮೂಢನಂಬಿಕೆಗಳನ್ನು ಕಿತ್ತೊಗೆಯಿರಿ' ಎಂದು ಕಿವಿಮಾತು ಹೇಳಿದರು.

> ವಿದ್ಯಾರ್ಥಿಗಳು ಮೊಬೈಲ್ ಫೋನ್ ಬಿಡಬೇಕೆಂದರೆ ಶಿಕ್ಷಕರೂ ಬಿಡಬೇಕು. 'ಮೊಬೈಲ್ ಬಿಡಿ-ಪುಸ್ತಕ ಹಿಡಿ' ಅಭಿಯಾನವನ್ನು ಶಿಕ್ಷಕರು ಜಾರಿಮಾಡಬೇಕು
>
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಶಾಲಾ ಪುಟಾಣಿಗಳು ಎಂ.ಸಿ.ಸುಧಾಕರ್, ಸಿದ್ದರಾಮಯ್ಯ, ಮಧುಬಂಗಾರಪ್ಪ, ಪುಟ್ಟಣ್ಣ ಮತ್ತು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಎಲ್ಲರಿಗೂ ಸಂವಿಧಾನದ ಪ್ರಸ್ತಾವನೆಯನ್ನು ಬೋಧಿಸಿದರು

### 'ದೇವರು ಹಣೆಬರಹ ಬರೆಯುತ್ತಾನೆಯೇ?'

'ಶಿಕ್ಷಣ ಪಡೆಯದವರು ನಮ್ಮ ಹಣೆಬರಹ ಎನ್ನುತ್ತಾರೆ. ನಮ್ಮ ಅಪ್ಪ-ಅಮ್ಮನಿಗೆ ನಾವು ಆರು ಜನ ಮಕ್ಕಳು. ಅವರಲ್ಲಿ ಶಿಕ್ಷಣ ಪಡೆದವನು ನಾನೊಬ್ಬನೇ. ಶಿಕ್ಷಣ ನನ್ನ ಹಣೆಬರಹದಲ್ಲಿ ಬರೆದಿತ್ತೇ? ಇಲ್ಲ. ನಾನು ಶಾಲೆಗೆ ಹೋಗಿದ್ದರಿಂದ ಶಿಕ್ಷಣ ಪಡೆದೆ' ಎಂದು ಸಿದ್ದರಾಮಯ್ಯ ಹೇಳಿದರು.

'ನೀವು ಶಾಲೆಗೆ ಹೋಗಬೇಡಿ, ವಿದ್ಯೆ ಪಡೆಯಬೇಡಿ ಎಂದು ನನ್ನ ಒಡಹುಟ್ಟಿದವರ ಹಣೆಯ ಮೇಲೆ ದೇವರು ಬರೆದಿದ್ದಾನೆಯೇ? ಒಬ್ಬರಿಗೆ ವಿದ್ಯೆ, ಮತ್ತೊಬ್ಬರಿಗೆ ವಿದ್ಯೆ ಇಲ್ಲ ಎಂದು ಬರೆಯುವುದಾದರೆ ಅವನನ್ನು ದೇವರು ಎಂದು ಕರೆಯಬೇಕೇ' ಎಂದು ಪ್ರಶ್ನಿಸಿದರು.

'ವಿದ್ಯೆ ಯಾರಪ್ಪನ ಮನೆಯ ಆಸ್ತಿಯಲ್ಲ. ಎಲ್ಲರಿಗೂ ಸಾಮರ್ಥ್ಯವಿರುತ್ತದೆ, ಅವಕಾಶ ಸಿಗಬೇಕಷ್ಟೆ. ಅಂತಹ ಅವಕಾಶವನ್ನು ಸಂವಿಧಾನ ಕೊಟ್ಟಿದೆ. ಅದನ್ನು ಸಾಕಾರಗೊಳಿಸುವ ಹೊಣೆಗಾರಿಕೆ ಶಿಕ್ಷಕರದ್ದು' ಎಂದರು.

### 'ಶಿಕ್ಷಕರ ನೇಮಕಕ್ಕೆ ಕ್ರಮ'

'ಒಳಮೀಸಲಾತಿ ಹಂಚಿಕೆ ನಿರ್ಧಾರವಾಗಿದೆ. ಖಾಲಿ ಇರುವ ಶಿಕ್ಷಕರ ಹುದ್ದೆಗಳ ಭರ್ತಿಗೆ ಶೀಘ್ರವೇ ಕ್ರಮ ತೆಗೆದುಕೊಳ್ಳುತ್ತೇವೆ. ಮುಖ್ಯಮಂತ್ರಿ ಅವರೊಂದಿಗೆ ಈ ಬಗ್ಗೆ ಚರ್ಚೆ ನಡೆಸುತ್ತೇನೆ' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

'ಎಲ್ಲ ಮಕ್ಕಳೂ ಸರ್ಕಾರಿ ಶಾಲೆಗೆ ಬರುವಂತಾಗಬೇಕು. ಅದಕ್ಕೆ ಬೇಕಿರುವ ಸವಲತ್ತುಗಳನ್ನು ಒದಗಿಸಿಕೊಡುತ್ತಿದ್ದೇವೆ. 800 ಕೆಪಿಎಸ್ ಶಾಲೆಗಳ ಆರಂಭಕ್ಕೆ ಸಂಪುಟ ಅನುಮೋದನೆ ನೀಡಿದೆ' ಎಂದರು.

**ಉಚಿತ ನೋಟ್ ಪುಸ್ತಕ:** 'ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್ ಪುಸ್ತಕ ನೀಡಬೇಕು ಎಂದು ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ ಮನವಿ ಸಲ್ಲಿಸಿದ್ದರು. ಅದನ್ನು ಪರಿಶೀಲಿಸಿದ್ದೇನೆ. ಮುಂದಿನ ವರ್ಷದಿಂದಲೇ ಮಕ್ಕಳಿಗೆ ಉಚಿತವಾಗಿ ನೋಟ್ ಪುಸ್ತಕ ವಿತರಣೆ ಮಾಡುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

## ಸುದ್ದಿ 2 ನಿಮಿಷ

### ಎಂಜಿನಿಯರಿಂಗ್ ಸರ್ವೀಸಸ್ ಪರೀಕ್ಷೆ: ಚೈತ್ರಾಗೆ 31ನೇ ರ‍್ಯಾಂಕ್

**ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ):** ತಾಲ್ಲೂಕಿನ ಕಾಡಂಚಿನ ಆಲತ್ತೂರು ಗ್ರಾಮದ ಕೃಷಿಕ ದಂಪತಿ ಮಾದೇಗೌಡ–ಜಯಮ್ಮ ಅವರ ಪುತ್ರಿ ಎ.ಎಂ.ಚೈತ್ರಾ ಅವರು ಯುಪಿಎಸ್‌ಸಿ ಎಂಜಿನಿಯರಿಂಗ್ ಸರ್ವೀಸಸ್ ಪರೀಕ್ಷೆಯಲ್ಲಿ 31ನೇ ರ‍್ಯಾಂಕ್ ಪಡೆದು ಸಾಧನೆ ಮಾಡಿದ್ದಾರೆ.

ದೂರಸಂಪರ್ಕ ಸಚಿವಾಲಯದಲ್ಲಿ ಕಿರಿಯ ಟೆಲಿಕಾಂ ಅಧಿಕಾರಿ ಹುದ್ದೆಗೆ ಆಯ್ಕೆಯಾಗಿರುವ ಚೈತ್ರಾ ಸೆ.8ರಿಂದ ಗಾಜಿಯಾಬಾದ್‌ನಲ್ಲಿರುವ ನ್ಯಾಷನಲ್ ಕಮ್ಯುನಿಕೇಷನ್ ಅಕಾಡೆಮಿಯಲ್ಲಿ ಕೆಲಸ ಆರಂಭಿಸಲಿದ್ದಾರೆ.

ಆಲತ್ತೂರಿನ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ದೊಡ್ಡಹುಂಡಿ ಭೋಗಪ್ಪ ಸರ್ಕಾರಿ ಪಿಯು ಕಾಲೇಜಿನಲ್ಲಿ ಕಾಲೇಜು ಶಿಕ್ಷಣ, ಮೈಸೂರಿನ ಎಟಿಎಂಇ ಕಾಲೇಜಿನಲ್ಲಿ ಎಂಜಿನಿಯರ್ ಪದವಿ ಪಡೆದಿದ್ದಾರೆ. ಇಎಸ್‌ಇ ಗೇಟ್ ಪರೀಕ್ಷೆಗಾಗಿ ಹೈದರಾಬಾದ್ ಮತ್ತು ನವದೆಹಲಿಯಲ್ಲಿ ತರಬೇತಿ ಪಡೆದಿದ್ದರು.

'ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದಿದ್ದೇನೆ. ಬೋಧಕರ ಮಾರ್ಗದರ್ಶನದಲ್ಲಿ ಯುಪಿಎಸ್‌ಪಿ ಪರೀಕ್ಷೆಯಲ್ಲಿ ಯಶಸ್ಸು ಪಡೆದಿದ್ದೇನೆ. ಪೋಷಕರು ಬೆಂಬಲವಾಗಿ ನಿಂತರು. ಅವರ ಪರಿಶ್ರಮ ವ್ಯರ್ಥವಾಗಲಿಲ್ಲ' ಎಂದು ಚೈತ್ರಾ ಈ ಕುರಿತು ಪ್ರತಿಕ್ರಿಯಿಸಿದರು.

### ಸೊರಬ: ಡಿ.ಜೆ. ಸದ್ದಿಗೆ ಕುಸಿದು ಬಿದ್ದ ಪೊಲೀಸ್ ಅಧಿಕಾರಿ

**ಶಿವಮೊಗ್ಗ:** ಜಿಲ್ಲೆಯ ಸೊರಬದ ಮುಖ್ಯರಸ್ತೆಯಲ್ಲಿ ಗುರುವಾರ ರಾತ್ರಿ ಓಂ ಗಣಪತಿ ಹಾಗೂ ಗಣೇಶ ಮೂರ್ತಿಗಳ ವಿಸರ್ಜನಾ ಮೆರವಣಿಗೆಯ ವೇಳೆ ಡಿ.ಜೆ. ಸದ್ದಿನ ಅಬ್ಬರಕ್ಕೆ ಬಂದೋಬಸ್ತ್ ಕರ್ತವ್ಯದಲ್ಲಿದ್ದ ಇನ್‌ಸ್ಪೆಕ್ಟರ್ ರಾಜಶೇಖರ್ ತಲೆ ತಿರುಗಿ ಅಸ್ವಸ್ಥಗೊಂಡು ಬಿದ್ದಿದ್ದಾರೆ.

ಧ್ವನಿವರ್ಧಕದ ಅಬ್ಬರದಿಂದಾಗಿ ರಾಜಶೇಖರ್ ಕುಸಿದು ಕೆಳಗೆ ಬೀಳುವುದು ಹಾಗೂ ಅವರನ್ನು ಅಲ್ಲಿದ್ದವರು ಉಪಚರಿಸಿ ಕರೆದೊಯ್ಯುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ನಂತರ ಶಿವಮೊಗ್ಗಕ್ಕೆ ಕಳುಹಿಸಲಾಗಿದೆ.

'ಮೆರವಣಿಗೆ ವೇಳೆ ಎರಡು ಧ್ವನಿವರ್ಧಕ, ಬೇಸ್ ಬಳಸಲಾಗಿದೆ. ರಾಜಶೇಖರ್ ಅವರಿಗೆ ರಕ್ತದೊತ್ತಡ ಹೆಚ್ಚಿ ಕಿವಿಗೆ ತೊಂದರೆಯಾಗಿದೆ. ಈಗ ಗುಣಮುಖರಾಗಿದ್ದಾರೆ' ಎಂದು ಎಸ್‌ಪಿ ಜಿ.ಕೆ. ಮಿಥುನ್‌ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಿಯಮ ಉಲ್ಲಂಘನೆ ಬಗ್ಗೆ ಸಂಘಟಕರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಡಿ.ಜೆ. ಉಪಕರಣಗಳ ಮುಟ್ಟುಗೋಲಿಗೆ ಸ್ಥಳೀಯ ಠಾಣೆಗೆ ಸೂಚಿಸಿದ್ದೇನೆ' ಎಂದು ತಿಳಿಸಿದರು.

## ಚಿಟಿಕೆ ಸುದ್ದಿ

### 'ಸಂಪ್ರದಾಯ ಮುರಿದರೆ ಗಂಡಾಂತರ'

**ಚಿಕ್ಕಬಳ್ಳಾಪುರ:** ಸಿದ್ದರಾಮಯ್ಯ ಯಾರನ್ನೊ ಮೆಚ್ಚಿಸಲು ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿದ್ದಾರೆ' ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಟೀಕಿಸಿದರು.

ಚಾಮುಂಡೇಶ್ವರಿ ಗೌರವಕ್ಕೆ ಧಕ್ಕೆ ಮಾಡಬಾರದು. ಸಂಪ್ರದಾಯ ಮುರಿದರೆ ರಾಜ್ಯಕ್ಕೆ ಅಪಾಯ ಕಾದಿದೆ ಎಂದು ಎಚ್ಚರಿಸಿದರು.

'ಬಾನು ಮುಷ್ತಾಕ್ ಅವರು ಚಾಮುಂಡಿ ತಾಯಿ ಬಳಿ ಹೋದಾಗ 'ನನ್ನಿಂದ ತಪ್ಪಾಗಿದೆ. ದೇಶಕ್ಕೆ ಒಳ್ಳೆಯದು ಮಾಡಮ್ಮ' ಎಂದು ಬೇಡಿಕೊಳ್ಳಲಿ. ಇಲ್ಲದಿದ್ದರೆ ದೇಶಕ್ಕೆ, ನಾಡಿಗೆ, ಸಿದ್ದರಾಮಯ್ಯ ಸೇರಿದಂತೆ ಎಲ್ಲರಿಗೂ ಗಂಡಾಂತರ ಕಾದಿದೆ' ಎಂದು ಹೇಳಿದರು.

### 'ಸಿದ್ದರಾಮಯ್ಯ ಮತ್ತು ತಂಡ ಹೊಸೆದ ಕತೆ'

**ಚಿಕ್ಕಬಳ್ಳಾಪುರ:** 'ಸೋನಿಯಾ ಗಾಂಧಿ ಅವರಿಗೆ ಧರ್ಮಸ್ಥಳದ ಬಗ್ಗೆ ಏನು ಗೊತ್ತಿದೆ. ಮಗನನ್ನು ಪ್ರಧಾನಿ ಮಾಡಬೇಕು ಎಂಬುದಷ್ಟೇ ಅವರ ತಲೆಯಲ್ಲಿದೆ' ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಟೀಕಿಸಿದರು.

ವಿ.ಸೋಮಣ್ಣ

ಧರ್ಮಸ್ಥಳ ಪ್ರಕರಣದಲ್ಲಿ ಮಧ್ಯಪ್ರವೇಶಿಸಲು ಕೋರಿ ರಾಜ್ಯದ ಹತ್ತು ಮಹಿಳಾ ಸಂಘಟನೆಗಳು ಕಾಂಗ್ರೆಸ್ ಪಕ್ಷದ ನಾಯಕಿಗೆ ಪತ್ರ ಬರೆದಿರುವ ಬಗ್ಗೆ ಶುಕ್ರವಾರ ಅವರು ಪ್ರತಿಕ್ರಿಯಿಸಿದರು.

'ಈ ಹೆಣ್ಣು ಮಕ್ಕಳಿಗೆ ಯಾರೊ ಹೇಳಿಕೊಟ್ಟು ಬರೆಸಿರಬಹುದು. ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ತಂಡ ಹೊಸೆದ ಕತೆಯಂತಿದೆ. ಇಂತಹ ಎಲ್ಲ ಕುತಂತ್ರ ಮಾಡುವುದೇ ಕಾಂಗ್ರೆಸ್‌ನವರು ಎಂದರು.

ಡಿ.ಕೆ.ಶಿವಕುಮಾರ್ ಬುದ್ಧಿವಂತಿಕೆ ಬೇಸರಗೊಂಡವರು ಹೀಗೆ ಮಾಡಿಸಿರಬಹುದು. ಆದರೆ, ಯಾವ ಡಿ.ಕೆ.ಶಿವಕುಮಾರ್, ಯಾವ ಲಕ್ಷ್ಮಿ ಹೆಬ್ಬಾಳ್ಕರ್ ಎನ್ನುವ ಸ್ಥಿತಿಯಲ್ಲಿ ಸೋನಿಯಾ ಇದ್ದಾರೆ ಎಂದರು.

### ಗ್ಯಾರಂಟಿ: 'ಸರ್ಕಾರಿ ಶಾಲೆ ವಿದ್ಯಾರ್ಥಿಗಳ ಪಾಲಕರಿಗೆ ಆದ್ಯತೆ'

**ದಾವಣಗೆರೆ:** ಸರ್ಕಾರಿ ಶಾಲೆಯ ವಿದ್ಯಾರ್ಥಿಗಳ ಪಾಲಕರಿಗೆ 'ಗ್ಯಾರಂಟಿ' ಯೋಜನೆಯಲ್ಲಿ ಆದ್ಯತೆ ನೀಡುವ ನೀತಿ ರೂಪಿಸುವ ಅಗತ್ಯವಿದೆ. ಆಗ ಸರ್ಕಾರಿ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿ, ಶಾಲೆಗಳೂ ಅಭಿವೃದ್ಧಿ ಹೊಂದಲಿವೆ' ಎಂದು ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಅಭಿಪ್ರಾಯಪಟ್ಟರು.

ಶುಕ್ರವಾರ ಇಲ್ಲಿ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಗೃಹಲಕ್ಷ್ಮಿ ಯೋಜನೆಯಡಿ ₹ 2,000 ಹಾಗೂ 'ಗೃಹಜ್ಯೋತಿ' ಯೋಜನೆಯಡಿ ವಿದ್ಯುತ್ ಶುಲ್ಕ ಉಚಿತವಾಗಿ ಸಿಗುತ್ತಿದೆ. ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸುವವರಿಗೆ ಆದ್ಯತೆ ನೀಡಬೇಕು' ಎಂದರು.

'ಆಗ 'ಗ್ಯಾರಂಟಿ'ಗಳು ಕೈತಪ್ಪುವ ಭಯದಲ್ಲಿ ಫಲಾನುಭವಿಗಳು ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸುತ್ತಾರೆ. ಈ ಬಗ್ಗೆ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸುವೆ' ಎಂದು ಹೇಳಿದರು.

## ಧರ್ಮಸ್ಥಳ: ವಿವಿಧ ಧಾರ್ಮಿಕ ಕ್ಷೇತ್ರಗಳ ಮುಖಂಡರಿಂದ ಧರ್ಮಜಾಗೃತಿ ಸಮಾವೇಶ

# ದೇವರ ಅನುಗ್ರಹ: ಸತ್ಯದ ಸಾಕ್ಷಾತ್ಕಾರ: ಹೆಗ್ಗಡೆ

ಪ್ರಜಾವಾಣಿ ವಾರ್ತೆ

**ಉಜಿರೆ (ದಕ್ಷಿಣ ಕನ್ನಡ):** 'ಮಂಜುನಾಥ ಸ್ವಾಮಿಯ ಅನುಗ್ರಹ, ಧರ್ಮ ದೇವತೆಗಳ ಅಭಯ, ಅಣ್ಣಪ್ಪ ಸ್ವಾಮಿಯ ರಕ್ಷಣೆಯಿಂದ ಎಲ್ಲ ಸಮಸ್ಯೆಗಳು ನಿವಾರಣೆಯಾಗುತ್ತಿವೆ. ಸತ್ಯದ ಸಾಕ್ಷಾತ್ಕಾರ ಆಗುತ್ತಿದೆ. ಶಾಂತಿ, ನೆಮ್ಮದಿ ದೊರಕಿದೆ' ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಹೇಳಿದರು.

ಧರ್ಮಸ್ಥಳದಲ್ಲಿ ಶುಕ್ರವಾರ ನಡೆದ ಉಡುಪಿ, ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಗಳ ಧಾರ್ಮಿಕ ಕ್ಷೇತ್ರಗಳು, ದೈವಸ್ಥಾನಗಳು ಮತ್ತು ಶ್ರದ್ಧಾ-ಕೇಂದ್ರಗಳ ಮುಖಂಡರು, ಧಾರ್ಮಿಕ ಪರಿಷತ್ತಿನ ಸದಸ್ಯರ 'ಧರ್ಮಜಾಗೃತಿ ಸಮಾವೇಶ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಾನು ಧರ್ಮಾಧಿಕಾರಿಯಾಗಿ 'ಹೆಗ್ಗಡೆ' ಪೀಠವನ್ನು ಬಯಸಿದವನಲ್ಲ. ಅನಿರೀಕ್ಷಿತವಾಗಿ ತೀರ್ಥರೂಪರ ನಿಧನದಿಂದ ಪಟ್ಟ ಸ್ವೀಕರಿಸಬೇಕಾಯಿತು. ನಾನು 'ನೆಪ' ಮಾತ್ರ. ಎಲ್ಲ ಕಾರ್ಯಗಳೂ ಮಂಜುನಾಥ ಸ್ವಾಮಿಯ ಅನುಗ್ರಹ-ದೊಂದಿಗೆ, ಧರ್ಮದೇವತೆಗಳ ಆಶಯ, ಅಣ್ಣಪ್ಪ ಸ್ವಾಮಿಯ ರಕ್ಷಣೆಯಿಂದ ಸುಗಮವಾಗಿ ನಡೆಯುತ್ತವೆ. ಪ್ರತಿ ಸಂಕ್ರಮಣದ ದಿನ ನಾನು ಧರ್ಮದೇವತೆಗಳಿಗೆ ವರದಿ ಒಪ್ಪಿಸಬೇಕು. ಆಗ ಅವರು, ತಿಳಿವಳಿಕೆ ಇಲ್ಲದೆ ಮಾಡಿದ ತಪ್ಪಿಗೆ ಕ್ಷಮೆ ಇದೆ. ಏನೇ ಆಪತ್ತು, ವಿಪತ್ತು ಬಂದರೂ ಹೆತ್ತ ತಾಯಿಯಂತೆ ನಾವು ರಕ್ಷಣೆ ನೀಡುತ್ತೇವೆ ಎಂದು ಅಭಯ ನೀಡುತ್ತಾರೆ. ತಪ್ಪಾದಲ್ಲಿ ಕೈಯ ಎಣ್ಣೆ ಕಣ್ಣಿಗೆ ತಾಗಿದಂತೆ ಆಗಬಹುದು ಎಂದು ಎಚ್ಚರಿಕೆಯನ್ನೂ ನೀಡುತ್ತಾರೆ' ಎಂದು ಹೆಗ್ಗಡೆ ತಿಳಿಸಿದರು.

'ನನಗೆ ಧರ್ಮಾಧಿಕಾರಿ ಪಟ್ಟಾಭಿಷೇಕ ಆದಾಗ ಪ್ರತಿಭಟನೆ, ವಿರೋಧಗಳು ವ್ಯಕ್ತವಾಗಿದ್ದವು. ಆದರೆ, ಕುಟುಂಬದ ಸದಸ್ಯರ ಸಹಕಾರ, ನೌಕರ ವೃಂದದವರ ಕರ್ತವ್ಯ ನಿಷ್ಠೆ ಹಾಗೂ ಊರಿನ ನಾಗರಿಕರು ಮತ್ತು ಕ್ಷೇತ್ರದ ಅಭಿಮಾನಿಗಳ ಸಹಕಾರದಿಂದ ಸಮಸ್ಯೆಗಳು ನಿವಾರಣೆಯಾಗಿವೆ' ಎಂದರು.

ವಿದ್ವಾನ್ ನಾಗೇಂದ್ರ ಭಾರದ್ವಾಜ, ಬೆಳ್ತಂಗಡಿಯ ವಕೀಲ ಬಿ.ಕೆ.ಧನಂಜಯ ರಾವ್, ಕಟೀಲು ದೇವಸ್ಥಾನದ ಲಕ್ಷ್ಮೀ-ನಾರಾಯಣ ಅಸ್ರಣ್ಣ ಮಾತನಾಡಿ, ನಾವೆಲ್ಲರೂ ಸಂಘಟಿತರಾಗಿ ಧರ್ಮಸ್ಥಳದ ರಕ್ಷಣೆಗೆ ಸಹಕರಿಸಬೇಕು ಎಂದು ಹೇಳಿದರು.

ವಿದ್ವಾಂಸ ದಾಮೋದರ ಶರ್ಮಾ, ವಿದ್ವಾನ್ ಹಿರಣ್ಯ ವೆಂಕಟೇಶ್ವರ ಭಟ್ಟ, ಹೇಮಾವತಿ ವಿ.ಹೆಗ್ಗಡೆ, ಶ್ರದ್ಧಾಅಮಿತ್, ಡಿ.ಹರ್ಷೇಂದ್ರ ಕುಮಾರ್, ಸೋನಿಯಾ ವರ್ಮ, ಮೇಲ್ಮನೆ ಸದಸ್ಯ ಕೆ.ಪ್ರತಾಪ-ಸಿಂಹ ನಾಯಕ್, ಉಜಿರೆ ಜನಾರ್ದನ ಸ್ವಾಮಿ ದೇವಸ್ಥಾನ ಮೊಕ್ತೇಸರ ಶರತ್‌ಕೃಷ್ಣ ಪಡ್ವೆಟ್ನಾಯ ಇದ್ದರು.

ಪ್ರೊ.ಸುವೀರ್ ಕುಮಾರ್ ನಿರ್ಣಯ ಮಂಡಿಸಿದರು. ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಎಂ. ಮೋಹನ ಆಳ್ವ ಸ್ವಾಗತಿಸಿದರು. ಎಸ್‌ಡಿಎಂ ಕಾಲೇಜಿನ ಉಪನ್ಯಾಸಕ ಶ್ರೀಧರ ಭಟ್ ವಂದಿಸಿದರು.

ಸಮಾವೇಶದಲ್ಲಿ ಕಟೀಲು ಲಕ್ಷ್ಮೀನಾರಾಯಣ ಅಸ್ರಣ್ಣ ಮಾತನಾಡಿದರು

### ಸಮಾವೇಶದ ನಿರ್ಣಯಗಳು

- ಧರ್ಮಸ್ಥಳದ ಬಗ್ಗೆ ಅಪಪ್ರಚಾರ, ಹೆಗ್ಗಡೆಯವರ ತೇಜೋವಧೆಗೆ ರೂಪಿಸಿದ ಷಡ್ಯಂತ್ರಕ್ಕೆ ಸಂಬಂಧಿಸಿ ನ್ಯಾಯಯುತ ತನಿಖೆಗೆ ಅನುಕೂಲ ಕಲ್ಪಿಸಿದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಗೃಹಸಚಿವರು ಹಾಗೂ ಎಸ್‌ಐಟಿ ತಂಡದ ಅಧಿಕಾರಿಗಳಿಗೆ ಧನ್ಯವಾದ ಸಲ್ಲಿಸಲು ನಿರ್ಧರಿಸಲಾಯಿತು
- ಸಾಮಾಜಿಕ ಮಾಧ್ಯಮ ಹಾಗೂ ದೃಶ್ಯಮಾಧ್ಯಮಗಳಲ್ಲಿ ಆಗುತ್ತಿರುವ ಸುಳ್ಳುಸುದ್ದಿಯ ಪ್ರಸಾರ ತಡೆಗಟ್ಟಿ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು
- ಶ್ರದ್ಧಾಕೇಂದ್ರಗಳು, ಧಾರ್ಮಿಕ ನಂಬಿಕೆಗಳ ವಿರುದ್ಧ ಹೇಳಿಕೆ ನೀಡಿ ಶಾಂತಿಭಂಗ ಮಾಡುತ್ತಿರುವ ಸಂಘ-ಸಂಸ್ಥೆಗಳ ವಿರುದ್ಧ ಸರ್ಕಾರ ಕಾನೂನು ಕ್ರಮ ಕೈಗೊಳ್ಳಬೇಕು
- ಧರ್ಮ ಸಂರಕ್ಷಣಾ ಸಮಿತಿಯನ್ನು ಬಲಪಡಿಸಿ ವರ್ಷಕ್ಕೆ ಒಂದು ಬಾರಿ ಇಂಥ ಸಮಾವೇಶವನ್ನು ಅಲ್ಲಲ್ಲಿ ಆಯೋಜಿಸಬೇಕು
- ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರೊಂದಿಗೆ ದೃಢಸಂಕಲ್ಪದಿಂದ ನಿಂತು ಧರ್ಮ ಸಂರಕ್ಷಣೆಯನ್ನು ಮಾಡಲು ಕಟಿಬದ್ಧರಾಗುವುದು

### ಮಟ್ಟೆಣ್ಣವರ ವಿಚಾರಣೆಗೆ ಹಾಜರು

**ಮಂಗಳೂರು:** ಧರ್ಮಸ್ಥಳ ಬೆಳವಣಿಗೆ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ)ದ ಮುಖ್ಯಸ್ಥ ಪ್ರಣವ್ ಮೊಹಂತಿ ಶುಕ್ರವಾರ ಬೆಳ್ತಂಗಡಿಯ ಕಚೇರಿಗೆ ಭೇಟಿ ನೀಡಿ, ತಂಡದವರ ಜೊತೆ ಚರ್ಚಿಸಿದರು.

ಸಾಕ್ಷಿ ದೂರುದಾರನಿಗೆ ಆಶ್ರಯ ನೀಡಿದ್ದ ಜಯಂತ್ ಟಿ. ಹಾಗೂ ಆತನ ಹೇಳಿಕೆಯ ವಿಡಿಯೊ ಚಿತ್ರೀಕರಿಸಿದ್ದ ಯೂಟ್ಯೂಬರ್ ಅಭಿಷೇಕ್ ವಿಚಾರಣೆ ಸತತ ಮೂರನೇ ದಿನವಾದ ಶುಕ್ರವಾರವೂ ಮುಂದುವರಿಯಿತು. ಗುರುವಾರ ತಡರಾತ್ರಿ 2.30ರವರೆಗೆ ಅಧಿಕಾರಿಗಳು ಜಯಂತ್‌ಅವರ ವಿಚಾರಣೆ ನಡೆಸಿದ್ದರು.

'ಸಾಕ್ಷಿ ದೂರುದಾರ ನೀಡಿದ್ದ ಸಂದರ್ಶನ, ಆತನ ಬಂಧನದ ನಂತರ ಕೆಲ ಯೂಟ್ಯೂಬ್ ವಾಹಿನಿಗಳಲ್ಲಿ ಪ್ರಸಾರವಾಗಿತ್ತು. ಆತನ ವಿಡಿಯೊವೊಂದನ್ನು ಅಭಿಷೇಕ್ ಚಿತ್ರೀಕರಿಸಿದ್ದರು' ಎಂದು ಮೂಲಗಳು ತಿಳಿಸಿವೆ.

'ಗಿರೀಶ ಮಟ್ಟೆಣ್ಣವರ ವಿಚಾರಣೆಗೆ ಹಾಜರಾಗಿದ್ದು, ಅವರ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಸಮಗ್ರ ಮಾಹಿತಿ ಸಂಗ್ರಹ ಹಾಗೂ ಸತ್ಯಾಸತ್ಯತೆ ಪರಿಶೀಲನೆಗಾಗಿ ಕೂಲಂಕಷ ತನಿಖೆ ನಡೆಸಲಾಗುತ್ತಿದೆ ಎಂದು ತಿಳಿಸಿವೆ. 'ಪ್ರಕರಣಕ್ಕೆ ಸಂಬಂಧಿಸಿ ಈವರೆಗೆ ಯಾರನ್ನೂ ಬಂಧಿಸಿಲ್ಲ. ಬಂಧನ ಕುರಿತು ಈ ಹಂತದಲ್ಲಿ ಏನನ್ನೂ ಹೇಳಲು ಸಾಧ್ಯವಿಲ್ಲ' ಎಂದು ಎಸ್‌ಐಟಿ ಅಧಿಕಾರಿಯೊಬ್ಬರು ತಿಳಿಸಿದರು.

ಕೇರಳ ಪೊಕ್ಕುನ್ನುವಿನ ಯೂಟ್ಯೂಬರ್ ಮುನಾಫ್ ಎಂಬುವರಿಗೆ ವಿಚಾರಣೆಗೆ ಹಾಜರಾಗುವಂತೆ ಎಸ್‌ಐಟಿ ನೋಟಿಸ್ ನೀಡಿದೆ. ಸಾಕ್ಷಿ ದೂರುದಾರ ಕೋರ್ಟ್‌ಗೆ ತಲೆಬುರುಡೆ ಹಾಜರುಪಡಿಸಿದ್ದ. ಈ ತಲೆಬುರುಡೆಯನ್ನು ಎತ್ತಿ ಚೀಲಕ್ಕೆ ತುಂಬಿಸುತ್ತಿರುವ ಮೂಲ ವಿಡಿಯೊ, ಮುನಾಫ್ ಅವರ ಯೂಟ್ಯೂಬ್ ಚಾನೆಲ್‌ನಲ್ಲಿ ಜುಲೈ 11ರಂದು ಪ್ರಸಾರವಾಗಿತ್ತು ಎನ್ನಲಾಗಿದೆ.

### 'ಯೂಟ್ಯೂಬರ್‌ಗಳಿಗೆ ಆಫರ್'

ಪ್ರಜಾವಾಣಿ ವಾರ್ತೆ

**ಮಂಡ್ಯ:** 'ಧರ್ಮಸ್ಥಳ ವಿರುದ್ಧದ ಷಡ್ಯಂತ್ರಕ್ಕೆ ಕೈಜೋಡಿಸುವ ಯೂಟ್ಯೂಬರ್‌ಗಳಿಗೆ ಫಂಡಿಂಗ್ ಆಗಿದೆ. ನನಗೂ ಆಫರ್ ಬಂದಿತ್ತು' ಎಂದು ಮದ್ದೂರು ತಾಲ್ಲೂಕಿನ ಯೂಟ್ಯೂಬರ್ ಸುಮಂತ್ ಆರೋಪಿಸಿದ್ದಾರೆ.

ಶುಕ್ರವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಮಾತನಾಡುತ್ತಾ, 'ಸೌಜನ್ಯ ಪರ ಹೋರಾಟದ ಹೆಸರಲ್ಲಿ ಈ ಎರಡು ವರ್ಷಗಳ ಹಿಂದೆ ಪ್ಲಾನ್ ಮಾಡಿದ್ದಾರೆ. ನಾನು ಷಡ್ಯಂತ್ರವನ್ನು ತಿಳಿದು ಆಫರ್ ನಿರಾಕರಿಸಿದ್ದೆ. ಯೂಟ್ಯೂಬರ್‌ಗಳಿಗೆ ಆಮಿಷ ಒಡ್ಡಿದವರ ಬಗ್ಗೆ ಎಸ್‌ಐಟಿ ತನಿಖೆ ನಡೆಸಲಿ' ಎಂದು ಒತ್ತಾಯಿಸಿದ್ದಾರೆ.

### ವಸಂತ್ ಗಿಳಿಯಾರ್ ವಿರುದ್ಧ ಎಫ್‌ಐಆರ್

**ಮೈಸೂರು:** 'ಧರ್ಮಸ್ಥಳ ಸಂರಕ್ಷಣಾ ಸಮಿತಿ ಸಂಚಾಲಕ ವಸಂತ ಗಿಳಿಯಾರ್ ಎನ್ನುವವರು ವೈಯಕ್ತಿಕ ಚಾರಿತ್ರ್ಯ ವಧೆ ನಡೆಸಿದ್ದಾರೆ' ಎಂದು ಆರೋಪಿಸಿ ಒಡನಾಡಿ ಸಂಸ್ಥೆ ನಿರ್ದೇಶಕ ಸ್ಟ್ಯಾನ್ಲಿ ಅವರು ಇಲ್ಲಿನ ವಿಜಯನಗರ ಪೊಲೀಸ್ ಠಾಣೆಗೆ ಶುಕ್ರವಾರ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.

'ಮಹಿಳೆಯರ ಪರವಾಗಿ ಕೆಲಸ ಮಾಡುತ್ತಿರುವ ಒಡನಾಡಿ ಸಂಸ್ಥೆಯೂ ಕಾನೂನಿನ ವ್ಯಾಪ್ತಿಯಲ್ಲಿ ಸೌಜನ್ಯಾ ಪರವಾಗಿ ಹೋರಾಟ ನಡೆಸುತ್ತಿದೆ. ಈ ವಿಚಾರಕ್ಕೆ ಸಂಬಂಧಿಸಿ ವಸಂತ ಗಿಳಿಯಾರ್, 'ಕ್ರೈಸ್ತ ಧರ್ಮದವನು ಹಿಂದೂ ಧರ್ಮ ಒಡೆಯಲು ಬಂದವನು' ಎಂದು ಸಾಮಾಜಿಕ ಜಾಲತಾಣದಲ್ಲಿ ಆರೋಪಿಸಿ, ವದಂತಿ ಹರಡುತ್ತಿದ್ದಾರೆ. ಕಾನೂನು ಕ್ರಮ ಜರುಗಿಸಬೇಕು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

### ಮಾನಹಾನಿ ಪೋಸ್ಟ್: ಪ್ರಕರಣ ದಾಖಲು

**ಮಂಗಳೂರು:** ಸೌಜನ್ಯಾ ಅವರ ತಾಯಿ ಕುಸುಮಾವತಿ, ಅವರ ಪರ ಹೋರಾಟಗಾರರ ವಿರುದ್ಧ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದ ಆರೋಪ ಕುರಿತು ಪ್ರಕರಣ ದಾಖಲಾಗಿದೆ.

'ಶುಭಾ ರೈ, ಯಶವಂತ ಗಟ್ಟಿ, ದೀಪಕ್ ಶೆಟ್ಟಿ, ಸರಸ್ವತಿ ಅಮಿತ್, ಅಮಿತ್ ಬಜ್ಪೆ, ಅನು ಶೆಟ್ಟಿ, ನವೀನ್ ಗೌಡ್ರು, ಜೈ ಕುಂಜಪ, ಐ. ಎಂ. ಅಡ್ಮಿನ್, ಟ್ರೋಲ್ ಬಾಹುಬಲಿ, ರಾಜೇಶ್ ನಾಯ್ಕ್, ಟ್ರೋಲ್ ತಿಮ್ಮ ರೌಡಿ, ಶೆಟ್ಟಿ ತನುಷ್ ಎಂಬ ಹೆಸರಿನ ಸಾಮಾಜಿಕ ಜಾಲತಾಣ ಖಾತೆಗಳ ವಿರುದ್ಧ ಬೆಳ್ತಂಗಡಿ ಠಾಣೆಯಲ್ಲಿಪ್ರಕರಣ ದಾಖಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

# ಚಿಕಿತ್ಸೆ ನಿರಾಕರಿಸಿದರೆ ದಂಡ

## ರಸ್ತೆ ಅಪಘಾತ: ಜಿಲ್ಲಾ ಆಸ್ಪತ್ರೆಗಳಿಗೆ ಸರ್ಕಾರದ ಆದೇಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಸ್ತೆ ಅಪಘಾತದಿಂದ ಗಾಯಗೊಂಡು ಆಸ್ಪತ್ರೆಗೆ ದಾಖಲಾದವರಿಗೆ, ಯಾವುದೇ ಮುಂಗಡ ಹಣ ಕೇಳದೆ ಚಿಕಿತ್ಸೆ ನೀಡಬೇಕು ಎಂದು ಆರೋಗ್ಯ ಇಲಾಖೆ ಜಿಲ್ಲಾ ಆಸ್ಪತ್ರೆಗಳಿಗೆ ಆದೇಶಿಸಿದೆ.

ಸುಟ್ಟ ಗಾಯ, ವಿಷಪ್ರಾಶನ, ಹಲ್ಲೆಯಿಂದಾದ ಗಾಯ ಸೇರಿ ಇತರೆ ತುರ್ತು ಸಂದರ್ಭದಲ್ಲಿಯೂ ವೈದ್ಯಕೀಯ ಸಂಸ್ಥೆ ಅಥವಾ ವೈದ್ಯರು ಮುಂಗಡ ಹಣ ಪಾವತಿಗೆ ಬೇಡಿಕೆ ಇಡದೆ, ಸಂತ್ರಸ್ತರಿಗೆ ತುರ್ತು ಚಿಕಿತ್ಸೆ ನೀಡಬೇಕು. ಇದನ್ನು ಉಲ್ಲಂಘಿಸಿದಲ್ಲಿ ₹ 1 ಲಕ್ಷದವರೆಗೆ ದಂಡ ವಿಧಿಸಲಾಗುವುದು ಎಂದು ಇಲಾಖೆ ಎಚ್ಚರಿಸಿದೆ.



ಗಾಯಗೊಂಡ ವ್ಯಕ್ತಿಯ ಆರೋಗ್ಯ ಸ್ಥಿತಿ ಸುಧಾರಿಸಲು ಪ್ರತಿಯೊಂದು ಆಸ್ಪತ್ರೆಯೂ ತಕ್ಷಣದ ವೈದ್ಯಕೀಯ ತಪಾಸಣೆ ಸೇವೆ ಮತ್ತು ಪ್ರಾಥಮಿಕ ಚಿಕಿತ್ಸೆಯನ್ನು ಉಚಿತವಾಗಿ ಹಾಗೂ ಅಗತ್ಯವೆಂದು ಪರಿಗಣಿಸಿ ಒದಗಿಸಬೇಕು. ಸೌಲಭ್ಯಗಳ ಕೊರತೆಯಿರುವ ಆಸ್ಪತ್ರೆಗಳು, ರೋಗಿಯನ್ನು ಇತರ ಆಸ್ಪತ್ರೆ ಗಳಿಗೆ ವರ್ಗಾವಣೆ ಮಾಡುವ ಮೊದಲು ಪ್ರಥಮ ಚಿಕಿತ್ಸೆ ನೀಡಬೇಕು. ವೈದ್ಯಕೀಯ ವಿವರಗಳೊಂದಿಗೆ ಸ್ಥಳಾಂತರಿಸಬೇಕು ಎಂದು ಹೇಳಿದೆ.

ರಸ್ತೆ ಅಪಘಾತದ ಸಂತ್ರಸ್ತರು, ಅಪಘಾತದ ದಿನಾಂಕದಿಂದ ಏಳು ದಿನಗಳವರೆಗೆ ₹ 1.50 ಲಕ್ಷದವರೆಗೆ ಯಾವುದೇ ಗೊತ್ತುಪಡಿಸಿದ ಆಸ್ಪತ್ರೆಯಲ್ಲಿ ನಗದು ರಹಿತ ಚಿಕಿತ್ಸೆಗೆ ಅರ್ಹರಾಗಿರುತ್ತಾರೆ. ರಾಜ್ಯ ರಸ್ತೆ ಸುರಕ್ಷತಾ ಮಂಡಳಿಯು ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸಲಿದ್ದು, ಮೋಟಾರು ವಾಹನ ಅಪಘಾತ ನಿಧಿಯಿಂದ ಮರುಪಾವತಿ ಮಾಡಲಾಗುತ್ತದೆ ಎಂದು ತಿಳಿಸಿದೆ.

# ಒಳಮೀಸಲು: 'ಬಲಗೈನವರಿಗೆ ಅನ್ಯಾಯ'

ಪ್ರಜಾವಾಣಿ ವಾರ್ತೆ

**ಮೈಸೂರು:** 'ಒಳ ಮೀಸಲಾತಿ ಸಮೀಕ್ಷೆ ಎರಡು ಬಾರಿ ನಡೆದರೂ, ಬಲಗೈ ಸಮುದಾಯಕ್ಕೆ ಅನ್ಯಾಯವೇ ಆಗಿದೆ' ಎಂದು ಕಾಂಗ್ರೆಸ್ ಶಾಸಕ ಎ.ಆರ್. ಕೃಷ್ಣಮೂರ್ತಿ ಶುಕ್ರವಾರ ಬೇಸರ ವ್ಯಕ್ತಪಡಿಸಿದರು.

ಇಲ್ಲಿನ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ 'ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ' ಏರ್ಪಡಿಸಿದ್ದ 'ನಾಗ, ಮಹಾರ್, ಹೊಲೆಯ, ಛಲವಾದಿ ಸಮುದಾಯಗಳ ಸಾಂಸ್ಕೃತಿಕ ಮತ್ತು ಐತಿಹಾಸಿಕ ಹಿನ್ನೆಲೆ' ಕುರಿತ ವಿಚಾರಸಂಕಿರಣ ಉದ್ಘಾಟಿಸಿ ಮಾತನಾಡಿದರು.

'ವರದಿ ಕೊಟ್ಟವರನ್ನು ಬಹಳ ನಂಬಿದ್ದೆವು. ಆದರೆ, ಸಮುದಾಯವನ್ನು ಒಡೆದು ಛಿದ್ರ ಮಾಡಿದ್ದಾರೆ. ನ್ಯಾಯಾಲಯದ ಕದ ತಟ್ಟುವ ಕೆಲಸವನ್ನು ಸಮುದಾಯದ ಬೌದ್ಧಿಕ ವಲಯವು ನಿರ್ಧರಿಸಲಿ' ಎಂದರು.

'ಬಡ್ತಿ ಮೀಸಲಾತಿಯಲ್ಲಿ ಎ, ಬಿ, ಸಿ, ಡಿ ವಿಭಾಗಗಳಿದ್ದು, ಬಲಗೈ ಸಮಾಜದವರನ್ನು ಕೆಳಕ್ಕೆ ತಳ್ಳಲಾಗಿದೆ. ಅದಕ್ಕಾಗಿ ನ್ಯಾಯಾಲಯದ ಮೆಟ್ಟಿಲೇರಬೇಕಿದೆ' ಎಂದು ಪ್ರತಿಪಾದಿಸಿದರು.

'ಬಲಗೈ ಸಮುದಾಯದ ಸಾವಿರಾರು ಜನರು ಸಮೀಕ್ಷೆಯಲ್ಲಿ 'ಹೊಲೆಯ' ಎಂದು ನಮೂದಿಸಲು ಹಿಂಜರಿದರು. ಹೀಗಾಗಿ, ಜನಸಂಖ್ಯೆ ಕಡಿಮೆ ದಾಖಲಾಗಿದೆ. ಸಮೀಕ್ಷೆಯಿಂದ ನೋವಾಗಿದೆ' ಎಂದರು.

'ಬಾಡಿಗೆ ಮನೆಗಾಗಿ ಹಲವರು ಸುಳ್ಳು ಜಾತಿ ಹೇಳಿದ್ದಾರೆ. ನಮ್ಮ ಜಾತಿಯನ್ನು ಸ್ವಾಭಿಮಾನದಿಂದ ಹೇಳಿಕೊಳ್ಳದಿದ್ದರೆ ಇದ್ದರೂ ಸತ್ತಂತೆ. ಮುಂದಿನ ಪೀಳಿಗೆಗೆ ಮಣ್ಣು ಹಾಕಿದಂತೆ' ಎಂದು ಹೇಳಿದರು.

### ಮನುವಾದದತ್ತ ಸಮಾಜ: ಶಾಸಕ

ಕಾಂಗ್ರೆಸ್ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಮಾತನಾಡಿ, '1925ರಲ್ಲಿ ಹುಟ್ಟಿದ ಮನುವಾದಿ ಸಂಘಟನೆ ಸೋದರ ಸಮಾಜವನ್ನು ಒಡೆದು ಹಾಕಿದೆ' ಎಂದು ದೂರಿದರು.

'ಮತ್ತೆ ಮನುವಾದಕ್ಕೆ ಸಮಾಜ ತಿರುಗುತ್ತಿದೆ.ಯಶಸ್ಸಿಗೆ ಒಗ್ಗಟ್ಟು ಅಗತ್ಯ' ಎಂದು ಹೇಳಿದರು.

### ಏರ್ ಗನ್ ಗುಂಡು ತಗುಲಿ ಬಾಲಕ ಸಾವು

**ಶಿರಸಿ:** ಶಿರಸಿಯ ಸೋಮನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಏರ್‌ಗನ್‌ನಿಂದ (ಕೋವಿ) ಹಾರಿದ ಗುಂಡು ತಗುಲಿ, ಒಂಬತ್ತು ವರ್ಷದ ಬಾಲಕ ಕರಿಯಪ್ಪ ಮೃತಪಟ್ಟಿದ್ದಾನೆ. ಗನ್‌ನ ಮಾಲೀಕ ರಾಘವ ಹೆಗಡೆ ಮತ್ತು ಬಳಕೆದಾರ ನಿತೀಶ ಗೌಡ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ.

'ಬಸಪ್ಪ ಉಂಡಿ ಅವರು ಕುಟುಂಬ ಸಮೇತ ಸೋಮನಳ್ಳಿಯ ರಾಘವ ಹೆಗಡೆ ಎಂಬುವರ ಮನೆಯಲ್ಲಿ ತೋಟದ ಕೆಲಸಕ್ಕೆ ಇದ್ದರು. ತೋಟದಲ್ಲಿ ಮಂಗನ ಹಾವಳಿ ನಿಯಂತ್ರಿಸಲು ನೇಮಕಗೊಂಡಿದ್ದ ನಿತೀಶ ಗೌಡ, ಆಗಾಗ್ಗೆ ಮಕ್ಕಳನ್ನು ಗದರಿಸುತ್ತಿದ್ದ.'

'ಶುಕ್ರವಾರ ಆತ ಏರ್‌ಗನ್ ಸಮೇತ ರಾಘವ ಹೆಗಡೆ ಅವರ ಮನೆ ಬಳಿ ಬಂದಿದ್ದಾನೆ. ಆಡುತ್ತಿದ್ದ ಬಾಲಕಿ ಜೊತೆ ಇಬ್ಬರು ಸಹೋದರರು ಓಡಿ ಬಂದಿದ್ದಾರೆ. ಆಗ ದುರುದ್ದೇಶಪೂರ್ವಕವಾಗಿ ಕರಿಯಪ್ಪನ ಎದೆಗೆ ಗುಂಡು ಹಾರಿಸಿದ' ಎಂದು ಮೃತನ ತಾಯಿ ಗ್ರಾಮೀಣ ಠಾಣೆಗೆ ದೂರು ನೀಡಿದ್ದಾರೆ.

## ಈದ್ ಮಿಲಾದ್ ಮೆರವಣಿಗೆ: ಹಿಂದೂಗಳಿಂದ ಅನ್ನಸಂತರ್ಪಣೆ

# ಮುಸ್ಲಿಮರಿಂದ ಗಣೇಶ ಮೂರ್ತಿ ಪೂಜೆ

ಪ್ರಜಾವಾಣಿ ವಾರ್ತೆ

**ಕೊಪ್ಪಳ:** ನಗರದಲ್ಲಿ ಶುಕ್ರವಾರ ನಡೆದ ಮುಹಮ್ಮದ್ ಪೈಗಂಬರರ ಜಯಂತ್ಯುತ್ಸವದ ಮೆರವಣಿಗೆ ವೇಳೆ ಮುಸ್ಲಿಮರು ಇಲ್ಲಿನ ಗಡಿಯಾರ ಕಂಬದ ಗಜಾನನ ಮಿತ್ರ ಮಂಡಳಿಯ ಗಣೇಶ ಮೂರ್ತಿಗೆ ಪೂಜೆ ಸಲ್ಲಿಸಿದರು.

ಮೆರವಣಿಗೆಯ ಜೊತೆಗೆ ಬಂದ 7ನೇ ವಾರ್ಡಿನ ವಾಹೀದ್ ಸೋಂಪೂರ್ ಮತ್ತು ಸಂಗಡಿಗರು ಗಣಪತಿ ಪ್ರತಿಷ್ಠಾಪಿಸಿದ್ದ ಸ್ಥಳಕ್ಕೆ ಭೇಟಿ ನೀಡಿ, ಹೂವಿನ ಹಾರ ಹಾಕಿ, ಆರತಿ ಬೆಳಗಿ ಪೂಜೆ ಸಲ್ಲಿಸಿದರು.

ಬಳಿಕ ಪ್ರಸಾದ ಸೇವಿಸಿ, ಪರಸ್ಪರರು ಹಬ್ಬಕ್ಕೆ ಶುಭಾಶಯವ ವಿನಿಮಯ ಮಾಡಿಕೊಂಡರು. ಸ್ಥಳದಲ್ಲಿದ್ದ ಅಜ್ಜಪ್ಪ ಸ್ವಾಮಿ ಮತ್ತು ಸಿದ್ದಪ್ಪಜ್ಜ ಹಿರೇಮಠ ಪೂಜೆ ಕೈಗೊಳ್ಳಲು ಸಹಕಾರ ನೀಡಿದರು.

'ಕೊಪ್ಪಳ ಕಾ ಯುವರಾಜ' ಗಣಪತಿ ಮಂಡಳಿಯವರು ಗಾಂಧಿ ವೃತ್ತದ ಬಳಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಮುಸ್ಲಿಮರಿಗಾಗಿ ಅನ್ನ ಸಂತರ್ಪಣೆಯನ್ನು ಏರ್ಪಡಿಸಿದ್ದರು. ಮುಸಲ್ಮಾನರಿಗೆ ಪಲಾವ್, ಸೋನ್ ಪಾಪಡಿ ನೀಡಿ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಹಿಂದೂ–ಮುಸ್ಲಿಮರ ಈ ಸೌಹಾರ್ದದ ನಡೆಗೆ ಸಾರ್ವಜನಿಕರಿಂದ ಹಾಗೂ ಪೊಲೀಸರಿಂದ ಮೆಚ್ಚುಗೆ ವ್ಯಕ್ತವಾಯಿತು.

**ಮುಖ್ಯಾಂಶಗಳು**

- ಕೊಪ್ಪಳದಲ್ಲಿ ಸೌಹಾರ್ದದ ಆಚರಣೆ
- ಪೊಲೀಸರು, ನಾಗರಿಕರಿಂದ ಮೆಚ್ಚುಗೆ

ಕೊಪ್ಪಳದ ಗಡಿಯಾರ ಕಂಬದ ಗಜಾನನ ಮಿತ್ರ ಮಂಡಳಿಯ ಗಣೇಶ ಮೂರ್ತಿಗೆ ಮುಸ್ಲಿಮರು ಪೂಜೆ ಸಲ್ಲಿಸಿದರು

### ದಸರಾ ಸುದ್ದಿ ಛಾಯಾಚಿತ್ರ ಸ್ಪರ್ಧೆ 'ಪ್ರಜಾವಾಣಿ'ಯ ಮೂವರಿಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಮಂಜುನಾಥ್

ರಂಜು ಪಿ.

ಫಕ್ರುದ್ದೀನ್

**ಮೈಸೂರು:** 'ಮೈಸೂರು ದಸರಾ' ನಿಮಿತ್ತ 'ಮೈಸೂರು ಪತ್ರಿಕಾ ಛಾಯಾಗ್ರಾಹಕರ ಸಂಘ'ವು ನಡೆಸಿದ ರಾಜ್ಯಮಟ್ಟದ ಸುದ್ದಿ ಛಾಯಾಚಿತ್ರ ಸ್ಪರ್ಧೆಯಲ್ಲಿ 'ಪ್ರಜಾವಾಣಿ'ಯ ಮೂವರು ಪತ್ರಿಕಾ ಛಾಯಾಗ್ರಾಹಕರು ಸೇರಿದಂತೆ 7 ಮಂದಿ ಬಹುಮಾನಕ್ಕೆ ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ಬಿ.ಸತೀಶ್ ಪ್ರಥಮ ಸ್ಥಾನ ಪಡೆದರು. ದ್ವಿತೀಯ, ತೃತೀಯ ಬಹುಮಾನಕ್ಕೆ ಕ್ರಮವಾಗಿ 'ಪ್ರಜಾವಾಣಿ'ಯ ಛಾಯಾಗ್ರಾಹಕರಾದ ಎಂ.ಎಸ್. ಮಂಜುನಾಥ್ ಮತ್ತು ಪಿ.ರಂಜು ಭಾಜನರಾಗಿದ್ದಾರೆ. ಬಹುಮಾನವು ಕ್ರಮವಾಗಿ ₹ 25 ಸಾವಿರ, ₹15 ಸಾವಿರ ಹಾಗೂ ₹10 ಸಾವಿರ ನಗದು ಒಳಗೊಂಡಿದೆ.

ನೇತ್ರ ರಾಜು ಸ್ಮರಣಾರ್ಥ ಬಹುಮಾನ (₹15ಸಾವಿರ) ವಿಜಯಪುರದ ಸುಧೀಂದ್ರ ಕುಲಕರ್ಣಿ ಅವರಿಗೆ ಸಂದಿದೆ. ಎಸ್.ಚರಣ್, ಬಾಗಲಕೋಟೆಯ ಇಂದ್ರಕುಮಾರ್ ದಸ್ತೇನವರ ಹಾಗೂ 'ಪ್ರಜಾವಾಣಿ'ಯ ಎಚ್.ಫಕ್ರುದ್ದೀನ್ ಅವರಿಗೆ ಸಮಾಧಾನಕರ ಬಹುಮಾನ (ತಲಾ ₹ 1ಸಾವಿರ) ಲಭಿಸಿದೆ.

ದಸರಾ ನಂತರ ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಹುಮಾನ ವಿತರಿಸುವರು ಎಂದು ಸಂಘದ ಅಧ್ಯಕ್ಷ ಪ್ರಗತಿ ಗೋಪಾಲಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದೇಶಿ ಪೆಡ್ಲರ್‌ಗಳ ಮೇಲೆ ಪೊಲೀಸರ ಕಣ್ಣು

**ವೀಸಾ ಅವಧಿ ಮುಗಿದ ಮೇಲೂ ನೆಲೆ • ಡ್ರಗ್ಸ್ ದಂಧೆಯಲ್ಲಿ ಭಾಗಿ • ನಿರಂತರ ಕಾರ್ಯಾಚರಣೆ • 4ವರ್ಷಗಳಲ್ಲಿ 315 ಮಂದಿ ಬಂಧನ**

• ಕೆ.ಎಸ್.ಸುನಿಲ್

**ಬೆಂಗಳೂರು:** ಮಾದಕ ವಸ್ತು ಮುಕ್ತ ಕರ್ನಾಟಕ ಗುರಿ ಸಾಧಿಸಲು ಮುಂದಾಗಿರುವ ಪೊಲೀಸ್ ಇಲಾಖೆ ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಡ್ರಗ್ ಮಾಫಿಯಾದಲ್ಲಿ ತೊಡಗಿದ್ದ 315 ವಿದೇಶಿ ಪೆಡ್ಲರ್‌ಗಳನ್ನು ಬಂಧಿಸಿದೆ.

ಈ ಪೈಕಿ ಹತ್ತು ಪೆಡ್ಲರ್‌ಗಳು ಹಾಗೂ 35 ವ್ಯಸನಿಗಳನ್ನು ವಲಸಿಗರ ಕೇಂದ್ರಕ್ಕೆ ಕಳುಹಿಸಿ, ಆಯಾ ಪ್ರದೇಶಗಳಿಗೆ ಮಾಹಿತಿ ರವಾನಿಸಿ ಗಡಿಪಾರಿಗೆ ಕ್ರಮ ಕೈಗೊಂಡಿದೆ. ಬಳಿಕ ಕಾನೂನು ಪ್ರಕ್ರಿಯೆಗಳನ್ನು ಮುಗಿಸಿ ಕೇಂದ್ರ ಗೃಹ ಸಚಿವಾಲಯದ ಮೂಲಕ ಅವರ ದೇಶಗಳಿಗೆ ಕಳುಹಿಸಲಾಗುತ್ತದೆ.

ಕಳೆದ ಒಂದು ವರ್ಷದ ಅವಧಿಯಲ್ಲಿ ದಂಧೆಯಲ್ಲಿ ಭಾಗಿಯಾಗಿದ್ದ 200 ವಿದೇಶಿ ಪ್ರಜೆಗಳನ್ನು ಗಡಿಪಾರು ಮಾಡಲಾಗಿದೆ. ಈ ಕಾರ್ಯಾಚರಣೆ ನಿರಂತರವಾಗಿ ನಡೆಯಲಿದೆ.

ಪೊಲೀಸರ ಹದ್ದಿನ ಕಣ್ಣು ತಪ್ಪಿಸಿ ಮಾದಕ ವಸ್ತು ಸಾಗಣೆ ಮತ್ತು ಮಾರಾಟ ನಡೆಯುತ್ತಿದೆ. ಮಾದಕ ವಸ್ತುಗಳ ಪೂರೈಕೆ ಪ್ರಮಾಣ ಹಾಗೂ ವ್ಯಸನಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಡ್ರಗ್ಸ್ ದಂಧೆಯಲ್ಲಿ ಸ್ಥಳೀಯ ಆರೋಪಿಗಳ ಜತೆಗೆ ವಿದೇಶಿ ಪೆಡ್ಲರ್‌ಗಳೂ ಭಾಗಿ ಆಗುತ್ತಿರುವುದು ಪೊಲೀಸರಿಗೆ ತಲೆನೋವಾಗಿದೆ.

ಸಿಂಥೆಟಿಕ್ ಡ್ರಗ್ಸ್

ವಿದ್ಯಾರ್ಥಿ, ವ್ಯಾಪಾರ ಹಾಗೂ ಪ್ರವಾಸಿ ವೀಸಾಗಳಡಿ ನಗರಕ್ಕೆ ಬರುವ ವಿದೇಶಿಯರ ಪೈಕಿ ಕೆಲವರು ಗಡುವು ಮುಗಿದರೂ ತಮ್ಮ ದೇಶಕ್ಕೆ ತೆರಳದೆ ಇಲ್ಲೇ ನೆಲೆಯೂರಿ ಡ್ರಗ್ಸ್ ದಂಧೆಯಲ್ಲಿ ಭಾಗಿಯಾಗುತ್ತಿದ್ದಾರೆ. ಬಂಧಿತರ ಪೈಕಿ ಬಹುತೇಕರು ನೈಜೀರಿಯಾ ಮೂಲದವರು ಎಂಬುದು ಪೊಲೀಸ್ ತನಿಖೆಯಲ್ಲಿ ಗೊತ್ತಾಗಿದೆ.

ವಿದ್ಯಾಭ್ಯಾಸ ಹಾಗೂ ಐಟಿ–ಬಿಟಿ ಉದ್ಯೋಗ ಅರಸಿ ಸಾವಿರಾರು ಸಂಖ್ಯೆಯಲ್ಲಿ ಪ್ರತಿ ವರ್ಷ ಹೊರರಾಜ್ಯದಿಂದ ಬೆಂಗಳೂರಿಗೆ ಯುವಕರು ಬರುತ್ತಾರೆ. ಹಾಸ್ಟೆಲ್, ಪಿ.ಜಿ, ಸ್ವಯಂ ಉದ್ಯೋಗ ಮಾಡಿಕೊಂಡು ವಾಸವಾಗಿರುವವರನ್ನು ಗುರಿಯಾಗಿಸಿಕೊಂಡು ಕೋಟ್ಯಂತರ ರೂಪಾಯಿ ಗಾಂಜಾ ಮಾರಾಟ ನಡೆಸಲಾಗುತ್ತಿದೆ.

ಮಾದಕ ವಸ್ತುಗಳನ್ನು ಸಾಗಿಸಲು ನೋಂದಣಿ ಸಂಖ್ಯೆಯಿಲ್ಲದ ಹಾಗೂ ನಕಲಿ ನಂಬರ್ ಪ್ಲೇಟ್ ಹೊಂದಿರುವ ದ್ವಿಚಕ್ರ ವಾಹನಗಳನ್ನು ಪೆಡ್ಲರ್‌ಗಳು ಬಳಕೆ ಮಾಡುತ್ತಿದ್ದಾರೆ.

'ವಿವಿಧ ಮಾದರಿಯ ವೀಸಾದಡಿ ಬಂದು ಸಿಂಥೆಟಿಕ್ ಡ್ರಗ್ಸ್ ಜಾಲದಲ್ಲಿ ತೊಡಗಿಸಿಕೊಳ್ಳುತ್ತಾರೆ. ಡಾರ್ಕ್ ನೆಟ್ ವೆಬ್‌ಸೈಟ್, ಅಂಚೆ ಪಾರ್ಸೆಲ್, ದೆಹಲಿ ಹಾಗೂ ಮುಂಬೈ ಮೂಲಗಳಿಂದ ಚಾಕೊಲೇಟ್, ಸೋಪು ಹಾಗೂ ಇನ್ನಿತರ ಪಾರ್ಸೆಲ್‌ಗಳಲ್ಲಿ ಡ್ರಗ್ಸ್ ತರಿಸಿಕೊಂಡು ಟೆಕಿಗಳು, ಸಾರ್ವಜನಿಕರು, ವಿದ್ಯಾರ್ಥಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ, ಬಂದ ಹಣದಲ್ಲಿ ವಿಲಾಸಿ ಜೀವನ ನಡೆಸುತ್ತಾರೆ. ಜೈಲಿಗೆ ಹೋಗಿ ಜಾಮೀನು ಪಡೆದು ಮತ್ತೆ ಅದೇ ಕೃತ್ಯದಲ್ಲಿ ಹಲವರು ಭಾಗಿಯಾಗುತ್ತಿದ್ದಾರೆ. ಬಟ್ಟೆ ವ್ಯಾಪಾರ, ಪ್ರಾವಿಷನ್ ಸ್ಟೋರ್‌ಗಳಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳಿ ವ್ಯವಸ್ಥಿತ ಜಾಲದ ಮೂಲಕ ದಂಧೆಯಲ್ಲಿ ನಿರತರಾಗುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

**ಎನ್‌ಡಿಪಿಎಸ್ ಪ್ರಕರಣ ದಾಖಲು**

| ವರ್ಷ | ಪ್ರಕರಣ |
|---|---|
| 2021 | 5,789 |
| 2022 | 6,506 |
| 2023 | 6767 |
| 2024 | 4,188 |
| 2025 | 3,530 (ಜುಲೈ ಅಂತ್ಯಕ್ಕೆ) |

'ಮಾದಕ ವಸ್ತು ಮಾರಾಟ ಹಾಗೂ ಸರಬರಾಜು ಕಾಯ್ದೆ(ಎನ್‌ಡಿಪಿಎಸ್) ಕಲಂ 27ರ ಅನ್ವಯ ಮಾದಕ ವಸ್ತು ಸೇವನೆ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ. ಬೆಂಗಳೂರು, ಮಂಗಳೂರು, ಮೈಸೂರು ಸೇರಿದಂತೆ ಪ್ರಮುಖ ನಗರಗಳ ಶಾಲಾ–ಕಾಲೇಜುಗಳ ವ್ಯಾಪ್ತಿ ಪ್ರದೇಶಗಳು, ಪೇಯಿಂಗ್ ಗೆಸ್ಟ್ ಕಟ್ಟಡಗಳು, ಪಬ್ ಹಾಗೂ ರೆಸ್ಟೋರೆಂಟ್‌ಗಳ ಮೇಲೂ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದಾರೆ. ಅನುಮಾನಸ್ಪದವಾಗಿ ತಿರುಗಾಡುವ ಹಾಗೂ ಅಮಲಿನಲ್ಲಿರುವ ವ್ಯಕ್ತಿಗಳನ್ನು ಗುರುತಿಸಿ, ಡ್ರಗ್ಸ್ ಸೇವನೆ ಪರೀಕ್ಷೆ ನಡೆಸಲಿದ್ದಾರೆ. ಒಂದು ವೇಳೆ ಡ್ರಗ್ಸ್ ಸೇವನೆ ದೃಢಪಟ್ಟರೆ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಜರುಗಿಸಲಿದ್ದಾರೆ' ಎಂದು ಹೇಳಿದರು.

ಎನ್‌ಡಿಪಿಎಸ್ ಕಾಯ್ದೆ ಕಲಂ 27ರ ಅನ್ವಯ ಯಾವುದೇ ವ್ಯಕ್ತಿ ಮಾದಕ ವಸ್ತು ಸೇವನೆ ಮಾಡಿರುವುದು ದೃಢಪಟ್ಟರೆ ನ್ಯಾಯಾಲಯವು ಆರು ತಿಂಗಳಿನಿಂದ ಒಂದು ವರ್ಷ ಜೈಲು ಹಾಗೂ ದಂಡ ವಿಧಿಸುವ ಅವಕಾಶವಿದೆ. ಆದರೆ, ಎನ್‌ಡಿಪಿಎಸ್ ಕಾಯ್ದೆ ಕಲಂ 64ಎ ಅನ್ವಯ ಮಾದಕ ವಸ್ತು ವ್ಯಸನಕ್ಕೆ ಗುರಿಯಾಗಿರುವ ಆರೋಪಿಯು ಸ್ವಯಂ ಪ್ರೇರಿತವಾಗಿ ಪುನರ್ವಸತಿ ಕೇಂದ್ರದಲ್ಲಿ ಚಿಕಿತ್ಸೆ ಪಡೆಯಲು ಪ್ರಾಸಿಕ್ಯೂಷನ್‌ನಿಂದ (ಕೇಸ್ ವಿಚಾರಣೆಯಿಂದ) ವಿನಾಯಿತಿ ಇದೆ. ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ 23,869 (2021ರಿಂದ 2025 ಫೆಬ್ರುವರಿ ಅಂತ್ಯಕ್ಕೆ) ಕೇಸ್‌ಗಳು ದಾಖಲಾಗಿವೆ ಎಂದು ಮಾಹಿತಿ ನೀಡಿದರು.

2024ರಲ್ಲಿ 4188 ಪ್ರಕರಣ ದಾಖಲಿಸಿ 2243 ಪೆಡ್ಲರ್‌ಗಳನ್ನು ಬಂಧಿಸಿ ₹165 ಕೋಟಿ ಮೌಲ್ಯದ 5743 ಕೆ.ಜಿ ಗಾಂಜಾ, 289 ಕೆ.ಜಿ. ಸಿಂಥೆಟಿಕ್ ಡ್ರಗ್ಸ್ ಜಪ್ತಿ ಮಾಡಲಾಗಿದೆ. 2025ರ ಜುಲೈ ವರೆಗೆ 3,530 ಎನ್‌ಡಿಪಿಎಸ್ ಕೇಸ್ ದಾಖಲಿಸಿ, 980 ಪೆಡ್ಲರ್‌ಗಳನ್ನು ಬಂಧಿಸಿ, ₹135 ಕೋಟಿ ಮೌಲ್ಯದ 2,582 ಕೆ.ಜಿ ಗಾಂಜಾ, 330 ಕೆಜಿ ಸಿಂಥೆಟಿಕ್ಸ್ ಡ್ರಗ್ಸ್ ಜಪ್ತಿ ಮಾಡಲಾಗಿದೆ.

ಡ್ರಗ್ಸ್ ದಂಧೆ ಮೇಲೆ ನಿಗಾ ವಹಿಸಲು ಮತ್ತು ಕಾರ್ಯಾಚರಣೆ ನಡೆಸಲು ಸಿಐಡಿಯಲ್ಲಿ ಮಾದಕ ವಸ್ತು ಮತ್ತು ಸಂಘಟಿತ ಅಪರಾಧ ವಿಭಾಗ ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದೆ. ಜತೆಗೆ ಕಮಿಷನರೇಟ್‌ನಲ್ಲಿ ಇರುವ ಸಿಸಿಬಿ ವಿಭಾಗ ಮತ್ತು ಠಾಣಾ ಮಟ್ಟದಲ್ಲಿ ಮಾದಕ ದ್ರವ್ಯ ದಂಧೆ ಮೇಲೆ ನಿಗಾವಹಿಸಲಿವೆ.

ಡಾರ್ಕ್ ವೆಬ್‌ಸೈಟ್ ಹಾಗೂ ಕೊರಿಯರ್‌ನಲ್ಲಿ ಡ್ರಗ್ಸ್ ದಂಧೆ ಅಂತಹ ಸಾಕಷ್ಟು ಪ್ರಕರಣಗಳನ್ನು ಪೊಲೀಸರು ಪತ್ತೆ ಹಚ್ಚಿ, ಆರೋಪಿಗಳನ್ನು ಜೈಲಿಗೆ ಕಳುಹಿಸಿದ್ದಾರೆ.

ನಗರದಲ್ಲಿ ಡ್ರಗ್ಸ್ ದಂಧೆ ತಡೆಗಟ್ಟುವ ನಿಟ್ಟಿನಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಸಾರ್ವಜನಿಕರೂ ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಬೇಕು

**ಸೀಮಂತ್ ಕುಮಾರ್ ಸಿಂಗ್,** ನಗರ ಪೊಲೀಸ್ ಕಮಿಷನರ್

## ಡ್ರಗ್ಸ್ ದಂಧೆ ನಿಗ್ರಹಕ್ಕೆ ಕಾರ್ಯಪಡೆ ರಚನೆ

ರಾಜ್ಯದಲ್ಲಿ ಮಾದಕ ವಸ್ತುಗಳ ಪೂರೈಕೆ ಹಾಗೂ ಮಾರಾಟ ದಂಧೆಯ ನಿಗ್ರಹಕ್ಕೆ ಸರ್ಕಾರ ಮಾದಕ ದ್ರವ್ಯ ನಿಗ್ರಹ ಕಾರ್ಯಪಡೆ (ಎಎನ್‌ಟಿಎಫ್) ರಚಿಸಿದೆ.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಎಡಿಜಿಪಿ) ದರ್ಜೆಯ ಅಧಿಕಾರಿಯು ಎಎನ್‌ಟಿಎಫ್‌ನ ಮುಖ್ಯಸ್ಥರಾಗಿದ್ದು, ಅವರ ಅಧೀನದಲ್ಲಿ ಘಟಕದ ಸಿಬ್ಬಂದಿಯು ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ಕಾರ್ಯಪಡೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ (ಎಎಸ್‌ಪಿ), ಸಹಾಯಕ ಪೊಲೀಸ್ ಆಯುಕ್ತರು (ಎಸಿಪಿ) , ಪೊಲೀಸ್ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್, ಹೆಡ್ ಕಾನ್‌ಸ್ಟೆಬಲ್ ಹಾಗೂ ಪೊಲೀಸ್ ಕಾನ್‌ಸ್ಟೆಬಲ್‌ಗಳು ಇದ್ದಾರೆ. ವಲಯ ಹಂತದಲ್ಲೂ ಎಎನ್‌ಟಿಎಫ್ ಘಟಕಗಳನ್ನು ರಚಿಸಲಾಗಿದೆ.

ಡ್ರಗ್ಸ್ ಫ್ರೀ ಕರ್ನಾಟಕ ಎಂಬ ಮೊಬೈಲ್ ಆ್ಯಪ್ ಬಿಡುಗಡೆ ಮಾಡಿದ್ದು, ಸಹಾಯವಾಣಿ 1042 ಸ್ಥಾಪಿಸಲಾಗಿದೆ.

## ಚಿಟಿಕೆ ಸುದ್ದಿ

### ಬೈಕ್ ಡಿಕ್ಕಿ: ಸೆಕ್ಯೂರಿಟಿ ಗಾರ್ಡ್ ಸಾವು

**ಬೆಂಗಳೂರು:** ಎಲೆಕ್ಟ್ರಾನಿಕ್‌ಸಿಟಿಯ ಶಾಂತಿಪುರದಲ್ಲಿ ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದ ವೇಳೆ ದ್ವಿಚಕ್ರ ವಾಹನವೊಂದು ಸೆಕ್ಯೂರಿಟಿ ಗಾರ್ಡ್‌ಗೆ ಡಿಕ್ಕಿಯಾದ ಪರಿಣಾಮ ಅವರು ಮೃತಪಟ್ಟಿದ್ದಾರೆ.

ಹೀರಾನಾಯ್ಕ್ (60) ಮೃತಪಟ್ಟ ಪಾದಚಾರಿ.

ಶಾಂತಿಪುರ ನಿವಾಸಿಯಾದ ಹೀರಾನಾಯ್ಕ್ ಅವರು ಮನೆಯ ಸಮೀಪದ ಕಂಪನಿಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. ಗುರುವಾರ ಸಂಜೆ ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದರು. ಆಗ, ದ್ವಿಚಕ್ರ ವಾಹನವೊಂದು ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಹೀರಾನಾಯ್ಕ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು. ಎಲೆಕ್ಟ್ರಾನಿಕ್‌ಸಿಟಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ನಕಲಿ ವೈದ್ಯೆ

**ಬೆಳಗಾವಿ:** ತಾನು ವೈದ್ಯಕೀಯ ವಿದ್ಯಾರ್ಥಿನಿ ಎಂದು ಹೇಳಿಕೊಂಡು ಯುವತಿಯೊಬ್ಬರು ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಿದ ಪ್ರಕರಣ ಬೆಳಕಿಗೆ ಬಂದಿದೆ.

ಕಾರವಾರದ ಸನಾ ಶೇಖ್ ನಗರದ ಖಾಸಗಿ ಕುಮಾರಸ್ವಾಮಿ ಬಡಾವಣೆಯಲ್ಲಿ ವಾಸವಾಗಿದ್ದಾರೆ. ವೈದ್ಯರಂತೆ ಪ್ರತಿ ದಿನ ಜಿಲ್ಲಾಸ್ಪತ್ರೆಗೆ ಬರುತ್ತಿದ್ದ ಅವರು, ಕಳೆದ ಎರಡು ತಿಂಗಳಿಂದ ಆಸ್ಪತ್ರೆಯ ವಿವಿಧ ವಾರ್ಡ್‌ಗಳಿಗೆ ತೆರಳಿ ಚಿಕಿತ್ಸೆ ನೀಡಿದ್ದಾರೆ.

ಆಸ್ಪತ್ರೆಯ ಇತರ ಸಿಬ್ಬಂದಿ ಸನಾ ಅವರನ್ನು ಪ್ರಶ್ನಿಸಿದಾಗ, ತಾನು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರ ಪರಿಚಯಸ್ಥೆ ಎಂದು ಹೇಳಿದ್ದರು.

ಶುಕ್ರವಾರ ಆಸ್ಪತ್ರೆಯ ಭದ್ರತಾ ಸಿಬ್ಬಂದಿ ಅವರನ್ನು ವಿಚಾರಣೆ ಮಾಡಿದಾಗ ಅವರು ನಕಲಿ ವೈದ್ಯೆ ಎಂಬುದು ಗೊತ್ತಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಬಿಮ್ಸ್ ನಿರ್ದೇಶಕ ಡಾ.ಅಶೋಕ ಶೆಟ್ಟಿ, 'ಪ್ರಕರಣದ ತನಿಖೆಗೆ ಮೂವರು ವೈದ್ಯರ ತಂಡ ರಚಿಸಲಾಗಿದ್ದು, ವಾರದೊಳಗೆ ವರದಿ ನೀಡಲು ಸೂಚಿಸಲಾಗಿದೆ' ಎಂದು ಅವರು ಹೇಳಿದರು.

## 14.94 ಲಕ್ಷ ಪ್ರಕರಣ ಇತ್ಯರ್ಥ, ₹41.96 ಕೋಟಿ ದಂಡ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರವು ಅವಕಾಶ ಕಲ್ಪಿಸಿದ್ದು, ಆ.23ರಿಂದ ಸೆ.5ರ ವರೆಗೆ 14,94,490 ಪ್ರಕರಣಗಳು ಇತ್ಯರ್ಥಗೊಂಡಿವೆ. ₹41.96 ಕೋಟಿ ದಂಡ ಸಂಗ್ರಹವಾಗಿದೆ.

ಪೊಲೀಸ್ ಇಲಾಖೆಯಲ್ಲಿ ಸಂಚಾರ ಇ-ಚಲನ್‌ನಲ್ಲಿ ದಾಖಲಾದ ಪ್ರಕರಣಗಳಿಗೆ ದಂಡ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಲ್ಲಿ ದಂಡ ಪಾವತಿಸಲು ರಿಯಾಯಿತಿ ನೀಡಿ ಆದೇಶಿಸಲಾಗಿತ್ತು. ಈ ಆದೇಶವು ಆ.23ರಿಂದ ಜಾರಿಗೆ ಬಂದಿದೆ. ಸೆ.12ರ ವರೆಗೆ ರಿಯಾಯಿತಿ ಅಡಿ ದಂಡ ಪಾವತಿಸಲು ಅವಕಾಶವಿದೆ.

## ಪಟಾಕಿ ಸಿಡಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ಹಲ್ಲೆ

**ಬಿಡದಿ (ರಾಮನಗರ):** ಇಲ್ಲಿನ ವಾರ್ಡ್ 4ರ ಕೆಂಚನಕುಪ್ಪೆಯಲ್ಲಿ ಗಣೇಶ ಮೂರ್ತಿ ವಿಸರ್ಜನೆ ವೇಳೆ ಪಟಾಕಿ ಸಿಡಿಸುತ್ತಿದ್ದನ್ನು ಪ್ರಶ್ನಿಸಿ, 112ಗೆ ಕರೆ ಮಾಡಿ ದೂರು ಕೊಟ್ಟ ವ್ಯಕ್ತಿ ಮೇಲೆ ಗ್ರಾಮದ ಯುವಕರ ಗುಂಪು ಹಲ್ಲೆ ನಡೆಸಿದೆ.

ಕರ್ನಾಟಕ ರಾಜ್ಯ ಸಾಮಾಜಿಕ ಕಾರ್ಯಕರ್ತರ ಒಕ್ಕೂಟದ ಜಿಲ್ಲಾ ಉಪಾಧ್ಯಕ್ಷ ಸುರೇಶ್ ಕೆ.ಬಿ ಹಲ್ಲೆಗೊಳಗಾದವರು. ಸುರೇಶ್ ನೀಡಿದ ದೂರು ಆಧರಿಸಿ, ಬಿಡದಿ ಪೊಲೀಸರು ಧನು, ನಾಗರಾಜು, ಹರೀಶ, ಪ್ರಸನ್ನ ಹಾಗೂ ಆಯೋಜಕರ ವಿರುದ್ಧ ಎನ್‌ಸಿಆರ್ ಮಾಡಿದ್ದಾರೆ.

## ಬಿಎಂಟಿಸಿ ಚಾಲಕನ ಮೇಲೆ ಹಲ್ಲೆ ಆರೋಪಿ ಬಂಧಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬನಶಂಕರಿ ಸಮೀಪದ ಕದಿರೇನಹಳ್ಳಿ ಕ್ರಾಸ್‌ನಲ್ಲಿ ಬಿಎಂಟಿಸಿ ಬಸ್ ಅಡ್ಡಗಟ್ಟಿ, ಚಾಲಕನ ಮೇಲೆ ಹಲ್ಲೆ ನಡೆಸಿದ್ದ ಮೂವರು ಆರೋಪಿಗಳ ಪೈಕಿ ಒಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.

ಕುಮಾರಸ್ವಾಮಿ ಲೇಔಟ್‌ನ ಸಿದ್ದ ಅಪ್ಪಾಜಿ (28) ಬಂಧಿತ.

ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದು ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಸಿದ್ದ ಅಪ್ಪಾಜಿ ಸೇರಿದಂತೆ ನಾಲ್ವರು ಗುರುವಾರ ಮಧ್ಯಾಹ್ನ ಎರಡು ಬೈಕ್‌ಗಳಲ್ಲಿ ಕದಿರೇನಹಳ್ಳಿ ಕ್ರಾಸ್‌ನ ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಿಂದ ಬರುತ್ತಿದ್ದರು. ಆ ಮಾರ್ಗವಾಗಿ ಬಿಎಂಟಿಸಿ ಬಸ್ ಚಲಿಸುತ್ತಿತ್ತು. ಬಿಎಂಟಿಸಿ ಚಾಲಕ ಹುಚ್ಚೀರಪ್ಪ ಅವರು ಬೈಕ್ ಸವಾರರಿಗೆ ಬುದ್ಧಿಮಾತು ಹೇಳಿದ್ದರು. ಇದರಿಂದ ಕೆರಳಿದ ಆರೋಪಿಗಳು, ಚಾಲಕನ ಜತೆಗೆ ವಾಗ್ವಾದ ನಡೆಸಿದ್ದರು. ಚಾಲಕನಿಗೆ ಅವಾಚ್ಯ ಪದಗಳಿಂದ ನಿಂದಿಸಿದ್ದರು. ಬಸ್‌ನಲ್ಲಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಇದು ಸೆರೆಯಾಗಿತ್ತು.

ಗಲಾಟೆ ವಿಕೋಪಕ್ಕೆ ಹೋದ ಮೇಲೆ ನಿರ್ವಾಹಕ ಪ್ರಕಾಶ್ ಅವರು ಪೊಲೀಸ್ ಸಹಾಯವಾಣಿಗೆ ಕರೆ ಮಾಡಿದ್ದರು. ಅದಾದ ಮೇಲೆ ಆರೋಪಿಗಳು ಪರಾರಿ ಆಗಿದ್ದರು.

'ಆರೋಪಿಗಳ ಬೈಕ್‌ನ ನೋಂದಣಿ ಸಂಖ್ಯೆ ಆಧರಿಸಿ ಸಿದ್ದ ಅಪ್ಪಾಜಿಯನ್ನು ಪತ್ತೆ ಮಾಡಿ ಬಂಧಿಸಲಾಗಿದೆ. ಇತರೆ ಆರೋಪಿಗಳ ಪತ್ತೆ ಕಾರ್ಯ ಮುಂದುವರಿದಿದೆ' ಎಂದು ಬನಶಂಕರಿ ಠಾಣೆಯ ಪೊಲೀಸರು ಹೇಳಿದರು.

## ರೌಡಿಶೀಟರ್ ಸೇರಿ ಇಬ್ಬರ ಸೆರೆ

**ಕ್ಯಾಬ್ ಚಾಲಕನ ಅಪಹರಿಸಿ ದರೋಡೆ ನಡೆಸಿದ್ದ ಪ್ರಕರಣ**

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕ್ಯಾಬ್ ಚಾಲಕನ ಅಪಹರಣ ಮಾಡಿ, ಕಾರು ಮತ್ತು ಮೊಬೈಲ್ ದೋಚಿ ಪರಾರಿಯಾಗಿದ್ದ ರೌಡಿಶೀಟರ್ ಸೇರಿ ಇಬ್ಬರನ್ನು ವಿವೇಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ಆರ್.ಪುರದ ಟಿ.ಸಿ.ಪಾಳ್ಯ ನಿವಾಸಿ ಶ್ರೀಕಾಂತ್(23) ಮತ್ತು ಹೇಮಂತ್ ಕುಮಾರ್(27) ಬಂಧಿತರು. ಆರೋಪಿಯಿಂದ ₹8 ಲಕ್ಷ ಮೌಲ್ಯದ ಒಂದು ಕಾರು ಮತ್ತು ಮೊಬೈಲ್ ಜಪ್ತಿ ಮಾಡಲಾಗಿದೆ ಎಂದು ತನಿಖಾಧಿಕಾರಿಗಳು ಹೇಳಿದರು.

ಹೇಮಂತ್

ಶ್ರೀಕಾಂತ್

ಆರೋಪಿಗಳು, ಆ.27ರಂದು ದೊಮ್ಮಲೂರಿನ ಹೊರವರ್ತುಲ ರಸ್ತೆಯಲ್ಲಿ ಕ್ಯಾಬ್ ಚಾಲಕನನ್ನು ಅಪಹರಿಸಿದ್ದರು ಎಂದು ಪೊಲೀಸರು ಹೇಳಿದರು.

ಆ.2ರಂದು ನಸುಕಿನ ಜಾವ , ಕ್ಯಾಬ್ ಚಾಲಕ ದೊಮ್ಮಲೂರು ರಸ್ತೆಯಲ್ಲಿ ಬಾಡಿಗೆಗೆ ಹೋಗುತ್ತಿದ್ದರು. ಗ ಬೈಕ್‌ನಲ್ಲಿ ಬಂದ ಆರೋಪಿಗಳು ಕ್ಯಾಬ್ ಅಡ್ಡಗಟ್ಟಿದ್ದರು. ಬಳಿಕ ಮಾರಕಾಸ್ತ್ರ ತೋರಿಸಿ ಕ್ಯಾಬ್ ಸಮೇತ ಚಾಲಕನನ್ನು ಅಪಹರಿಸಿದ್ದರು. ಬೈಯಪ್ಪನಹಳ್ಳಿ, ಕೆ.ಆರ್.ಪುರ ಹಾಗೂ ಇತರೆಡೆ ಸುತ್ತಾಡಿಸಿ ಚಾಲಕನನ್ನು ಕೆಳಗೆ ಇಳಿಸಿ ಕ್ಯಾಬ್ ಮತ್ತು ಆತನ ಮೊಬೈಲ್ ಕಸಿದುಕೊಂಡು ಪರಾರಿ ಆಗಿದ್ದರು. ಈ ಸಂಬಂಧ ಕ್ಯಾಬ್ ಚಾಲಕ ನೀಡಿದ ದೂರು ಆಧರಿಸಿ ಪೊಲೀಸರು ತನಿಖೆ ನಡೆಸಿದ್ದರು.

ಆರೋಪಿಗಳ ಪೈಕಿ, ಶ್ರೀಕಾಂತ್ ರೌಡಿಶೀಟರ್. ಈತನ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ ಐದು ಕಳವು, ದರೋಡೆ, ಹಲ್ಲೆ ಪ್ರಕರಣಗಳು ದಾಖಲಾಗಿವೆ. ಹೇಮಂತ್ ಕುಮಾರ್ ವಿರುದ್ಧ ಎರಡು ಠಾಣೆಗಳಲ್ಲಿ ಕಳವು, ದರೋಡೆ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಹೇಳಿದರು.

## ಪ್ಲಾಸ್ಟಿಕ್ ಗನ್ ಹಿಡಿದು ಬೆದರಿಸಿ ದರೋಡೆ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

**ನೆಲಮಂಗಲ:** ಚಿನ್ನಾಭರಣ ಅಂಗಡಿಗೆ ನುಗ್ಗಿ ದರೋಡೆ ನಡೆಸಿದ್ದ ಪ್ರಕರಣವನ್ನು ಮಾದನಾಯನಹಳ್ಳಿ ಪೊಲೀಸರು ಭೇದಿಸಿದ್ದು, ಮೂವರನ್ನು ಬಂಧಿಸಿದ್ದಾರೆ.

ಮೊಹಮ್ಮದ್ ರಫಿಕ್, ಮೊಹಮ್ಮದ್ ಇಬ್ತೇಕರ್, ರಂಶಾದ್ ಬಂಧಿತರು. ಪ್ಲಾಸ್ಟಿಕ್‌ನಿಂದ ತಯಾರಿಸಿದ್ದ ಗನ್ ಮಾದರಿ ವಸ್ತು ಹಿಡಿದು ಬೆದರಿಸಿ ಆಭರಣ ದೋಚಿದ್ದರು.

ಜೂನ್ 25ರಂದು ಮಾಗಡಿ ರಸ್ತೆಯ ಮಾಚೋಹಳ್ಳಿಯಲ್ಲಿ ಚಿನ್ನಾಭರಣ ಅಂಗಡಿಗೆ ನುಗ್ಗಿ, ಮಾಲೀಕ ಹಾಗೂ ಸಿಬ್ಬಂದಿಯನ್ನು ಬೆದರಿಸಿ ಚಿನ್ನಾಭರಣ ದೋಚಿ ಪರಾರಿ ಆಗಿದ್ದರು. ಉಡುಪಿ, ಒಡಿಶಾ, ಮಂಗಳೂರು ಮೂಲದ ಆರೋಪಿಗಳು ಎಂಬುದು ಗೊತ್ತಾಗಿದೆ.

ರಫಿಕ್

ಇಬ್ತೇಕರ್

ರಂಶಾದ್

ಬಂಧಿತರಿಂದ ₹30 ಲಕ್ಷ ಮೌಲ್ಯದ 90 ಗ್ರಾಂ ಚಿನ್ನಾಭರಣ, ಎರಡು ಕಾರುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು. ಮೂವರು ಆರೋಪಿಗಳನ್ನು ವಿಚಾರಣೆ ನಡೆಸಲಾಗಿದೆ. 50ಕ್ಕೂ ಹೆಚ್ಚು ಪ್ರಕರಣ ಗಳಲ್ಲಿ ಭಾಗಿಯಾಗಿದ್ದಾರೆ ಎಂದು ಗೊತ್ತಾಗಿದೆ.

## ಮಸ್ಟರಿಂಗ್ ಕೇಂದ್ರದಲ್ಲಿ ಹಾಜರಾತಿ ಹೆಚ್ಚಳ: ಕರೀಗೌಡ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜಿಬಿಎ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹದಲ್ಲಿ ಆಟೊ ಟಿಪ್ಪರ್‌ಗಳ ಸ್ಕ್ಯಾನಿಂಗ್ ಸಮಯ ಬದಲಾವಣೆ ಮಾಡಿದ್ದರಿಂದ ಹಾಜರಾತಿಯಲ್ಲಿ ಶೇ 10ರಷ್ಟು ಹೆಚ್ಚಳವಾಗಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಸಿಇಒ ಕರೀಗೌಡ ತಿಳಿಸಿದರು.

ಆಟೊ ಟಿಪ್ಪರ್‌ಗಳ ಸ್ಕ್ಯಾನಿಂಗ್ ಸಮಯವನ್ನು ಬೆಳಿಗ್ಗೆ 5.30ರಿಂದ 6.30 ರವರೆಗೆ ನಿಗದಿಪಡಿಸಲಾಗಿದೆ. 15 ದಿನಗಳಿಂದ ಬಿಎಸ್‌ಡಬ್ಲ್ಯುಎಂಎಲ್‌ನ ಎಲ್ಲ ಅಧಿಕಾರಿಗಳು ಪ್ರತಿನಿತ್ಯ ಬೆಳಿಗ್ಗೆ ಮಸ್ಟರಿಂಗ್ ಕೇಂದ್ರಗಳಿಗೆ ಭೇಟಿ ನೀಡಿ ಟಿಪ್ಪರ್‌ಗಳು, ಪೌರಕಾರ್ಮಿಕರ ಹಾಜರಾತಿ ಪ್ರಕ್ರಿಯೆಯನ್ನು ಪರಿಶೀಲಿಸುತ್ತಿದ್ದಾರೆ. ಹೀಗಾಗಿ, ಹಾಜರಾತಿ ಪ್ರಮಾಣ ಶೇ 95ಕ್ಕೆ ಏರಿದೆ. ಈ ಹಿಂದೆ ಈ ಪ್ರಮಾಣ ಶೇ 85ರಷ್ಟಿತ್ತು ಎಂದು ಮಾಹಿತಿ ನೀಡಿದರು. ನಗರದಲ್ಲಿ 200 ಮಸ್ಟರಿಂಗ್ ಕೇಂದ್ರಗಳಿದ್ದು, ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ, ಸಿಒಒ, ನಾಲ್ವರು ಡಿಜಿಎಂಗಳು, 28 ಎಜಿಎಂಗಳು, ಚೀಫ್ ಮಾರ್ಷಲ್ ಸೇರಿದಂತೆ ಎಲ್ಲ ಅಧಿಕಾರಿಗಳು ಪ್ರತಿನಿತ್ಯ ಮಸ್ಟರಿಂಗ್ ಕೇಂದ್ರಗಳಿಗೆ ಭೇಟಿ ನೀಡುತ್ತಿದ್ದಾರೆ. ಆಟೊ ಟಿಪ್ಪರ್‌ಗಳು ಮನೆಗಳಿಂದ ಹಸಿ ಹಾಗೂ ಒಣಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಲು ಸೂಚನೆ ನೀಡಲಾಗುತ್ತಿದೆ. ಇದರಿಂದ ರಸ್ತೆ ಬದಿ ತ್ಯಾಜ್ಯ ಬಿಸಾಡುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಮತ್ತಷ್ಟು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

**ಟ್ರ್ಯಾಕ್ ಡ್ಯೂಟಿ:** ಮಸ್ಟರಿಂಗ್ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿರುವುದನ್ನು ಮೇಲ್ವಿಚಾರಣೆ ಮಾಡಲು 'ಟ್ರ್ಯಾಕ್ ಡ್ಯೂಟಿ ತಂತ್ರಾಂಶ'ವನ್ನು ಅಭಿವೃದ್ಧಿಪಡಿಸಲಾಗಿದೆ. ಎಲ್ಲಾ ಅಧಿಕಾರಿಗಳ ಹಾಜರಾತಿಯನ್ನು ಆನ್‌ಲೈನ್ ಮೂಲಕ ಪರಿಶೀಲಿಸಬಹುದಾಗಿದೆ ಎಂದರು.

ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಕರೀಗೌಡ ಅವರು ಮಹಾಲಕ್ಷ್ಮಿ ಲೇಔಟ್‌ನ ಮಸ್ಟರಿಂಗ್ ಕೇಂದ್ರಕ್ಕೆ ಶುಕ್ರವಾರ ಭೇಟಿ ನೀಡಿದ್ದರು

## ನಾಲ್ವರು ವಿದ್ವಾಂಸರಿಗೆ 'ಕಪಾಲಿಶಾಸ್ತ್ರಿ ಪ್ರಶಸ್ತಿ'

**ಬೆಂಗಳೂರು:** ಸಾಕ್ಷಿ ಸಂಸ್ಥೆ ನೀಡುವ 'ಕಪಾಲಿಶಾಸ್ತ್ರಿ ಸ್ಮಾರಕ ಪ್ರಶಸ್ತಿ'ಗೆ ವಿದ್ವಾಂಸರಾದ ರಾಮಚಂದ್ರ ಜಿ. ಭಟ್ ಕೋಟೆಮನೆ, ಯೋಗೇಶ ವಾಯ್ಕರ್, ಹರಿಹರಪುರ ಶ್ರೀಧರ್ ಹಾಗೂ ಪ್ರೊ. ವಿರೂಪಾಕ್ಷ ವಿ. ಜಡ್ಡಿಪಾಲ್ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಒಳಗೊಂಡಿವೆ. ಭಾರತೀಯ ಸಂಸ್ಕೃತಿ ಪ್ರಸಾರ ಹಾಗೂ ಸಂಶೋಧನೆಯಲ್ಲಿ ನಿರತರಾದ ವಿದ್ವಾಂಸರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ವಿದ್ವಾಂಸ ಟಿ.ವಿ. ಕಪಾಲಿಶಾಸ್ತ್ರಿ ಅವರ ಸ್ಮರಣಾರ್ಥ ಈ ಪ್ರಶಸ್ತಿ ನೀಡಲಾಗುತ್ತಿದೆ.

ರಾಮಚಂದ್ರ ಭಟ್ ಅವರು ಕಳೆದ 50 ವರ್ಷಗಳಿಂದ ವಿದ್ವತ್ ಕಾರ್ಯದಲ್ಲಿ ನಿರತರಾಗಿದ್ದಾರೆ. ಚನ್ನೇನಹಳ್ಳಿಯಲ್ಲಿರುವ ವೇದ ಗುರುಕುಲದ ಸ್ಥಾಪಕ ಪ್ರಾಂಶುಪಾಲರಾಗಿದ್ದು, ಪ್ರಸ್ತುತ ಮಾರ್ಗದರ್ಶಕರಾಗಿದ್ದಾರೆ.

ಯೋಗೇಶ ವಾಯ್ಕರ್ ಅವರು ವೃತ್ತಿಯಲ್ಲಿ ಮಕ್ಕಳ ತಜ್ಞರಾಗಿದ್ದು, ವೇದ, ಉಪನಿಷತ್, ಭಗವದ್ಗೀತೆ ಕುರಿತು ಆಳವಾದ ಅಧ್ಯಯನ ನಡೆಸಿದ್ದಾರೆ. ಹರಿಹರಪುರ ಶ್ರೀಧರ್ ಅವರು 15 ವರ್ಷಗಳಿಂದ ಅಗ್ನಿಹೋತ್ರ ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. ಉಜ್ಜಯಿನಿಯ ಹರ್ಷಿ ಸಾಂದೀಪನಿ ರಾಷ್ಟ್ರೀಯ ವೇದ ವಿದ್ಯಾ ಪ್ರತಿಷ್ಠಾನದ ಕಾರ್ಯದರ್ಶಿ ವಿರೂಪಾಕ್ಷ ವಿ. ಜಡ್ಡಿಪಾಲ್ ಅವರು ವೇದಾಂತ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿದ್ದಾರೆ.

ಟಿ.ವಿ. ಕಪಾಲಿಶಾಸ್ತ್ರಿಯವರ 140ನೇ ಜನ್ಮವರ್ಷಾಚರಣೆ ಕಾರ್ಯಕ್ರಮವನ್ನು ಇದೇ 7ರಂದು ಬೆಳಿಗ್ಗೆ 11 ಗಂಟೆಗೆ ಬಸವನಗುಡಿ ನ್ಯಾಷನಲ್ ಕಾಲೇಜ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ರಾಮಚಂದ್ರ



ಯೋಗೇಶ ವಾಯ್ಕರ್

ಹರಿಹರಪುರ ಶ್ರೀಧರ್

ವಿರೂಪಾಕ್ಷ ವಿ. ಜಡ್ಡಿಪಾಲ್

# ಕೋರ್ಟ್ ಹಾಲ್‌ಗಳ ಆರಂಭಕ್ಕೆ ಅಡ್ಡಿ

## ಸಿಟಿ ಸಿವಿಲ್ ಕೋರ್ಟ್ ಸಂಕೀರ್ಣದಲ್ಲಿ ಮೂಲಸೌಕರ್ಯಗಳ ಕೊರತೆ

● ಎ.ಎಂ.ಸುರೇಶ

**ಬೆಂಗಳೂರು:** ಸಿಟಿ ಸಿವಿಲ್ ಕೋರ್ಟ್‌ಗೆ ಒಟ್ಟು 95 ಕೋರ್ಟ್ ಹಾಲ್‌ಗಳು ಮಂಜೂರಾಗಿದ್ದು, ಮೂಲಸೌಕರ್ಯಗಳ ಕೊರತೆಯ ಕಾರಣಕ್ಕೆ 17 ಕೋರ್ಟ್ ಹಾಲ್‌ಗಳು ಈವರೆಗೆ ಕಾರ್ಯಾರಂಭ ಮಾಡಿಯೇ ಇಲ್ಲ. ಇದರಿಂದಾಗಿ ಪ್ರಕರಣಗಳ ವಿಚಾರಣೆ ವಿಳಂಬ ವಾಗುತ್ತಿದ್ದು, ಕಕ್ಷಿದಾರರು ವರ್ಷಾನು ಗಟ್ಟಲೇ ಕಾಯುವಂತಾಗಿದೆ.

ಸಿಟಿ ಸಿವಿಲ್ ಕೋರ್ಟ್‌ಗೆ ಮಂಜೂರಾದ ಕೋರ್ಟ್ ಹಾಲ್‌ಗಳ ಪೈಕಿ, ಸದ್ಯ 78 ಅಷ್ಟೇ ಕಾರ್ಯನಿರ್ವಹಿಸುತ್ತಿವೆ. ಇದರಿಂದಾಗಿ ಉಳಿದ ಕೋರ್ಟ್ ಹಾಲ್‌ಗಳ ಮೇಲೆ ಒತ್ತಡ ಹೆಚ್ಚಾಗಿದ್ದು ಪ್ರಕರಣಗಳ ವಿಚಾರಣೆ ಮೇಲೆ ಪರಿಣಾಮ ಬೀರುತ್ತಿದೆ. ಒಂದೇ ಕಡೆ ಮೂರು ಕೋರ್ಟ್‌ಗಳು ಬೇರೆ ಎಲ್ಲೂ ಇಲ್ಲ. ಇಲ್ಲಿ ಮಾತ್ರ ಅಂತಹ ವ್ಯವಸ್ಥೆ ಇದೆ. ಜಾಗದ ಕೊರತೆ ಉಂಟಾಗಲು ಇದು ಪ್ರಮುಖ ಕಾರಣವಾಗಿದೆ' ಎಂದು ನ್ಯಾಯಾಲಯದ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಗ್ರಾಮಾಂತರ ನ್ಯಾಯಾಲಯದಲ್ಲಿ 29 ಕೋರ್ಟ್ ಹಾಲ್‌ಗಳಿವೆ. ಸದ್ಯ 24 ಕಾರ್ಯನಿರ್ವಹಿಸುತ್ತಿದ್ದು, ಜಾಗದ ಕೊರತೆಯಿಂದಾಗಿ ಐದು ಕೋರ್ಟ್ ಹಾಲ್‌ಗಳನ್ನು ಆರಂಭಿಸಲು ಸಾಧ್ಯವಾಗಿಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ಎನ್‌ಐಎ, ಸಿಬಿಐ, ಪೋಕ್ಸೊ, ಲೋಕಾಯುಕ್ತ ವಿಶೇಷ ನ್ಯಾಯಾಲಯ, ಜನಪ್ರತಿನಿಧಿಗಳ ನ್ಯಾಯಾಲಯ ಸೇರಿ ಹಲವು ವಿಶೇಷ ನ್ಯಾಯಾಲಯ ಗಳಿಗೆ ಇಲ್ಲಿ ಜಾಗ ನೀಡಲಾಗಿದೆ. ವರ್ಷದಿಂದ ವರ್ಷಕ್ಕೆ ಪ್ರಕರಣಗಳು, ನ್ಯಾಯಾಲಯಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಆದರೆ, ಜಾಗ ಮಾತ್ರ ಇದಷ್ಟೇ ಇದೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಆದಷ್ಟು ಬೇಗ ಜಾಗದ ವ್ಯವಸ್ಥೆ ಮಾಡಿಕೊಟ್ಟರೆ ಪೂರ್ಣ ಪ್ರಮಾಣದಲ್ಲಿ ಕೋರ್ಟ್ ಹಾಲ್‌ಗಳನ್ನು ಆರಂಭಿಸಲು ಸಾಧ್ಯವಾಗಲಿದೆ' ಎಂದು ಅವರು ತಿಳಿಸಿದರು.

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಕಾಯ್ದೆ ಪ್ರಕಾರ ವಿಶೇಷ ನ್ಯಾಯಾಲಯ ಸ್ಥಾಪಿಸಬೇಕಾಗಿದೆ. ಆದರೆ, ಜಾಗದ ಕೊರತೆಯಿಂದ ಇದುವರೆಗೆ ನ್ಯಾಯಾಲಯ ಕಾರ್ಯಾರಂಭವಾಗಿಲ್ಲ. ಠೇವಣಿದಾರರು ವಂಚನೆಗೆ ಒಳಗಾದರೆ, ಅಂತಹ ಪ್ರಕರಣಗಳ ತ್ವರಿತ ವಿಚಾರಣೆ ನಡೆಸಿ ನ್ಯಾಯ ಕೊಡಿಸಬೇಕು ಎಂಬುದು ಈ ಕಾಯ್ದೆಯ ಆಶಯ. ಆದರೆ, ನ್ಯಾಯಾಲಯವೇ ಶುರುವಾಗಿಲ್ಲ. ಇದಲ್ಲದೆ ಯಲಹಂಕ ಮತ್ತು ಕೆಂಗೇರಿಯಲ್ಲಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಆರಂಭಿಸಬೇಕು. ಆದರೆ, ಜಾಗದ ಕೊರತೆಯಿಂದಾಗಿ ಇದು ಸಾಧ್ಯವಾಗಿಲ್ಲ ಎಂದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ನ್ಯಾಯಾಲಯ ಬೆಂಗಳೂರಿನ ಕೇಂದ್ರ ಸ್ಥಾನದಲ್ಲಿದೆ. ಇದು ಸರಿಯಲ್ಲ, ಇದನ್ನು ಹೊಸಕೋಟೆ ಅಥವಾ ದೇವನಹಳ್ಳಿಗೆ ಸ್ಥಳಾಂತರ ಮಾಡಬೇಕು. ಇದರಿಂದ ಆ ಭಾಗದ ಕಕ್ಷಿದಾರರು ಬೆಂಗಳೂರಿಗೆ ಬರುವುದು ತಪ್ಪುತ್ತದೆ. ಈ ರೀತಿ ಮಾಡುವುದರಿಂದ ಸಿಟಿ ಸಿವಿಲ್ ನ್ಯಾಯಾಲಯಕ್ಕೆ ಜಾಗವೂ ಲಭ್ಯವಾಗಲಿದೆ ಎಂದು ಅಭಿಪ್ರಾಯಪಟ್ಟರು.

### ಮುಖ್ಯಾಂಶಗಳು
- ಕೋರ್ಟ್ ಹಾಲ್‌ಗಳಿಗೆ ಕಟ್ಟಡಗಳ ಕೊರತೆ
- ಒಂದೇ ಕಡೆ ಮೂರು ನ್ಯಾಯಾಲಯ
- ಬೆಂಗಳೂರು ಗ್ರಾಮಾಂತರ ಜಿಲ್ಲಾ ನ್ಯಾಯಾಲಯ ಸ್ಥಳಾಂತರಕ್ಕೆ ಸಲಹೆ

ಪ್ರಜಾವಾಣಿ ವಿಶೇಷ

### ಬಾಡಿಗೆ ಕಟ್ಟಡದಲ್ಲಿ ವಾಣಿಜ್ಯ ನ್ಯಾಯಾಲಯ

ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಸ್ಥಳಾವಕಾಶ ಇಲ್ಲದ ಕಾರಣ, ಬಿಎಸ್‌ಎನ್‌ಎಲ್ ಕಟ್ಟಡದಲ್ಲಿ ಎರಡು ಮಹಡಿಗಳನ್ನು ಬಾಡಿಗೆಗೆ ಪಡೆದು ವಾಣಿಜ್ಯ ನ್ಯಾಯಾಲಯವನ್ನು ಆರಂಭಿಸಲಾಗಿದೆ. ವಾಣಿಜ್ಯ ವಿವಾದಗಳನ್ನು ಬಗೆಹರಿಸಲೆಂದೇ ಈ ವಿಶೇಷ ನ್ಯಾಯಾಲಯ ಶುರುವಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ನ್ಯಾಯಾಲಯವನ್ನು ಬೇರೆಡೆಗೆ ಸ್ಥಳಾಂತರ ಮಾಡಿದರೆ, ಆಗ ಸಿಟಿ ಸಿವಿಲ್ ನ್ಯಾಯಾಲಯ ಆವರಣದಲ್ಲೇ ವಾಣಿಜ್ಯ ನ್ಯಾಯಾಲಯಕ್ಕೆ ಜಾಗ ಮಾಡಿಕೊಡಬಹುದು. ಇದರಿಂದ ಬಾಡಿಗೆ ಹಣ ಉಳಿತಾಯವಾಗುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

### ಕೌಟುಂಬಿಕ ನ್ಯಾಯಾಲಯದಲ್ಲೂ ಜಾಗದ ಸಮಸ್ಯೆ

ಇತ್ತೀಚಿನ ವರ್ಷಗಳಲ್ಲಿ ಕೌಟುಂಬಿಕ ನ್ಯಾಯಾಲಯದಲ್ಲಿ ದಾಖಲಾಗುತ್ತಿರುವ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇದನ್ನು ಮನಗಂಡು 21 ಕೋರ್ಟ್ ಹಾಲ್‌ಗಳನ್ನು ಮಂಜೂರು ಮಾಡಲಾಗಿದೆ. ಆದರೆ, ಸದ್ಯಕ್ಕೆ ಏಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಜಾಗದ ಕೊರತೆಯಿಂದಾಗಿ 14 ಕೋರ್ಟ್ ಹಾಲ್‌ಗಳು ಶುರುವಾಗಿಲ್ಲ.

ಕೌಟುಂಬಿಕ ನ್ಯಾಯಾಲಯಕ್ಕೆ ಅಗತ್ಯವಿರುವ ಕಟ್ಟಡದ ನಿರ್ಮಾಣ ಕಾರ್ಯವನ್ನು ಲೋಕೋಪಯೋಗಿ ಇಲಾಖೆ ಕೈಗೆತ್ತಿಕೊಂಡಿದೆ. ಆದರೆ, ಕಾಮಗಾರಿ ಪೂರ್ಣಗೊಳ್ಳುವುದು ತುಂಬಾ ವಿಳಂಬವಾಗಿದೆ. ಆದಷ್ಟು ಬೇಗ ನಿರ್ಮಾಣ ಕಾರ್ಯ ಪೂರ್ಣಗೊಂಡರೆ ಕೋರ್ಟ್ ಹಾಲ್‌ಗಳು ಕಾರ್ಯಾರಂಭ ಮಾಡಲು ಅನುಕೂಲವಾಗುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

> **ನ್ಯಾಯಾಲಯಗಳು ಒಂದೇ ಕಡೆ ಇದ್ದರೆ ವಕೀಲರಿಗೆ ಅನುಕೂಲವಾಗಲಿದೆ. ಜಾಗದ ಕೊರತೆ ಇದ್ದರೆ ಕಾವೇರಿ ಭವನ ಅಥವಾ ಯುವಿಸಿಇ ಹಾಸ್ಟೆಲ್‌ನ ಜಾಗವನ್ನು ಪಡೆಯಲು ಮುಂದಾಗಲಿ. ಅಲ್ಲಿನ ವಿದ್ಯಾರ್ಥಿಗಳಿಗೆ ಬೇರೆ ಕಡೆ ವ್ಯವಸ್ಥೆ ಮಾಡಬಹುದು**
> **ವಿವೇಕ್ ಸುಬ್ಬಾರೆಡ್ಡಿ,** ಅಧ್ಯಕ್ಷ, ಬೆಂಗಳೂರು ವಕೀಲರ ಸಂಘ

## ಚುಟುಕೆ ಸುದ್ದಿ

### ತನ್ಮಯಿಗೆ 3ನೇ ರ‍್ಯಾಂಕ್

ತನ್ಮಯಿ

**ಬೆಂಗಳೂರು:** ಡಾ.ಗಂಗೂಬಾಯಿ ಹಾನಗಲ್ ಸಂಗೀತ, ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ನಡೆಸಿದ ಕಥಕ್ ಜೂನಿಯರ್ ವಿಶೇಷ ಪರೀಕ್ಷೆಯಲ್ಲಿ ನಗರದ ಸಾಯಿ ಆರ್ಟ್ಸ್ ಇಂಟರ್‌ನ್ಯಾಷನಲ್ ನಾಟ್ಯ ಶಾಲೆಯ ಗುರು ಆಚಾರ್ಯ ಶ್ವೇತಾ ವೆಂಕಟೇಶ ಅವರ ಶಿಷ್ಯೆ ಎಂ. ತನ್ಮಯಿ ತೃತೀಯ ಸ್ಥಾನ ಪಡೆದಿದ್ದಾರೆ.

ಮೈಸೂರಿನಲ್ಲಿ ಈಚೆಗೆ ನಡೆದ ಸಮಾರಂಭದಲ್ಲಿ ಕುಲಪತಿ ಪ್ರೊ. ನಾಗೇಶ ಬೆಟ್ಟಕೋಟೆ, ವಯೋಲಿನ್ ವಾದಕ ಮೈಸೂರು ಮಂಜುನಾಥ್ ಅವರಿಂದ ಪ್ರಮಾಣ ಪತ್ರ ಸ್ವೀಕರಿಸಿದರು.

### ಇಪಿಎಸ್ ಪಿಂಚಣಿದಾರರ ಸಭೆ

**ಬೆಂಗಳೂರು:** ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಸದಸ್ಯರ ಮಾಸಿಕ ಸಭೆ ಸೆಪ್ಟೆಂಬರ್ 7ರಂದು ಲಾಲ್‌ಬಾಗ್ ಆವರಣದಲ್ಲಿ ಬೆಳಿಗ್ಗೆ 8 ಗಂಟೆಗೆ ನಡೆಯಲಿದೆ.

ಕನಿಷ್ಠ ₹7,500 ಪಿಂಚಣಿ ಹಾಗೂ ಭತ್ಯೆ, ವೈದ್ಯಕೀಯ ಸೌಲಭ್ಯ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆ ಹಾಗೂ ಮದ್ರಾಸ್ ಹೈಕೋರ್ಟ್‌ನ ಮದುರೈ ಪೀಠ ನಿವೃತ್ತ ನೌಕರರಿಗೆ ನೀಡಿರುವ ಪಿಂಚಣಿ ಆದೇಶ ಕುರಿತು ಸಭೆಯಲ್ಲಿ ಚರ್ಚಿಸಲಾಗುತ್ತದೆ. 78 ಲಕ್ಷ ನಿವೃತ್ತರ ಬದುಕು ಇಂದಿಗೂ ಅತಂತ್ರ ಸ್ಥಿತಿಯಲ್ಲಿದೆ. ಅಧಿಕಾರಿಗಳ ಧೋರಣೆ, ಅಸಹಕಾರವು ಇಪಿಎಸ್ ನಿವೃತ್ತರನ್ನು ಈ ಸ್ಥಿತಿಗೆ ತಂದು ನಿಲ್ಲಿಸಿದೆ ಎಂದು ಸಂಘದ ಅಧ್ಯಕ್ಷ ನಂಜುಂಡೇಗೌಡ ತಿಳಿಸಿದ್ದಾರೆ.

ಎನ್‌ಎಸಿ ರಾಜ್ಯ ಘಟಕದ ಅಧ್ಯಕ್ಷ ಜಿಎಸ್‌ಎಂ ಸ್ವಾಮಿ ಸಭೆ ಉದ್ದೇಶಿಸಿ ಮಾತನಾಡಲಿದ್ದಾರೆ. ಇತ್ತೀಚಿನ ಎಲ್ಲಾ ಬೆಳವಣಿಗೆಗಳು ಹಾಗೂ ಮುಂದಿನ ಹೋರಾಟದ ರೂಪುರೇಷೆ ಬಗ್ಗೆ ಪ್ರಸ್ತಾಪಿಸಲಿದ್ದಾರೆ ಎಂದು ಹೇಳಿದ್ದಾರೆ.

### ಮಕ್ಕಳ ಸಾಹಿತ್ಯ ರಚನೆಗೆ ಫೆಲೋಶಿಪ್

**ಬೆಂಗಳೂರು:** ಕನ್ನಡದಲ್ಲಿ ಮಕ್ಕಳ ಸಾಹಿತ್ಯ ರಚನೆ ಉತ್ತೇಜಿಸಲು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ಫೆಲೋಶಿಪ್ ನೀಡಲಿದೆ.

ಮಕ್ಕಳ ಸಾಹಿತ್ಯದಲ್ಲಿ ಅನುಭವಿ ಇಲ್ಲವೇ ಉದಯೋನ್ಮುಖ ಬರಹಗಾರರಿಂದ ಕಥೆ, ಕವಿತೆ, ನಾಟಕ, ಜೀವನಚರಿತ್ರೆ, ಪ್ರವಾಸ ಕಥನ ಮತ್ತು ಕಾದಂಬರಿ ಒಳಗೊಂಡು ಕನ್ನಡದ ವಿವಿಧ ಸಾಹಿತ್ಯ ಪ್ರಕಾರದ ಮೂಲ ಬರಹಗಳನ್ನು ಆಹ್ವಾನಿಸಲಾಗಿದೆ.

ಆಸಕ್ತರು ಬರಹದ ಒಂದು ಮಾದರಿ ಮತ್ತು ಇತರ ವಿವರಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬಹುದು. ಪ್ರಕಟಣೆಗೆ ಆಯ್ಕೆಯಾಗುವ ಕೃತಿಗಳ ಅಂತಿಮ ಕರಡು ಸಲ್ಲಿಸಿದ ಲೇಖಕರಿಗೆ ಗರಿಷ್ಠ ₹10,000 ಫೆಲೋಶಿಪ್ ನೀಡಲಾಗುತ್ತದೆ.

ಆಸಕ್ತರು https://forms.gle/zdy9nKeboxB2kuAm7 ಲಿಂಕ್‌ನಲ್ಲಿ ಅರ್ಜಿ ಪಡೆದು ನವೆಂಬರ್ 30ರ ಒಳಗೆ ಸಲ್ಲಿಸಬೇಕು. ಮಾಹಿತಿಗೆ ದಿನೇಶ್ ಮಡಗಾಂವ್ಕರ್ ಅವರನ್ನು (9844049489) ಸಂಪರ್ಕಿಸಬಹುದು.

## ಸುದ್ದಿ 2 ನಿಮಿಷ

### 368 ಮರಗಳ ರಕ್ಷಣೆ: ಸಲಹೆ ನೀಡಲು ಅವಧಿ ವಿಸ್ತರಣೆ

**ಬೆಂಗಳೂರು:** ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿರುವ 368 ಮರಗಳಿರುವ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣ ಎಂದು ಘೋಷಿಸಲು ಕರ್ನಾಟಕ ಜೀವವೈವಿಧ್ಯ ಮಂಡಳಿ ನಿರ್ಧರಿಸಿದ್ದು, ನಾಗರಿಕರು ಸಲಹೆ ನೀಡುವ ಅವಧಿಯನ್ನು ಸೆ.8ರವರೆಗೆ ವಿಸ್ತರಿಸಿದೆ.

ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅಧ್ಯಕ್ಷತೆಯಲ್ಲಿ ಜೂನ್ 25ರಂದು ನಡೆದ ವಿಶೇಷ ಸಭೆಯಲ್ಲಿ 'ಕಂಟೋನ್ಮೆಂಟ್ ರೈಲ್ವೆ ಕಾಲೊನಿಯ ಆವರಣದಲ್ಲಿರುವ ಸುಮಾರು ಎಂಟು ಎಕರೆಯಲ್ಲಿ 368 ವಿವಿಧ ಜಾತಿಯ ಮರಗಳ ಕುರಿತು ಚರ್ಚಿಸಿ, ಜೀವವೈವಿಧ್ಯ ಕಾಯ್ದೆ–2002 ಮತ್ತು ಕರ್ನಾಟಕ ಜೀವವೈವಿಧ್ಯ ನಿಯಮಗಳು– 2005ರ ನಿಯಮ 20ರಡಿ ಆ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣ ಎಂದು ಘೋಷಿಸಲು ನಿರ್ಧರಿಸಲಾಗಿತ್ತು. ಇದರ ಬಗ್ಗೆ ಪ್ರಕಟಣೆ ಹೊರಡಿಸಿ, ಆಗಸ್ಟ್ 30ರವರೆಗೆ ಸಲಹೆ/ ಆಕ್ಷೇಪಣೆಗೆ ಅವಕಾಶ ನೀಡಲಾಗಿತ್ತು.

'ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ 368 ಮರಗಳನ್ನು ಕಡಿಯಲಾಗುತ್ತಿದೆ' ಎಂದು ಮರಗಳಿಗೆ ಭಿತ್ತಿಪತ್ರ ಅಂಟಿಸಿ 'ಪರಿಸರಕ್ಕಾಗಿ ನಾವು' ಸಂಘಟನೆಯವರು ಭಾನುವಾರ ಪ್ರತಿಭಟನೆ ನಡೆಸಿದ್ದರು. ಹಲವು ಪರಿಸರ ಕಾರ್ಯಕರ್ತರು ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದರು. ಆದರೆ, ಬಹುತೇಕರು ಮಂಡಳಿಗೆ ಸಲಹೆ ನೀಡಿಲ್ಲ ಎನ್ನಲಾಗಿದೆ.

'ಎಂಟು ಎಕರೆಯಲ್ಲಿರುವ ಮರಗಳು, ಗಿಡಗಳು, ಪೊದೆಗಳು, ಪಕ್ಷಿ ಮತ್ತು ಪ್ರಾಣಿಗಳ ಸಮೀಕ್ಷೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಈ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣವನ್ನಾಗಿ ಘೋಷಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂಬ ಪ್ರಕಟಣೆಗೆ ಸಲಹೆಗಳನ್ನು ನೀಡಲು ಇನ್ನಷ್ಟು ಅವಕಾಶ ಕಲ್ಪಿಸಲಾಗಿದೆ' ಎಂದು ಜೀವವೈವಿಧ್ಯ ಮಂಡಳಿ ತಿಳಿಸಿದೆ.

### ಕ್ಯಾಂಟೀನ್ ಭೇಟಿ: ಪರಿಶೀಲನೆ

**ಬೆಂಗಳೂರು:** ನಗರ ಜಿಲ್ಲೆಯ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರು ಗುರುವಾರ ಡಿಸಿ ಕ್ಯಾಂಟೀನ್‌ಗೆ ದಿಢೀರ್ ಭೇಟಿ ನೀಡಿ ಆಹಾರ ತಯಾರಿಕೆ ಮತ್ತು ಗ್ರಾಹಕರಿಗೆ ಸುರಕ್ಷಿತ ಆಹಾರ ಪೂರೈಕೆ ಕುರಿತು ಪರಿಶೀಲನೆ ನಡೆಸಿದರು.

ಗ್ರಾಹಕರನ್ನು ಮಾತನಾಡಿಸಿದ ಜಿಲ್ಲಾಧಿಕಾರಿ, ಕ್ಯಾಂಟೀನ್‌ನಿಂದ ವಿತರಿಸಿದ ತಿಂಡಿಗಳ ಗುಣಮಟ್ಟದ ಬಗ್ಗೆ ಹಾಗೂ ಆಹಾರಕ್ಕೆ ಮಾಲೀಕರು ನಿಗದಿಪಡಿಸಿರುವ ದರಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ಕೆಲವು ಗ್ರಾಹಕರು ಆಹಾರ ದರ ಪಟ್ಟಿಯ ಸೂಚನಾ ಫಲಕ ಅಳವಡಿಸದಿರುವ ಬಗ್ಗೆ ಗಮನ ಸೆಳೆದರೆ, ಮತ್ತೆ ಕೆಲವರು ಆಹಾರದ ಅಳತೆ ಪ್ರಮಾಣ ಕಡಿಮೆ ಎಂದು ದೂರಿದರು.

ಈ ಕುರಿತು ಇಲಾಖೆ ಗಮನಹರಿಸಲಿದೆ ಎಂದು ಜಿಲ್ಲಾಧಿಕಾರಿ ಗ್ರಾಹಕರಿಗೆ ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಜಗದೀಶ್ ನಾಯಕ್, ತಹಶೀಲ್ದಾರ್ ಪ್ರಶಾಂತ್ ಖಾನಗೌಡ ಪಾಟೀಲ್ ಹಾಜರಿದ್ದರು.

## ವಿಚಾರಣಾ ನ್ಯಾಯಾಲಯಗಳ ವ್ಯಾಪ್ತಿಯಲ್ಲಿಲ್ಲ: ಹೈಕೋರ್ಟ್ ಆದೇಶ

# ಮರು ತನಿಖೆ ಅಧಿಕಾರ 'ಹೈ–ಸುಪ್ರೀಂ'ಗೆ ಮಾತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕ್ರಿಮಿನಲ್ ಪ್ರಕರಣದ ಮರು ತನಿಖೆ, ಹೊಸ ತನಿಖೆ ಅಥವಾ ತನಿಖೆಯನ್ನು ಮತ್ತೊಂದು ಸಂಸ್ಥೆಗೆ ವರ್ಗಾಯಿಸುವ ಅಧಿಕಾರ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳಿಗೆ ಮಾತ್ರ ಇದೆಯೇ ಹೊರತಾಗಿ ವಿಚಾರಣಾ ನ್ಯಾಯಾಲಯ ಗಳಿಗೆ ಇಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಕ್ರಿಮಿನಲ್ ಪ್ರಕರಣವೊಂದರಲ್ಲಿ ನಗರದ ಹೆಚ್ಚುವರಿ ಮುಖ್ಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿರುವ (ಎಸಿಜೆಎಂ) ಪ್ರಕರಣ ರದ್ದು ಕೋರಿ ನಗರದ 64 ವರ್ಷದ ಮಹಿಳೆಯೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ವಿಚಾರಣಾ ನ್ಯಾಯಾಲಯ ತಾನು ನೀಡಿರುವ ಆದೇಶದಲ್ಲಿ ಕಾನೂನಿನ ಮೂಲತತ್ವವನ್ನೇ ನಿರ್ಲಕ್ಷಿಸಿದಂತೆ ಕಾಣುತ್ತಿದೆ' ಎಂದು ಆಘಾತ ವ್ಯಕ್ತಪಡಿಸಿದೆ.

ವಿಚಾರಣಾ ನ್ಯಾಯಾಲಯ ಪೊಲೀಸರಿಗೆ ಕ್ರಿಮಿನಲ್ ಪ್ರಕರಣದ 'ಮರು ಅಥವಾ ಹೆಚ್ಚಿನ' ತನಿಖೆ ನಡೆಸುವಂತೆ ಆದೇಶಿಸಿರುವುದು 'ವಿಚಿತ್ರವಾಗಿದೆ' ಎಂದು ಬಣ್ಣಿಸಿರುವ ನ್ಯಾಯಪೀಠ, ವಿಚಾರಣಾ ನ್ಯಾಯಾಲಯವು 'ಮರು' ಅಥವಾ 'ಹೊಸ' ತನಿಖೆ ಎಂಬ ಪದಗಳನ್ನು ಮುಕ್ತವಾಗಿ ಬಳಸುವ ಮೂಲಕ ಕ್ರಿಮಿನಲ್ ನ್ಯಾಯಶಾಸ್ತ್ರದಲ್ಲಿ ಅವುಗಳಿಗಿರುವ ಆಳವಾದ ವ್ಯತ್ಯಾಸವನ್ನೇ ಮರೆತುಬಿಟ್ಟಿದೆ' ಎಂದು ಕುಟುಕಿದೆ.

'ವಿಚಾರಣಾ ನ್ಯಾಯಾಲಯವು ಹೆಚ್ಚಿನ ತನಿಖೆಗೆ ಆದೇಶಿಸುವ ಅಧಿಕಾರವನ್ನು ಹೊಂದಿದ್ದರೂ, ನಿರ್ದಿಷ್ಟ ಪ್ರಕರಣದಲ್ಲಿ, 'ಮುಂದಿನ ತನಿಖೆ' ಎಂಬ ಪದವನ್ನು ಬಳಸುವಲ್ಲಿನ ಆದೇಶ ದೋಷಪೂರಿತವಾಗಿದೆ. ವಿಚಾರಣಾ ನ್ಯಾಯಾಲಯವು ತನಿಖಾ ವರದಿ, ದೋಷಾರೋಪ ಪಟ್ಟಿ ಅಥವಾ ಮುಕ್ತಾಯ ವರದಿ... ಇತ್ಯಾದಿಗಳನ್ನು ಪೊಲೀಸರು ಸಲ್ಲಿಸಿದಾಗ ಮಾತ್ರವೇ ಹೆಚ್ಚಿನ ತನಿಖೆಗೆ ಆದೇಶಿಸುವ ಪ್ರಶ್ನೆ ಉದ್ಭವಿಸುತ್ತದೆ' ಎಂದು ತಿಳಿಯಪಡಿಸಿದೆ.

'ಮರು ತನಿಖೆ, ಹೊಸ ತನಿಖೆ ಅಥವಾ ತನಿಖೆಯನ್ನು ಯಾವುದೇ ಇತರ ಸಂಸ್ಥೆಗೆ ವರ್ಗಾಯಿಸುವ ಅಧಿಕಾರ ಅಥವಾ ವಿಶೇಷ ಹಕ್ಕು, ಭಾರತದ ಸಂವಿಧಾನದ 226ನೇ ವಿಧಿಯ ಅಡಿಯಲ್ಲಿ ನ್ಯಾಯ ವ್ಯಾಪ್ತಿಯನ್ನು ಚಲಾಯಿಸುವ ಸಾಂವಿಧಾನಿಕ ನ್ಯಾಯಾಲಯಗಳಿಗೆ ಮಾತ್ರವೇ ಇದೆ. ಅಂತೆಯೇ, ಇದು ಸಿಆರ್‌ಪಿಸಿ ಕಲಂ 482ರ ಅಡಿಯಲ್ಲಿ ಸಾಂವಿಧಾನಿಕ ನ್ಯಾಯಾಲಯದ ಅಂತರ್ಗತ ನ್ಯಾಯವ್ಯಾಪ್ತಿಯೂ ಆಗಿದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣವನ್ನು ಪುನಃ ವಿಚಾರಣಾ ನ್ಯಾಯಾಲಯಕ್ಕೆ ವಾಪಸು ಕಳಿಸಿರುವ ನ್ಯಾಯಪೀಠ, 'ಕಾನೂನು ಚೌಕಟ್ಟುಗಳ ವ್ಯಾಪ್ತಿಯಲ್ಲಿ ತಕ್ಕುದಾದ ತೀರ್ಮಾನ ಕೈಗೊಳ್ಳಿ' ಎಂದು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿದೆ. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ. ನಾಗೇಶ್ ವಾದ ಮಂಡಿಸಿದ್ದರು.

### ಮುಖ್ಯಾಂಶಗಳು
- ಕ್ರಿಮಿನಲ್ ಅರ್ಜಿಯ ಭಾಗಶಃ ಪುರಸ್ಕಾರ
- ವಿಚಾರಣಾ ನ್ಯಾಯಾಲಯದ ಆದೇಶ ರದ್ದು

> **ನಗರದ 31ನೇ ಎಸಿಜೆಎಂ ಕೋರ್ಟ್, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ-1973 (ಸಿಆರ್‌ಪಿಸಿ) ಕಲಂ 156(3)ರ ಅಡಿಯಲ್ಲಿ 'ಮರು' ಅಥವಾ 'ಮುಂದಿನ' ತನಿಖೆಗೆ ಉಲ್ಲೇಖಿಸಿರುವ ಆದೇಶ ಮೇಲ್ನೋಟಕ್ಕೇ ಕಾನೂನು ಬಾಹಿರವಾಗಿದೆ**
> **ನ್ಯಾ.ಎಂ.ನಾಗಪ್ರಸನ್ನ**

### ಕೌಟುಂಬಿಕ ಪ್ರಕರಣ

'ನಮ್ಮ ತಂದೆಯ ಮರಣದ ನಂತರವೂ ಅವರ ಹೆಸರಿನಲ್ಲಿ ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸಲು ನನ್ನ ತಾಯಿ ಮತ್ತು ನನ್ನ ತಮ್ಮ, ನಮ್ಮ ತಂದೆಯ ಆಧಾರ್ ಕಾರ್ಡ್, ಮೊಬೈಲ್ ಫೋನ್ ಇತ್ಯಾದಿಗಳನ್ನು ಬಳಸುತ್ತಿದ್ದಾರೆ' ಎಂದು ಹಿರಿಯ ಪುತ್ರ ಆಪಾದಿಸಿದ್ದರು.

ಪರಿಣಾಮ ಅರ್ಜಿದಾರ ಮಹಿಳೆಯ ಹಿರಿಯ ಮಗ ಸಲ್ಲಿಸಿದ್ದ ದೂರಿನ ಆಧಾರದಡಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಪ್ರಕರಣದ 'ಮರು ಅಥವಾ ಮುಂದಿನ' ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಪೊಲೀಸರಿಗೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಮಹಿಳೆ ಮತ್ತು ಆಕೆಯ ಕಿರಿಯ ಪುತ್ರ ಹೈಕೋರ್ಟ್ ಮೆಟ್ಟಿಲೇರಿದ್ದರು.

### ರವಿಕುಮಾರ್ ರಾಜೀನಾಮೆ

ಒಂದನೇ ಪುಟದಿಂದ...

'ಈ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದ ರಾಜೀನಾಮೆ ಪತ್ರದಲ್ಲಿ ಕೋರಿದ್ದಾರೆ.

'ಭೂ ಒಡೆತನ ಯೋಜನೆ ಅಡಿಯಲ್ಲಿ ಆಯ್ಕೆಯಾಗುವ ಫಲಾನುಭವಿಗಳಿಂದ ಶೇ 60ರಷ್ಟು ಲಂಚ ನೀಡುವಂತೆ ಬೇಡಿಕೆ ಇಡುತ್ತಿದ್ದಾರೆ' ಎಂದು ಭಾರತೀಯ ಭೋವಿ ಸಮಾಜ ಸೇವಾ ಸಂಘದ ರಾಷ್ಟ್ರೀಯ ಅಧ್ಯಕ್ಷ ವೆಂಕಟೇಶ್ ಮೌರ್ಯ ಆರೋಪಿಸಿದ್ದರು.

ಈ ಕುರಿತ ವಿಡಿಯೊ, ಆಡಿಯೊ ತುಣುಕುಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು. ಈ ಬೆಳವಣಿಗೆಗಳ ಬಳಿಕ, ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ರವಿಕುಮಾರ್‌ಗೆ ಮುಖ್ಯಮಂತ್ರಿ ಸೂಚಿಸಿದ್ದರು.

### 6 ಬಾರಿ ಸೀಟ್ ಬೆಲ್ಟ್ ಧರಿಸದ ಸಿ.ಎಂ

ಒಂದನೇ ಪುಟದಿಂದ...

2024ರ ಜನವರಿ 24ರಂದು ಮಧ್ಯಾಹ್ನ 12.19ರಂದು ಹಳೇ ವಿಮಾನ ನಿಲ್ದಾಣ ರಸ್ತೆಯ ಲೀಲಾ ಪ್ಯಾಲೇಸ್ ಜಂಕ್ಷನ್ ಬಳಿ ಸಾಗುವಾಗ ಸಿದ್ದರಾಮಯ್ಯ ಅವರು ಸೀಟ್ ಬೆಲ್ಟ್ ಧರಿಸಿರಲಿಲ್ಲ. ಅದೇ ಜಂಕ್ಷನ್‌ನಲ್ಲಿ ಫೆಬ್ರುವರಿ ಹಾಗೂ ಆಗಸ್ಟ್‌ನಲ್ಲಿ ಮತ್ತೆರಡು ಪ್ರಕರಣಗಳು ದಾಖಲಾದರೆ, 2025ರ ಮಾರ್ಚ್‌ನಲ್ಲಿ ಚಂದ್ರಿಕಾ ಹೋಟೆಲ್ ಜಂಕ್ಷನ್ ಹಾಗೂ ಆಗಸ್ಟ್‌ನಲ್ಲಿ ಶಿವಾನಂದ ವೃತ್ತ ಹಾಗೂ ಡಾ.ರಾಜ್ ಕುಮಾರ್ ಪ್ರತಿಮೆ ಜಂಕ್ಷನ್‌ಗಳ ಬಳಿ ಸೀಟ್ ಬೆಲ್ಟ್ ಧರಿಸದೆ ನಿಯಮ ಉಲ್ಲಂಘಿಸಿರುವುದು ದಾಖಲಾಗಿದೆ.

ಜುಲೈ 9ರಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಕ್ಸ್‌ಪ್ರೆಸ್ ಕಾರಿಡಾರ್‌ನಲ್ಲಿ ಮುಖ್ಯಮಂತ್ರಿ ಅವರಿದ್ದ ಕಾರು, ಅತಿವೇಗದಿಂದ ಹೋಗುವ ಮೂಲಕ ನಿಯಮ ಉಲ್ಲಂಘಿಸಿರುವುದು ಐಟಿಎಂಎಸ್‌ನಲ್ಲಿ ಸೆರೆಯಾಗಿದೆ.

### 'ಮತಪತ್ರ ಬಳಕೆ ತಪ್ಪೇನಲ್ಲ'

**ಬೆಂಗಳೂರು:** ಮತಪತ್ರಗಳನ್ನು (ಬ್ಯಾಲಟ್ ಪೇಪರ್) ಬಳಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲ. ಈ ವಿಚಾರವನ್ನು ಚುನಾವಣಾ ಆಯೋಗದ ಗಮನಕ್ಕೂ ತರಬೇಕಾಗಿಲ್ಲ. ಏಕೆಂದರೆ ರಾಜ್ಯ ಚುನಾವಣಾ ಆಯೋಗವೂ ಸಾಂವಿಧಾನಿಕ ಸಂಸ್ಥೆಯಾಗಿದ್ದು, ಕೇಂದ್ರ ಚುನಾವಣಾ ಆಯೋಗದಷ್ಟೇ ಅಧಿಕಾರವನ್ನು ಹೊಂದಿದೆ ಎಂದು ಜಿ.ಎಸ್. ಸಂಗ್ರೇಶಿ, ರಾಜ್ಯ ಚುನಾವಣಾ ಆಯುಕ್ತ ಹೇಳಿದ್ದಾರೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಇವಿಎಂ ಬದಲಿಗೆ ಮತಪತ್ರ ಬಳಸುವುದರಲ್ಲಿ ಯಾವುದೇ ಅಡಚಣೆ ಇಲ್ಲ. ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಈಗಲೂ ಮತಪತ್ರಗಳನ್ನೇ ಬಳಸಲಾಗುತ್ತಿದೆ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲೂ ಅವರೇ ಮತದಾರರಾಗಿದ್ದು, ಮತಪತ್ರಗಳ ಬಳಕೆಯ ಬಗ್ಗೆ ಅವರಿಗೆ ಅರಿವಿದೆ. ಮತಪತ್ರಗಳ ಬಳಕೆ ಅಸಾಂವಿಧಾನಿಕವೇನಲ್ಲ ಎಂದು ತಿಳಿಸಿದ್ದಾರೆ.

# ಮತ ಕಳವು: ಜಟಾಪಟಿ

### 'ತನ್ನ ತಪ್ಪನ್ನು ಪ್ರಮಾಣೀಕರಿಸಿದ ಕಾಂಗ್ರೆಸ್'

ಎರಡನೇ ಮುಖಪುಟದಿಂದ...

ಅಲ್ಲದೇ 'ಮತಗಳ್ಳತನದಲ್ಲಿ ನಿಷ್ಣಾತರಾದ ಕಾಂಗ್ರೆಸ್ಸಿಗರು ಇವಿಎಂ ಮೂಲಕ ನಡೆದ ಚುನಾವಣೆಗಳಲ್ಲಿ ಸೋತು ಹತಾಶರಾಗಿದ್ದಾರೆ. ರಾಹುಲ್ ಗಾಂಧಿ ಅವರು ಬಾಲಿಶವಾಗಿ ಹೇಳಿದ್ದೆಲ್ಲವನ್ನೂ ನಂಬಿಕೊಂಡು ರಾಜ್ಯದ ಕಾಂಗ್ರೆಸ್ ಸರ್ಕಾರ ಜಾರಿಗೆ ತರುತ್ತಿದೆ' ಎಂದು ಟೀಕಿಸಿದ್ದಾರೆ.

ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, 'ಆಧುನಿಕತೆಯಿಂದ ಪುರಾತನ ಕಾಲಕ್ಕೆ ಹೋಗುವ ನಿರ್ಧಾರವಿದು. ಬ್ಯಾಲಟ್ ಪೇಪರ್ ಬಳಸಿದರೆ, 2–3 ದಿನ ಮತ ಎಣಿಕೆ ಮಾಡಬೇಕಾಗುತ್ತದೆ. ನಿರ್ಧಾರವನ್ನು ಬಿಜೆಪಿ ಒಪ್ಪುವುದಿಲ್ಲ. ಸರ್ಕಾರದ ಹುನ್ನಾರಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತೇವೆ. ಜನಾಂದೋಲನ ರೂಪಿಸುತ್ತೇವೆ' ಎಂದಿದ್ದಾರೆ.

> **ಇವಿಎಂ ಮೂಲಕ ನಡೆದ ಚುನಾವಣೆಯಲ್ಲಿ ಗೆದ್ದಿರುವ ಸಿದ್ದರಾಮಯ್ಯ ಅವರು, ಮತ್ತೆ ಮತಪತ್ರ ಬೇಕು ಎಂದು ನಿರ್ಧಾರ ಮಾಡಿರುವುದು ಅತ್ಯಂತ ವಿಪರ್ಯಾಸ**
> **ಬಸವರಾಜ ಬೊಮ್ಮಾಯಿ,** ಬಿಜೆಪಿ ಸಂಸದ

> **ಇವಿಎಂ ತ್ಯಜಿಸಿ ಮತಪತ್ರಕ್ಕೆ ಮರಳುವ ನಿರ್ಧಾರವು ಸಿಲಿಕಾನ್ ಸಿಟಿಗೇ ಅವಮಾನ. ಸರ್ಕಾರದ ಈ ನಡೆಯಿಂದ ರಾಜ್ಯವು ಶಿಲಾಯುಗಕ್ಕೆ ಮರಳುತ್ತದೆ**
> **ಎಸ್.ಸುರೇಶ್ ಕುಮಾರ್,** ಬಿಜೆಪಿ ಶಾಸಕ

### 'ಅನುಭವದ ಮೇಲೆ ತೀರ್ಮಾನ'

ಎರಡನೇ ಮುಖಪುಟದಿಂದ...

'ಕಳ್ಳನ ಮನಸ್ಸು ಹುಳ್ಳಗೆ ಎಂಬಂತೆ ಬಿಜೆಪಿ ವರ್ತಿಸುತ್ತಿದೆ. ಕೇಂದ್ರ ಚುನಾವಣಾ ಆಯೋಗ ಅವರ ತೀರ್ಮಾನದಂತೆ ಲೋಕಸಭೆ, ವಿಧಾನಸಭೆಗಳ ಚುನಾವಣೆ ನಡೆಸುತ್ತದೆ. ನಾವು ಲೋಕಸಭಾ ಚುನಾವಣೆಗಳನ್ನು ಪರಿಶೀಲನೆ ಮಾಡಿದ್ದೇವೆ. ಸಹಕಾರಿ ಸಂಘಗಳಿಗೆ ಚುನಾವಣೆ ನಡೆಸುವಂತೆ ಬ್ಯಾಲಟ್ ಪೇಪರ್ ಬಳಸಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುತ್ತೇವೆ' ಎಂದರು.

ಸಿದ್ಧಲಿಂಗ ಸ್ವಾಮೀಜಿ ಅವರನ್ನು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಗೌರವಿಸಿದರು. ಅನ್ನದಾನೀಶ್ವರ ಸ್ವಾಮೀಜಿ, ಮುಮ್ಮಡಿ ನಿರ್ವಾಣ ಸ್ವಾಮೀಜಿ, ಮಹಾಂತ ಸ್ವಾಮೀಜಿ ಉಪಸ್ಥಿತರಿದ್ದರು

# ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

**ನೆಲಮಂಗಲ:** ಬಸವಣ್ಣ ದೇವರ ಮಠದ ಸದಾಶಿವ ಸ್ವಾಮೀಜಿಗಳ ನಿರಂಜನ ಪಟ್ಟಾಧಿಕಾರ ಸುವರ್ಣ ಮಹೋತ್ಸವದ ಅಂಗವಾಗಿ, 57 ಮಠಾಧೀಶರಿಗೆ ಪಾದಪೂಜೆ, ಸಾಧಕ 30 ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

'ಬಸವಣ್ಣದೇವರ ಮಠಕ್ಕೆ ಸದಾಶಿವ ಸ್ವಾಮೀಜಿ ಭದ್ರಬುನಾದಿ ಹಾಕಿದ್ದಾರೆ. ಇದೇ ಪರಂಪರೆಯನ್ನು ಈಗಿನ ಸಿದ್ಧಲಿಂಗ ಶ್ರೀಗಳು ಮುಂದುವರಿಸಿ ಮಠವನ್ನು ಬೃಹತ್ತಾಗಿ ಬೆಳೆಸಿದ್ದಾರೆ' ಎಂದು ರೈಲ್ವೆ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಹೇಳಿದರು.

ಸಂಸದ ಡಾ.ಕೆ.ಸುಧಾಕರ್ ಮಾತನಾಡಿ, '57 ಪೂಜ್ಯರನ್ನು ಒಂದೇ ವೇದಿಕೆಯಲ್ಲಿ ನೋಡುತ್ತಿರುವುದು ನಮ್ಮ ಪೂರ್ವಜನ್ಮದ ಸುಕೃತ. ಶ್ರೀಗಳ ತಪಸ್ಸಿನಿಂದ ನೆಲಮಂಗಲ ಮಣ್ಣಿಗೆ ಶಕ್ತಿ ಬಂದಿದೆ' ಎಂದರು.

ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, 'ಧರ್ಮ ಸಾಹಿತ್ಯ ಸಂಸ್ಕೃತಿ ಜ್ಞಾನವನ್ನು ಸಮತೂಕದಲ್ಲಿ ಸಮಸ್ತವನ್ನು ಸಮಾಜಕ್ಕೆ ಒದಗಿಸಿದ ಕೀರ್ತಿ ಮಠಗಳಿಗೆ ಸಲ್ಲುತ್ತದೆ. ಏನೂ ಇಲ್ಲದ ಮಠವನ್ನು ಎಲ್ಲವೂ ಇರುವಂತೆ ಶ್ರೀಗಳು ಮಾಡಿದ್ದಾರೆ' ಎಂದು ಹೇಳಿದರು.

ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಮಾತನಾಡಿ, 'ಬಸವಣ್ಣದೇವರ ಮಠವನ್ನು ಸದಾಶಿವ ಸ್ವಾಮಿಗಳೆಂಬ ಘಟ ವಿಶ್ರಾಂತಿ ಪಡೆಯದೆ ಮನೆಗಳಿಗೆ ಹೋಗಿ ಜಾಗೃತಿ ಮೂಡಿಸಿ, ಸೌಕರ್ಯಗಳಿಲ್ಲದ ಕಾಲದಲ್ಲಿ ಈ ಭಾಗದ ಹಳ್ಳಿಗಳ ಜನರು ಶ್ರೀಮಠಕ್ಕೆ ಸೇವೆ ಸಲ್ಲಿಸುವಂತೆ ಮಾಡಿದ್ದಾ' ಎಂದರು.

ಸಾಧಕ 30 ಶಿಕ್ಷಕರಿಗೆ 'ಸದಾಶಿವ ಗುರುಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು.

## ನಗರದಲ್ಲಿ ಇಂದು

**ಲೆಕ್ಕಶಾಸ್ತ್ರ, ವ್ಯವಹಾರ ಅಧ್ಯಯನ ಹಾಗೂ ಅರ್ಥಶಾಸ್ತ್ರ ಕಾರ್ಯಾಗಾರ:** ಅಧ್ಯಕ್ಷತೆ: ಮನೋಜ ಕುಮಾರ ಕೊಳ್ಳಾ, ಮುಖ್ಯ ಅತಿಥಿ: ಶೈಲಶ್ರೀ ಹರಿದಾಸ್, ಉಪಸ್ಥಿತಿ: ಹೊ.ನ. ನೀಲಕಂಠೇಗೌಡ, ಎಸ್.ಎನ್. ನಟರಾಜ್, ಪುರುಷೋತ್ತಮ ಜಿ.ಎಸ್., ಎ.ವಿ. ಸತ್ಯನಾರಾಯಣ, ಸಿ. ನಾರಾಯಣ ರೆಡ್ಡಿ, ಆಯೋಜನೆ: ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರು ದಕ್ಷಿಣ ಜಿಲ್ಲೆ, ಸ್ಥಳ: ಎಂ.ಆರ್.ಡಿ. ಸಭಾಂಗಣ, ಪಿಇಎಸ್ ವಿಶ್ವವಿದ್ಯಾಲಯ, 100 ಅಡಿ ವರ್ತುಲ ರಸ್ತೆ, ಬೆಳಿಗ್ಗೆ 8.30

**'8ನೇ ಜಾನಪದ ಮಾಲೆ' ಜಾನಪದ ಸಂಗೀತ:** ಅತಿಥಿ: ಕುಣಿಗಲ್ ರಾಮಚಂದ್ರ, ಅಧ್ಯಕ್ಷತೆ: ಎಲ್.ಎನ್. ಹನುಮಂತರಾಯಪ್ಪ, ಆಯೋಜನೆ ಹಾಗೂ ಸ್ಥಳ: ಬಿಷಪ್ ಕಾರ್ಮೆಲ್ ಇಂಗ್ಲಿಷ್ ಸ್ಕೂಲ್, ಅಂಜನಾದ್ರಿ ಬಡಾವಣೆ, ಹೆಗ್ಗನಹಳ್ಳಿ, ಬೆಳಿಗ್ಗೆ 9

**ರಕ್ತದಾನ ಶಿಬಿರ ಆಯೋಜಕರ 4ನೇ ಸಮಾವೇಶ:** ಉಪಸ್ಥಿತಿ: ಎಂ.ಕೆ. ರಮೇಶ್, ನಾ. ದಿನೇಶ್ ಹೆಗ್ಡೆ, ಆಯೋಜನೆ: ರಾಷ್ಟ್ರೋತ್ಥಾನ ರಕ್ತಕೇಂದ್ರ, ಸ್ಥಳ: ಕೇಶವಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡನಗರ, ಬೆಳಿಗ್ಗೆ 10

**'ಹಿರೇಬೆಣಕಲ್ ಪ್ರಾಚೀನರ ನೆಲೆಯ ನೆಲೆ' ಛಾಯಾಚಿತ್ರ ಪ್ರದರ್ಶನ:** ದಿನೇಶ್ ಮನೀರ್, ಮನೀಶ್ ಎಸ್., ಶಿಲ್ಪಾ ಹೆಗ್ಡೆ, ಆಯೋಜನೆ: ಪ್ರಾಜೆಕ್ಟ್ ಸ್ಕಾಟ್, ಸ್ಥಳ: ವೆಂಕಟಪ್ಪ ಚಿತ್ರಶಾಲೆ, ಬೆಳಿಗ್ಗೆ 11

**ಗೊರೂರು ಸಂಸ್ಮರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ:** ಉದ್ಘಾಟನೆ: ಶಿವರಾಜ್ ತಂಗಡಗಿ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ನೆನಪಿನಂಗಳದಲ್ಲಿ ಗೊರೂರು: ಹಂಪ ನಾಗರಾಜಯ್ಯ, ಮುಖ್ಯ ಅತಿಥಿಗಳು: ಎಲ್.ಎನ್. ಮುಕುಂದರಾಜ್, ವಾಸಂತಿ ಮೂರ್ತಿ ಗೊರೂರು, ಜಿ.ಎನ್. ಶ್ರೀನಿವಾಸನ್ ಗೊರೂರು, ಪ್ರತಾಪ್ ಲಿಂಗಯ್ಯ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಡಾ.ಗೊರೂರು ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಮಹದೇವದೇಸಾಯಿ ಸಭಾಂಗಣ, ಗಾಂಧಿ ಭವನ, ಶಿವಾನಂದ ವೃತ್ತದ ಬಳಿ, ಬೆಳಿಗ್ಗೆ 10.30



**ಜಗಜ್ಯೋತಿ ಬಸವೇಶ್ವರರ ಪುತ್ಥಳಿ ಅನಾವರಣ:** ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ, ಬಸವ ಪುತ್ಥಳಿ ಅನಾವರಣ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಎಸ್. ಸುರೇಶ್ ಕುಮಾರ್, ಸಮಾರಂಭ ಉದ್ಘಾಟನೆ: ಬಿ.ಎಸ್. ಯಡಿಯೂರಪ್ಪ, ಶಿಲಾನ್ಯಾಸ ಅನಾವರಣ: ಶೋಭಾ ಕರಂದ್ಲಾಜೆ, ಅನುಭವ ಮಂಟಪ ಚಿತ್ರ ಶಿಲಾವರಣ: ಎಂ.ಬಿ. ಪಾಟೀಲ, ವಚನಶಿಲಾ ಅನಾವರಣ: ಈಶ್ವರ ಖಂಡ್ರೆ, 'ಮಾತೆಂಬುದು ಜ್ಯೋತಿರ್ಲಿಂಗ' ಪುಸ್ತಕ ಬಿಡುಗಡೆ: ಗೋಪಾಲಯ್ಯ, ಆಯೋಜನೆ: ಬಸವ ವೇದಿಕೆ, ಬಸವ ಪುತ್ಥಳಿ ಪ್ರತಿಷ್ಠಾಪನಾ ಸಮಿತಿ, ಸ್ಥಳ: ವೆಸ್ಟ್ ಆಫ್ ಕಾರ್ಡ್ ರಸ್ತೆ, ಮೋದಿ ಆಸ್ಪತ್ರೆ ರಸ್ತೆ, ರಾಜಾಜಿನಗರ, ಮಧ್ಯಾಹ್ನ 3.30



**'ಮೂರನೇ ಕಿವಿ' ನಾಟಕ ಪ್ರದರ್ಶನ:** ನಿರ್ದೇಶನ: ಪ್ರೊ.ಎಸ್.ಆರ್. ರಮೇಶ್, ಆಯೋಜನೆ: ಪರಿವರ್ತನ ರಂಗ ಸಮಾಜ, ಸ್ಥಳ: ರಂಗಶಂಕರ, ಜೆ.ಪಿ.ನಗರ, ಮಧ್ಯಾಹ್ನ 3.30 ಮತ್ತು ಸಂಜೆ 7.30

**ಶಿಕ್ಷಕರ ದಿನಾಚರಣೆ:** ಉದ್ಘಾಟನೆ: ಡಿ. ರಂಗನಾಥ್, ಮುಖ್ಯ ಅತಿಥಿ: ಬಿ.ಎಂ. ಪಟೇಲ್‌ಪಾಂಡು, ಅಧ್ಯಕ್ಷತೆ: ಎನ್. ಕಾಮರಾಜು, ಆಯೋಜನೆ ಹಾಗೂ ಸ್ಥಳ: ಶಾರದಾ ವಿದ್ಯಾಪೀಠ ಬ್ಯಾಟರಾಯನಪುರ, ಬೆಳಿಗ್ಗೆ 10.30

**'ಫಡ್ನೀಸ್ 100' ವ್ಯಂಗ್ಯಚಿತ್ರ ಪ್ರದರ್ಶನ ಉದ್ಘಾಟನೆ:** ಜನಾರ್ದನ ಸ್ವಾಮಿ, ಆಯೋಜನೆ ಹಾಗೂ ಸ್ಥಳ: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಮಿಡ್ ಫೋರ್ಡ್ ಹೌಸ್, ಎಂ.ಜಿ ರಸ್ತೆ, ಬೆಳಿಗ್ಗೆ 11

**ನೂತನ ದೋಶೆಟ್ಟಿ ಅವರ 'ಸವಾಲುಗಳೇ ದಿನಚರಿ' ಪ್ರಬಂಧ ಸಂಕಲನ ಹಾಗೂ 'ಹಾಸನ ಜಿಲ್ಲೆಯ ಪ್ರವಾಸಿ ತಾಣಗಳು' ಪುಸ್ತಕ ಬಿಡುಗಡೆ:** ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಮುಖ್ಯ ಅತಿಥಿ: ಎಂ.ಎಸ್. ಆಶಾದೇವಿ, ಪುಸ್ತಕ ಪರಿಚಯ: ರಶ್ಮಿ ಎಸ್., ಉಪಸ್ಥಿತಿ: ಸುಶೀಲಾ ಸುಬ್ರಮಣ್ಯ, ಆಯೋಜನೆ: ಸದರನ್ ಎಕೊನಮಿಸ್ಟ್ ಪಬ್ಲಿಕೇಷನ್ ಡಿವಿಜನ್, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಮಧ್ಯಾಹ್ನ 12.30

**ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ವಿಮೋಚನಾ ದಿನಾಚರಣೆ: ಆಯೋಜನೆ:** ಸಂಗಮ, ಸ್ಥಳ: ಸ್ಟೂಡೆಂಟ್ ಕ್ರಿಶ್ಚಿಯನ್ ಮೂವ್ಮೆಂಟ್ ಆಫ್ ಇಂಡಿಯಾ ಹಾಲ್, ಮಿಷನ್ ರಸ್ತೆ, ಸಂಜೆ 4

**ರಂಗ ಸಂವಾದ:** ತಿಂಗಳ ಅತಿಥಿ: ಪಿಚ್ಚಳ್ಳಿ ಶ್ರೀನಿವಾಸ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

**ರಂಗಪ್ರವೇಶ:** ರಕ್ಷಿತಾ ಪಿ., ಅತಿಥಿಗಳು: ಡಾ.ಸಿ. ಎನ್. ಮಂಜುನಾಥ್, ಹೇಮಲತಾ ಪ್ರಕಾಶ್, ಸುಕನ್ಯಾ ಪ್ರಭಾಕರ್, ರಘುನಂದನ್ ಎಸ್., ನಂಜುಂಡ ರಾವ್, ಗೀತಾ ಶ್ಯಾಮ್‌ಪ್ರಕಾಶ್, ಆಯೋಜನೆ: ಸಮುಖಶ್ರೀ ಕಲಾ ಕುಟೀರ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 5.45

**88ನೇ ಗಣೇಶೋತ್ಸವದ ಪ್ರಯುಕ್ತ ವಿಶೇಷ ಸಂಗೀತ ಕಛೇರಿ:** ಗಾಯನ ಜುಗಲ್‌ಬಂದಿ: ಎಸ್. ಐಶ್ವರ್ಯ, ಎಸ್. ಸೌಂದರ್ಯ, ಪಿಟೀಲು: ಎಸ್. ಜನಾರ್ದನ್, ಮೃದಂಗ: ಫಣೀಂದ್ರ ಭಾಸ್ಕರ್, ಘಟ: ಸುಕನ್ಯಾ ರಾಮ್‌ಗೋಪಾಲ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಚಾಮರಾಜಪೇಟೆ, ಸಂಜೆ 6

ರಕ್ಷಿತಾ ಪಿ.

**ಗಣೇಶೋತ್ಸವ ಪ್ರಯುಕ್ತ 'ಜಾಂಬವತಿ ಕಲ್ಯಾಣ' ಯಕ್ಷಗಾನ ಪ್ರದರ್ಶನ:** ಹಿಮ್ಮೇಳ: ಆಕಾಶ್ ಕಾಶಿ, ಮಾನಸಾ ಪಡುಬಿದ್ರಿ, ಪವನ್ ಕಲ್ಲೂರಾಯ, ವಂದನಾ ಮಾಲೆಂಕಿ, ಚೇತನ್ ಕತ್ತಲ್‌ಸಾರ್, ಮುಮ್ಮೇಳ: ಪವನ್ ಭಟ್ ಕೆರ್ವಾಶೆ, ಸಾತ್ವಿಕ್ ನೆಲ್ಲಿತೀರ್ಥ, ಆದರ್ಶ ವಿ.ಎ., ಲತೇಶ್ ಆಚಾರ್ಯ, ಸಂದೇಶ್ ಭಟ್, ಕಾರುಣ್ಯ ಶರವೂರು, ಆಯೋಜನೆ: ವಿಲ್ಸನ್ ಗಾರ್ಡನ್‌ನ ಶಾರದಾ ಗೆಳೆಯರ ಬಳಗ, ಸ್ಥಳ: ಕಂಫರ್ಟ್ ಶಾರದಾ ಅಪಾರ್ಟ್‌ಮೆಂಟ್, ವಿಲ್ಸನ್ ಗಾರ್ಡನ್ 15ನೇ ಕ್ರಾಸ್, ಸಂಜೆ 6

**'ರಕ್ತ ಧ್ವಜ' ನಾಟಕ ಪ್ರದರ್ಶನ:** ನಿರ್ದೇಶನ: ದಾಕ್ಷಾಯಿಣಿ ಭಟ್, ಆಯೋಜನೆ: ದೃಶ್ಯ, ಸ್ಥಳ: ಭಾನು ನೆನಪಿನ ನಾಣಿ ಅಂಗಳ, ಸುಚಿತ್ರ ಸಿನಿ ಅಕಾಡೆಮಿ, ಸಂಜೆ 7

**'ಸ್ತ್ರೀವಾದಿ ಸಂಕಥನ' ಪುಸ್ತಕ ಬಿಡುಗಡೆ:** ಸುಮಿತ್ರಾಬಾಯಿ ಬಿ.ಎನ್. ಅವರ 'ಸಾಹಿತ್ಯ ಸಂಚಲನ', ಚಂಪಾವತಿ ಎಸ್.ಎಸ್. ಅವರ 'ನೋರಾಳಿಂದ ಗುಲಾಬಿ ಗ್ಯಾಂಗ್‌ವರೆಗೆ', ರಾಜೇಶ್ವರಿ ಎಚ್.ಎಸ್. ಅವರ 'ಮಹಿಳಾ ಸಂವೇದನೆ', ವೆಂ. ವನಜ ಅವರ 'ಮೌನ ಮಾತಾದಾಗ', ದು. ಸರಸ್ವತಿ ಅವರ 'ವಾಡೆ', ಮಾನಸ ಬಳಗ ಅವರ 'ಅಂತರಂಗದ ಪುಟಗಳು', ಸಿ.ಜಿ. ಮಂಜುಳಾ ಅವರ 'ಸ್ತ್ರೀ ಅಸ್ಮಿತೆ ಸಂಕಥನ' ಪುಸ್ತಕಗಳು, ಪುಸ್ತಕ ಪರಿಚಯ: ರಾಜೇಂದ್ರ ಚೆನ್ನಿ, ಆರ್. ಸುನಂದಮ್ಮ, ಸಿ.ಜಿ. ಮಂಜುಳಾ, ಭಾರತೀದೇವಿ ಪಿ., ಅಧ್ಯಕ್ಷತೆ: ಲಕ್ಷ್ಮೀ ಮೂರ್ತಿ, ಆಯೋಜನೆ: ಮಾನಸ ವೇದಿಕೆ, ಸ್ಥಳ: ದೇವರಾಜ ಅರಸು ಸಭಾಂಗಣ, ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಸಂಜೆ 4



**ಎನ್. ನರಸಿಂಹಯ್ಯ ಅವರ 10 ಕಾದಂಬರಿಗಳು ಬಿಡುಗಡೆ:** ಹಂಪ ನಾಗರಾಜಯ್ಯ, ಮುಖ್ಯ ಅತಿಥಿಗಳು: ಬೈರಮಂಗಲ ರಾಮೇಗೌಡ, ರಾ.ನಂ. ಚಂದ್ರಶೇಖರ, ಉದ್ದಂಡಯ್ಯ, ಉಪಸ್ಥಿತಿ: ಬಿ.ಎನ್. ರವೀಂದ್ರ, ಆಯೋಜನೆ ಹಾಗೂ ಸ್ಥಳ: ಸಪ್ನ ಬುಕ್ ಹೌಸ್, ಗಾಂಧಿನಗರ, ಸಂಜೆ 5

**ಕಾವೆಂಶ್ರೀ ಕಾವ್ಯಸಂಜೆ:** ಪುಸ್ತಕ ಬಿಡುಗಡೆ: ಎನ್. ರಘು, ಅಧ್ಯಕ್ಷತೆ: ಆನಂದ ಮಾದಲಗೆರೆ, ವಿವಿಧ ಸಂಸ್ಥೆಗಳ ಗಾಯಕರಿಂದ ಸಮೂಹ ಗಾಯನ, ಆಯೋಜನೆ: ಗಾಯನ ಗಂಗಾ ಟ್ರಸ್ಟ್, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30

**ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..**
**nagaradalli_indu@prajavani.co.in**

# ಈದ್ ಮಿಲಾದ್ ಸಂಭ್ರಮ, ಸಹಬಾಳ್ವೆ ಸಂದೇಶ

## ನಗರದ ಹಲವೆಡೆ ಮೆರವಣಿಗೆ, ಉಪನ್ಯಾಸ ಕಾರ್ಯಕ್ರಮ
## • ಬಿರಿಯಾನಿ, ನೀರು, ಒಣ ಹಣ್ಣು ವಿತರಿಸಿ ಸೇವಾ ಕಾರ್ಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮುಸ್ಲಿಂ ಸಮುದಾಯದವರು ನಗರದಲ್ಲಿ ಶುಕ್ರವಾರ ಈದ್ ಮಿಲಾದ್‌ಅನ್ನು ಸಡಗರದಿಂದ ಆಚರಿಸಿದರು.

'ಶಾಂತಿ, ಕರುಣೆ ಮತ್ತು ಸಹೋದರತ್ವವು ನಮ್ಮೆಲ್ಲರ ಜೀವನವನ್ನು ಬೆಳಗಲಿ, ಸಮಾಜದಲ್ಲಿ ಸೌಹಾರ್ದ ನೆಲಸಲಿ, ಪ್ರೀತಿ ಸಹಬಾಳ್ವೆಯ ಬದುಕು ಎಲ್ಲರದಾಗಲಿ' ಎನ್ನುವ ಆಶಯದೊಂದಿಗೆ ನಾನಾ ಸೇವಾ, ಧಾರ್ಮಿಕ ಚಟುವಟಿಕೆಗಳು ನಡೆದವು.

ಹಿರಿಯರು, ಯುವಕರೊಂದಿಗೆ ಮಕ್ಕಳು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಘೋಷಣೆಗಳನ್ನು ಕೂಗುತ್ತಾ ವಾಹನಗಳಲ್ಲಿ ಬಾವುಟಗಳನ್ನು ಹಿಡಿದು ಸಾಗಿದರು. ಬಿರಿಯಾನಿ, ನೀರು ಹಾಗೂ ಒಣ ಹಣ್ಣುಗಳನ್ನು ವಿತರಿಸಿ, ಸೇವಾ ಕಾರ್ಯ ಕೈಗೊಂಡರು.

ಶಿವಾಜಿನಗರ, ಚಾಮರಾಜಪೇಟೆ, ಗಾಂಧಿನಗರ, ಕೆ.ಜಿ. ರಸ್ತೆ, ಕಂಟೋನ್ಮೆಂಟ್‌ನ ನ್ಯೂ ಬಂಬೂ ಬಜಾರ್, ವಸಂತನಗರ, ಜೆ.ಸಿ. ರಸ್ತೆ, ಆರ್.ಟಿ. ನಗರ, ಗೋರಿಪಾಳ್ಯ, ಪಾದರಾಯನಪುರ, ಪುಲಕೇಶಿನಗರ, ಹೆಬ್ಬಾಳ, ಬನ್ನೇರುಘಟ್ಟ ರಸ್ತೆ, ನಾಯಂಡಹಳ್ಳಿ, ಬಿಸ್ಮಿಲ್ಲಾ ನಗರ, ಕಲಾಸಿಪಾಳ್ಯ, ಸುಲ್ತಾನಪಾಳ್ಯ, ರಹಮತ್ ನಗರ ಸೇರಿದಂತೆ ಹಲವು ಭಾಗಗಳಲ್ಲಿ ಮೆರವಣಿಗೆಗಳು ನಡೆದವು.

ಸ್ತಬ್ಧಚಿತ್ರಗಳು, ವಾದ್ಯಗಳೊಂದಿಗೆ ಶಿವಾಜಿನಗರ ಕಂಬಲ್ ಪೋಷ್ ದರ್ಗಾಕ್ಕೆ ಮೆರವಣಿಗೆ ಮೂಲಕ ಆಗಮಿಸಿದರು.

ಅಖಿಲ ಕರ್ನಾಟಕ ಮಿಲಾದ್ ಒ ಜುಲೂಸ್ ಎ ರಹ್ಮತ್ ಉಲ್ ಅಲ್ ಅಮೀನ್ ಕಮಿಟಿಯಿಂದ ಬಿಎಸ್‌ಎ ರಸ್ತೆಯ ಬಿಲಾಲ್ ಮಸೀದಿ ಬಳಿ ಮೆರವಣಿಗೆ ಸಾಗಿತು. ಬಳಿಕ ಅರಮನೆ ಮೈದಾನದಲ್ಲಿ ನಡೆದ ಸಮಾವೇಶದಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು.

### ಹಲವೆಡೆ ವಾಹನ ಸಂಚಾರ ದಟ್ಟಣೆ

ಬೆಂಗಳೂರಿನ ಹಲವು ಭಾಗಗಳಲ್ಲಿ ಈದ್ ಮಿಲಾದ್ ಮೆರವಣಿಗೆ ಇದ್ದುದರಿಂದ ಸಂಚಾರ ದಟ್ಟಣೆ ಉಂಟಾಯಿತು. ವಾಹನ ಸವಾರರು ಪರದಾಡಿದರು.

ಪ್ರಮುಖ ರಸ್ತೆಗಳಲ್ಲಿ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆಗಳನ್ನು ಮಾಡಲಾಗಿತ್ತು. ವಾಹನ ಸವಾರರು ಪರ್ಯಾಯ ಮಾರ್ಗಗಳನ್ನು ಬಳಸಿದ್ದರಿಂದ ಅಲ್ಲಿಯೂ ದಟ್ಟಣೆ ಉಂಟಾಗಿ ಸಂಚಾರ ವಿಳಂಬವಾಯಿತು.

ಹೆಬ್ಬಾಳ, ಚಾಮರಾಜಪೇಟೆ, ಶಿವಾಜಿನಗರದ ಹಲವು ಕಡೆಗಳಲ್ಲಿ ಸಂಚಾರ ಪೊಲೀಸರು ನಿಯಂತ್ರಣ ಕ್ರಮ ಕೈಗೊಂಡರೂ ಕೆಲವು ಹೊತ್ತು ದಟ್ಟಣೆ ಇತ್ತು. ಪೊಲೀಸರು ಮಾರ್ಗದರ್ಶನ ಮಾಡಿ, ವಾಹನ ಸವಾರರು ಪರ್ಯಾಯ ರಸ್ತೆ ಬಳಸುವಂತೆ ಸೂಚಿಸಿದರು. ಅರಮನೆ ಆವರಣದಲ್ಲಿ ಈದ್ ಮಿಲಾದ್ ಅಂತರರಾಷ್ಟ್ರೀಯ ಸಮಾವೇಶ ಇದ್ದುದರಿಂದ ಆ ಮಾರ್ಗದಲ್ಲಿ ಸಂಜೆ ನಂತರ ದಟ್ಟಣೆ ಕಂಡು ಬಂದಿತು. ಮೈಸೂರು ರಸ್ತೆಯ ಕೆಂಗೇರಿ ಬಳಿ ಕೆಲ ಹೊತ್ತು ಸಂಚಾರಕ್ಕೆ ಅಡಚಣೆ ಉಂಟಾಗಿತ್ತು.

**ಮುಖ್ಯಾಂಶಗಳು**
- ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದ ಹಿರಿಯರು, ಯುವಕರು, ಮಕ್ಕಳು
- ಸ್ತಬ್ಧಚಿತ್ರಗಳು, ವಾದ್ಯಗಳೊಂದಿಗೆ ದರ್ಗಾಕ್ಕೆ ಆಗಮನ

ಮಸೀದಿ, ದರ್ಗಾಗಳಲ್ಲಿ ಮೊಹಮ್ಮದ್ ಪೈಗಂಬರ್ ಅವರ ಜೀವನ ಸಂದೇಶಗಳ ಕುರಿತು ಧರ್ಮಗುರುಗಳ ಉಪನ್ಯಾಸಗಳು ನಡೆದವು.

'ಇಸ್ಲಾಂ ಧರ್ಮದವರು ಪ್ರವಾದಿ ಮೊಹಮ್ಮದ್ ಅವರ ಜನ್ಮದಿನವನ್ನು ಈದ್ ಮಿಲಾದ್ ಎಂದು ಆಚರಿಸಲಾಗುತ್ತದೆ. ಈ ದಿನವನ್ನು ಮೌಲಿದ್ ಅನ್-ನಬಿ ಇಲ್ಲವೇ ಮೌಲಿದ್ ಎಂದೂ ಹೇಳಲಾಗುತ್ತದೆ. 1,500 ವರ್ಷಗಳ ಹಿಂದೆಯೇ ಪ್ರವಾದಿ ಮುಹಮ್ಮದ್ ಅವರು ಸಾರಿದ ಸಂದೇಶದಂತೆಯೇ ಬದುಕುವಂತೆ ಮನವಿ ಮಾಡಲಾಗುತ್ತದೆ' ಎಂದು ಧರ್ಮಗುರುಗಳು ತಿಳಿಸಿದರು.

ಪುರಭವನದ ಬಳಿ ಶುಕ್ರವಾರ ಈದ್ ಮಿಲಾದ್ ಅಂಗವಾಗಿ ಮುಸ್ಲಿಂ ಸಮುದಾಯದವರು ಮೆರವಣಿಗೆ ನಡೆಸಿದರು
—ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

## 'ಶಾಂತಿಗಾಗಿ ಮಾನವ ಕುಲ ಕೆಲಸ ಮಾಡಲಿ'

**ಬೆಂಗಳೂರು:** ಪರಧರ್ಮ ಸಹಿಷ್ಣುತೆ ಸಂವಿಧಾನದ ಮೂಲ ಆಶಯವಾಗಿದ್ದು, ಸಂವಿಧಾನದ ಪಾಲನೆಯೇ ಎಲ್ಲರ ಗುರಿಯಾಗಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ಜಂಟಿ ಮಿಲಾದ್ ಸಮಿತಿ ಆಯೋಜಿಸಿದ್ದ 'ಅಂತರ ರಾಷ್ಟ್ರೀಯ ಸಮಾವೇಶ'ದಲ್ಲಿ ಮಾತನಾಡಿದರು.

ಪ್ರವಾದಿ ಅವರ ಬೋಧನೆಗಳು ಮಾನವ ಇತಿಹಾಸದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದವು. ಅವರು ಸಮಸ್ತ ಮಾನವಕೋಟಿಗೆ ನ್ಯಾಯ, ಸಮಾನತೆ ಮತ್ತು ಧಾರ್ಮಿಕ ಸೌಹಾರ್ದದ ಮಾರ್ಗಗಳನ್ನು ತೋರಿಸಿದರು. ಬಸವಣ್ಣ ಅವರ ನೇತೃತ್ವದ ಶರಣರ ಚಳವಳಿ ಮಾನವ ಕುಲ ಒಂದೇ ಎನ್ನುವ ಮೌಲ್ಯವನ್ನೇ ಸಾರಿತ್ತು ಎಂದು ಹೇಳಿದರು.

ಪ್ರವಾದಿಗಳು ಶಾಂತಿಯ ಧೂತರು. ಇಡೀ ಮಾನವ ಕುಲದ ಶಾಂತಿಗಾಗಿ, ಸಹಬಾಳ್ವೆ, ಸಹೋದರತ್ವಕ್ಕಾಗಿ ಕೆಲಸ ಮಾಡಬೇಕು ಎನ್ನುವುದು ಅವರ ಬೋಧನೆಯಾಗಿದೆ ಎಂದರು.

ದೇಶದ ಸಂವಿಧಾನದ ಮೂಲ ಆಶಯ ಕೂಡ ಭ್ರಾತೃತ್ವ ಮತ್ತು ಪರಧರ್ಮ ಸಹಿಷ್ಣುತೆಯೇ ಆಗಿದೆ. ಆದ್ದರಿಂದ ಸಂವಿಧಾನವನ್ನು ಆಚರಿಸುವುದು, ಪಾಲಿಸುವುದು ಎಲ್ಲರ ಗುರಿಯಾಗಲಿ ಎಂದು ಕರೆ ನೀಡಿದರು.

ವಸತಿ ಸಚಿವ ಜಮೀರ್ ಅಹಮದ್, ಇಂಧನ ಸಚಿವ ಕೆ.ಜೆ.ಜಾರ್ಜ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಶಾಸಕ ಹ್ಯಾರಿಸ್, ಧಾರ್ಮಿಕ ಮುಖಂಡರು ಇದ್ದರು.

ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಈದ್ ಮಿಲಾದ್ ಅಂತರರಾಷ್ಟ್ರೀಯ ಸಮಾವೇಶದಲ್ಲಿ ನೆನಪಿನ ಕಾಣಿಕೆ ನೀಡಿ ಸಿದ್ದರಾಮಯ್ಯ ಅವರನ್ನು ಗೌರವಿಸಲಾಯಿತು. ಎನ್‌. ಎ. ಹ್ಯಾರಿಸ್, ಸೈಯದ್ ಖಾಲಿದ್ ಅಹ್ಮದ್ ಬುಖಾರಿ, ಜಮೀರ್ ಅಹ್ಮದ್ ಉಪಸ್ಥಿತರಿದ್ದರು

## ಜೀತೋ ಜೇವರ್ ಎಕ್ಸ್‌ಪೋ ಬ್ರೈಡಲ್ ಸ್ಟೋರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜೈನ್ ಇಂಟರ್ ನ್ಯಾಷನಲ್ ಟ್ರೇಡ್ ಆರ್ಗನೈಸೇಷನ್ ಆಯೋಜಿಸಿರುವ ದಕ್ಷಿಣ ಭಾರತದ ಅತಿದೊಡ್ಡ ಆಭರಣ ಮತ್ತು ಮದುವೆ, ವಿಶೇಷ ಜೀವನ ಕುರಿತ 'ಜೀತೋ ಜೇವರ್ ಎಕ್ಸ್‌ಪೋ ಆ್ಯಂಡ್ ಬ್ರೈಡಲ್ ಸ್ಟೋರಿ' ಪ್ರದರ್ಶನಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು.

'ಇಂತಹ ಕಾರ್ಯಕ್ರಮಗಳು ರಾಜ್ಯದ ಆರ್ಥಿಕ ಮತ್ತು ಸಾಂಸ್ಕೃತಿಕ ಸಮೃದ್ಧಿಗೆ ಹೊಸ ದಿಕ್ಕನ್ನು ನೀಡುತ್ತವೆ. ಈ ಕಾರ್ಯಕ್ರಮವನ್ನು ವ್ಯಾಪಾರ ಮತ್ತು ಸಂಸ್ಕೃತಿಯ ಅನನ್ಯ ಸಂಯೋಜನೆ ಎಂದು ಪರಿಗಣಿಸಿದ್ದು, ತಂತ್ರಜ್ಞಾನ ಕ್ಷೇತ್ರದಲ್ಲಿ ಜೀತೋ ಅವರ ಪಾತ್ರ ಪ್ರಶಂಸನೀಯ. ವ್ಯಾಪಾರ ಜಗತ್ತಿಗೆ ಇದು ಪ್ರೇರಣಾದಾಯಕ ವೇದಿಕೆ' ಎಂದು ಶಿವಕುಮಾರ್ ಹೇಳಿದರು.

ಸಂಸದ ಪಿ.ಸಿ. ಮೋಹನ್ ಮಾತನಾಡಿ, 'ಈ ಪ್ರದರ್ಶನವು ಉದ್ಯಮಶೀಲತೆ ಮತ್ತು ಪರಂಪರೆಯನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸುತ್ತಿದೆ' ಎಂದು ಶ್ಲಾಘಿಸಿದರು.

ಶಾಸಕ ಎಂ. ಕೃಷ್ಣಪ್ಪ ಮಾತನಾಡಿ, 'ಕರ್ನಾಟಕದ ವಾಣಿಜ್ಯ ಚಟುವಟಿಕೆಗಳಿಗೆ ಹೊಸ ಶಕ್ತಿ ತಂದಿದೆ. ಜೈನ ಸಮುದಾಯದ ಹೆಮ್ಮೆಯ ಪರಂಪರೆಯೊಂದಕ್ಕೆ ಇದು ಸೇರ್ಪಡೆಯಾಗಿದೆ' ಎಂದರು.

'ಈ ಭವ್ಯ ಕಾರ್ಯಕ್ರಮದ ಹಿಂದೆ ಜೀತೋ ಸದಸ್ಯರ ಶಕ್ತಿ ಮತ್ತು ಮಾರ್ಗದರ್ಶನ' ಇದೆ ಎಂದು ಜೀತೋ ಬೆಂಗಳೂರು ಉತ್ತರ ವಿಭಾಗದ ಅಧ್ಯಕ್ಷ ವಿಮಲ್ ಕಟಾರಿಯಾ ಹೇಳಿದರು.

'ಜ್ಯುವೆಲರಿ ಮತ್ತು ಉಡುಪುಗಳು ನಮ್ಮ ಸಂಸ್ಕೃತಿಯ ಅದ್ಭುತ ಅಂಶಗಳಾಗಿವೆ. ಎರಡನ್ನೂ ಒಂದೆಡೆ ತಂದು, ಔಪಚಾರಿಕ ಮಟ್ಟದ ಜ್ಯುವೆಲರಿ ಮತ್ತು ಉಡುಪುಗಳ ಆಯ್ಕೆಯಲ್ಲಿನ ಸಂಕಷ್ಟವನ್ನು ದೂರ ಮಾಡಬೇಕೆಂಬುದು ನಮ್ಮ ಮುಖ್ಯ ಉದ್ದೇಶ' ಎಂದು ಜೇವರ್ ಎಕ್ಸ್‌ಪೋ ಸಂಯೋಜಕ ಸುರೇಶ್ ಗಾಂನಾ ಮತ್ತು ಬ್ರೈಡಲ್ ಸ್ಟೋರಿ ಸಂಯೋಜಕಿ ಸುಮನ್ ಸಿಂಘ್ವಿ ತಿಳಿಸಿದರು.

ಜೀತೋ ಅಪೆಕ್ಸ್ ಚೇರ್ಮನ್ ಪೃಥ್ವಿರಾಜ್ ಕೊಠಾರಿ ಅವರು 'ಮಹಿಳೆಯರು ತಮ್ಮ ಉಳಿತಾಯವನ್ನು ಚಿನ್ನ ಖರೀದಿ ಮೂಲಕ, ಕುಟುಂಬದ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ಬಲಪಡಿಸಿದ್ದಾರೆ' ಎಂದರು.

ಮಾಜಿ ಚೇರ್ಮನ್ ತೇಜರಾಜ್ ಗುಲೇಚ್ಛಾ 'ಸಾಮಾನ್ಯರ ಯೋಜನೆಗಳಲ್ಲಿ ಪ್ರಾವೀಣ್ಯದ ಅಗತ್ಯವಿದೆ' ಎಂದರು.

ಮಹಿಳಾ ಘಟಕದ ಅಧ್ಯಕ್ಷೆ ಲಕ್ಷ್ಮೀ ಬಫ್ಫನಾ, ಕೆಕೆಜಿ ಜೋನ್ ಅಧ್ಯಕ್ಷ ಪ್ರವೀಣ್ ಬಫ್ಫನಾ, ಅಪೆಕ್ಸ್ ಶ್ರಮಣ್ ಆರೋಗ್ಯಂ ಅಧ್ಯಕ್ಷ ರಮೇಶ್ ಹರಣ್, ಜೀತೋ ಅಪೆಕ್ಸ್ ಅಧ್ಯಕ್ಷ ವಿಜಯ್ ಭಂಡಾರಿ, ಮಹಿಳಾ ಘಟಕದ ಅಧ್ಯಕ್ಷರಾದ ಶೀತಲ್ ದುಗ್ಗಡ್, ಡೈರೆಕ್ಟರ್ ಇನ್–ಚಾರ್ಜ್ ಸೋನಾಲಿ ದುಗ್ಗಡ್, ಅಪೆಕ್ಸ್ ಕಾರ್ಯದರ್ಶಿ ಲಲಿತ್ ಡಾಂಗಿ ಭಾಗವಹಿಸಿದ್ದರು.

'ಜೀತೋ ಜೇವರ್ ಎಕ್ಸ್‌ಪೋ ಆ್ಯಂಡ್ ಬೈಡಲ್ ಸ್ಟೋರಿ' ಪ್ರದರ್ಶನದಲ್ಲಿ ಡಿ.ಕೆ. ಶಿವಕುಮಾರ್ ಅವರನ್ನು ಗೌರವಿಸಲಾಯಿತು

# ಐದು ಪಾಲಿಕೆ ಆಯುಕ್ತರ ನಗರ ಸಂಚಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಐದು ನಗರ ಪಾಲಿಕೆಗಳ ಆಯುಕ್ತರು ಅವರ ವ್ಯಾಪ್ತಿಯ ವಿವಿಧ ಪ್ರದೇಶಗಳಿಗೆ ಶುಕ್ರವಾರ ಬೆಳಿಗ್ಗೆಯಿಂದ ಮಧ್ಯಾಹ್ನವರೆಗೆ ಭೇಟಿ ನೀಡಿ, ರಸ್ತೆ, ಚರಂಡಿ, ಗುಂಡಿ, ಪಾದಚಾರಿ ಮಾರ್ಗ, ತ್ಯಾಜ್ಯ ವಿಲೇವಾರಿಯನ್ನು ಪರಿಶೀಲಿಸಿದರು.

ಸ್ವಚ್ಛತೆ ಬಗ್ಗೆ ಹೆಚ್ಚು ಗಮನವಹಿಸಿದ ಆಯುಕ್ತರು, ರಸ್ತೆಯಲ್ಲಿ ತ್ಯಾಜ್ಯ ಇಲ್ಲದಂತೆ ಕ್ರಮ ಕೈಗೊಳ್ಳಬೇಕು, ಪಾದಚಾರಿ ಮಾರ್ಗಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರು, ಯಲಹಂಕ ಸ್ಯಾಟಲೈಟ್ ವಾರ್ಡ್‌ನಲ್ಲಿ ಆಟೊ ಟಿಪ್ಪರ್ ಮಸ್ಟರಿಂಗ್ ಕೇಂದ್ರ ಹಾಗೂ ತಿಂಡ್ಲು ವಾರ್ಡ್‌ನಲ್ಲಿ ಪೌರಕಾರ್ಮಿಕರ ಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿ ತ್ಯಾಜ್ಯ ವಿಲೇವಾರಿಯನ್ನು ಪರಿಶೀಲಿಸಿದರು.

'ಪೌರಕಾರ್ಮಿಕರು ಸರಿಯಾದ ಸಮಯಕ್ಕೆ ಬರಬೇಕು. ಪೌರಕಾರ್ಮಿಕರು ರಸ್ತೆ ಬದಿ ಮಾತ್ರ ಗುಡಿಸುವುದಲ್ಲ, ಶೋಲ್ಡರ್ ಡ್ರೈನ್ ಹಾಗೂ ಪಾದಚಾರಿ ಮಾರ್ಗಗಳಲ್ಲೂ ಗುಡಿಸಿ ಎಲ್ಲಾ ಕಡೆ ಸ್ವಚ್ಛತೆ ಕಾಪಾಡಬೇಕು' ಎಂದರು.

ಎರಡು ಕಿ.ಮೀ. ಕಾಲ್ನಡಿಗೆಯಲ್ಲಿ ಕ್ರಮಿಸಿದ ಪೊಮ್ಮಲ ಸುನೀಲ್ ಕುಮಾರ್, ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಲು ಸೂಚಿಸಿದರು. ಹೆಚ್ಚು ಕಸ ಉತ್ಪಾದನೆಯಾಗುವ ಸ್ಥಳದಲ್ಲಿ ಸರಿಯಾಗಿ ತ್ಯಾಜ್ಯ ಸಂಗ್ರಹಿಸದವರ ಮೇಲೆ ಕ್ರಮ ಕೈಗೊಳ್ಳಬೇಕು. ಅಂಗಡಿಗಳ ಮುಂಭಾಗ ಸ್ವಚ್ಛತೆ ಕಾಪಾಡುವಂತೆ ಎಚ್ಚರಿಕೆ ನೀಡಬೇಕು. ಅದನ್ನು ಪರಿಗಣಿಸದಿದ್ದಲ್ಲಿ ದಂಡ ವಿಧಿಸಬೇಕು ಎಂದು ಸೂಚಿಸಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್ ರಮೇಶ್ ಅವರು ಜಯನಗರ ವಾರ್ಡ್ ವ್ಯಾಪ್ತಿಯಲ್ಲಿ ಮಸ್ಟರಿಂಗ್ ಕೇಂದ್ರ ಹಾಗೂ ಕಸ ಬಿಸಾಡುವ ಬ್ಲಾಕ್ ಸ್ಪಾಟ್‌ಗಳ ಪರಿಶೀಲನೆ ನಡೆಸಿದರು. 'ಸಾಮೂಹಿಕ ಸ್ವಚ್ಛತಾ ಕಾರ್ಯವನ್ನು ಪರಿಣಾಮಕಾರಿಯಾಗಿ ಮಾಡಬೇಕು. ಪಾದಚಾರಿ ಮಾರ್ಗಗಳಲ್ಲಿ ಸ್ಲ್ಯಾಬ್‌ಗಳನ್ನು ಕೂಡಲೇ ಸರಿಪಡಿಸಬೇಕು. ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ ಬಳಿ ಸ್ವಚ್ಛತೆ ಕಾಪಾಡಬೇಕು' ಎಂದು ಸೂಚಿಸಿದರು. ಜಯನಗರ ಕಾಂಪ್ಲೆಕ್ಸ್ ಬಳಿ ನಿವಾಸಿಗಳ ಜೊತೆ ಸ್ಥಳೀಯ ಸಮಸ್ಯೆಗಳ ಕುರಿತು ಚರ್ಚಿಸಿ, ಆದ್ಯತೆ ಮೇರೆಗೆ ಬಗೆಹರಿಸುವ ಭರವಸೆ ನೀಡಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅವರು ಇಬ್ಬಲೂರು ಜಂಕ್ಷನ್, ವಿಪ್ರೊ, ಸನ್ನಿ ಬ್ರೂಕ್ಸ್ ಬಳಿ ರಾಜಕಾಲುವೆ ಸಮಸ್ಯೆ ಪರಿಶೀಲನೆ ನಡೆಸಿ ಜಲಾವೃತವಾಗದಂತೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅವರು, ಕಂದಾಯ, ಕಾಮಗಾರಿ, ಹಣಕಾಸು, ಆರೋಗ್ಯ ವಿದ್ಯುತ್ ಕುರಿತು ಸಂಬಂಧಿಸಿದ ಎಂಜಿನಿಯರ್ ಮತ್ತು ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ತೆರಿಗೆ ಸಂಗ್ರಹ, ಬ್ಲ್ಯಾಕ್ ಸ್ಪಾಟ್‌ಗಳನ್ನು ಶಾಶ್ವತವಾಗಿ ನಿರ್ಮೂಲನೆ ಮಾಡುವುದು, ರಸ್ತೆ ಗುಂಡಿಗಳನ್ನು ಮುಚ್ಚುವುದು, ವಿದ್ಯುತ್ ದೀಪಗಳ ಸಮರ್ಪಕ ನಿರ್ವಹಣೆ, ಸ್ವಚ್ಛತಾ ಕಾರ್ಯಕ್ಕೆ ಸಂಬಂಧಿಸಿದಂತೆ ಎಲ್ಲಾ ಅಧಿಕಾರಿಗಳು ಅವರವರ ಜವಾಬ್ದಾರಿಗಳನ್ನು ಅರಿತು ಪ್ರತಿದಿನ ಹುಮ್ಮಸ್ಸಿನಿಂದ ಕಾರ್ಯ ನಿರ್ವಹಿಸಲು ಸೂಚಿಸಿದರು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ. ರಾಜೇಂದ್ರ ಅವರು ರಾಜಾಜಿನಗರದಲ್ಲಿ ಮರಗಳ ಮೇಲಿನ ಒಎಫ್‌ಸಿ ಕೇಬಲ್‌ಗಳನ್ನು ಪರಿಶೀಲಿಸಿ, ತೆರವುಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು

### ಒಎಫ್‌ಸಿ ಕೇಬಲ್ ತೆರವಿಗೆ ಸೂಚನೆ

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಆಯುಕ್ತ ಡಾ.ಕೆ.ವಿ. ರಾಜೇಂದ್ರ ಅವರು, ಹಾವನೂರು ವೃತ್ತ, ಬಸವೇಶ್ವರನಗರ, ಸಿದ್ಧಯ್ಯ ಪುರಾಣಿಕ ರಸ್ತೆ, 8ನೇ ಬಿ ಮುಖ್ಯರಸ್ತೆವರೆಗೆ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದರು. ರಾಜಾಜಿನಗರ ವಾರ್ಡ್ ವ್ಯಾಪ್ತಿಯಲ್ಲಿ ಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿದ್ದರು. ನೇತಾಜಿ ಸುಭಾಷ್ ಚಂದ್ರ ಉದ್ಯಾನದಲ್ಲಿ ಸ್ವಚ್ಛತೆ ಕಾಪಾಡಿ, ಸೊಳ್ಳೆಗಳ ನಿಯಂತ್ರಣಕ್ಕೆ ಫಾಗಿಂಗ್ ಮಾಡಬೇಕು. ಇಂದಿರಾ ಕ್ಯಾಂಟೀನ್‌ನಲ್ಲಿ ಗುಣಮಟ್ಟ ಕಾಪಾಡುವುದರ ಜೊತೆಗೆ ಹೆಚ್ಚಿನ ಪ್ರಮಾಣದಲ್ಲಿ ಆಹಾರ ನೀಡಲು ಕ್ರಮವಹಿಸುವಂತೆ ಸೂಚಿಸಿದರು.

ರಸ್ತೆ ಬದಿ, ಪಾದಚಾರಿ ಮಾರ್ಗಗಳು, ಮರಗಳಲ್ಲಿ ನೇತಾಡುವ ಒಎಫ್‌ಸಿ ಕೇಬಲ್‌ಗಳಿಂದ ಪಾದಚಾರಿಗಳಿಗೆ ಸಮಸ್ಯೆ ಆಗಲಿದ್ದು, ಅಂತಹ ಒಎಫ್‌ಸಿ ಕೇಬಲ್‌ಗಳನ್ನು ತೆರವುಗೊಳಿಸಬೇಕು. ಉದ್ದಿಮೆ ಪರವಾನಗಿಯನ್ನು ಪರಿಶೀಲಿಸಿ ಕಾನೂನು ಪ್ರಕಾರ ನೀಡಬೇಕು. ರಾಜಕಾಲುವೆ ಹಾಗೂ ಚರಂಡಿಗಳಲ್ಲಿ ನಿರಂತರವಾಗಿ ಹೂಳೆತ್ತಲು ಕ್ರಮಕೈಗೊಳ್ಳಿ ಎಂದು ಹೇಳಿದರು.

### ಜಿಐಎಸ್ ಮೂಲಕ ಜಿಬಿಎ ಗಡಿ ಮಾಹಿತಿ

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಐದು ನಗರ ಪಾಲಿಕೆಗಳ ಗಡಿಗಳ ಮಾಹಿತಿಯನ್ನು ಜಿಐಎಸ್ ಅಪ್ಲಿಕೇಷನ್ (https://bbmp.gov.in/gisviewer/index.html) ಮೂಲಕ ಪಡೆಯಬಹುದು. ಜಿಬಿಎ, ನಗರ ಪಾಲಿಕೆಗಳ ಗಡಿ, ವಿಧಾನಸಭೆ ಕ್ಷೇತ್ರದ ಗಡಿ, 198 ವಾರ್ಡ್‌ಗಳ ಗಡಿಯನ್ನೂ ಪಡೆಯಬಹುದು. ಇನ್ನಷ್ಟು ಸುಲಭ ಬಳಕೆಯ ಆವೃತ್ತಿಯನ್ನು ಶೀಘ್ರವೇ ಬಿಡುಗಡೆ ಮಾಡಲಾಗುತ್ತದೆ ಎಂದು ಜಿಬಿಎ ಮಾಹಿತಿ ತಂತ್ರಜ್ಞಾನ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

## 'ರೈತರೊಂದಿಗೆ ಎಚ್ಚರಿಕೆಯಿಂದ ಮಾತನಾಡಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರೈತರ ಕುರಿತಾಗಿ ಮಾತನಾಡುವಾಗ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಹಳ ಎಚ್ಚರಿಕೆಯಿಂದ ಇರಬೇಕು' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ.

'ಸ್ವಂತಕ್ಕೆ ಆತ್ಮಹತ್ಯೆ ಮಾಡಿಕೊಂಡವರನ್ನೆಲ್ಲಾ ರೈತರು ಅನ್ನೋಕಾಗತ್ತಾ ಎಂದು ಡಿ.ಕೆ. ಶಿವಕುಮಾರ್ ಅವರು ರೈತರ ಬಗ್ಗೆ ತುಚ್ಛವಾಗಿ ಮಾತನಾಡಿದ್ದಾರೆ. ದೇಶಕ್ಕೇ ಅನ್ನ ನೀಡುವ ರೈತ ಜೀವನವಿಡೀ ತಾನು ಬದುಕುವುದು, ದುಡಿಯುವುದು ಅನ್ಯರಿಗಾಗಿಯೇ ಎಂಬುದನ್ನು ಉಪ ಮುಖ್ಯಮಂತ್ರಿ ಅವರು ಮರೆಯಬಾರದು' ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಕೈಗಾರಿಕೆಗಳು, ರೈಲು, ರಸ್ತೆ, ವಿಮಾನ ನಿಲ್ದಾಣಕ್ಕೆ ಈ ಹಿಂದೆಯೂ ರೈತರ ಜಮೀನು ಪಡೆಯಲಾಗಿದೆ. ನನ್ನ ಕುಟುಂಬ ಎಚ್‌ಎಂಟಿ ಕಾರ್ಖಾನೆಗೆ ಜಮೀನು ಬಿಟ್ಟುಕೊಟ್ಟಿತ್ತು' ಎಂದಿದ್ದಾರೆ.

'ರೈತರ ಕಷ್ಟ ಮತ್ತು ಕೃಷಿ ಸಮಸ್ಯೆಗಳ ಬಗ್ಗೆ ಗೊತ್ತಿರುವ ನಿಜವಾದ ಒಕ್ಕಲಿಗ, ಅನ್ನದಾತರ ಬಗ್ಗೆ ಈ ರೀತಿಯ ದರ್ಪದ ಮಾತುಗಳನ್ನು ಎಂದಿಗೂ ಆಡುವುದಿಲ್ಲ' ಎಂದು ಹೇಳಿದ್ದಾರೆ.

'ರೈತರ ಜತೆಗೆ ಹೇಗೆ ಮಾತನಾಡಬೇಕು ಎಂಬ ಕನಿಷ್ಠ ಜ್ಞಾನವೂ ಇಲ್ಲದ ವ್ಯಕ್ತಿ ರಾಜ್ಯದ ಮುಖ್ಯಮಂತ್ರಿ ಆಗಬೇಕು ಎಂದು ಕನಸು ಕಾಣುತ್ತಿರುವುದು ಈ ನಾಡಿನ ದುರಂತ' ಎಂದಿದ್ದಾರೆ.

### 'ನಮ್ಮ ರೈತರ ಬಗ್ಗೆ ಮಾತನಾಡುವ ಹಕ್ಕಿದೆ'

'ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ ಸ್ವಾಧೀನ ವಿಚಾರದಲ್ಲಿ ರೈತರ ಬಗ್ಗೆ ನಾನು ಆಡಿದ ಮಾತನ್ನು ಬಿಜೆಪಿ ವಿವಾದ ಮಾಡುತ್ತಿದೆ. ಅವರು ನಮ್ಮ ರೈತರು, ಮಾತನಾಡುವ ಹಕ್ಕು ನನಗಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಶೇ 82ರಷ್ಟು ರೈತರು ತಮ್ಮ ಜಮೀನು ನೀಡಲು ಒಪ್ಪಿಗೆ ಸೂಚಿಸಿದ್ದಾರೆ. ಉತ್ತಮ ಪರಿಹಾರ ನೀಡಿದ್ದೇವೆ. ಉಳಿದ ಶೇ 18ರಷ್ಟು ರೈತರು ವಿರೋಧ ಮಾಡುತ್ತಿದ್ದಾರೆ. ಅವರು ಯಾವ ಪಕ್ಷದವರು, ಯಾವ ಬಾವುಟ ಹಾಕಿದ್ದರು ಎಂಬುದು ಗೊತ್ತಿದೆ' ಎಂದರು.

'ಇಡೀ ರಾಜ್ಯವನ್ನು ಗಮನದಲ್ಲಿಟ್ಟುಕೊಂಡು ಈ ಪರಿಹಾರ ರೂಪಿಸಬೇಕು. ಹೀಗಾಗಿ, ಇದಕ್ಕಿಂತ ಹೆಚ್ಚಿನ ಹಣ ನೀಡಲು ಸಾಧ್ಯವಿಲ್ಲ. ಈ ಯೋಜನೆ ಬೇಡವಾಗಿದ್ದರೆ ಎಚ್‌.ಡಿ.ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಸರ್ಕಾರದಲ್ಲಿ ಏಕೆ ಡಿನೋಟಿಫಿಕೇಷನ್ ಮಾಡಲಿಲ್ಲ? ಈ ಯೋಜನೆಗೆ ಅಧಿಸೂಚನೆ ಹೊರಡಿಸಿದ್ದು ನಾವಲ್ಲ, ಸುಪ್ರೀಂಕೋರ್ಟ್ ಅಂತಿಮ ತೀರ್ಪಿನವರೆಗೂ ಡಿನೋಟಿಫಿಕೇಷನ್ ಮಾಡಲು ಆಗದು. ಅವರು ಕೋರ್ಟ್‌ನಿಂದ ಏನಾದರೂ ಮಾಡಿಕೊಂಡು ಬರಲಿ' ಎಂದು ಪ್ರತಿಕ್ರಿಯಿಸಿದರು.

# ಶಾಲೆಗಳ ಅಭಿವೃದ್ಧಿಗೆ ಇನ್ನು 'ಸಿಎಸ್‌ಆರ್ ನಿಧಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕಾರ್ಪೊರೇಟ್ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಬಳಸಿಕೊಂಡು ಸರ್ಕಾರಿ ಶಾಲೆಗಳ ಸ್ಥಾಪನೆ, ಅಭಿವೃದ್ಧಿ ಮಾಡುವ ಕುರಿತು ಮುಂದಿನ ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸರ್ಕಾರಿ ಶಾಲೆಗಳ ಸ್ಥಾಪನೆ, ಅತ್ಯುತ್ತಮ ಕಟ್ಟಡಗಳನ್ನು ನಿರ್ಮಿಸಿ ಕೊಡುವ ಕಂಪನಿಗಳ ಹೆಸರನ್ನೇ ಶಾಲೆಗೆ ಇಡಲು ಅನುಮತಿ ನೀಡಲಾಗುವುದು. ನಗರದ ಮಾದರಿಯಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳು ಸಿಬಿಎಸ್‌ಇ ಮಾದರಿ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಲಾಗುವುದು' ಎಂದರು.

'ಈಗಾಗಲೇ ಒಂದಷ್ಟು ಶಾಲೆಗಳು ಪ್ರಾರಂಭವಾಗಿವೆ. ಮುಂದಿನ ಶೈಕ್ಷಣಿಕ ವರ್ಷದ ಒಳಗೆ 2,000 ಶಾಲೆಗಳ ನಿರ್ಮಾಣದ ಗುರಿ ಇಟ್ಟುಕೊಂಡಿದ್ದೇವೆ. ರಾಜ್ಯದಲ್ಲಿ ₹7,800 ಕೋಟಿಯಷ್ಟು ಸಿಎಸ್‌ಆರ್ ಹಣ ಲಭ್ಯವಿದೆ. ನನ್ನ ಕ್ಷೇತ್ರದಲ್ಲಿ ಟೊಯೊಟಾ ಕಂಪನಿ ತಲಾ ₹10 ಕೋಟಿ ವೆಚ್ಚದಲ್ಲಿ ಏಳು ಕೆಪಿಎಸ್ ಶಾಲೆ ಕಟ್ಟಡ ನಿರ್ಮಾಣ ಮಾಡುತ್ತಿದೆ. ಅದೇ ರೀತಿ ಇತರೆ ಉದ್ಯಮಿಗಳನ್ನೂ ಉತ್ತೇಜಿಸಲಾಗುವುದು. ಗ್ರಾಮೀಣ ಭಾಗದಲ್ಲಿ ಮೂರು ಪಂಚಾಯಿತಿಗಳಿಗೆ ಒಂದು ಕೆಪಿಎಸ್ ಶಾಲೆ ಆರಂಭಿಸಲಾಗುವುದು. ಮಕ್ಕಳು ಸರ್ಕಾರಿ ಶಾಲೆಗಳನ್ನು ತೊರೆಯದಂತೆ ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗುವುದು' ಎಂದರು.

### ಶಿಕ್ಷಕರ ಕ್ಷೇತ್ರದ ಚುನಾವಣೆಯತ್ತ ಚಿತ್ತ

ಶಿಕ್ಷಕರ ನಾಲ್ಕು ಕ್ಷೇತ್ರಗಳ (ವಿಧಾನಪರಿಷತ್) ಚುನಾವಣೆ ಮುಂದಿನ ವರ್ಷ ನಡೆಯಲಿದ್ದು, ಈ ತಿಂಗಳ ಒಳಗೆ ಆಕಾಂಕ್ಷಿಗಳಿಂದ ಅರ್ಜಿ ಆಹ್ವಾನಿಸಲಾಗುವುದು ಎಂದು ಶಿವಕುಮಾರ್ ಹೇಳಿದರು.

ನಾಮಪತ್ರ ಸಲ್ಲಿಕೆ ಆರಂಭವಾಗುವ ವೇಳೆಗೆ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಪಕ್ಷದ ಮುಖಂಡ ಜಿ.ಸಿ.ಚಂದ್ರಶೇಖರ್ ಅವರಿಗೆ ಜವಾಬ್ದಾರಿ ನೀಡಲಾಗಿದೆ. ಈಗಿನಿಂದಲೇ ಆಕಾಂಕ್ಷಿಗಳು ಕ್ಷೇತ್ರದತ್ತ ಗಮನ ಹರಿಸಬೇಕು ಎಂದು ಸೂಚಿಸಿದರು.

ಕರ್ನಾಟಕದ ಮಾಜಿ ಕುಲಪತಿಗಳ ವೇದಿಕೆಯಿಂದ ನಗರದಲ್ಲಿ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ನಡೆಯಿತು

## 'ಸ್ವಾಯತ್ತತೆ ಕಳೆದುಕೊಂಡ ವಿ.ವಿ.ಗಳು'

**ಬೆಂಗಳೂರು:** 'ರಾಜಕಾರಣಿಗಳ ಒತ್ತಡದಿಂದ ಕುಲಪತಿಗಳು ನಿರ್ಭೀತಿಯಿಂದ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ' ಎಂದು ಮಾಜಿ ಸಚಿವ ಬಿ.ಕೆ. ಚಂದ್ರಶೇಖರ್ ಬೇಸರ ವ್ಯಕ್ತಪಡಿಸಿದರು.

ಮಾಜಿ ಕುಲಪತಿಗಳ ವೇದಿಕೆ ನಗರದ ಹಳೆ ಕಾನೂನು ಕಾಲೇಜು ಭವನದಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಮಾತನಾಡಿ, 'ವಿಶ್ವವಿದ್ಯಾಲಯಗಳು ಸ್ವಾಯತ್ತೆಯನ್ನು ಕಳೆದುಕೊಂಡಿವೆ. ಪಾರದರ್ಶಕತೆ ಇಲ್ಲ. ಭ್ರಷ್ಟಾಚಾರ, ಪಕ್ಷಪಾತ ಹೆಚ್ಚಾಗಿದೆ' ಎಂದು ಹೇಳಿದರು.

ವಿಶ್ರಾಂತ ಕುಲಪತಿಗಳಾದ ಎಂ.ಎನ್. ಶೀಲವಂತರ್, ಬಿ.ಎಸ್.ಶೇರಿಗಾರ, ಜೆ.ಎಚ್.ಕುಲಕರ್ಣಿ ಅವರನ್ನು ಸನ್ಮಾನಿಸಲಾಯಿತು. ವೇದಿಕೆ ಅಧ್ಯಕ್ಷ ಚಂದ್ರಶೇಖರ ಶೆಟ್ಟಿ, ಕಾರ್ಯದರ್ಶಿ ಎಚ್. ಮಹೇಶಪ್ಪ, ಖಜಾಂಚಿ ಎಸ್.ಸಚ್ಚಿದಾನಂದ, ಕೆ.ನಾರಾಯಣಗೌಡ, ಪದ್ಮಾಶೇಖರ್, ಬಿ.ಜಿ.ಸಂಗಮೇಶ್ವರ ಇದ್ದರು.

## 'ಯುವ ಪೀಳಿಗೆಗೆ ಮಾರ್ಗದರ್ಶನ ನೀಡಿ'

**ಬೆಂಗಳೂರು:** ಯುವ ಪೀಳಿಗೆಯನ್ನು ರೂಪಿಸುವ ಹೊಣೆಗಾರಿಕೆ ಶಿಕ್ಷಕರ ಮೇಲಿದೆ ಎಂದು ಕ್ಯಾನ್ಸರ್ ತಜ್ಞೆ ವಿಜಯಲಕ್ಷ್ಮಿ ದೇಶಮಾನೆ ಹೇಳಿದರು.

ಎನ್‌ಆರ್ ಕಾಲೊನಿಯ ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜಿನಲ್ಲಿ ಶುಕ್ರವಾರ ಏರ್ಪಡಿಸಿದ್ದ ಶಿಕ್ಷಕರ ದಿನಾಚರಣೆ, ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, 'ಯುವ ಪೀಳಿಗೆಯನ್ನು ಜವಾಬ್ದಾರಿಯುತ ಪ್ರಜೆಗಳನ್ನಾಗಿಸಲು ಶಿಕ್ಷಕರು ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಎಪಿಎಸ್ ವಿಶ್ವಸ್ಥ ಸಂಸ್ಥೆ ಅಧ್ಯಕ್ಷ ವಿಷ್ಣುಭರತ್ ಆಲಂಪಲ್ಲಿ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಎ.ಪ್ರಕಾಶ್, ಟ್ರಸ್ಟಿ ಎ.ಆರ್. ಆಚಾರ್ಯ, ಎ.ಮುರಳೀಧರ್, ರಾಮಪ್ರಸಾದ್, ಆರ್. ವಿ.ವಿಜಯಭಾಸ್ಕರ್, ಎ.ಪಿ.ಆಚಾರ್ಯ ಹಾಜರಿದ್ದರು.

ಅತ್ಯುತ್ತಮ ಸಾಧನೆ ಮಾಡಿದ ಅಧ್ಯಾಪಕರನ್ನು ಗೌರವಿಸಲಾಯಿತು.

ಎನ್‌ಆರ್ ಕಾಲೊನಿಯ ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜಿನಲ್ಲಿ ಶುಕ್ರವಾರ ಏರ್ಪಡಿಸಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅಧ್ಯಾಪಕರನ್ನು ಸನ್ಮಾನಿಸಲಾಯಿತು

# ಅರಮನೆ ಮೈದಾನದಲ್ಲಿ ಇತಿಹಾಸ ಸೃಷ್ಟಿಸಿದ ಮಿಲಾದ್ ಸಮಾವೇಶ

**ಬೆಂಗಳೂರು :** ಪ್ರವಾದಿ ಮೊಹಮ್ಮದ್ ಅವರ 1500 ನೇ ಹುಟ್ಟುಹಬ್ಬದ ಪ್ರಯುಕ್ತ ಅರಮನೆ ಮೈದಾನದಲ್ಲಿ ನಡೆದ ಈದ್ ಮೀಲಾದ್ ಉನ್ ನಬಿ ಸಮಾವೇಶ ಹೊಸ ಇತಿಹಾಸ ಸೃಷ್ಟಿಸಿತಲ್ಲದೆ ಎಲ್ಲರನ್ನು ಒಗ್ಗೂಡಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಯಶಸ್ವಿಯಾದರು.

ರಾಜ್ಯದ ಇತಿಹಾಸದಲ್ಲಿ ಅರಮನೆ ಮೈದಾನದಲ್ಲಿ ಇಂತಹ ಬೃಹತ್ ಈದ್ ಮಿಲಾದ್ ಸಮಾವೇಶ ನಡೆದದ್ದು ಇದೇ ಮೊದಲು.

ಇದರ ರೂವಾರಿ ಸಚಿವ ಜಮೀರ್ ಅಹಮದ್ ಖಾನ್. ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡು ಕರ್ನಾಟಕ ಸುನ್ನಿ ಜಮಾತ್‌ನ ಎಲ್ಲ ಧರ್ಮ ಗುರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮುದಾಯದ ಪ್ರಶ್ನಾತೀತ ನಾಯಕರಾಗಿ ಹೊರಹೊಮ್ಮುವಲ್ಲಿ ಸಫಲರಾಗಿದ್ದಾರೆ.

ಈ ಮೊದಲು ಪ್ರತಿವರ್ಷ ರಾಜಧಾನಿ ಬೆಂಗಳೂರಿನ ವೈ ಎಂ ಸಿ ಎ, ಟ್ಯಾನರಿ ರಸ್ತೆ, ಖಾದ್ರಿಯ ಮಸೀದಿ ಸೇರಿದಂತೆ ಹಲವು ಕಡೆ ಮೀಲಾದ್ ಕಾರ್ಯಕ್ರಮ ನಡೆಯುತ್ತಿತ್ತು. ಈ ಬಾರಿ 1500 ನೇ ಜನ್ಮದಿನ ಪ್ರಯುಕ್ತ ಎಲ್ಲ ಸೇರಿ ಒಂದೇ ಕಡೆ ಮಾಡುವ ಬಗ್ಗೆ ಸಚಿವ ಜಮೀರ್ ಅಹಮದ್ ಖಾನ್ ಅವರು ಎರಡು ತಿಂಗಳಿನಿಂದ ನಿರಂತರ ಶ್ರಮ ವಹಿಸಿ ಎಲ್ಲ ಧರ್ಮ ಗುರುಗಳು ಹಾಗೂ ಮುಖಂಡರ ಜತೆ ಚರ್ಚಿಸಿ ಸಹಮತ ಮೂಡಿಸಿದರು. ಸಚಿವರ ಪ್ರಯತ್ನಕ್ಕೆ ಧರ್ಮ ಗುರುಗಳು ಹಾಗೂ ಮುಖಂಡರು ಸಂಪೂರ್ಣ ಬೆಂಬಲ ಸಹಕಾರ ಕೊಟ್ಟರು. ಹೀಗಾಗಿ ಕರ್ನಾಟಕ ಜಂಟಿ ಮೀಲಾದ್ ಸಮಿತಿ ವತಿಯಿಂದ ನಡೆದ ಸಮಾವೇಶ ಎಲ್ಲ ಧರ್ಮ ಗುರುಗಳು ಒಂದೇ ಕಡೆ ಸಮಾಗಮಗೊಂಡು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ಸಹಿತ ಗಣ್ಯರ ಉಪಸ್ಥಿತಿಯೊಂದಿಗೆ ಕಾರ್ಯಕ್ರಮ ಯಶಸ್ವಿಯಾಯಿತು.

**ಸರ್ವರನ್ನು ಒಗ್ಗೂಡಿಸುವಲ್ಲಿ ಯಶಸ್ವಿಯಾದ ಸಚಿವ ಜಮೀರ್ ಅಹಮದ್ ಖಾನ್**

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

# ಭೂಮಿಕಾ

ಮಹಿಳೆಯರ ಆಪ್ತ ಸಂಗಾತಿ

# ಮದುವೆ ವಯಸ್ಸಿನ ಅಂತರ ಎಷ್ಟಿದ್ದರೆ ಚಂದ?

**ದಂಪತಿಯು ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಲೈಂಗಿಕವಾಗಿ ಸಕ್ರಿಯರಾಗಿ ಇರಲು, ದಾಂಪತ್ಯದಲ್ಲಿ ಅನ್ಯೋನ್ಯತೆ ಕಾಯ್ದುಕೊಳ್ಳಲು ಇಬ್ಬರ ನಡುವಿನ ವಯಸ್ಸಿನ ಅಂತರ ಒಂದು ಮಾನದಂಡವೇ ಹೌದು. ಈ ಸಂಬಂಧದ ಅಧ್ಯಯನ ಆಧಾರಿತ ಲೇಖನ ಇದು**

• ಪ್ರೊ. ಸುತ್ತೂರು ಎಸ್. ಮಾಲಿನಿ

ಭಾರತೀಯರಲ್ಲಿ ಮದುವೆಗೆ ಅತ್ಯಂತ ಮಹತ್ವದ ಸ್ಥಾನವಿದೆ. ಹಾಗಾಗಿ, ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಾಗ ಗಂಡು, ಹೆಣ್ಣಿನ ನಡುವಿನ ವಯಸ್ಸಿನ ಅಂತರ ಪ್ರಮುಖ ಪಾತ್ರ ವಹಿಸುತ್ತದೆ. ಹಾಗಾದರೆ, ವೈಜ್ಞಾನಿಕ ದೃಷ್ಟಿಕೋನದಿಂದ ಇಬ್ಬರ ನಡುವೆ ವಯಸ್ಸಿನ ಅಂತರ ಎಷ್ಟಿದ್ದರೆ ಒಳಿತು ಎಂಬ ಪ್ರಶ್ನೆ ಮೂಡುವುದು ಸಹಜ. ಇದಕ್ಕೆ ಹಲವಾರು ಆಯಾಮಗಳಿಂದ ಉತ್ತರವನ್ನು ಪಡೆಯಬಹುದಾಗಿದೆ.

ಹಿಂದೆಲ್ಲ ಗಂಡ– ಹೆಂಡತಿಯ ನಡುವೆ ಸಾಮಾನ್ಯವಾಗಿ 10 ವರ್ಷಕ್ಕಿಂತ ಹೆಚ್ಚಿನ ಅಂತರ ಇರುತ್ತಿತ್ತು. ಸಣ್ಣ ವಯಸ್ಸಿನ ಹೆಣ್ಣುಮಕ್ಕಳಲ್ಲಿ ಫಲವತ್ತತೆ ಹೆಚ್ಚು ಎಂಬ ಕಾರಣಕ್ಕೆ ಅವರನ್ನು ಮದುವೆಗೆ ಆಯ್ಕೆ ಮಾಡಿಕೊಳ್ಳುವ ವಾಡಿಕೆಯಿತ್ತು. ಹಾಗೆಯೇ ವಯಸ್ಸಾದ ಗಂಡಸರು ಆರ್ಥಿಕವಾಗಿ ಸಬಲರಾಗಿದ್ದು, ಕುಟುಂಬದ ಹಲವು ಜವಾಬ್ದಾರಿಗಳನ್ನು ಪೂರೈಸಿ ಪ್ರೌಢರಾಗಿರುತ್ತಾರೆ ಎಂಬ ಕಾರಣಕ್ಕೆ ಮಧ್ಯವಯಸ್ಸಿನ ಗಂಡಸರಿಗೆ ಬೇಡಿಕೆ ಹೆಚ್ಚಾಯಿತು. ಬಳಿಕ ಈ ಅಂತರ ತಗ್ಗುತ್ತಾ ಬಂದು, ಎರಡರಿಂದ ಐದು ವರ್ಷಗಳ ಅಂತರ ಸೂಕ್ತ ಎಂಬ ಭಾವನೆ ಬಲವಾಯಿತು.

ಸಂಗಾತಿಗಳ ನಡುವಿನ ವಯಸ್ಸಿನ ಅಂತರದ ಬಗ್ಗೆ ನೂರಾರು ಸಂಶೋಧನೆಗಳು ನಡೆದಿವೆ. ಇವುಗಳಲ್ಲಿ ಬಹುತೇಕ ಸಂಶೋಧನೆಗಳಿಂದ ಹೊರಬಂದ ಅಭಿಪ್ರಾಯದಂತೆ, ಒಂದರಿಂದ ಮೂರು ವರ್ಷದ ಅಂತರವಿರುವ ದಂಪತಿಗಳಲ್ಲಿ ದಾಂಪತ್ಯ ಜೀವನ ಚೆನ್ನಾಗಿರುತ್ತದೆ. ಇವರ ನಡುವೆ ಉತ್ತಮ ಹೊಂದಾಣಿಕೆ ಇರುತ್ತದೆ. ಸಾಂಸಾರಿಕ ಆಗುಹೋಗುಗಳು, ಸುಖ-ದುಃಖ, ಕಷ್ಟ–ನಷ್ಟ ಎಲ್ಲವನ್ನೂ ಪರಸ್ಪರ ಹಂಚಿಕೊಳ್ಳುತ್ತಾ ಸರಿದೂಗಿಸಿಕೊಂಡು ಹೋಗುತ್ತಾರೆ. ಹಾಗೆಯೇ ದಂಪತಿಯ ನಡುವಿನ ವಯಸ್ಸಿನ ಅಂತರ 10 ವರ್ಷಕ್ಕಿಂತ ಹೆಚ್ಚಾಗಿದ್ದಲ್ಲಿ, ಆರಂಭದಲ್ಲಿ ಅವರು ಸಂತೋಷವಾಗಿ ಇರುವಂತೆ ಕಂಡರೂ ಕಾಲಕ್ರಮೇಣ ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸುವ ಸಾಧ್ಯತೆ ಇರುತ್ತದೆ. ಅದರಲ್ಲೂ ಮುಖ್ಯವಾಗಿ, ಹೆಣ್ಣಿಗೆ ಜೀವನವನ್ನು ಸಂಪೂರ್ಣವಾಗಿ ಅನುಭವಿಸುವ ಆಸೆ ಇದ್ದರೆ, ಗಂಡಸಿನ ದೇಹ ಮತ್ತು ಮನಸ್ಸು ಅದಕ್ಕೆ ಪೂರಕವಾಗಿ ಸ್ಪಂದಿಸುವುದಿಲ್ಲ. ವಯಸ್ಸಾದಂತೆ ಪುರುಷರಲ್ಲಿ ಲೈಂಗಿಕ ಸಾಮರ್ಥ್ಯ ಕುಂಠಿತವಾಗುತ್ತದೆ. ವಯೋಸಹಜವಾದ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಅತಿಯಾದ ವಯಸ್ಸಿನ ಅಂತರ ಇದ್ದಾಗ ಸಾಮಾನ್ಯವಾಗಿ ಇಬ್ಬರ ನಡುವಿನ ಅಭಿರುಚಿಯೂ ಭಿನ್ನವಾಗಿಯೇ ಇರುತ್ತದೆ. ಅಂದರೆ, ಪತಿಗೆ ರೇಖಾ, ಜಯಾಬಾದುರಿ ಕಾಲದ ಚಿತ್ರನಟ–ನಟಿಯರು ಇಷ್ಟವಾದರೆ, ಪತ್ನಿಗೆ ಜಾಹ್ನವಿ ಕಪೂರ್, ರಶ್ಮಿಕಾ ಮಂದಣ್ಣ ಅಂತಹವರು ಹೆಚ್ಚು ಪ್ರಿಯವಾಗಬಹುದು! ಹೆಂಡತಿಗೆ ವಾರಾಂತ್ಯದಲ್ಲಿ ಸಿನಿಮಾ, ಮಾಲ್ ಸುತ್ತುತ್ತಾ ಹೋಟೆಲ್ ಊಟದ ರುಚಿ ನೋಡುವ ಬಯಕೆಯಾದರೆ, ಗಂಡನಿಗೆ ವಿಶ್ರಾಂತಿ ಮುಖ್ಯವಾಗಿ, ಮನೆಯ ಊಟವೇ ಹೆಚ್ಚು ರುಚಿಸಬಹುದು.

ಅದರಲ್ಲೂ ಸಣ್ಣ ವಯಸ್ಸಿನ ಹೆಂಡತಿಗೆ ಬಯಕೆಗಳು ಹೆಚ್ಚು. ಆದರೆ ವಯಸ್ಸಾದ ಗಂಡಸರಿಗೆ ಆ ಬಯಕೆಗಳನ್ನು ಪೂರೈಸುವ ಚೈತನ್ಯ ಇರುವುದಿಲ್ಲ. ಲೈಂಗಿಕ ಕಾಮನೆಯು ಒಡಲನ್ನು ಸುಡುವ ಬೆಂಕಿಯಿದ್ದಂತೆ. ದೀರ್ಘಕಾಲದ ಈ ಕಾಮನೆಯು ಅವರನ್ನು ಅಡ್ಡದಾರಿ ಹಿಡಿಯುವಂತೆ ಪ್ರೇರೇಪಿಸಬಹುದು. ವಯಸ್ಸಾದಂತೆ ಗಂಡನಿಗೆ ಜೀವನದಲ್ಲಿ ನಿರಾಸಕ್ತಿ ಮೂಡುವ ಸಾಧ್ಯತೆ ಇರುತ್ತದೆ. ದುರದೃಷ್ಟವಶಾತ್, ಆಗತಾನೇ ಸಂಸಾರದಲ್ಲಿ ಸುಖ ಕಾಣತೊಡಗುವ ಹೆಂಡತಿಗೆ ಅಷ್ಟು ಬೇಗ ಆ ಸುಖವನ್ನು ಕಳೆದುಕೊಳ್ಳುವ ಮನಸ್ಸಿರುವುದಿಲ್ಲ.

ಹತ್ತು ವರ್ಷಕ್ಕಿಂತ ಹೆಚ್ಚು ವಯಸ್ಸಿನ ಅಂತರವಿರುವ ದಂಪತಿಗಳಲ್ಲಿ ವಿವಾಹ ವಿಚ್ಛೇದನದ ಪ್ರಮಾಣ ಅಧಿಕ ಎಂಬುದನ್ನು ಕೆಲವು ಸಂಶೋಧನಾ ವರದಿಗಳು ದೃಢಪಡಿಸಿವೆ. ಅಮೆರಿಕದ ಎಮೋರಿ ವಿಶ್ವವಿದ್ಯಾಲಯವು ಸುಮಾರು 3,000 ದಂಪತಿಗಳ ವಯಸ್ಸಿನ ಅಂತರವನ್ನು ಮಾನದಂಡವಾಗಿರಿಸಿ ಅಧ್ಯಯನವೊಂದನ್ನು ನಡೆಸಿದೆ. ಅದರಿಂದ ಈ ವಿಚಾರ ತಿಳಿದುಬಂದಿದೆ.

ಜಗತ್ತಿನ ಪೂರ್ವ ಭಾಗದ ರಾಷ್ಟ್ರಗಳಲ್ಲಿ ಹಿಂದೆಲ್ಲ ದಂಪತಿಗಳ ಮಧ್ಯೆ ವಯಸ್ಸಿನ ಅಂತರ ಹೆಚ್ಚಾಗಿರುವುದು ಸಾಮಾನ್ಯ ಸಂಗತಿ ಆಗಿತ್ತಾದರೂ ಅವರ ದಾಂಪತ್ಯವು ಸಂಸ್ಕೃತಿ ಮತ್ತು ಸಂಪ್ರದಾಯದ ಆಧಾರದ ಮೇಲೆ ನಿಂತಿದ್ದರಿಂದ ಬದುಕು ಸುಖಮಯವಾಗಿಯೇ ಇರುತ್ತಿತ್ತು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಗಂಡು– ಹೆಣ್ಣಿನ ನಡುವೆ ವಯಸ್ಸಿನ ಅಂತರ ಕಡಿಮೆ. ಆದರೆ ವೈಜ್ಞಾನಿಕವಾಗಿ ಪ್ರಜನನಶಾಸ್ತ್ರದ ಪ್ರಕಾರ, ದಂಪತಿಯ ಮಧ್ಯೆ ಎರಡರಿಂದ ಐದು ವರ್ಷ ವಯಸ್ಸಿನ ಅಂತರ ಸೂಕ್ತವಾದದ್ದು. ಇದನ್ನು ಪುಷ್ಟೀಕರಿಸಬಹುದಾದ ಕಾರಣಗಳು ಅನೇಕ. ಮೊದಲನೆಯದಾಗಿ, 20ರ ಆಸುಪಾಸಿನಲ್ಲಿ ಹೆಣ್ಣುಮಕ್ಕಳಲ್ಲಿ ಫಲವತ್ತತೆ ಮಟ್ಟ ಅತ್ಯುತ್ತಮವಾಗಿರುತ್ತದೆ. 30ರ ನಂತರ ಅದು ಕ್ಷೀಣಿಸುತ್ತಾ ಮುಂದುವರಿಯುತ್ತದೆ. ಆದರೆ ಪುರುಷರಲ್ಲಿ ಫಲವತ್ತತೆಯು 50 ವರ್ಷಗಳವರೆಗೂ ಹಾಗೆಯೇ ಮುಂದುವರಿಯುತ್ತದೆ. ನಂತರ ವೀರ್ಯಾಣುವಿನ ಕಾರ್ಯಕ್ಷಮತೆ ಕ್ಷೀಣಿಸಿದರೂ ಪ್ರಜನನ ಕ್ರಿಯೆಯಲ್ಲಿ ಅವರು ಪಾಲ್ಗೊಳ್ಳಬಹುದಾಗಿದೆ.

ಭಾವನಾತ್ಮಕ ಪ್ರೌಢಿಮೆ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಪುರುಷ ತೆಗೆದುಕೊಳ್ಳುವ ಸಮಯ ಹೆಚ್ಚು. ಆದರೆ ಮಹಿಳೆಯರು ಶೀಘ್ರಗತಿಯಲ್ಲಿ ಇವುಗಳ ಮೇಲೆ ಪ್ರೌಢಿಮೆ ಸಾಧಿಸುತ್ತಾರೆ. ಹಾಗಾಗಿ, ಎರಡರಿಂದ ಐದು ವರ್ಷ ಅಂತರವಿರುವ ದಂಪತಿಯು ಪೋಷಕರಾಗಿ ತೆಗೆದುಕೊಳ್ಳಬಹುದಾದ ಜವಾಬ್ದಾರಿ ಉತ್ತಮವಾಗಿರುತ್ತದೆ. ಇಬ್ಬರೂ ದೈಹಿಕ ಮತ್ತು ಮಾನಸಿಕವಾಗಿ ಸಿದ್ಧರಾಗಿರುವುದರಿಂದ, ಮಕ್ಕಳನ್ನು ಪಡೆಯುವ, ಪೋಷಿಸುವ ಕೆಲಸ ಸುಗಮವಾಗುತ್ತದೆ. ವಯಸ್ಸಿನ ಅಂತರ ಅತಿಯಾಗಿದ್ದಾಗ, ಮಕ್ಕಳನ್ನು ಪಡೆಯುವುದು ಹಾಗೂ ಅವರ ಪಾಲನೆ ಕಷ್ಟಕರ. ದಂಪತಿಗಳ ಭಿನ್ನ ಅಭಿರುಚಿ, ಹವ್ಯಾಸಗಳಿಂದಾಗಿ ಸಂಸಾರದಲ್ಲಿ ಅಪಸ್ವರ ಉಂಟಾಗಬಹುದು. ವಯಸ್ಸಿನ ಅಂತರ ಸೂಕ್ತವಾಗಿದ್ದಾಗ ಅವರು ದೈಹಿಕ, ಮಾನಸಿಕ, ಸಾಮಾಜಿಕ, ಲೈಂಗಿಕ ಮತ್ತು ಆಧ್ಯಾತ್ಮಿಕವಾಗಿ ಆರೋಗ್ಯವಂತರಾಗಿ ಇರುತ್ತಾರೆ.

ಇದೆಲ್ಲದರ ನಡುವೆಯೂ ಕೆಲವು ಅಪವಾದಗಳು ಇದ್ದೇ ಇರುತ್ತವೆ. ಎಷ್ಟೇ ವಯಸ್ಸಿನ ಅಂತರ ಇದ್ದರೂ, ಗಂಡನಿಗಿಂತ ಹೆಂಡತಿಯ ವಯಸ್ಸು ಹೆಚ್ಚಾಗಿ ಇದ್ದಾಗಲೂ ಅಂತಹವರು ವಯಸ್ಸಿನ ಅಂತರ ಕಡಿಮೆ ಇರುವ ದಂಪತಿಗಳಿಗಿಂತಲೂ ಅತ್ಯುತ್ತಮವಾಗಿ ಬದುಕುತ್ತಿರುವುದನ್ನು ನಮ್ಮ ಸುತ್ತಮುತ್ತ ಕಾಣುತ್ತೇವೆ.

ಲೇಖಕಿ: ಮುಖ್ಯಸ್ಥೆ, ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾಲಯ

## ಹಿರಿ ಹಿರಿ ಹೆಂಡತಿ

ಕೊರಿಯಾದಲ್ಲಿ ನಡೆದ ಅಧ್ಯಯನವೊಂದು ಪುರುಷನಿಗಿಂತ ವಯಸ್ಸಿನಲ್ಲಿ ಅತ್ಯಂತ ಹೆಚ್ಚು ಹಿರಿಯರಾದ ಮಹಿಳೆಯರ ಮನಃಸ್ಥಿತಿ ಕುರಿತದ್ದಾಗಿದೆ. ಇದು, ಪುರುಷ ಮತ್ತು ಮಹಿಳೆಯರ ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ. ಹೆಣ್ಣಿನ ವಯಸ್ಸು ಗಂಡಿಗಿಂತ ಅತ್ಯಂತ ಹೆಚ್ಚಾಗಿದ್ದಾಗ ದಾಂಪತ್ಯದಲ್ಲಿ ಅಪಸ್ವರ ಮೂಡಬಹುದು ಮತ್ತು ಆ ಮಹಿಳೆ ನಂತರದ ದಿನಗಳಲ್ಲಿ ಖಿನ್ನತೆಗೆ ಒಳಗಾಗಬಹುದು. ಅಲ್ಲದೆ ಆಕೆಯಲ್ಲಿ ಒತ್ತಡ, ನಕಾರಾತ್ಮಕ ಧೋರಣೆ ಕಾಣಿಸಿಕೊಂಡು, ಸಾಮಾಜಿಕ ಒಳಗೊಳ್ಳುವಿಕೆಯಲ್ಲಿ ಯಾವಾಗಲೂ ಹಿಂದೆ ಉಳಿಯುತ್ತಾಳೆ. ತನ್ನ ಬಾಹ್ಯ ಸೌಂದರ್ಯದ ಬಗ್ಗೆ ಕೀಳರಿಮೆ ಮತ್ತು ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ಸಂಗಾತಿಯೊಂದಿಗಿನ ಅತಿಯಾದ ವಯಸ್ಸಿನ ಅಂತರವು ಮಹಿಳೆಯ ಪ್ರಜನನ ಪ್ರಕ್ರಿಯೆಯ ಮೇಲೂ ನೇರ ಪರಿಣಾಮ ಬೀರುತ್ತದೆ.

## ಯುವಜನರ ಆಯ್ಕೆ ಯಾವುದು?

ಆಸ್ಟ್ರೇಲಿಯಾದಲ್ಲಿ ನಡೆದ ಸಂಶೋಧನೆಯೊಂದರ ಪ್ರಕಾರ, ದಂಪತಿಯ ನಡುವೆ ವಯಸ್ಸಿನ ಅಂತರ ಕಡಿಮೆ ಇದ್ದಾಗ ಅವರಲ್ಲಿ ಲೈಂಗಿಕ ಸಂತೃಪ್ತಿಯ ಭಾವನೆ ಹೆಚ್ಚಿರುತ್ತದೆ. ಆದರೆ ವಯಸ್ಸಿನ ಅಂತರ ಅಧಿಕವಾಗಿದ್ದಾಗ, ಮದುವೆಯಾದ ಆರರಿಂದ ಹತ್ತು ವರ್ಷಗಳ ಬಳಿಕ ಅಂತಹ ಭಾವನೆ ಕಡಿಮೆಯಾಗುತ್ತಾ ಬಂದು, ದಾಂಪತ್ಯದಲ್ಲಿ ಬಿರುಕು ಮೂಡಬಹುದು.

ವಿವಿಧ ಬಗೆಯ ಸಂಸ್ಕೃತಿ ಹೊಂದಿರುವ 37 ಜನಾಂಗಗಳನ್ನು ಸಂಶೋಧನೆಗೆ ಒಳಪಡಿಸಿದಾಗ ಕಂಡುಬಂದ ವಿಚಾರವೊಂದು ಕುತೂಹಲಕಾರಿಯಾಗಿದೆ. ಅದೆಂದರೆ, ಯುವಕರು ತಮಗಿಂತ ಎರಡು ಅಥವಾ ಮೂರು ವರ್ಷ ಸಣ್ಣವರಾದ ಯುವತಿಯರನ್ನು ಆಯ್ಕೆ ಮಾಡಿಕೊಳ್ಳಲು ಬಯಸಿದ್ದರೆ, ಯುವತಿಯರು ತಮಗಿಂತ ಮೂರ್ನಾಲ್ಕು ವರ್ಷ ದೊಡ್ಡವರನ್ನು ಮದುವೆಯಾಗಲು ಇಚ್ಛೆಪಟ್ಟಿದ್ದರು.

## ಗಂಡನಿಗೆ 29 ಹೆಂಡತಿಗೆ 54!

**ವಿದೇಶ** ಪ್ರವಾಸ ಕೈಗೊಂಡಿದ್ದ ವೇಳೆ, ವಿಮಾನದಿಂದ ಕೆಳಗಿಳಿಯುವಾಗ ಪತ್ನಿಯಿಂದ ಸೋಟೆಗೆ ತಿವಿಸಿಕೊಂಡು ಇತ್ತೀಚೆಗೆ ಜಗತ್ತಿನಾದ್ಯಂತ ಸುದ್ದಿಯಾದವರು ಫ್ರಾನ್ಸ್‌ನ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್. ಆಗ ಅವರು ಮೂತಿಗೆ ತಿವಿಸಿಕೊಂಡದ್ದಕ್ಕಿಂತ ಹೆಚ್ಚಾಗಿ ಎಲ್ಲರ ಗಮನಸೆಳೆದದ್ದು ಅವರಿಬ್ಬರ ನಡುವಿನ ವಯಸ್ಸಿನ ಅಂತರ. ಮ್ಯಾಕ್ರನ್ ಅವರಿಗಿಂತ ಅವರ ಪತ್ನಿ ಬ್ರಿಜೆಟ್ ಬರೋಬ್ಬರಿ 25 ವರ್ಷ ದೊಡ್ಡವರು!

ಹೈಸ್ಕೂಲ್‌ನಲ್ಲಿದ್ದಾಗ ತಮಗೆ ಫ್ರೆಂಚ್ ಕಲಿಸುತ್ತಾ, ಶಾಲೆಯ ಆವರಣದಲ್ಲಿ ಸಂಜೆ ನಾಟಕಾಭ್ಯಾಸ ಮಾಡಿಸುತ್ತಿದ್ದ 39 ವರ್ಷದ ಶಿಕ್ಷಕಿ ಬ್ರಿಜೆಟ್ ಅವರೊಂದಿಗೆ ಪ್ರೇಮಾಂಕುರವಾದಾಗ ಮ್ಯಾಕ್ರನ್ ಅವರ ವಯಸ್ಸು 15. ಮದುವೆಯಾಗಿ ಮೂವರು ಮಕ್ಕಳ ತಾಯಿಯಾಗಿದ್ದ ಬ್ರಿಜೆಟ್ ಜೊತೆಗಿನ ಒಡನಾಟ ಮಿತಿಮೀರಿದಾಗ, ವಿಷಯ ಮ್ಯಾಕ್ರನ್ ಮನೆಯವರ ಕಿವಿ ಮುಟ್ಟಲು ತಡವಾಗಲಿಲ್ಲ. ಮೊದಲಿಗೆ, ಮಗ ಪ್ರೀತಿಯಲ್ಲಿ ಬಿದ್ದಿರುವುದು ಆತನ ಸಹಪಾಠಿ ಆಗಿದ್ದ ಬ್ರಿಜೆಟ್ ಪುತ್ರಿಯ ಜೊತೆ ಎಂದೇ ಪೋಷಕರು ಭಾವಿಸಿದ್ದರು. ನಿಜ ಅರಿತಾಗ ಆಘಾತಕ್ಕೊಳಗಾದ ಅವರು, ಮಗನನ್ನು ದೂರದ ಪ್ಯಾರಿಸ್‌ಗೆ ಓದಲು ಕಳಿಸಿ ಇಬ್ಬರನ್ನೂ ದೂರ ಮಾಡಲು ನೋಡಿದರು. ಆದರೆ ಅದನ್ನು ಲೆಕ್ಕಿಸದ ಈ ಜೋಡಿ, ಪತ್ರದ ಮೂಲಕ ಒಲವು ನಿವೇದಿಸಿಕೊಳ್ಳುತ್ತಾ ಎಂದಿನಂತೆ ಪ್ರೇಮಲೋಕದಲ್ಲಿ ತೇಲಿತು.

‘ಮತ್ತೆ ಊರಿಗೆ ಬಂದು ನಿನ್ನನ್ನು ವರಿಸುವೆ’ ಎಂದು ಆಗ ಕೊಟ್ಟ ಮಾತಿಗೆ ತಪ್ಪದೆ ವಾಪಸ್ ಬಂದು ಮದುವೆಯಾದಾಗ ಮ್ಯಾಕ್ರನ್‌ಗೆ 29, ಬ್ರಿಜೆಟ್‌ಗೆ 54 ವರ್ಷವಾಗಿತ್ತು. ಮೊದಲ ಬಾರಿ ಬ್ರಿಜೆಟ್ ಅವರನ್ನು ಭೇಟಿಯಾದಾಗ ಮ್ಯಾಕ್ರನ್ 39 ವರ್ಷದವರು. ಅದೇ 39 ವರ್ಷಕ್ಕೆ ಫ್ರಾನ್ಸ್ ಅಧ್ಯಕ್ಷರಾಗುವ ಮೂಲಕ, ದೇಶದ ಅತಿ ಕಿರಿಯ ವಯಸ್ಸಿನ ಅಧ್ಯಕ್ಷ ಎಂಬ ಹಿರಿಮೆಗೆ ಮ್ಯಾಕ್ರನ್ ಪಾತ್ರರಾದರು. ಈಗ ಮ್ಯಾಕ್ರನ್‌ಗೆ 47 ವರ್ಷವಾಗಿದ್ದು, ಅವರ ಮಲಮಕ್ಕಳು ಕ್ರಮವಾಗಿ 52, 50 ಮತ್ತು 48 ವರ್ಷ ಪ್ರಾಯದವರು.

ಬಹಿರಂಗವಾಗಿ ಪರಸ್ಪರ ಒಳ್ಳೆಯ ಅಭಿಪ್ರಾಯಗಳನ್ನೇ ವ್ಯಕ್ತಪಡಿಸುತ್ತ ಬಂದಿದ್ದರೂ ರಾಜಕೀಯ ವಿವಾದ, ಸಾರ್ವಜನಿಕರ ಅವಹೇಳನ ಮತ್ತು ತಾವಿಬ್ಬರೂ ಜೊತೆಗಿದ್ದಾಗಿನ ವಿಡಿಯೊಗಳು ಬೇಡದ ಕಾರಣಕ್ಕೆ ಆಗಾಗ ವೈರಲ್ ಆಗುವುದರಿಂದ ತಪ್ಪಿಸಿಕೊಳ್ಳಲು ಈ ಜೋಡಿಗೆ ಸಾಧ್ಯವಾಗಿಲ್ಲ. ದುರ್ವರ್ತನೆ ತೋರಿದರೆ, ವಿದ್ಯಾರ್ಥಿ ಎಷ್ಟೇ ದೊಡ್ಡವನಾಗಿದ್ದರೂ ಎಂತಹ ಹುದ್ದೆಯಲ್ಲೇ ಇದ್ದರೂ ಶಿಕ್ಷಕಿಯಿಂದ ಹೊಡೆತ ತಪ್ಪಿದ್ದಲ್ಲ ಎಂಬ ಕುಹಕದ ಮಾತೂ ಈ ಸಂದರ್ಭದಲ್ಲಿ ಕೇಳಿಬಂತು!

## ದಾಂಪತ್ಯ ಸುಖಮಯ ಆಗಲು...

**• ನನಗೆ 29 ವರ್ಷ, ನನ್ನ ಪತಿಗೆ 35 ವರ್ಷ. ಮದುವೆಯಾಗಿ ಎರಡು ವರ್ಷವಾಗಿದೆ. ನಮ್ಮ ನಡುವೆ ಒಂದು ಬಾರಿಯೂ ಸರಿಯಾಗಿ ಲೈಂಗಿಕ ಸಂಪರ್ಕ ಆಗಿಲ್ಲ. ನನ್ನ ಯೋನಿಯ ಬಾಯಿ ಚಿಕ್ಕದಿದೆ ಎಂದು ಅವರು ಹೇಳುತ್ತಾರೆ. ಲೈಂಗಿಕ ತಜ್ಞರನ್ನು ಭೇಟಿಯಾಗಿದ್ದೆವು. ‘ನೀವು ಲೈಂಗಿಕ ಸಂಪರ್ಕದಲ್ಲಿ ತೊಡಗಿದಾಗ ಮಾತ್ರ ಯೋನಿ ಮಾರ್ಗ ಅಗಲವಾಗುತ್ತದೆ’ ಎಂದು ತಿಳಿಸಿದ ಅವರು, ಒಂದು ಜೆಲ್ ಬಳಸಲು ಸೂಚಿಸಿದ್ದಾರೆ. ಆದರೆ ನಮ್ಮ ಮನೆಯವರಿಗೆ ಲೈಂಗಿಕ ಕ್ರಿಯೆಯಲ್ಲಿ ಆಸಕ್ತಿ ಇಲ್ಲ. ‘ನನಗೆ ಆಯಾಸ, ಸುಸ್ತು’ ಎಂದು ಹೇಳುತ್ತಾ ಮಲಗಿಬಿಡುತ್ತಾರೆ. ದಯವಿಟ್ಟು ಪರಿಹಾರ ತಿಳಿಸಿ.**

ನಂದನಾ, ಬೆಂಗಳೂರು

ಲೈಂಗಿಕ ಕ್ರಿಯೆಯು ಸಂತಾನೋತ್ಪತ್ತಿಗಾಗಿ ಅಷ್ಟೇ ಅಲ್ಲ, ದೈಹಿಕ, ಮಾನಸಿಕ ಚೇತನವನ್ನು ಉಂಟು ಮಾಡಿ, ದಾಂಪತ್ಯ ಸಂಬಂಧಕ್ಕೆ ಹೊಸ ದಿಕ್ಕನ್ನು ನೀಡಲು ಅತಿ ಅವಶ್ಯ ಅಲ್ಲವೇ? ನಿಮ್ಮ ಪತಿಗೇನಾದರೂ ಶಿಶ್ನ ನಿಮಿರುವಿಕೆಯಲ್ಲಿ ತೊಂದರೆ ಇದ್ದು, ಆ ಬಗ್ಗೆ ಕೂಲಂಕಷವಾಗಿ ತಪಾಸಣೆ ನಡೆಸಲಾಗಿದೆಯೇ? ನಿಮಿರು ದೌರ್ಬಲ್ಯಕ್ಕೆ ಸಾಮಾನ್ಯ ಕಾರಣವಾದ ಮಧುಮೇಹ, ಏರು ರಕ್ತದೊತ್ತಡ, ಅತಿಯಾದ ಬೊಜ್ಜು, ಕೊಲೆಸ್ಟ್ರಾಲ್ ಹೆಚ್ಚುವಿಕೆ, ಅತಿ ಧೂಮಪಾನದಂತಹ ಕಾರಣಗಳಿವೆಯೇ ಎಂದು ಪರೀಕ್ಷಿಸಿಕೊಳ್ಳುವ ಅಗತ್ಯವಿದೆ. ಅವರು ಯಾವುದಾದರೂ ಮಾನಸಿಕ ಸಮಸ್ಯೆ, ಮೂರ್ಛೆರೋಗದಂತಹ ಕಾಯಿಲೆಗಳಿಗೆ ಮಾತ್ರೆಗಳನ್ನು ಸೇವಿಸುತ್ತಿದ್ದಾರೆಯೇ ವಿಚಾರಿಸಿ.



ಸ್ಪಂದನ
ಡಾ. ವೀಣಾ ಎಸ್. ಭಟ್

ಇಂದು ಭಾರತೀಯರಲ್ಲಿ ಶೇಕಡ 10ಕ್ಕೂ ಹೆಚ್ಚು ಪುರುಷರಲ್ಲಿ 30–40ರ ವಯಸ್ಸಿನಲ್ಲಿ ನಿಮಿರು ದೌರ್ಬಲ್ಯ ಇರುವುದು ಸಾಮಾನ್ಯವಾಗಿದೆ. ಅದಕ್ಕಾಗಿ ಮೊದಲು ನೀವಿಬ್ಬರೂ ಮುಜುಗರದ ಪರದೆ ಸರಿಸಿ, ಇರುವ ಸಮಸ್ಯೆಯ ಬಗ್ಗೆ ಮತ್ತೊಮ್ಮೆ ಮುಕ್ತವಾಗಿ ಚರ್ಚಿಸಿ. ಅವರಿಗಷ್ಟೇ ಅಲ್ಲ ನಿಮಗೂ ಏನಾದರೂ ಲೈಂಗಿಕ ಕ್ರಿಯೆಯ ಬಗ್ಗೆ ಆತಂಕ ಇದ್ದು, ಯೋನಿ ಸಂಕುಚನ ಅಥವಾ ವಾಜಿನಿಸ್ಮಸ್‌ನಂತಹ ಸಮಸ್ಯೆ ಇರಬಹುದು. ಅದರಿಂದಾಗಿ ಅವರಿಗೆ ನಿಮ್ಮ ಸಹಕಾರ ಸಿಗದೇ ಅವರು ಲೈಂಗಿಕ ಕ್ರಿಯೆಯಲ್ಲಿ ನಿರಾಸಕ್ತಿಗೆ ಒಳಗಾಗಿದ್ದಾರೆಯೇ ಅಥವಾ ಅವರಲ್ಲೇ ಸಮಸ್ಯೆ ಇದೆಯೇ ಎಂದು ಮೂಲ ಕಾರಣವನ್ನು ಕಂಡುಹಿಡಿಯಬೇಕಾಗುತ್ತದೆ, ಇಬ್ಬರೂ ಆಪ್ತ ಸಮಾಲೋಚನೆಗೆ ಒಳಗಾಗಬೇಕಾಗುತ್ತದೆ. ಇಂದು ವೈದ್ಯಕೀಯ ವಿಜ್ಞಾನವು ಲೈಂಗಿಕ ವಿಜ್ಞಾನದ ಚಿಕಿತ್ಸೆಯಲ್ಲಿ ಬಹಳಷ್ಟು ಪ್ರಗತಿ ಸಾಧಿಸಿದೆ. ವಿವಿಧ ರೀತಿಯ ಮಾತ್ರೆಗಳು, ಇಂಜೆಕ್ಷನ್ ಹಾಗೂ ಶಾಕ್‌ವೇವ್‌ನಂತಹ ಚಿಕಿತ್ಸೆಗಳೆಲ್ಲ ಲಭ್ಯವಿವೆ. ನೀವು ತಪ್ಪದೇ ಇನ್ನೊಮ್ಮೆ ಲೈಂಗಿಕ ತಜ್ಞರನ್ನು ಭೇಟಿ ಮಾಡಿ, ನಿಮ್ಮ ಆತಂಕ, ಹಿಂಜರಿಕೆಯನ್ನೆಲ್ಲ ಬದಿಗಿಟ್ಟು ಮುಕ್ತವಾಗಿ ಚರ್ಚಿಸಿ. ಸೂಕ್ತ ಚಿಕಿತ್ಸೆ ಪಡೆದುಕೊಂಡು ತೃಪ್ತಿಕರ ಲೈಂಗಿಕ ಜೀವನ ನಡೆಸುವಂತಾದರೆ ಕೌಟುಂಬಿಕ ಸಾಮರಸ್ಯ, ಭವಿಷ್ಯದ ದಾಂಪತ್ಯ ಜೀವನ ಎಲ್ಲವೂ ಸುಖಮಯವಾಗುತ್ತದೆ.

# ರಾಗಿ ಡಿಸರ್ಟ್‌: ಬಂತು ಬಹುಮಾನ

**ಅಡುಗೆಯೆಂಬ** ಕಲೆಯನ್ನು ಕರಗತ ಮಾಡಿಕೊಂಡವರ ಬದುಕಿನ ರುಚಿ ಅಷ್ಟು ಸುಲಭಕ್ಕೆ ಕೆಡದು ಎಂಬ ಮಾತಿದೆ. ರುಚಿಕಟ್ಟುತನವನ್ನು ಅರ್ಥಮಾಡಿಕೊಳ್ಳುತ್ತಲೇ ಎಲ್ಲದರಲ್ಲಿಯೂ ಅಚ್ಚುಕಟ್ಟುತನ ಕಲಿಯುವ, ಎಷ್ಟು ಬೆರೆತರೆ, ಎಷ್ಟು ಬೆಂದರೆ ಅಡುಗೆ ಘಮಗುಡಬಹುದು ಎಂಬುದನ್ನು ಅನಾಯಾಸವಾಗಿ ಅರ್ಥ ಮಾಡಿಕೊಳ್ಳಲು ಅಡುಗೆ ಮನೆ ಎಂದಿಗೂ ಒಂದು ಪಾಠಶಾಲೆಯೇ ಹೌದು.

‘ಪ್ರಜಾವಾಣಿ’ಯ ಕರುನಾಡ ಸವಿಯೂಟ 4ನೇ ಆವೃತ್ತಿಯ ಅಡುಗೆ ಸ್ಪರ್ಧೆಯಲ್ಲಿ ‘ರಾಗಿ ಡಿಸರ್ಟ್’ ಸಿದ್ಧಪಡಿಸಿ ಮೊದಲ ಬಹುಮಾನ ಪಡೆದ ಬೆಂಗಳೂರಿನ ಎಚ್. ಎಲಿಜಬೆತ್ ಅವರೊಂದಿಗೆ ‘ಭೂಮಿಕಾ’ ನಡೆಸಿದ ಚಿಟ್‌ಚಾಟ್ ಇಲ್ಲಿದೆ:

**• ಇಷ್ಟಪಟ್ಟು ಮಾಡುವ ಅಡುಗೆಗಳು ಯಾವುವು?**

ಮಾಂಸದ ಖಾದ್ಯಗಳನ್ನು ಬಹಳ ಇಷ್ಟಪಟ್ಟು ಮಾಡುತ್ತೇನೆ. ಇದಲ್ಲದೇ ಮಾವಿನ ಹಣ್ಣಿನ ಪುಡ್ಡಿಂಗ್, ಚಿಲ್ಲಿ ಚಿಕನ್, ಬಿರಿಯಾನಿ, ಬಗೆ ಬಗೆಯ ಸಿಹಿತಿಂಡಿಗಳು, ಅರೇಬಿಕ್ ಫುಡ್‌ಗಳು, ಕೇಕ್‌ಗಳು, ಮ್ಯಾಕ್ರೊನೀಸ್, ಡೋನಟ್, ಪಿಜ್ಜಾ, ಬಗೆ ಬಗೆಯ ಪುಡ್ಡಿಂಗ್‌ಗಳನ್ನು ಮಾಡುತ್ತೇನೆ.

**• ಯಾವಾಗಿನಿಂದ ಅಡುಗೆಯಲ್ಲಿ ಆಸಕ್ತಿ ಬಂತು?**

ನನ್ನ ಅಮ್ಮ ಸೌದಿ ಅರೇಬಿಯಾದಲ್ಲಿ ಕೆಲಸದಲ್ಲಿದ್ದರು. ನಾವು ಹೆಣ್ಣುಮಕ್ಕಳೆಲ್ಲ ಬೆಂಗಳೂರಿನಲ್ಲಿ ತಂದೆಯ ಜತೆ ಬೆಳೆದೆವು. ಹಾಗಾಗಿ, ಅಡುಗೆ ಮಾಡುವುದು ಅನಿವಾರ್ಯವಾಯಿತು. ಹದಿನೈದನೇ ವಯಸ್ಸಿಗೆ ನಾನು ಚಪಾತಿ ಮತ್ತು ಬ್ಲ್ಯಾಕ್‌ಟೀ ಮಾಡಿದ್ದರ ನೆನಪು. ಒಂದೊಂದು ಚಪಾತಿಯೂ ಒಂದೊಂದು ಆಕಾರ ಬಂದಿತ್ತು.

ರಾಗಿ ಡಿಸರ್ಟ್‌ನೊಂದಿಗೆ ಎಲಿಜಬೆತ್

ಮದುವೆಯಾದ ನಂತರ ಚಿಕ್ಕಮಕ್ಕಳ ಆರೈಕೆ ಮಾಡುವ ಕೆಲಸಕ್ಕೆಂದು ಕುವೈತ್‌ಗೆ ಹೋದೆ. ಆ ಮಕ್ಕಳು ದೊಡ್ಡವರಾದ ಮೇಲೆ ನನಗೆ ಅಡುಗೆ ಮನೆಯ ಕೆಲಸ ಕೊಟ್ಟರು. ಅಲ್ಲಿ ಅವರು ಹೇಳಿಕೊಟ್ಟ ಪುಡ್ಡಿಂಗ್, ಡಿಸರ್ಟ್‌ಗಳಲ್ಲಿ ಹೊಸ ಪ್ರಯೋಗ ಮಾಡಲು ಶುರು ಮಾಡಿದೆ. ನನ್ನ ಆಸಕ್ತಿಯನ್ನು ಕಂಡು ಅವರು ಒಂದು ರೆಸ್ಟೋರೆಂಟನ್ನೇ ಆರಂಭಿಸಿ, ಅದರಲ್ಲಿ ನನ್ನನ್ನು ಮುಖ್ಯ ಶೆಫ್ ಆಗಿ ನೇಮಿಸಿದ್ದರು. ನಂತರ ಗಂಡ, ಮಗನಿಗಾಗಿ ಬೆಂಗಳೂರಿಗೆ ವಾಪಸಾದೆ.

**• ಮುಂದೇನು ಮಾಡಬೇಕೆಂದಿದ್ದೀರಿ?**

ಮನೆಯಲ್ಲೇ ಕುಕ್ಕೀಸ್, ಡೋನಟ್ಸ್, ಪಿಜ್ಜಾ ಮಾಡಿ ಮಾರುವ ಯೋಚನೆ ಇದೆ. ಕುವೈತ್‌ನಲ್ಲಿದ್ದಾಗ ನನಗೆ ಕೆಲಸ ಕೊಟ್ಟ ಮೇಡಂ, ಪ್ರತಿ ಖಾದ್ಯ ಹಾಗೂ ಅದಕ್ಕೆ ಬೇಕಿರುವ ಸಾಮಗ್ರಿಗಳನ್ನು ಓದಿ ಹೇಳುತ್ತಿದ್ದರು. ಅದನ್ನೆಲ್ಲ ನೆನಪಿಟ್ಟುಕೊಂಡು ಮಾಡುತ್ತಿದ್ದೆ. ಆಗ ಕಲಿತ ವಿದ್ಯೆ ಈಗ ನೆರವಿಗೆ ಬರುತ್ತಿದೆ.

## ಎರಡು ಹಂತದಲ್ಲಿ ಮಾಡಿ

ರಸಾಸ್ವಾದ

**ಕರ್ನಾಟಕದ** ಪ್ರಮುಖ ಆಹಾರ ಪದಾರ್ಥಗಳಲ್ಲಿ ಒಂದಾದ ರಾಗಿಯಲ್ಲೇ ಏನಾದರೂ ಹೊಸ ಪ್ರಯೋಗ ಮಾಡಬೇಕು ಅಂದುಕೊಂಡೆ. ಅದಕ್ಕಾಗಿ ಯೂಟ್ಯೂಬ್‌ನಲ್ಲಿ ತಡಕಾಡಿದೆ. ಅಲ್ಲಿ ರಾಗಿ ಹಾಲುಬಾಯಿ ತಯಾರಿಯ ವಿಡಿಯೊಗಳೇ ಹೆಚ್ಚು ಬರುತ್ತಿದ್ದವು. ಹಾಗಾಗಿ, ಮಾವಿನ ಹಣ್ಣಿನ ರಸದಿಂದ ಪುಡ್ಡಿಂಗ್ ತಯಾರಿಸಿ ಗೊತ್ತಿತ್ತಲ್ಲ, ಅದನ್ನೇ ಇಲ್ಲಿಯೂ ಪ್ರಯೋಗಿಸಿದೆ. ರಾಗಿ ಡಿಸರ್ಟ್ ಸಿದ್ಧವಾಯಿತು.

**ಕೋಕೊ ಸಾಸ್‌ಗೆ ಬೇಕಾಗುವ ಸಾಮಗ್ರಿ:** ಚೀಸ್ ಕ್ರೀಂ ಒಂದು ಪ್ಯಾಕೆಟ್, ರಾಗಿಯಿಂದ ತೆಗೆದ ಹಾಲು ಮೂರು ಸೌಟು, ಬೆಲ್ಲದ ಪುಡಿ ಅರ್ಧ ಲೋಟ, 100 ಗ್ರಾಂ ಚೀಸ್‌ಕ್ರೀಂ, 100 ಗ್ರಾಂ ಫ್ರೆಶ್ ಕ್ರೀಂ, ಐದು ಚಮಚ ಕೋಕೊ ಪುಡಿ. **ರಾಗಿ ಕೇಕ್‌ಗೆ ಬೇಕಾಗುವ ಸಾಮಗ್ರಿ:** ಅರ್ಧ ಲೋಟ ಎಣ್ಣೆ, ಮುಕ್ಕಾಲು ಲೋಟ ಬೆಲ್ಲದ ಪುಡಿ, ಮುಕ್ಕಾಲು ಗ್ಲಾಸ್ ರಾಗಿ ಹಿಟ್ಟು, ಅರ್ಧ ಲೋಟ ಮೊಸರು, ಒಂದೂವರೆ ಚಮಚ ವೆನಿಲ್ಲಾ ಎಸೆನ್ಸ್, ಮುಕ್ಕಾಲು ಚಮಚ ಬೇಕಿಂಗ್ ಪೌಡರ್, ಕಾಲು ಚಮಚ ಸೋಡ, ಎರಡು ಚಮಚ ಹಾಲು.

**ಮಾಡುವ ವಿಧಾನ: ರಾಗಿ ಕೇಕ್**–ಎಣ್ಣೆ, ಬೆಲ್ಲ ಮತ್ತು ಮೊಸರಿನ ಮಿಶ್ರಣಕ್ಕೆ ವೆನಿಲ್ಲಾ ಎಸೆನ್ಸ್ ಹಾಕಬೇಕು. ಅದಕ್ಕೆ ಜರಡಿ ಹಿಡಿದ ರಾಗಿ ಹಿಟ್ಟು, ಸೋಡ, ಬೇಕಿಂಗ್ ಪೌಡರ್ ಸೇರಿಸಬೇಕು. ಇಡ್ಲಿ ಹಿಟ್ಟಿನ ಹಾಗೆ ಗಟ್ಟಿಯಾಗುವವರೆಗೂ ಚೆನ್ನಾಗಿ ಕಲಕಬೇಕು. ತುಂಬಾ ಗಟ್ಟಿಯಾದರೆ ಎರಡು ಚಮಚ ಹಾಲು ಸೇರಿಸಬಹುದು. ಅದನ್ನು ಕೇಕ್ ಆಕಾರದ ತಟ್ಟೆಯಲ್ಲಿಟ್ಟು 20 ನಿಮಿಷ ಓವನ್‌ನಲ್ಲಿ ಬೇಯಿಸಿ ಇಟ್ಟುಕೊಳ್ಳಬೇಕು.

**ಕೋಕೊ ಸಾಸ್:** ರಾಗಿ ಹಾಲಿಗೆ ಬೆಲ್ಲ ಹಾಕಿ ಬಿಸಿ ಮಾಡಿ ಗಟ್ಟಿ ಮಾಡಿಕೊಳ್ಳಬೇಕು. ಆಮೇಲೆ ಚೀಸ್‌ಕ್ರೀಂ, ಫ್ರೆಶ್ ಕ್ರೀಂ ಹಾಗೂ ಗಟ್ಟಿ ಮಾಡಿಕೊಂಡ ರಾಗಿ ಹಾಲನ್ನು ಮಿಕ್ಸಿಗೆ ಹಾಕಿ, 2 ಸ್ಪೂನ್ ಕೋಕೊ ಪುಡಿ ಸೇರಿಸಬೇಕು. ಇದು ಒಂದು ಬಗೆಯ ಸಾಸ್‌ನಂತೆ ಆಗುತ್ತದೆ. ಮಾಡಿಟ್ಟ ಕೇಕ್‌ನಲ್ಲಿ ಒಂದು ಲೇಯರ್ ತೆಗೆದುಕೊಂಡು, ಅದರ ಮೇಲೆ ಕೋಕೊ ಸಾಸ್ ಹಾಕಬೇಕು. ಅದರ ಮೇಲೆ ಮತ್ತೊಂದು ಲೇಯರ್ ಕೇಕ್ ಇಡಬೇಕು. ಅದರ ಮೇಲೆ ದಪ್ಪನಾಗಿ ಸಾಸ್ ಹಾಕ ಬೇಕು. ಬಳಿಕ ಗಾರ್ನಿಷ್ ಮಾಡಲು, ನೆನೆಸಿಟ್ಟ ಇಡೀ ರಾಗಿಯನ್ನು ಬಳಸಬೇಕು. ಅಂದರೆ, ಆ ರಾಗಿಯನ್ನು ತೊಳೆದು, ಒರೆಸಿ, ಬೆಲ್ಲದ ಪಾಕದಲ್ಲಿ ಒಂದು ಗಂಟೆ ನೆನೆಸಿ. ಇದಕ್ಕೆ 2 ಚಮಚ ತುಪ್ಪ ಸೇರಿಸಿ. ಕೇಕ್ ಮತ್ತು ಸಾಸ್ ಲೇಯರ್ ಅನ್ನು ಈ ರಾಗಿಯಿಂದ ಅಲಂಕರಿಸಿದರೆ ಡಿಸರ್ಟ್ ಸಿದ್ಧ.

## ಅಮ್ಮ ಹೇಳ್ತಾಳೆ

ಒಣಮೆಣಸಿನಕಾಯಿ ಹುರಿಯುವಾಗ ಘಾಟು ಬಾರದಿರಲೆಂದು ಒಂದೆರಡು ಚಮಚ ಎಣ್ಣೆ ಹಾಕಿಕೊಳ್ಳುವುದು ರೂಢಿ. ಆದರೆ ಈ ಎಣ್ಣೆಯ ಮೇಲೆ ಸ್ವಲ್ಪ ಉಪ್ಪಿನ ಪುಡಿ ಉದುರಿಸಿಕೊಂಡು ಹುರಿದರೆ ಘಾಟಿನ ಪ್ರಮಾಣ ಇನ್ನಷ್ಟು ತಗ್ಗುತ್ತದೆ.

ಭೂಮಿಕಾಗೆ ಬರಹಗಳನ್ನು ಕಳುಹಿಸಬೇಕಾದ ವಿಳಾಸ
ಮಹಿಳೆ, ಮಕ್ಕಳು, ಕುಟುಂಬ, ಸಂಬಂಧ, ಬಾಂಧವ್ಯ, ಭಾವನಾತ್ಮಕ ಬೆಸುಗೆಯಂತಹ ಸಂಗತಿಗಳ ಬಗ್ಗೆ ನೀವು ಲೇಖನ, ಲಹರಿ, ಪುಟ್ಟ ಪುಟ್ಟ ಬರಹಗಳನ್ನು ‘ಭೂಮಿಕಾ’ಗೆ ಬರೆಯಬಹುದು. ಆರೋಗ್ಯಕರ ಜೀವನಶೈಲಿಗೆ ಪೂರಕವಾಗುವ ಟಿಪ್ಸ್‌ಗಳನ್ನು ಹಂಚಿಕೊಳ್ಳಬಹುದು.
ನಮ್ಮ ಇ–ಮೇಲ್ ಐ.ಡಿ– bhoomika@prajavani.co.in

# ಕಂಡಿರಾ... ಹೋರಾಟದ ಹಾದಿ




• ಬಾಲಕೃಷ್ಣ ಪಿ.ಎಚ್.

**‘ಕಾರ್ಮಿಕರ** ನ್ಯಾಯಕ್ಕಾಗಿ ಕೈಜೋಡಿಸೋಣ ಬನ್ನಿ’ ಎಂಬ ಘೋಷವಾಕ್ಯ ಇರುವ ಫಲಕವನ್ನು ಪುಟ್ಟ ಮಗುವೊಂದು ಕೈಯಲ್ಲಿ ಹಿಡಿದಿದೆ. ಮಗುವಿನ ಇನ್ನೊಂದು ಕೈಯನ್ನು ಹಿಡಿದುಕೊಂಡು ತಾಯಿ ನಡೆಯುತ್ತಿದ್ದಾಳೆ...

ಗಾರ್ಮೆಂಟ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (ಜಿಎಟಿಡಬ್ಲ್ಯು-ಯು) ಮತ್ತು ಗಾರ್ಮೆಂಟ್ ಮಹಿಳಾ ಕಾರ್ಮಿಕರ ಮುನ್ನಡೆ ಸಂಘಟನೆಗಳು ತಮ್ಮ ಎರಡು ದಶಕಗಳ ಹೋರಾಟವನ್ನು ಸಾರ್ವಜನಿಕರೆದುರು ಇಡಲು ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಹಮ್ಮಿಕೊಂಡಿದ್ದ ಆರ್ಕೈವ್ ಪ್ರದರ್ಶನದಲ್ಲಿ ಕಂಡ ಈ ಚಿತ್ರ, ಬಹುತೇಕ ಮಹಿಳೆಯರೇ ಇರುವ ಗಾರ್ಮೆಂಟ್ ಕಾರ್ಮಿಕರ ಬದುಕನ್ನೂ ಹೋರಾಟವನ್ನೂ ಏಕಕಾಲಕ್ಕೆ ಕಟ್ಟಿಕೊಟ್ಟಿತು.

ಬಟ್ಟೆ ಹೊಲಿಯುತ್ತಿರುವ ಮಹಿಳೆ, ಕೈ ಎತ್ತಿ ಘೋಷಣೆ ಕೂಗುತ್ತಾ ಹೋರಾಟಕ್ಕೆ ಕೈಜೋಡಿಸಿರುವ ಸ್ತ್ರೀಯರು, ಕಾರ್ಮಿಕ ಕಾಯ್ದೆಗಳ ಬಗ್ಗೆ ಅರಿವು ಮೂಡಿಸುವ ಶಿಬಿರ, ಸ್ವಸಹಾಯ ಸಂಘಗಳ ರಚನೆ, ದೌರ್ಜನ್ಯ ವಿರೋಧಿ ಚಳವಳಿ, ಸರ್ಕಾರದ ಗಮನ ಸೆಳೆಯಲು ಮಾಡಿದ ಮನವಿಗಳು, ಗಾರ್ಮೆಂಟ್ ಮಾಲೀಕರು ಬಾಲಕಾರ್ಮಿಕರನ್ನು ನೇಮಿಸಿಕೊಂಡಿರುವುದನ್ನು ಬಿಚ್ಚಿಡುವಂತಹ ಅರ್ಥಪೂರ್ಣ ಹೋರಾಟಗಳೆಲ್ಲ ಬರವಣಿಗೆ, ಚಿತ್ರ, ಇನ್ಫೋಗ್ರಾಫಿಕ್ಸ್ ರೂಪದಲ್ಲಿ ಗೋಡೆಗಳ ಮೇಲೆ ರಾರಾಜಿಸಿದವು.

ನಮ್ಮ ಗಾರ್ಮೆಂಟ್ಸ್ ಕಾರ್ಮಿಕರು ಸಿದ್ಧಪಡಿಸುವ ಬಟ್ಟೆಗಳು ಯಾವ ಯಾವ ದೇಶಗಳಿಗೆ ರಫ್ತಾಗುತ್ತವೆ ಎಂಬುದನ್ನು ಜಗತ್ತಿನ ಭೂಪಟದಲ್ಲಿ ತೋರಿಸಲಾಗಿತ್ತು. ಸಿದ್ಧಉಡುಪು ತಯಾರಿಸಲು ಕಾರ್ಖಾನೆಗಳಲ್ಲಿ ಬಳಸುವ ನೈಜ ಹೊಲಿಗೆಯಂತ್ರ ಗಮನ ಸೆಳೆಯಿತು. ‘ಸೂಜಿ–ದಾರದೊಂದಿಗಿನ ಬದುಕು: ಬೆಂಗಳೂರಿನಲ್ಲಿ ಗಾರ್ಮೆಂಟ್ ಕೆಲಸ ಮತ್ತು ಹೋರಾಟ’ ಎಂಬ ಹೆಸರಿನಲ್ಲಿ ಈ ಪ್ರದರ್ಶನ ಆಯೋಜಿಸಲಾಗಿತ್ತು. ಮಹಿಳಾ ಕಾರ್ಮಿಕರ ಕಷ್ಟ–ಸುಖಗಳಿಗೆ ವೇದಿಕೆಯಾಗಿದ್ದ, 2019ರಲ್ಲೇ ಪ್ರಕಟಣೆ ಸ್ಥಗಿತಗೊಂಡಿರುವ ‘ಸೂಜಿ–ದಾರ’ ದ್ವೈಮಾಸಿಕದ ಪುನರಾರಂಭದ ಅಗತ್ಯವನ್ನೂ ಪ್ರದರ್ಶನ ಮನಗಾಣಿಸಿತು.

“ಬೆಂಗಳೂರನ್ನು ಐ.ಟಿ ಹಬ್ ಎನ್ನಲಾಗುತ್ತದೆ. ಆದರೆ ಗಾರ್ಮೆಂಟ್ಸ್ ಕ್ಷೇತ್ರಕ್ಕೂ ಜಾಗತಿಕ ವ್ಯಾಪ್ತಿ ಇದೆ. ಈ ಕಾರ್ಮಿಕರೂ ಅಷ್ಟೇ ಪ್ರಮಾಣದಲ್ಲಿ ವಿದೇಶಿ ವಿನಿಮಯಕ್ಕೆ ಕಾರಣರಾಗಿದ್ದಾರೆ. ಆದರೂ ಇವರು ಮಾತ್ರ ಅವ್ಯಕ್ತರಾಗಿಯೇ ಉಳಿಯುವುದೇಕೆ ಎನ್ನುವುದರ ಅವಲೋಕನಕ್ಕಾಗಿ ಈ ಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

**ಪ್ರತಿಭಾ ಆರ್.**, ಅಧ್ಯಕ್ಷೆ, ಜಿಎಟಿಡಬ್ಲ್ಯುಯು

“ಭಾರತದ ವಸ್ತುಗಳಿಗೆ ಅಮೆರಿಕದಲ್ಲಿ ಟ್ರಂಪ್ ಸುಂಕ ಜಾಸ್ತಿ ಮಾಡಿದರೆ ಇಲ್ಲಿ ಸುಮಾರು ಜನ ಕೆಲಸ ಕಳೆದುಕೊಳ್ಳುತ್ತಾರೆ. ಈ ಬಗ್ಗೆ ಚಿಂತನೆ ನಡೆಸಲು ಈ ಪ್ರದರ್ಶನ ನಾಂದಿಯಾಯಿತು.

**ದು.ಸರಸ್ವತಿ**, ಹೋರಾಟಗಾರ್ತಿ

“ಹಕ್ಕುಗಳಿಗಾಗಿ, ಬದುಕಿಗಾಗಿ ಹೋರಾಟ ಮಾಡುತ್ತಾರೆ. ಆದರೆ, ಆ ಹೋರಾಟವನ್ನು, ಅದರಿಂದ ಸಮಾಜಕ್ಕೆ ಸಿಕ್ಕ ಕೊಡುಗೆಯನ್ನು, ಅವರ ಬದುಕನ್ನು ದಾಖಲಿಸುವುದಿಲ್ಲ. ಇವೆಲ್ಲವನ್ನೂ ದಾಖಲಿಸಿ ತಿಳಿಸುವ ಸಲುವಾಗಿ ‘ಗಾರ್ಮೆಂಟ್ ವರ್ಕರ್ಸ್ ಆರ್ಕೈವ್’ ಎಂಬ ವೆಬ್‌ಸೈಟ್ ಆರಂಭಿಸಲಾಗಿದೆ.

**ಸ್ವಾತಿ ಶಿವಾನಂದ್**, ಉಪನ್ಯಾಸಕಿ, ವೆಬ್‌ಸೈಟ್ ರೂವಾರಿ

# ಜಿಎಸ್‌ಟಿ: ಮೋದಿಗೆ ಕುಟುಕಿದ ಸಿ.ಎಂ

## ‘ನಾವು ಹೇಳಿದಾಗಲೇ ಬದಲಾವಣೆ ಮಾಡಿದ್ದರೆ, ಜನರು ಪರದಾಡಬೇಕಿರಲಿಲ್ಲ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ಸರಳೀಕರಣ ತಮ್ಮ ಸಾಧನೆ ಎಂದು ಪ್ರಧಾನಿ ನರೇಂದ್ರ ಮೋದಿ ಬಿಂಬಿಸಿಕೊಳ್ಳುವ ಬದಲು, ಜನಸಾಮಾನ್ಯರಿಗೆ ಅದರ ಲಾಭ ತಲುಪುವಂತೆ ಮಾಡಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಕಿದ್ದಾರೆ.

ಜಿಎಸ್‌ಟಿ ಸರಳೀಕರಣ ನಿರ್ಧಾರವನ್ನು ಸ್ವಾಗತಿಸಿ ಪ್ರಕಟಣೆ ನೀಡಿರುವ ಸಿದ್ದರಾಮಯ್ಯ, ‘ಇದನ್ನು ಮೊದಲೇ ಮಾಡಿದ್ದರೆ ದೇಶದ ಜನರು ಪಡಬಾರದ ಕಷ್ಟಗಳನ್ನು ಪಡಬೇಕಾದ ಪರಿಸ್ಥಿತಿ ಇರುತ್ತಿರಲಿಲ್ಲ’ ಎಂದೂ ಟೀಕಿಸಿದ್ದಾರೆ.

‘ಇದು ಪ್ರಧಾನಿ ಮೋದಿ ಅವರ ಆವಿಷ್ಕಾರವಾಗಲೀ, ಸಾಧನೆಯಾಗಲೀ ಅಲ್ಲ. 2017ರಲ್ಲಿ ತರಾತುರಿಯಲ್ಲಿ ದೋಷಪೂರಿತ ಜಿಎಸ್‌ಟಿಯನ್ನು ಮೋದಿ ಸರ್ಕಾರ ಜಾರಿ ಮಾಡಿತ್ತು. ಜಿಎಸ್‌ಟಿ ಸುಧಾರಣೆಗೆ ರಾಹುಲ್ ಗಾಂಧಿ ಮತ್ತು ವಿರೋಧ ಪಕ್ಷಗಳ ನಾಯಕರು ಒತ್ತಾಯಿಸುತ್ತಲೇ ಇದ್ದರು’ ಎಂದಿದ್ದಾರೆ.

‘ಜಿಎಸ್‌ಟಿ ಎಂಬುದು ಗಬ್ಬರ್ ಸಿಂಗ್ ತೆರಿಗೆ. ಅದು ದೇಶದ ಸಣ್ಣ ವ್ಯಾಪಾರಿಗಳನ್ನು ಸರ್ವನಾಶ ಮಾಡಲಿದೆ. ಜಿಎಸ್‌ಟಿ ಪಾವತಿಯ ಸಂಕೀರ್ಣತೆ ಮತ್ತು ವೆಚ್ಚದ ಹೊರೆ ಅವರ ಬದುಕನ್ನು ಸಂಕಷ್ಟಕ್ಕೆ ಸಿಲುಕಿಸಲಿದೆ ಎಂದು ಎಂಟು ವರ್ಷಗಳಿಂದ ನಾವು ಹೇಳುತ್ತಲೇ ಇದ್ದೆವು. ಆದರೆ ಮೋದಿ ಅವರು ನಮ್ಮ ಮಾತಿಗೆ ಕಿವಿಗೊಡದೆ, ನಿರ್ಲಕ್ಷಿಸುತ್ತಲೇ ಇದ್ದರು’ ಎಂದು ಹೇಳಿದ್ದಾರೆ.

‘ಜಿಎಸ್‌ಟಿ ವ್ಯವಸ್ಥೆಯಲ್ಲಿ ಕೇಂದ್ರಕ್ಕೆ ಮೂರನೇ ಒಂದರಷ್ಟು ಮತ್ತು ರಾಜ್ಯಗಳಿಗೆ ಮೂರನೇ ಎರಡರಷ್ಟು ಮತದಾನದ ಹಕ್ಕು ಇದೆ. ಜಿಎಸ್‌ಟಿಯಲ್ಲಿ ಯಾವುದೇ ಬದಲಾವಣೆಗೆ ನಾಲ್ಕನೇ ಮೂರರಷ್ಟು ಬಹುಮತ ಅಗತ್ಯ. ಎಲ್ಲ ರಾಜ್ಯಗಳು ಒಟ್ಟುಗೂಡಿ ಬದಲಾವಣೆಗೆ ಪ್ರಯತ್ನಿಸಿದರೂ, ಕೇಂದ್ರವು ಅದನ್ನು ತಡೆಯಬಹುದಾಗಿದೆ. ಎಂಟು ವರ್ಷಗಳಿಂದ ಮೋದಿ ಸರ್ಕಾರ ಇದನ್ನೇ ಮಾಡಿಕೊಂಡು ಬಂದಿದೆ’ ಎಂದು ಆಪಾದಿಸಿದ್ದಾರೆ.

‘ಈಗ ಜಿಎಸ್‌ಟಿ ಮಂಡಳಿ ಕೈಗೊಂಡಿರುವ ಸುಧಾರಣೆಯ ಪ್ರಯತ್ನಕ್ಕೆ ಕೇಂದ್ರ ಸರ್ಕಾರವು ಬೆಂಬಲ ಕೊಟ್ಟಿರುವುದಕ್ಕೆ ಜನರ ಮೇಲಿನ ಅವರ ಕಾಳಜಿಗಿಂತಲೂ, ರಾಜ್ಯ ಸರ್ಕಾರಗಳು ಸತತವಾಗಿ ಹೇರುತ್ತಾ ಬಂದಿರುವ ಒತ್ತಡವೇ ಕಾರಣ ಎನ್ನುವುದು ಸ್ಪಷ್ಟ. ಜಿಎಸ್‌ಟಿ ಸುಧಾರಣೆಯ ಲಾಭ ಬಳಕೆದಾರರಿಗೆ, ಜನರಿಗೆ ತಲುಪುವಂತೆ ಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ. ಈ ತೆರಿಗೆ ಸುಧಾರಣೆಯನ್ನು ವ್ಯಾಪಾರಿಗಳು ಮತ್ತು ಉದ್ಯಮಿಗಳು ತಮ್ಮ ಲಾಭಾಂಶ ಹೆಚ್ಚುಮಾಡಲು ದುರುಪಯೋಗ ಮಾಡಿಕೊಳ್ಳುವುದನ್ನು ತಡೆಯುವ ಹೊಣೆ ಕೂಡಾ ಕೇಂದ್ರ ಸರ್ಕಾರದ್ದು’ ಎಂದು ಆಗ್ರಹಿಸಿದ್ದಾರೆ.

**ಜಿಎಸ್‌ಟಿ ವ್ಯವಸ್ಥೆ ಕೇಂದ್ರ ಸರ್ಕಾರದ ಕಪಿಮುಷ್ಟಿಯಲ್ಲಿದ್ದು, ರಾಜ್ಯಗಳು ಅಸಹಾಯಕತೆಯಿಂದ ನರಳಾಡುವುದನ್ನು ಹೊರತುಪಡಿಸಿ ಬೇರೇನೂ ಮಾಡಲಾಗದು**
**ಸಿದ್ದರಾಮಯ್ಯ,** ಮುಖ್ಯಮಂತ್ರಿ

**ಎರಡು ಹಂತದ ಜಿಎಸ್‌ಟಿ ಸ್ವಾಗತಾರ್ಹ. ಆದರೆ ಇಷ್ಟು ವರ್ಷ ಜನರು ವಿಪರೀತ ಜಿಎಸ್‌ಟಿಯಲ್ಲಿ ಸಿಲುಕಿ ಒದ್ದಾಡಲು ಪ್ರಧಾನಿ ಮೋದಿ ಅವರ ಧೋರಣೆಯೇ ಕಾರಣ**
**ಎಂ.ಬಿ.ಪಾಟೀಲ,** ಕೈಗಾರಿಕಾ ಸಚಿವ

### ‘ಜನರ ಒಳಿತಿಗಾಗಿ ಸ್ವಾಗತ’

‘ಜಿಎಸ್‌ಟಿ ಸುಧಾರಣೆಯಿಂದಾಗಿ ರಾಜ್ಯ ಸರ್ಕಾರಕ್ಕೆ ವಾರ್ಷಿಕ ₹15,000 ಕೋಟಿಯಿಂದ ₹20,000 ಕೋಟಿಯವರೆಗೂ ನಷ್ಟವಾಗುತ್ತದೆ. ಆದರೆ ರಾಜ್ಯದ ಜನರ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು, ಈ ಸುಧಾರಣೆಯನ್ನು ಸ್ವಾಗತಿಸಿದ್ದೇವೆ’ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

‘ಜನರ ಖರೀದಿ ಸಾಮರ್ಥ್ಯ ಹೆಚ್ಚಳ ಮತ್ತು ತೆರಿಗೆ ಪಾವತಿದಾರರ ಜಾಲದ ವಿಸ್ತರಣೆಯ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದು ಮತ್ತು ಸರ್ವರಿಗೂ ಸಮೃದ್ಧಿಯ ಪಾಲು ಸಿಗುವಂತೆ ಮಾಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಆದರೆ ಕೇಂದ್ರ ಸರ್ಕಾರವು ಜಿಎಸ್‌ಟಿ ಪರಿಹಾರ ಸೆಸ್‌ನಲ್ಲಿ, ರಾಜ್ಯಕ್ಕೆ ಅದರ ನ್ಯಾಯಬದ್ಧ ಪಾಲನ್ನು ನೀಡಬೇಕು’ ಎಂದು ಒತ್ತಾಯಿಸಿದ್ದಾರೆ.

# ಜನಾರ್ದನ, ಶೂದ್ರ ಶ್ರೀನಿವಾಸ್‌ಗೆ ‘ಡಾ. ಸಿದ್ಧಲಿಂಗಯ್ಯ ದತ್ತಿ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಜನಾರ್ದನ

ಶೂದ್ರ ಶ್ರೀನಿವಾಸ್

**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ‘ಡಾ. ಸಿದ್ಧಲಿಂಗಯ್ಯ ಸಾಹಿತ್ಯ ದತ್ತಿ ಪ್ರಶಸ್ತಿ’ಗೆ ಜನಪದ ಗಾಯಕ ಎಚ್.ಜನಾರ್ದನ (ಜನ್ನಿ) ಮತ್ತು ಸಾಹಿತಿ ಶೂದ್ರಶ್ರೀನಿವಾಸ್ ಆಯ್ಕೆಯಾಗಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಆಯ್ಕೆ ಸಮಿತಿ ಕ್ರಮವಾಗಿ 2024 ಮತ್ತು 2025ನೇ ಸಾಲಿಗೆ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ತಲಾ ₹10 ಸಾವಿರ ನಗದು ಒಳಗೊಂಡಿದೆ.

ಶ್ರವಣಬೆಳಗೊಳದಲ್ಲಿ ನಡೆದ 81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ ಕವಿ ಸಿದ್ಧಲಿಂಗಯ್ಯ ಅವರ ಸ್ಮರಣಾರ್ಥ ಈ ಸಾಹಿತ್ಯ ದತ್ತಿ ಪುರಸ್ಕಾರ ಸ್ಥಾಪಿಸಲಾಗಿದೆ. ಸಿದ್ಧಲಿಂಗಯ್ಯ ಅವರ ತಾತ್ವಿಕತೆಯನ್ನು ಸಮರ್ಥವಾಗಿ ವಿವಿಧ ಮಾಧ್ಯಮಗಳ ಮೂಲಕ ಬಿಂಬಿಸುತ್ತಿರುವ ಸಾಧಕರಿಗೆ ಈ ಪುರಸ್ಕಾರ ನೀಡಲಾಗುತ್ತಿದೆ.

ಇದೇ 18ರಂದು ಬೆಳಿಗ್ಗೆ 11.30ಕ್ಕೆ ಶ್ರವಣಬೆಳಗೊಳದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

# ಒಳಮೀಸಲು: ಹೊಸದಾಗಿ ನೇರ ನೇಮಕಾತಿ ಪ್ರಕ್ರಿಯೆಗೆ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪರಿಶಿಷ್ಟ ಜಾತಿಗಳ ಒಳಮೀಸಲಾತಿಗೆ ಒಳಪಟ್ಟು ನೇಮಕಾತಿ ನಡೆಸುವ ಸಲುವಾಗಿ, 2024ರ ಅಕ್ಟೋಬರ್ 28ರ ನಂತರ ಹೊರಡಿಸಲಾದ ಎಲ್ಲ ನೇಮಕಾತಿ ಅಧಿಸೂಚನೆಗಳನ್ನು ರದ್ದುಪಡಿಸಿ ರಾಜ್ಯ ಸರ್ಕಾರವು ಆದೇಶಿಸಿದೆ.

ಒಳಮೀಸಲಾತಿ ಅಳವಡಿಸಿಕೊಂಡು ಹೊಸದಾಗಿ ನೇರ ನೇಮಕಾತಿ ಪ್ರಕ್ರಿಯೆ ನಡೆಸುವಂತೆಯೂ ಸೂಚಿಸಿದೆ. 2024ರ ಅ. 28ಕ್ಕೂ ಮೊದಲು ನೇಮಕಾತಿ ಅಧಿಸೂಚನೆ ಹೊರಡಿಸಿದ್ದು, ಆ ದಿನಾಂಕದ ನಂತರ ತಿದ್ದುಪಡಿ ಅಧಿಸೂಚನೆ ಹೊರಡಿಸಿದ್ದರೆ, ಅವುಗಳನ್ನೂ ರದ್ದುಪಡಿಸಬೇಕು ಎಂದು ರಾಜ್ಯ ಸರ್ಕಾರವು ಎಲ್ಲ ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಿದೆ. ರದ್ದುಪಡಿಸಲಾದ ಎಲ್ಲ ನೇರ ನೇಮಕಾತಿಗಳಲ್ಲಿ, ಒಳಮೀಸಲಾತಿ ಅಳವಡಿಸಿಕೊಂಡು ಹೊಸದಾಗಿ ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸಿ. ಜತೆಗೆ ಕಾಲಬದ್ಧವಾಗಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಎಂದು ಎಲ್ಲ ನೇಮಕಾತಿ ಪ್ರಾಧಿಕಾರಗಳು ಹಾಗೂ ಆಯ್ಕೆ ಪ್ರಾಧಿಕಾರಗಳಿಗೆ ಸರ್ಕಾರವು ಸೂಚಿಸಿದೆ.

# ಎಸ್‌ಬಿಐಗೆ ದಂಡ

ಪ್ರಜಾವಾಣಿ ವಾರ್ತೆ

**ಯಾದಗಿರಿ:** ಸೇವಾ ನ್ಯೂನತೆಯಿಂದ ಗ್ರಾಹಕರು ಕಳೆದುಕೊಂಡಿದ್ದ ₹50 ಸಾವಿರ ಮತ್ತು ಮಾನಸಿಕ ಹಿಂಸೆಗೆ ₹10 ಸಾವಿರ ದಂಡ, ಪ್ರಕರಣದ ವೆಚ್ಚ ₹5 ಸಾವಿರ ಸೇರಿ ₹65 ಸಾವಿರ ಪಾವತಿಸಬೇಕು ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಎಸ್‌ಬಿಐಗೆ ಆದೇಶಿಸಿದೆ.

ಸೈಬರ್ ವಂಚಕರು ಖಾತೆದಾರರಿಗೆ ಗೊತ್ತಾಗದಂತೆ ₹50 ಸಾವಿರ ವರ್ಗಾವಣೆ ಮಾಡಿಕೊಂಡಿದ್ದರು. ಬ್ಯಾಂಕ್ ಸಿಬ್ಬಂದಿ ಈ ಬಗ್ಗೆ ಸರಿಯಾಗಿ ಸ್ಪಂದಿಸಿರಲಿಲ್ಲ. ನಿವೃತ್ತ ಉಪನ್ಯಾಸಕ ಸಿ.ಎಂ. ಪಟೇದಾರ ಅವರು ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ ಆಯೋಗ, ಬ್ಯಾಂಕ್‌ನ ಸೇವಾ ನ್ಯೂನತೆಯಿಂದಾಗಿ ದೂರುದಾರ ಹಣ ಕಳೆದುಕೊಂಡಿದ್ದಾರೆ. 45 ದಿನಗಳಲ್ಲಿ ₹65 ಸಾವಿರ ಪಾವತಿಸಬೇಕು. ಆದೇಶದ ದಿನದಿಂದ ಹಣ ಪಾವತಿ ಆಗುವವರೆಗೆ ಶೇ 8ರಷ್ಟು ಬಡ್ಡಿ ಸಹ ನೀಡಬೇಕು ಎಂದು ಆದೇಶಿಸಿತು.

**ಕೃಷಿ ಮಾರಾಟ ಇಲಾಖೆ**
**ಉಪ ನಿರ್ದೇಶಕರ ಕಛೇರಿ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ,**
**ಎಂ.ಜಿ. ಕಾಂಪ್ಲೆಕ್ಸ್, ಎ.ಪಿ.ಎಂ.ಸಿ., ಆವರಣ ಯಶವಂತಪುರ, ಬೆಂಗಳೂರು–22.**
ಇ–ಮೇಲ್: ddbnglr@gmail.com ದೂ: 080–23471717
ಸಂಖ್ಯೆ: ಕೃಮಾಇ/ಉನಿ/ಬೆಂ.ನ&ಗ್ರಾಂ/ 307/2025–26 ದಿನಾಂಕ: 03–09–2025

**ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ / ರೈತಬಾಂಧವರಿಗೆ / ಸಮಸ್ತ ಪೇಟೆ ಕಾರ್ಯಕರ್ತರಿಗೆ / ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ತಿಳಿಸುವುದೇನೆಂದರೆ, **Mr. RISHI VASUDEV, Applicant, M/s FLIPKART INDIA PRIVATE LIMITED** ಇವರು ಉಪನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಈ ಕಛೇರಿಯಿಂದ ಈ ಕೆಳಗಿನಂತೆ ಏಳು ವಿಳಾಸಗಳಿಗೆ ವರ್ತಕರ ಲೈಸನ್ಸ್ ಪಡೆದು ವ್ಯವಹರಿಸುತ್ತಿರುತ್ತಾರೆ.

| ಕ್ರ.ಸಂ. | ಲೈಸನ್ಸ್‌ದಾರರ ಹೆಸರು ಮತ್ತು ವಿಳಾಸ | ಲೈಸನ್ಸ್ ಸಂಖ್ಯೆ | ಕೆ.ಟಿ. ಸಂಖ್ಯೆ |
|---|---|---|---|
| | **Mr. RISHI VASUDEV, Applicant M/s FLIPKART INDIA PRIVATE LIMITED** | | |
| 1. | Sir M.Vishveshwaraiah Road, BTM 4th Stage, 2nd Block, Bilekhalli, Bengaluru-560076, | DAM/DD-BNG/TRL/MAY-1160/2020-21 (YPR) | KT168559 |
| 2. | Muncipal No.22, BBMP PID NO.74-8-22, Situated at HAL 3rd Stage, Bengaluru- 560075. | DAM/DD-BNG/TRL/MAY-1161/2020-21 (YPR) | KT168562 |
| 3. | Pruthvi Towers, Plot No.1571/A, BBMP Katha No.4175/1571/A, 27th Main Road, 2nd Sector, HSR Layout, Bengaluru-560102 | DAM/DD-BNG/TRL/MAY-1162/2020-21 (YPR) | KT168567 |
| 4. | Plot No.118, Road No.3, EPIP Phase-1, Whitefield, Bengaluru-560066, | DAM/DD-BNG/TRL/MAY-1163/2020-21 (YPR) | KT168574 |
| 5. | Sy.No.35, BBMP Katha No.310/35, Kadubeesanahalli Village, Varthur Hobli, Bengaluru East Taluk, Bengaluru-560103, | DAM/DD-BNG/TRL/MAY-1164/2020-21 (YPR) | KT168582 |
| 6. | No.3&4, PID No.348, 349, Medahalli, NH- 75, Opp RTO, Virgonagar Post, Bengaluru- 560049, | DAM/DD- BNG/TRL/MAY-1165/2020-21 (YPR) | KT168588 |
| 7. | Site No.307, 100 Feet Ring Road, Banashankari 3rd Stage, 4th Phase, 7th Block, Bengaluru-560083, | DAM/DD-BNG/TRL/MAY-1166/2020-21 (YPR) | KT168635 |

ಮುಂದುವರೆದು, ಸದರಿಯವರು ತಮ್ಮ ಸಂಸ್ಥೆಯ ಖರೀದಿದಾರರ ಲೈಸನ್ಸ್ ಅನ್ನು ರದ್ದುಪಡಿಸುವಂತೆ ದಿನಾಂಕ: 01.09.2025 ರಂದು ಮನವಿ ಸಲ್ಲಿಸಿರುತ್ತಾರೆ. ಆದ ಕಾರಣ **Mr. Rishi Vasudev. Applicant, M/S FLIPKART INDIA PRIVATE LIMITED** ಇವರಿಂದ ಸಮಿತಿಗಾಗಲಿ ರೈತರಿಗಾಗಲಿ / ವರ್ತಕರಿಗಾಗಲಿ/ ಸರ್ಕಾರಕ್ಕಾಗಲಿ ಹಾಗೂ ಇತರೆ ಸಂಘ ಸಂಸ್ಥೆಗಳಿಗಾಗಲಿ ಯಾವುದೇ ಬಾಕಿ ಇರುವ/ ಇಲ್ಲದಿರುವ ಕುರಿತು ಹಾಗೂ ಲೈಸನ್ಸ್ ರದ್ದುಪಡಿಸುವ ಕುರಿತು ಯಾರಿಂದಲಾದರೂ ಸಲಹೆ / ಸೂಚನೆ / ಆಕ್ಷೇಪಣೆಗಳೇನಾದರೂ ಇದ್ದರೆ ಈ ಪ್ರಕಟಣೆಯ ದಿನಾಂಕದಿಂದ 07 ದಿನಗಳೊಳಗಾಗಿ ಅಖಿತ ರೂಪದಲ್ಲಿ ಈ ಕೆಳಗೆ ಸಹಿ ಮಾಡಿರುವವರಿಗೆ ಸಲ್ಲಿಸತಕ್ಕದ್ದು. ತಡವಾಗಿ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ನಿಗದಿತ ಅವಧಿಯಲ್ಲಿ ಆಕ್ಷೇಪಣೆಗಳು ಬಾರದೇ ಇದ್ದಲ್ಲಿ ನಿಯಮಾನುಸಾರ ಯಾವುದೇ ಆಕ್ಷೇಪಣೆಗಳು ಬಂದಿಲ್ಲವೆಂದು ಪರಿಗಣಿಸಿ ಮುಂದಿನಂತೆ ಕ್ರಮವಹಿಸಲಾಗುವುದಾಗಿ ಈ ಪ್ರಕಟಣೆಯ ಮೂಲಕ ತಿಳಿಸಲಾಗಿದೆ.

ಸಹಿ/– ಉಪನಿರ್ದೇಶಕರು, ಕೃಷಿ ಮಾರಾಟ ಇಲಾಖೆ,
ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜನಗರ**
ಮೈಸೂರು – ಹಾಸನ ರಸ್ತೆ, ಕೆ.ಆರ್.ನಗರ, ತಾ, ಮೈಸೂರು ಜಿಲ್ಲೆ
ದೂರವಾಣಿ: 08223–262352, ಇಮೇಲ್: apmckrnagar@gmail.com
ಸಂಖ್ಯೆ: ಕೃಉಮಾಸ(ಕೃರಾನ)/429/2025–26 ದಿನಾಂಕ: 03.09.2025

**ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)**

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜನಗರ ಇವರು ಈ ಕೆಳಕಂಡ ಕಾಮಗಾರಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆ ಮತ್ತು ಮಾರ್ಗಸೂಚಿ ಅನುಸಾರ ಐಟಂವಾರು ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೋಂದಾಯಿತ ಹಾಗೂ Standard Tender Documents KW-2 Clause-3 ನಲ್ಲಿ ಅರ್ಹರಿರುವ ವಿದ್ಯುತ್ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಅಡಿಯಲ್ಲಿ ಸಲ್ಲಿಸಲು ಆಹ್ವಾನಿಸಲಾಗಿದೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಮೊತ್ತ ರೂ.ಗಳಲ್ಲಿ | ಇ.ಎಂ.ಡಿ. ಮೊಬಲಗು ಶೇಕಡ 2.00ರಂತೆ (ಇ ಪೇಮೆಂಟ್) (ರೂ.ಗಳಲ್ಲಿ) | ಕೆಲಸ ಪೂರೈಸಲು ನಿಗಧಿಪಡಿಸಿದ ಅವಧಿ | ಅರ್ಹ ಗುತ್ತಿಗೆದಾರರ ದರ್ಜೆ | ಇ– ಪ್ರೋಸಿಂಗ್ ಫೀ (ಇ–ಪೇಮೆಂಟ್) |
|---|---|---|---|---|---|---|
| 1 | ಕೃ.ಉ.ಮಾ.ಸ, ಕೃಷ್ಣರಾಜನಗರ 2025–26ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದಿತ ಸಮಿತಿಯ ಸಾಲಿಗ್ರಾಮ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಹೊಸದಾಗಿ ಬೀದಿ ದೀಪ ಅಳವಡಿಸುವ ಕಾಮಗಾರಿ. (ಐಟಂವಾರು ಟೆಂಡರ್) | ರೂ. 29,67,945=47 | ರೂ. 59,400=00 | 3 ತಿಂಗಳು (ಮಳೆಗಾಲ ಹೊರತು ಪಡಿಸಿ) | ಕೆಡಬ್ಲ್ಯು–2, ಕ್ಲಾಸ್–3ರಲ್ಲಿ ಅರ್ಹರಿರುವ & ಲೋ.ಇ.ಯಲ್ಲಿ ನೊಂದಾಯಿತ ವಿದ್ಯುತ್ ಗುತ್ತಿಗೆದಾರರು | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಂತೆ |

1) ಪ್ರೀ ಬಿಡ್ ಮೀಟಿಂಗ್ **ದಿನಾಂಕ: 12.09.2025 ರಂದು ಮಧ್ಯಾಹ್ನ 04–30 ಗಂಟೆಗೆ.** 2) ಭರ್ತಿ ಮಾಡಿದ ತಾಂತ್ರಿಕ ಮತ್ತು ಆರ್ಥಿಕ ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ:22–09–2025 ಸಂಜೆ 5–00 ಗಂಟೆವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25/09/2025 ಮದ್ಯಾಹ್ನ 4–30 ಗಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 03/10/2025 ಮದ್ಯಾಹ್ನ 4.30 ಗಂಟೆಗೆ.** Tender documents may be downloaded from Government of Karnataka Public Procurement Portal **website: https://kppp.karnataka.gov.in/#/portal/portal-home** under login for Contractors. ಹೆಚ್ಚಿನ ಷರತ್ತು ಹಾಗೂ ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜನಗರ
ಸಹಿ/– ಅಧ್ಯಕ್ಷರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜನಗರ
DIPR/MYS/KAVITA/914/25-26

ಕರ್ನಾಟಕ ಸರ್ಕಾರ
**ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ**
ದೂರವಾಣಿ ಸಂಖ್ಯೆ: 08352–276996, ವೆಬ್‌ಸೈಟ್:www.vijayapur.uda.gov.in
ಇ–ಮೇಲ್:bdacommissionerbijapur@gmail.com
ಸಂಖ್ಯೆ: ನಪ್ರಾವಿ/ತಾಂತ್ರಿಕ/ಟೆಂಡರ್/2025–26/1084 ದಿನಾಂಕ:04.09.2025

**ಕೆ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ**

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ದರ್ಜೆಯ ಯಾವತ್ತೂ ಸಿವಿಲ್/ವಿದ್ಯುತ್ ಗುತ್ತಿಗೆದಾರರಿಗೆ ಈ ಮೂಲಕ ತಿಳಿಸುವದೆನೆಂದರೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಈ ಕೆಳಗೆ ಕಾಣಿಸಿದ ಕಾಮಗಾರಿಗಳನ್ನು ನಿರ್ವಹಿಸಲು ಕೆ.ಪಿ.ಪಿ ಪೋರ್ಟಲ್ ಮುಖಾಂತರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1&2 ರ ನಿಬಂಧನೆಗಳಿಗೆ ಒಳಪಟ್ಟು ಐಟಂವಾರು ಟೆಂಡರ್‌ಗಳನ್ನು ಕರೆಯಲಾಗಿದೆ. ಸರ್ಕಾರದ ಆದೇಶ ನಂ:1) FD611 EXP-12/2023, Bangalore Dt:03.02.2024 ಹಾಗೂ 2) FD506 EXP-12/2024, Bangalore Dt:20.08.2024 ರನ್ವಯ ಮತ್ತು ಸಮಾನಾವಕಾಶ ಆಧಾರದ ಮೀಸಲಾತಿಗಳಿಗನುಗುಣವಾಗಿ ಟೆಂಡರ್ ಕರೆಯಲಾಗಿದ್ದು. ಕಾರಣ ಇಚ್ಛೆಯುಳ್ಳ ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ ಸಲ್ಲಿಸಬಹುದಾಗಿದೆ. ಕಾಮಗಾರಿಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯದ ತಾಂತ್ರಿಕ ಶಾಖೆಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ವೆಬ್‌ಸೈಟ್ www.vijayapur.uda.gov.in ನಿಂದ ಪಡೆಯಬಹುದಾಗಿದೆ.

**ಮೀಸಲಾತಿ – ಇತರೆ:** VUDA/2025-26/OW/WORK_INDENT42, VUDA/2025-26/OW/WORK_INDENT43, VUDA/2025-26/OW/WORK_INDENT44 & VUDA/2025-26/OW/WORK_INDENT45
**ಮೀಸಲಾತಿ – ಅನುಸೂಚಿತ ಜಾತಿಗಳು:** VUDA/2025-26/OW/WORK_INDENT46 & VUDA/2025-26/OW/WORK_INDENT47
**ಮೀಸಲಾತಿ – ಅನುಸೂಚಿತ ಪಂಗಡಗಳು:** VUDA/2025-26/BD/WORK_INDENT49
**ಮೀಸಲಾತಿ – CAT-I:** VUDA/2025-26/OW/WORK_INDENT41
**ಮೀಸಲಾತಿ – CAT-II(A):** VUDA/2025-26/OW/WORK_INDENT48
1) ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ: 04.09.2025
2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24.09.2025 ರಂದು ಸಾಯಂಕಾಲ 17.30 ಘಂಟೆಗೆ.
3) ಟೆಂಡರ್ ತೆರೆಯುವ ದಿನಾಂಕ: 26.09.2025 ರಂದು ಮುಂಜಾನೆ 11.00 ಘಂಟೆಗೆ.

ಸಹಿ/– (ರಾಜಶೇಖರ ಡಂಬಳ, ಕೆ.ಎ.ಎಸ್) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
ಸಹಿ/– (ಕನ್ನಾನ ಅಬ್ದುಲಹಮೀದ ಮುಶ್ರೀಫ) ಅಧ್ಯಕ್ಷರು ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
ವಾಸಾಸಂಇ/ವಿಜಯಪುರ/314/ಕೆಎಸ್‌ಎಂಸಿಎ/2025–26

**ಕರ್ನಾಟಕ ಅರಣ್ಯ ಇಲಾಖೆ**
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು–560083.
ದೂರವಾಣಿ: 080 29755405, ಇ–ಮೇಲ್: acfbnp83@gmail.com
ಸಂಖ್ಯೆ:ಸಅಸಂ/ಸಿಆರ್/2025–26 ದಿನಾಂಕ: 04.09.2025

**ಟೆಂಡರ್ ಪ್ರಕಟಣೆ**

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು ಇವರು 71ನೇ ವನ್ಯಜೀವಿ ಸಪ್ತಾಹದ ಆಚರಣೆಯ ಸಮಾರಂಭಗಳ ಕಾರ್ಯಕ್ರಮಗಳಿಗೆ ಟೆಂಡರನ್ನು ಆಹ್ವಾನಿಸಿದ್ದಾರೆ. ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ 15.09.2025ರ ಬೆಳಿಗ್ಗೆ 11:00 ಗಂಟೆಯವರೆಗೆ. ಹೆಚ್ಚಿನ ವಿವರಗಳನ್ನು https://kppp.karnataka.gov.in ಮೂಲಕ ಪಡೆಯಬಹುದಾಗಿದೆ ಅಥವಾ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/–
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಡಿಐಪಿಆರ್/ಸಿಪಿ/2656/ಸಿಸಿಎಲ್/2025–26

**ಕರ್ನಾಟಕ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
**ಕಾರ್ಯನಿರ್ವಾಹಕ ಇಂಜನೀಯರ್‌ರವರ ಕಛೇರಿ**
**ಕರ್ನಾಟಕ ನೀರಾವರಿ ನಿಗಮ ನಿಯಮಿತ,**
**ತುಂಗಾ ಮೇಲ್ದಂಡೆ ಯೋಜನಾ ವಿಭಾಗ, ಶಿವಮೊಗ್ಗ**
ಫೋನ್: 08182-257189 ಫ್ಯಾಕ್ಸ್ : 08182-254832
E-mail : eeutpsmg@gmail.com

**SHORT TERM TENDER NOTIFICATION**
**(Through KPP Portal only)**

**No.EE/UTPDN/SMG/KNNL/PB-3/T.N.NO.18/2025-26 Dated: 03.09.2025**

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.ಪಿ–ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 2701 ಬರುವ 01 ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ **ಮೊತ್ತ ರೂ. 50.82 ಲಕ್ಷಗಳು. (ಜಿ.ಎಸ್.ಟಿ ಹೊರತುಪಡಿಸಿ)** (2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ : **09.09.2025** ಸಾಯಂಕಾಲ **5.30 ಘಂಟೆಯವರೆಗೆ.** (3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ **ದಿನಾಂಕ: 03.09.2025 ರಿಂದ 12.09.2025 ಸಾಯಂಕಾಲ 5.29 ಘಂಟೆಯವರೆಗೆ.**

ಟೆಂಡರನ್ನು ತೆರೆಯುವ ದಿನಾಂಕ/ ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು / ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ **https://kppp.karnataka.gov.in/** ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/– **ಕಾರ್ಯಪಾಲಕ ಇಂಜಿನಿಯರ್,**
ಕ.ನೀ.ನಿ.ನಿ., ತುಂ.ಮೆ.ಯೋ. ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ಸಂ.02-09
ಝೇಂಕಾರ್/2025-26

**PURAVANKARA**

**ಪುರವಂಕರ ಲಿಮಿಟೆಡ್**
(CIN: L45200KA1986PLC051571)
ನೋಂದಾಯಿತ ಕಚೇರಿ: ಸಂಖ್ಯೆ 130/1, ಹಲಸೂರು ರಸ್ತೆ, ಬೆಂಗಳೂರು – 560 042
ದೂರವಾಣಿ: 080 2559 9000/43439999
ಇಮೇಲ್: info@puravankara.com ವೆಬ್‌ಸೈಟ್: www.puravankara.com

**39ನೇ ವಾರ್ಷಿಕ ಸಾಮಾನ್ಯ ಸಭೆ ಮತ್ತು ಇ-ಮತದಾನ ಮಾಹಿತಿಯ ಸೂಚನೆ**

ಪುರವಂಕರ ಲಿಮಿಟೆಡ್ ("ಕಂಪನಿ") ಸದಸ್ಯರ 39 ನೇ ವಾರ್ಷಿಕ ಸಾಮಾನ್ಯ ಸಭೆ (AGM) ಸೆಪ್ಟೆಂಬರ್ 29, 2025 ರ ಸೋಮವಾರ ಮಧ್ಯಾಹ್ನ 02:00 ಗಂಟೆಗೆ (IST) ವೀಡಿಯೊ ಕಾನ್ಫರೆನ್ಸ್ (VC)/ ಇತರ ಆಡಿಯೋ-ವಿಶುವಲ್ ವಿಧಾನಗಳ (OAVM) ಮೂಲಕ ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಕಂಪನಿಗಳ ಕಾಯ್ದೆ, 2013 ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (SEBI) (ಲಿಸ್ಟಿಂಗ್ ಆಬ್ಲಿಗೇಷನ್ಸ್ ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 ರ ಅನ್ವಯವಾಗುವ ನಿಬಂಧನೆಗಳು, ಸೆಪ್ಟೆಂಬರ್ 19, 2024 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2024, ಸೆಪ್ಟೆಂಬರ್ 25, 2023, ಡಿಸೆಂಬರ್ 28, 2022 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2023, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (MCA) ಹೊರಡಿಸಿದ ಇತರ ಸಂಬಂಧಿತ ಸುತ್ತೋಲೆ, ಸುತ್ತೋಲೆ ಸಂಖ್ಯೆ. ಅಕ್ಟೋಬರ್ 3, 2024 ರಂದು SEBI/HO/CFD/CFD-PoD-2/P/CIR/2024/133, ಅಕ್ಟೋಬರ್ 07, 2023 ರಂದು SEBI/HO/CFD/PoD-2/P/CIR/2023/167, ಜನವರಿ 05, 2023 ರಂದು SEBI/HO/CFD/PoD-2/P/CIR/2023/4, ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (ಇನ್ನು ಮುಂದೆ ಒಟ್ಟಾರೆಯಾಗಿ 'ಸುತ್ತೋಲೆಗಳು' ಎಂದು ಕರೆಯಲಾಗುತ್ತದೆ) ಹೊರಡಿಸಿದ ಇತರ ಸಂಬಂಧಿತ ಸುತ್ತೋಲೆ.

ಈ ನಿಟ್ಟಿನಲ್ಲಿ ಕಂಪನಿಯು 2024-25ನೇ ಹಣಕಾಸು ವರ್ಷದ ವಾರ್ಷಿಕ ವರದಿಯೊಂದಿಗೆ 39ನೇ ವಾರ್ಷಿಕ ಮಹಾಸಭೆಯನ್ನು ಕರೆಯುವ ಸೂಚನೆಯನ್ನು MCA ಮತ್ತು SEBI ಹೊರಡಿಸಿದ ಸುತ್ತೋಲೆಗಳ ಅನುಸಾರವಾಗಿ ಕಂಪನಿ / ಠೇವಣಿ ಭಾಗವಹಿಸುವವರು / ನೋಂದಣಿದಾರರು ಮತ್ತು ಷೇರು ವರ್ಗಾವಣೆ ಏಜೆಂಟ್‌ನೊಂದಿಗೆ ಇ-ಮೇಲ್ ಐಡಿ ನೋಂದಾಯಿಸಿದ ಸದಸ್ಯರಿಗೆ ಕಳುಹಿಸಿದೆ. 2024-25ನೇ ಹಣಕಾಸು ವರ್ಷದ ವಾರ್ಷಿಕ ಮಹಾಸಭೆಯ ಸೂಚನೆಯೊಂದಿಗೆ ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ www.puravankara.com ನಲ್ಲಿ, ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (NSDL) ವೆಬ್‌ಸೈಟ್ www.evoting.nsdl.com ನಲ್ಲಿ ಮತ್ತು ಸ್ಟಾಕ್ ಎಕ್ಸ್‌ಚೇಂಜ್ ಅಂದರೆ BSE ಲಿಮಿಟೆಡ್ www.bseindia.com ನಲ್ಲಿ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.com ನಲ್ಲಿ ಲಭ್ಯವಿದೆ. ಹೆಚ್ಚುವರಿಯಾಗಿ, ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಗಳು, 2015 ರ ನಿಯಮ 36(1)(b) ಗೆ ಅನುಗುಣವಾಗಿ, ಕಂಪನಿ/ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್/ಡಿಪಾಸಿಟರಿ ಭಾಗವಹಿಸುವವರಲ್ಲಿ ಇಮೇಲ್ ಐಡಿ ನೋಂದಾಯಿಸದ ಸದಸ್ಯರಿಗೆ ಕಂಪನಿಯು ಪತ್ರವನ್ನು ಕಳುಹಿಸುತ್ತಿದೆ, ಇದು ಕಂಪನಿಯ ವೆಬ್‌ಸೈಟ್‌ನ ನೇರ ವೆಬ್‌ಲಿಂಕ್ ಅನ್ನು ಒದಗಿಸುತ್ತದೆ, ಅಲ್ಲಿಂದ FY 2024-25 ರ ವಾರ್ಷಿಕ ವರದಿಯನ್ನು ಪ್ರವೇಶಿಸಬಹುದು. ಕಂಪನಿಯು FY 2024-25 ರ ವಾರ್ಷಿಕ ವರದಿಯ ಭೌತಿಕ ಪ್ರತಿಯನ್ನು investors@puravankara.com ನಲ್ಲಿ ವಿನಂತಿಸುವ ಸದಸ್ಯರಿಗೆ ಅವರ ಫೋಲಿಯೊ ಸಂಖ್ಯೆ/DP ID ಮತ್ತು ಕ್ಲೈಂಟ್ ID ಯನ್ನು ನಮೂದಿಸಿ ಕಳುಹಿಸುತ್ತದೆ.

**ವಾರ್ಷಿಕ ಮಹಾಸಭೆಯ ಸಮಯದಲ್ಲಿ ದೂರಸ್ಥ ಇ-ಮತದಾನ ಮತ್ತು ಇ-ಮತದಾನಕ್ಕಾಗಿ ಸೂಚನೆಗಳು**

ಕಂಪನಿಗಳ ಕಾಯ್ದೆ 2013 ರ ಸೆಕ್ಷನ್ 108 ರ ಅಡಿಯಲ್ಲಿನ ನಿಬಂಧನೆಗಳ ಪ್ರಕಾರ, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20 (ತಿದ್ದುಪಡಿದಂತೆ), SEBI (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು, 2015 ರ ನಿಯಮ 44 ಮತ್ತು ತಿದ್ದುಪಡಿ ಮಾಡಲಾದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಕಾರ್ಯದರ್ಶಿ ಮಾನದಂಡ ಮತ್ತು ಇತರ ಅನ್ವಯವಾಗುವ ಕಾನೂನುಗಳ ಪ್ರಕಾರ, ಕಂಪನಿಯು ವಾರ್ಷಿಕ ಮಹಾಸಭೆಗೆ ಮೊದಲು ಮತ್ತು ವಾರ್ಷಿಕ ಮಹಾಸಭೆಯ ಸಮಯದಲ್ಲಿ ಎಲೆಕ್ಟ್ರಾನಿಕ್ ಮತದಾನ ವ್ಯವಸ್ಥೆಯ ಸೌಲಭ್ಯವನ್ನು ("ರಿಮೋಟ್ ಇ-ವೋಟಿಂಗ್") ಒದಗಿಸುತ್ತಿದೆ, ಇದರಿಂದಾಗಿ ವಾರ್ಷಿಕ ಮಹಾಸಭೆಯ ಸೂಚನೆಯಲ್ಲಿ ನಿಗದಿಪಡಿಸಿದಂತೆ ವಾರ್ಷಿಕ ಮಹಾಸಭೆಯಲ್ಲಿ ವ್ಯವಹಾರ ನಡೆಸಲು ಸದಸ್ಯರು ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮತ ಚಲಾಯಿಸಲು ಸಾಧ್ಯವಾಗುತ್ತದೆ ಮತ್ತು ಈ ಉದ್ದೇಶಕ್ಕಾಗಿ, ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮತದಾನವನ್ನು ಸುಗಮಗೊಳಿಸಲು ಕಂಪನಿಯು NSDL ಅನ್ನು ನೇಮಿಸಿದೆ. ಸದಸ್ಯರ ಮತದಾನದ ಹಕ್ಕುಗಳು ಸೆಪ್ಟೆಂಬರ್ 22, 2025 ಸೋಮವಾರದಂದು ಕಂಪನಿಯ ಪಾವತಿಸಿದ ಈಕ್ವಿಟಿ ಷೇರು ಬಂಡವಾಳದಲ್ಲಿ ಅವರು ಹೊಂದಿರುವ ಈಕ್ವಿಟಿ ಷೇರುಗಳಿಗೆ ಅನುಗುಣವಾಗಿರುತ್ತವೆ ('ಕಟ್-ಆಫ್ ದಿನಾಂಕ').

ವಾರ್ಷಿಕ ಮಹಾಸಭೆಗೆ ಮುನ್ನ ರಿಮೋಟ್ ಇ-ಮತದಾನ ಸೌಲಭ್ಯವು ಈ ಕೆಳಗಿನ ಅವಧಿಯಲ್ಲಿ ಲಭ್ಯವಿರುತ್ತದೆ:

| | |
|---|---|
| ಇ-ಮತದಾನದ ಆರಂಭ | ಶುಕ್ರವಾರ, ಸೆಪ್ಟೆಂಬರ್ 26, 2025 ರಂದು ಬೆಳಿಗ್ಗೆ 09:00 ಗಂಟೆಗೆ (IST) |
| ಇ-ಮತದಾನದ ಅಂತ್ಯ | ಸೆಪ್ಟೆಂಬರ್ 28, 2025 ರಂದು ಭಾನುವಾರ ಸಂಜೆ 05:00 ಗಂಟೆಗೆ (IST) |

ನಂತರ NSDL ರಿಮೋಟ್ ಇ-ವೋಟಿಂಗ್ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸುತ್ತದೆ. VC/OAVM ಮೂಲಕ ವಾರ್ಷಿಕ ಮಹಾಸಭೆಯಲ್ಲಿ ಹಾಜರಿರುವ ಮತ್ತು ರಿಮೋಟ್ ಇ-ವೋಟಿಂಗ್ ಮೂಲಕ ನಿರ್ಣಯಗಳ ಮೇಲೆ ಮತ ಚಲಾಯಿಸದ ಮತ್ತು ಹಾಗೆ ಮಾಡಲು ನಿರ್ಬಂಧವಿಲ್ಲದ ಸದಸ್ಯರು ವಾರ್ಷಿಕ ಮಹಾಸಭೆಯ ಸಮಯದಲ್ಲಿ ಇ-ವೋಟಿಂಗ್ ವ್ಯವಸ್ಥೆಯ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಸದಸ್ಯರು ನಿರ್ಣಯದ ಮೇಲೆ ಮತ ಚಲಾಯಿಸಿದ ನಂತರ, ಸದಸ್ಯರು ಅದನ್ನು ನಂತರ ಬದಲಾಯಿಸಲು ಅನುಮತಿಸಲಾಗುವುದಿಲ್ಲ.

ವಾರ್ಷಿಕ ಮಹಾಸಭೆಗೆ ಮುನ್ನ ರಿಮೋಟ್ ಇ-ವೋಟಿಂಗ್ ಮೂಲಕ ನಿರ್ಣಯ(ಗಳ) ಮೇಲೆ ಮತ ಚಲಾಯಿಸಿದ ಸದಸ್ಯರು VC/OAVM ಮೂಲಕ ವಾರ್ಷಿಕ ಮಹಾಸಭೆಯಲ್ಲಿ ಹಾಜರಾಗಬಹುದು/ಭಾಗವಹಿಸಬಹುದು ಆದರೆ ವಾರ್ಷಿಕ ಮಹಾಸಭೆಯಲ್ಲಿ ಮತ್ತೊಮ್ಮೆ ಅಂತಹ ನಿರ್ಣಯ(ಗಳ) ಮೇಲೆ ಮತ ಚಲಾಯಿಸಲು ಅವರಿಗೆ ಅರ್ಹತೆ ಇರುವುದಿಲ್ಲ.

ಕಂಪನಿಯು ಎಲೆಕ್ಟ್ರಾನಿಕ್ ಮೂಲಕ ನೋಟಿಸ್ ಕಳುಹಿಸಿದ ನಂತರ ಕಂಪನಿಯ ಷೇರುಗಳನ್ನು ಸ್ವಾಧೀನಪಡಿಸಿಕೊಂಡು ಕಂಪನಿಯ ಷೇರುದಾರರಾಗುವ ಯಾವುದೇ ವ್ಯಕ್ತಿ ಮತ್ತು ಕಟ್-ಆಫ್ ದಿನಾಂಕ ಅಂದರೆ ಸೆಪ್ಟೆಂಬರ್ 22, 2025 ರಂದು ಷೇರುಗಳನ್ನು ಹೊಂದಿದ್ದರೆ, NSDL ಗೆ evoting@nsdl.co.in ಅಥವಾ ಕಂಪನಿ ಅಥವಾ RTA ಗೆ ವಿನಂತಿಯನ್ನು ಕಳುಹಿಸುವ ಮೂಲಕ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಬಹುದು. ಆದಾಗ್ಯೂ, ವ್ಯಕ್ತಿಯು ಈಗಾಗಲೇ ರಿಮೋಟ್ ಇ-ವೋಟಿಂಗ್‌ಗಾಗಿ NSDL ನಲ್ಲಿ ನೋಂದಾಯಿಸಿಕೊಂಡಿದ್ದರೆ, ಅವರು ತಮ್ಮ ಮತಗಳನ್ನು ಚಲಾಯಿಸಲು ಅಸ್ತಿತ್ವದಲ್ಲಿರುವ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಬಳಸಬಹುದು.

ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರು, ಇ-ಮತದಾನದ ಮೂಲಕ ಭಾಗವಹಿಸಲು ಸಾಧ್ಯವಾಗುವಂತೆ ಆದಷ್ಟು ಬೇಗ ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ:

a. ಡಿಮ್ಯಾಟ್ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ - ಅವರ ಠೇವಣಿ ಭಾಗವಹಿಸುವವರೊಂದಿಗೆ (DPs).

b. ಭೌತಿಕ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ - (i) ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ಅಂದರೆ MUFG ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ಗೆ ಪತ್ರ ಬರೆಯುವ ಮೂಲಕ, ಫೋಲಿಯೊ ಸಂಖ್ಯೆಯ ವಿವರಗಳು ಮತ್ತು ಪ್ಯಾನ್ ಕಾರ್ಡ್‌ನ ಸ್ವಯಂ-ದೃಢೀಕೃತ ಪ್ರತಿಯನ್ನು MUFG ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಘಟಕ: ಪುರವಂಕರ ಲಿಮಿಟೆಡ್, ವಿಳಾಸ: MUFG ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, C-101, 247 ಪಾರ್ಕ್, L.B.S ಮಾರ್ಗ, ವಿಖ್ರೋಲಿ ಪಶ್ಚಿಮ, ಮುಂಬೈ- 400083 ಅಥವಾ (ii) rnt.helpdesk@in.mpms.mufg.com ಗೆ ಇಮೇಲ್ ಕಳುಹಿಸುವ ಮೂಲಕ.

ವಾರ್ಷಿಕ ಮಹಾಸಭೆಗೆ ಮುನ್ನ (ಎ) ದೂರದಿಂದಲೇ ಇ-ಮತದಾನ, (ಬಿ) ವಿಸಿ/ಒಎವಿಎಂ ಮೂಲಕ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸುವಿಕೆ ಮತ್ತು ಸೇರುವಿಕೆ, (ಸಿ) ವಾರ್ಷಿಕ ಮಹಾಸಭೆಯ ಸಮಯದಲ್ಲಿ ಇ-ಮತದಾನ ಮತ್ತು (ಡಿ) ಇಮೇಲ್ ಐಡಿಗಳ ನೋಂದಣಿ (ಇ) ಠೇವಣಿ ಮೂಲಕ ಲಾಗಿನ್ ಮಾಡಲು ಸಂಬಂಧಿಸಿದ ಯಾವುದೇ ತಾಂತ್ರಿಕ ಸಮಸ್ಯೆಗಳಿಗೆ ಡಿಮ್ಯಾಟ್ ಮೋಡ್‌ನಲ್ಲಿ ಸೆಕ್ಯೂರಿಟಿಗಳನ್ನು ಹೊಂದಿರುವ ವೈಯಕ್ತಿಕ ಷೇರುದಾರರಿಗೆ ಸಹಾಯವಾಣಿ, ಅಂದರೆ ಎನ್‌ಎಸ್‌ಡಿಎಲ್ ಮತ್ತು ಸಿಡಿಎಸ್‌ಎಲ್, ವಾರ್ಷಿಕ ಮಹಾಸಭೆಯ ಸೂಚನೆಯ ಟಿಪ್ಪಣಿಗಳಲ್ಲಿ ಲಭ್ಯವಿದೆ.

ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ಪರಿಶೀಲಿಸಲು ರಿಮೋಟ್ ಇ-ವೋಟಿಂಗ್ ನಡೆಸಲು ನಿರ್ದೇಶಕರ ಮಂಡಳಿಯು ಪ್ರಾಕ್ಟೀಸಿಂಗ್ ಕಂಪನಿ ಕಾರ್ಯದರ್ಶಿ (ಸದಸ್ಯತ್ವ ಸಂಖ್ಯೆ 5553, COP ಸಂಖ್ಯೆ 7731) ಶ್ರೀ ನಾಗೇಂದ್ರ ಡಿ. ರಾವ್ ಅವರನ್ನು ಪರಿಶೀಲನಾಕಾರರನ್ನಾಗಿ ನೇಮಿಸಿದೆ. ವಾರ್ಷಿಕ ಮಹಾಸಭೆಯ ಸಮಯದಲ್ಲಿ ರಿಮೋಟ್ ಇ-ವೋಟಿಂಗ್ ಮತ್ತು ಇ-ವೋಟಿಂಗ್‌ನ ಫಲಿತಾಂಶವನ್ನು ವಾರ್ಷಿಕ ಮಹಾಸಭೆಯ ಮುಕ್ತಾಯದ ಎರಡು ಕೆಲಸದ ದಿನಗಳಲ್ಲಿ ಘೋಷಿಸಲಾಗುತ್ತದೆ. ಘೋಷಿಸಲಾದ ಫಲಿತಾಂಶಗಳನ್ನು, ಸ್ಕ್ರೂಟಿನೈಜರ್ ವರದಿಯೊಂದಿಗೆ, ಕಂಪನಿಯ ವೆಬ್‌ಸೈಟ್‌ನಲ್ಲಿ ಮತ್ತು NSDL ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.

ಯಾವುದೇ ಪ್ರಶ್ನೆಗಳಿದ್ದಲ್ಲಿ, ನೀವು www.evoting.nsdl.com ನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಷೇರುದಾರರಿಗೆ ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQs) ಮತ್ತು ಷೇರುದಾರರಿಗೆ ಇ-ಮತದಾನ ಬಳಕೆದಾರ ಕೈಪಿಡಿಯನ್ನು ಉಲ್ಲೇಖಿಸಬಹುದು ಅಥವಾ 022 - 4886 7000 ಗೆ ಕರೆ ಮಾಡಿ ಅಥವಾ NSDL ನ ಸಹಾಯಕ ವ್ಯವಸ್ಥಾಪಕಿ ಶ್ರೀ ಫಲ್ಗುಣಿ ಚಕ್ರವರ್ತಿ ಅವರಿಗೆ evoting@nsdl.com ನಲ್ಲಿ ವಿನಂತಿಯನ್ನು ಕಳುಹಿಸಬಹುದು.

ಪುರವಂಕರ ಲಿಮಿಟೆಡ್‌ಗಾಗಿ
ಸಹಿ/-
(ಸುದೀಪ್ ಚಟರ್ಜಿ)
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ
ಸದಸ್ಯತ್ವ ಸಂಖ್ಯೆ: F 11373

ದಿನಾಂಕ: 05-09-2025
ಸ್ಥಳ: ಬೆಂಗಳೂರು

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

# ಅಭಿಮತ

**ಸುಭಾಷಿತ**

ಯಾವುದೇ ಸಮಾಜವು ಜಾಗರೂಕ, ಸುಶಿಕ್ಷಿತ ಹಾಗೂ ಸ್ವಾಭಿಮಾನಿಯಾಗಿದ್ದರೆ ಮಾತ್ರ ಅದರ ಸಾಮರ್ಥ್ಯ ಹೆಚ್ಚಬಲ್ಲದು.

-ಬಿ.ಆರ್. ಅಂಬೇಡ್ಕರ್

**ಸಂಪಾದಕೀಯ**

## ಜಾಮೀನಿನ ನಿರಂತರ ನಿರಾಕರಣೆ ನ್ಯಾಯದಾನದ ತತ್ವಕ್ಕೆ ವಿರುದ್ಧ

ವಿದ್ಯಾರ್ಥಿ ಕಾರ್ಯಕರ್ತ ಉಮರ್ ಖಾಲಿದ್ ಸೇರಿದಂತೆ ಒಟ್ಟು ಒಂಬತ್ತು ಮಂದಿಗೆ ದೆಹಲಿ ಹೈಕೋರ್ಟ್ ಜಾಮೀನು ನಿರಾಕರಣೆ ಮಾಡಿರುವುದು ನ್ಯಾಯದಾನದ ವಿಚಾರವಾಗಿ, ಕಾನೂನಿನ ಪ್ರಕ್ರಿಯೆಗಳ ಪಾಲನೆಯ ವಿಚಾರವಾಗಿ, ವೈಯಕ್ತಿಕ ಸ್ವಾತಂತ್ರ್ಯದ ಮಿತಿಗಳು ಹಾಗೂ ನಾಗರಿಕರ ಹಕ್ಕುಗಳನ್ನು ರಕ್ಷಿಸಲು ಸರ್ಕಾರಗಳು ಹೊಂದಿರುವ ಬದ್ಧತೆಯ ವಿಚಾರವಾಗಿ ಹಲವು ಕಹಿ ಪ್ರಶ್ನೆಗಳನ್ನು ಮೂಡಿಸುವಂತಿದೆ. ಈ ಒಂಬತ್ತು ಮಂದಿಯು 2020ರ ದೆಹಲಿ ಗಲಭೆಗಳಿಗೆ ಸಂಬಂಧಿಸಿದಂತೆ ಅಕ್ರಮ ಚಟುವಟಿಕೆಗಳ (ತಡೆ) ಕಾಯ್ದೆಯ (ಯುಎಪಿಎ) ಅಡಿಯಲ್ಲಿ ಆರೋಪಿಗಳಾಗಿದ್ದಾರೆ. ಜಾಮೀನು ನಿರಾಕರಣೆಯ ಕ್ರಮವು ಆರೋಪಿ ಸ್ಥಾನದಲ್ಲಿ ಇರುವ ಪ್ರಜೆಗಳನ್ನು ನಿರಾಸೆಗೆ ನೂಕಿದೆ. ಪ್ರಭುತ್ವವು ತನ್ನ ಬಲವನ್ನು ಅತಿಯಾಗಿ ಬಳಕೆ ಮಾಡಿ, ಪ್ರಜೆಗಳ ಸಾಂವಿಧಾನಿಕ ಹಕ್ಕುಗಳಿಗೆ ಬೆದರಿಕೆ ಒಡ್ಡಿದಾಗಲೂ ತಾನು ಪ್ರಭುತ್ವದ ಜೊತೆ ಇರುವೆ ಎಂಬ ಸೂಚನೆಯನ್ನು ಈ ಕ್ರಮದ ಮೂಲಕ ಕೋರ್ಟ್ ನೀಡಿರುವಂತಿದೆ. ಉಮರ್ ಖಾಲಿದ್ ಅವರು ಐದು ವರ್ಷಗಳಿಂದ ಜೈಲಿನಲ್ಲಿದ್ದಾರೆ, ಅವರ ವಿರುದ್ಧ ವಿಚಾರಣೆಯು ಶುರುವಾಗುವ ಲಕ್ಷಣ ಕೂಡ ಕಾಣುತ್ತಿಲ್ಲ. ಕೆಳಹಂತದ ನ್ಯಾಯಾಲಯವು ಉಮರ್ ಅವರ ಜಾಮೀನು ಅರ್ಜಿಯನ್ನು ಮೂರು ಬಾರಿ ನಿರಾಕರಿಸಿದೆ. ಸುಪ್ರೀಂ ಕೋರ್ಟ್ ಕೂಡ ಅವರ ಅರ್ಜಿಯನ್ನು ಮತ್ತೆ ಮತ್ತೆ ಮುಂದಕ್ಕೆ ಹಾಕಿದೆ.

ಆರೋಪಿಗಳಿಗೆ ಜಾಮೀನು ನಿರಾಕರಿಸಿರುವುದಕ್ಕೆ ಕಾರಣ ಏನು ಎಂಬುದಕ್ಕೆ ಕೋರ್ಟ್ ತೃಪ್ತಿಕರ ವಿವರಣೆ ನೀಡಿಲ್ಲ. ಜಾಮೀನು ನಿರಾಕರಣೆಯು ನ್ಯಾಯದ ಮೂಲತತ್ತ್ವವಾದ 'ಅಪರಾಧಿ ಎಂದು ಸಾಬೀತಾಗುವವರೆಗೂ ಆರೋಪಿಯು ಅಮಾಯಕ ಎಂದೇ ಪರಿಗಣಿತನಾಗಿರುತ್ತಾನೆ' ಎಂಬುದಕ್ಕೆ ಅನುಗುಣವಾಗಿ ಇಲ್ಲ. ಜಾಮೀನು ನೀಡಬೇಕಿರುವುದು ಸಹಜ, ಜಾಮೀನು ನಿರಾಕರಣೆಯು ಅಪವಾದ ಎಂಬ ಒಪ್ಪಿತ ನಿಯಮಕ್ಕೂ ಇದು ಅನುಗುಣವಾಗಿಲ್ಲ. ಜಾಮೀನು ಅರ್ಜಿ ವಿಚಾರಣೆಯ ಸಂದರ್ಭದಲ್ಲಿ ಆರೋಪಗಳ ಪೂರ್ಣ ವಿವರಗಳ ಬಗ್ಗೆ ಪರಿಶೀಲನೆ ನಡೆಸುವ ಅಗತ್ಯ ಇರಲಿಲ್ಲವಾದರೂ, ಕೋರ್ಟ್ ಆ ಕೆಲಸ ಮಾಡಿದೆ. ಈ ಮೂಲಕ ಅದು ಪ್ರಾಸಿಕ್ಯೂಷನ್ ನೀಡಿರುವ ಬಿಡಿ ಬಿಡಿ ಸಾಕ್ಷ್ಯಗಳಿಗೆ ಹೆಚ್ಚಿನ ಮಾನ್ಯತೆ ನೀಡಿದಂತಿದೆ. ವಾಟ್ಸ್‌ಆ್ಯಪ್ ಮೂಲಕ ನಡೆಸಿದ ಚಾಟ್‌ಗಳನ್ನು, ರಕ್ಷಣೆ ಇರುವ ಹಾಗೂ ಅನಾಮಿಕ ಸಾಕ್ಷಿಗಳು ನೀಡಿರುವ ಹೇಳಿಕೆಗಳನ್ನು ಆಧಾರವಾಗಿ ಪರಿಗಣಿಸಲಾಗಿದೆ. ಆರೋಪಿಗಳು 'ದೆಹಲಿಯು ಹೊತ್ತಿ ಉರಿಯುವಂತೆ' ಮಾಡಲು ಸಂಚು ರೂಪಿಸಿದ್ದರು ಎಂದು ಈ ಸಾಕ್ಷಿಗಳು ಹೇಳಿವೆ. ಸರ್ಕಾರವು ಮುಸ್ಲಿಂ ವಿರೋಧಿಯಾಗಿದೆ, ಪೌರತ್ವ ತಿದ್ದುಪಡಿ ಕಾಯ್ದೆಯು (ಸಿಎಎ) ಮುಸ್ಲಿಮರನ್ನು ಗುರಿಯಾಗಿಸಿಕೊಂಡಿದೆ ಎಂದು ಆರೋಪಿಗಳ ಪೈಕಿ ಒಬ್ಬರು ಹೇಳಿದ್ದುದೇ ಅವರನ್ನು ಆರೋಪಿಯನ್ನಾಗಿಸಲು ಕಾರಣವಾಗಿದೆ. ಇನ್ನೊಬ್ಬ ಆರೋಪಿಯು, ಸಿಎಎ ವಿರುದ್ಧ ಪ್ರತಿಭಟನೆ ನಡೆಸಲು ಮಹಿಳೆಯರನ್ನು ಒಂದುಗೂಡಿಸಬೇಕು ಎಂದು ಕರೆ ನೀಡಿದ್ದುದು ಪಿತೂರಿಯ ಭಾಗ ಎಂದು ಪರಿಗಣಿತವಾಗಿದೆ. ಸರ್ಕಾರದ ವಿರುದ್ಧ ಭಿನ್ನಾಭಿಪ್ರಾಯ ವ್ಯಕ್ತಪಡಿಸುವುದನ್ನು ಪ್ರಾಸಿಕ್ಯೂಷನ್, ದೇಶದ ವಿರುದ್ಧ ಎಸಗುವ ಕೃತ್ಯ ಎಂಬುದಾಗಿ ಪರಿಗಣಿಸಿರುವಂತಿದೆ. ಈ ವಾದವನ್ನು ಕೋರ್ಟ್ ಕೂಡ ಒಪ್ಪಿಕೊಂಡಿರುವಂತೆ ಕಾಣುತ್ತಿದೆ.

ಒಂಬತ್ತು ಮಂದಿಗೆ ಜಾಮೀನು ನಿರಾಕರಿಸಿರುವ ದೆಹಲಿ ಹೈಕೋರ್ಟ್ ನಿರ್ಣಯದಲ್ಲಿ, ಕಾನೂನಿನ ಆಚೆಗೂ ನ್ಯಾಯವನ್ನು ಗುರ್ತಿಸುವ ಹೊಣೆಗಾರಿಕೆ ಕಾಣೆಯಾಗಿದೆ.

ಯುಎಪಿಎ ಕಾನೂನು ಸರ್ಕಾರಗಳ ಬಳಿ ಇರುವ ಬಲವಾದ ಅಸ್ತ್ರ. ಅದರಲ್ಲೂ, ಸರ್ಕಾರಗಳಿಗೆ ಸರಿಕಾಣದ ವ್ಯಕ್ತಿಗಳನ್ನು ಗುರಿಯಾಗಿಸಿಕೊಂಡು, ಸರ್ಕಾರದ ಟೀಕಾಕಾರರನ್ನು ಗುರಿಯಾಗಿಸಿಕೊಂಡು ಈ ಅಸ್ತ್ರವನ್ನು ಬಳಸಲಾಗುತ್ತದೆ. ಕಾನೂನಿನ ಆಚೆಗೂ ನ್ಯಾಯವನ್ನು ಗುರುತಿಸುವ ಹೊಣೆಯು ನ್ಯಾಯಾಲಯಗಳ ಮೇಲೆ ಇರುತ್ತದೆ. ಈ ಪ್ರಕರಣದಲ್ಲಿ ಈ ಕೆಲಸವನ್ನು ಕೋರ್ಟ್ ಮಾಡಿಲ್ಲ. ಆರೋಪಿಗಳ ಕೃತ್ಯವು ದೇಶದ ವಿರುದ್ಧದ ಪಿತೂರಿಯಾಗಿತ್ತು ಎಂದು ಪ್ರಾಸಿಕ್ಯೂಷನ್ ನೀಡಿದ ವ್ಯಾಖ್ಯಾನವನ್ನು ಆಧರಿಸಿ ಕೋರ್ಟ್ ನಿರ್ಣಯ ನೀಡಿರುವಂತಿದೆ. ಅವಸರದ ವಿಚಾರಣೆಯು ಆರೋಪಿಗಳ ಹಿತಾಸಕ್ತಿಗೆ ವಿರುದ್ಧ ಎಂಬುದನ್ನು ಒಪ್ಪಿಕೊಂಡಿರುವ ಕೋರ್ಟ್, ವಿಚಾರಣೆ ಇಲ್ಲದೆಯೇ ವ್ಯಕ್ತಿಗಳನ್ನು ಜೈಲಿನಲ್ಲಿ ವರ್ಷಗಳವರೆಗೆ ಇರಿಸಿಕೊಳ್ಳುವುದು ಅನ್ಯಾಯ ಎಂಬುದನ್ನು ಒಪ್ಪಿಕೊಂಡಿಲ್ಲ.

### ಜಾತಿನಾಶ ಎಂದರೆ...

**ದೇಶದ ಉಳಿವಿಗೆ ಹಿಂದೂಗಳು ಜಾತಿ ಬಿಡಬೇಕಾಗಿದೆ ಎಂದು ಪ್ರತಾಪ್ ಸಿಂಹ ಹೇಳಿದ್ದಾರೆ. ಜಾತಿ ಎಂದರೆ ಐಡಿ ಕಾರ್ಡ್ ಆಗಿ ವಾಪಸ್ ನೀಡಬೇಕಾ, ಬದಲಾಯಿಸಬೇಕಾ? ಅಥವಾ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ವಿಷ ಉಗುಳುವುದು ಪರಿಹಾರವೇ? ಜಾತಿಯನ್ನು ನಾಶ ಮಾಡಬೇಕಾದರೆ, ನ್ಯಾಯ ಮತ್ತು ವೈಜ್ಞಾನಿಕತೆಯಿಂದ ಸಮ ಸಮಾಜವೊಂದನ್ನು ನಾವು ನಿರ್ಮಿಸಬೇಕು.**

**ಚೇತನ್ ಅಹಿಂಸಾ,** ನಟ, 'ಎಕ್ಸ್'ನಿಂದ

**ಕಿಡಿನುಡಿ**

**ದೇಶದಲ್ಲಿ ಅತಿಹೆಚ್ಚು ಅಕ್ರಮ ಮತದಾನ, ಮತಗಳ್ಳತನದ ದೂರುಗಳು, ಚುನಾವಣಾ ದೌರ್ಜನ್ಯದ ಘಟನೆಗಳು ನಡೆದ ಬಗ್ಗೆ ನ್ಯಾಯಾಲಯಗಳಲ್ಲಿ ದೂರುಗಳು ಅತಿಹೆಚ್ಚು ದಾಖಲಾಗಿರುವುದು ಮತಪತ್ರ ಆಧರಿಸಿ ನಡೆಸಿದ ಚುನಾವಣೆಗಳಲ್ಲಿ, ಅದೂ ಕಾಂಗ್ರೆಸ್ಸಿಗರಿಗೆ ಸಂಬಂಧಿಸಿದಂತೆಯೇ ಹೆಚ್ಚು. ಇದನ್ನು ಇತಿಹಾಸದ ಪುಟಗಳನ್ನು ತೆರೆದು ನೋಡಿ ಕಾಂಗ್ರೆಸ್ಸಿಗರು ತಿಳಿಯಲಿ.**

**ಬಿ.ವೈ. ವಿಜಯೇಂದ್ರ,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

### 25 ವರ್ಷಗಳ ಹಿಂದೆ

ಬುಧವಾರ, 6-9-2000

● **ಧಾರವಾಡ, ಕಾರವಾರ, ಬೆಳಗಾವಿಯಲ್ಲಿ ಭೂಕಂಪ**

**ಬೆಳಗಾವಿ, ಸೆಪ್ಟೆಂಬರ್ 5–** ಉತ್ತರ ಕರ್ನಾಟಕದ ಬೆಳಗಾವಿ, ವಿಜಾಪುರ, ಬಾಗಲಕೋಟೆ, ಹುಬ್ಬಳ್ಳಿ, ಬಾದಾಮಿ ಸೇರಿದಂತೆ ಹಲವಾರು ಸ್ಥಳಗಳಲ್ಲಿ ಇಂದು ನಸುಕಿನಲ್ಲಿ ಭೂಕಂಪ ಸಂಭವಿಸಿದೆ.

ಆದರೆ, ಈ ಭೂಕಂಪನದಿಂದ ಯಾವುದೇ ಸಾವು ಮತ್ತು ಆಸ್ತಿಪಾಸ್ತಿ ಹಾನಿ ಸಂಭವಿಸಿದ ವರದಿಯಾಗಿಲ್ಲ. ರಿಕ್ಟರ್ ಮಾಪಕದಲ್ಲಿ ಕಂಪನದ ತೀವ್ರತೆ 5.1ರಷ್ಟಿತ್ತು. ನಿದ್ದೆಯಲ್ಲಿದ್ದ ಜನ ಗಡಗಡ ಶಬ್ದ ಕೇಳಿ ಮನೆಯಿಂದ ಹೊರಗೆ ಓಡಿಬಂದರು.

● **ಮೂರು ಸಾವಿರಮಠ ರುದ್ರಮುನಿ ಮನವಿ ವಜಾ**

**ಹುಬ್ಬಳ್ಳಿ, ಸೆಪ್ಟೆಂಬರ್ 5–** ಪ್ರತಿಷ್ಠಿತ ಮೂರುಸಾವಿರ ಮಠದ ಉತ್ತರಾಧಿಕಾರಿ ವಿವಾದಕ್ಕೆ ಸಂಬಂಧಿಸಿದಂತೆ ಸುತ್ತೂರು ಶ್ರೀಗಳ ನೇತೃತ್ವದ ಪಂಚ ಮಠಾಧೀಶ ಸಮಿತಿ ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಪದಚ್ಯುತ ಉತ್ತರಾಧಿಕಾರಿ ರುದ್ರಮುನಿ ದೇವರು ಅವರು ಸಲ್ಲಿಸಿದ್ದ ಮನವಿಯನ್ನು ಇಲ್ಲಿನ ಮೊದಲನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯವು ಇಂದು ಇಲ್ಲಿ ವಜಾ ಮಾಡಿ ಪಂಚ ಮಠಾಧೀಶ ಸಮಿತಿಯ ತೀರ್ಪಿನ ಸಿಂಧುತ್ವವನ್ನು ಎತ್ತಿ ಹಿಡಿಯಿತು.

### 75 ವರ್ಷಗಳ ಹಿಂದೆ

ಬುಧವಾರ, 6-9-1950

● **ಏಷ್ಯಾ ರಾಷ್ಟ್ರಗಳಿಗೆ ಆರ್ಥಿಕ ನೆರವು**

**ಲಂಡನ್, ಸೆಪ್ಟೆಂಬರ್ 5–** ಕಾಮನ್‌ವೆಲ್ತ್ ರಾಷ್ಟ್ರಗಳ ತಾಂತ್ರಿಕ ಸಮಿತಿಗಳ ಅನೌಪಚಾರಿಕ ಸಭೆಯು ಇಂದು ರಾತ್ರಿ ಇಲ್ಲಿ ನಡೆಯಿತು.

ದಕ್ಷಿಣ ಮತ್ತು ಆಗ್ನೇಯ ಏಷ್ಯಾ ರಾಷ್ಟ್ರಗಳಿಗೆ ಆರ್ಥಿಕ ನೆರವಿನ ಯೋಜನೆ ರೂಪಿಸುವ ಬಗ್ಗೆ ಚರ್ಚಿಸಲಾಯಿತು. ಗುರುವಾರದಿಂದ ಆರಂಭ ಆಗಲಿರುವ ಕಾಮನ್‌ವೆಲ್ತ್ ರಾಷ್ಟ್ರಗಳ ಸಭೆಯಲ್ಲಿ ಈ ಕುರಿತ ಘೋಷಣೆ ಹೊರಬೀಳುವ ನಿರೀಕ್ಷೆಯಿದೆ.

● **ಭೂಕಂಪ ಸಂತ್ರಸ್ತರ ನೆರವಿಗೆ ಬದ್ಧ: ನೆಹರೂ**

**ದಿಬ್ರುಗಢ, ಸೆಪ್ಟೆಂಬರ್ 5–** ಭೂಕಂಪನದಿಂದ ತತ್ತರಿಸಿರುವ ಅಸ್ಸಾಂಗೆ ಭೇಟಿ ನೀಡಿರುವ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರು, ಹಾನಿಗೀಡಾಗಿರುವ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

# ನವರೋಜಿ ಅವರನ್ನು ಮರೆತೆವೆ?

**ಸೀಮೋಲ್ಲಂಘನ**

**ಸುಧೀಂದ್ರ ಬುಧ್ಯ**

> ಭಾರತದ ಸ್ವಾತಂತ್ರ್ಯ ಚಳವಳಿಯ ಬುನಾದಿಯನ್ನು ಆಂಗ್ಲರ ನೆಲದಲ್ಲಿ ನಿಂತೇ ಹದಗೊಳಿಸಿದ ಅಪೂರ್ವ ಚೇತನ ದಾದಾಭಾಯಿ ನವರೋಜಿ. ಮಹಾತ್ಮ ಗಾಂಧೀಜಿಗೆ ಗುರುವಿನ ಸ್ಥಾನದಲ್ಲಿದ್ದ ನವರೋಜಿ ಅವರ ದ್ವಿಶತಮಾನೋತ್ಸವ ಸಂದರ್ಭ ವರ್ತಮಾನದ ರಾಜಕಾರಣಕ್ಕೆ ಮುಖ್ಯ ಅನ್ನಿಸಿದಂತಿಲ್ಲ.

ಸೆಪ್ಟೆಂಬರ್ 4, 1888ರಂದು ಮೋಹನದಾಸ ಕರಮಚಂದ ಗಾಂಧಿ ಅವರು ಲಂಡನ್ನಿಗೆ ಮೊದಲ ಬಾರಿ ಹೊರಟಾಗ, ಅವರ ಬಳಿ ಮೂರು ಪರಿಚಯ ಪತ್ರಗಳಿದ್ದವು. ಆ ಪೈಕಿ ಮಹಾರಾಷ್ಟ್ರದ ವೈದ್ಯರು ನೀಡಿದ್ದ ಪತ್ರವೂ ಇತ್ತು. ಆ ಪತ್ರವನ್ನು ನೀಡಿದ್ದ ವೈದ್ಯರು 'ನನಗೆ ಅವರ ನೇರ ಪರಿಚಯವಿಲ್ಲ. ಅವರನ್ನು ನಾನು ಇದುವರೆಗೆ ನೋಡಿಲ್ಲ. ಆದರೆ, ಅವರು ದೇಶಕ್ಕೆ ಸಲ್ಲಿಸುತ್ತಿರುವ ಸೇವೆಯಿಂದಾಗಿ, ಭಾರತ ದೇಶವಾಸಿಗಳು ಅವರನ್ನು ಚೆನ್ನಾಗಿ ಬಲ್ಲರು. ಅಸಲಿಗೆ ನೀನು ಈ ಪರಿಚಯ ಪತ್ರವನ್ನು ತೆಗೆದುಕೊಂಡು ಹೋಗುವ ಅವಶ್ಯಕತೆ ಇಲ್ಲ. ನೀನೊಬ್ಬ ಭಾರತೀಯ ಎಂದು ಅವರಿಗೆ ತಿಳಿದರೆ ಸಾಕು, ನಿನಗೆ ಅಗತ್ಯವಿರುವ ಸಹಾಯ ಅವರಿಂದ ದೊರೆಯುತ್ತದೆ. ನೀನು ಅಂಜುಬುರುಕನಾದ್ದರಿಂದ, ಇದು ಮೊದಲ ಪ್ರಯಾಣವಾದ ಕಾರಣ, ಧೈರ್ಯ ಹಾಗೂ ಭರವಸೆ ಮೂಡಲಿ ಎಂದು ಈ ಪರಿಚಯ ಪತ್ರವನ್ನು ಕೊಡುತ್ತಿದ್ದೇನೆ ಎಂದಿದ್ದರು.

ಹೀಗೆ ಆ ದಿನಗಳಲ್ಲಿ ಭಾರತದಿಂದ ಇಂಗ್ಲೆಂಡಿಗೆ ವ್ಯಾಸಂಗಕ್ಕೆಂದು ಹೋಗುತ್ತಿದ್ದ ವಿದ್ಯಾರ್ಥಿಗಳಿಗೆ ಭರವಸೆಯಾಗಿ, ಕಷ್ಟಗಳಿಗೆ ಸ್ಪಂದಿಸುವ ತಂದೆಯಾಗಿ, ಭಾರತ ಹಾಗೂ ಇಂಗ್ಲೆಂಡ್ ನಡುವಿನ ಕೊಂಡಿಯಾಗಿ ಇದ್ದವರು 'ದಿ ಗ್ರಾಂಡ್ ಓಲ್ಡ್ ಮ್ಯಾನ್ ಆಫ್ ಇಂಡಿಯಾ' ಎಂದು ಕರೆಸಿಕೊಂಡ ದಾದಾಭಾಯಿ ನವರೋಜಿ!

ಸೆಪ್ಟೆಂಬರ್ 4, 1825ರಂದು ಮುಂಬೈನ ಪಾರ್ಸಿ ಕುಟುಂಬದಲ್ಲಿ ಜನಿಸಿದ ದಾದಾಭಾಯಿ ಅವರಿಗೆ ವಿದ್ಯಾರ್ಥಿದೆಸೆಯಲ್ಲಿ ವಿವಿಧ ಜನಾಂಗಗಳು, ಭಾಷಿಕರು ಹಾಗೂ ವರ್ತಕರ ಒಡನಾಟ ದೊರಕಿತು. ವ್ಯಾಸಂಗದ ಬಳಿಕ ಎಲ್ಫಿನ್‌ಸ್ಟೋನ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಪ್ರತಿಷ್ಠಿತ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡ ಭಾರತೀಯರ ಪೈಕಿ ನವರೋಜಿ ಮೊದಲಿಗರು. ಸಮಾನಮನಸ್ಕರನ್ನು ಸಂಘಟಿಸಿ ಸಾಮಾಜಿಕ ಕೈಂಕರ್ಯಗಳಲ್ಲಿ ತೊಡಗಿಕೊಂಡಿದ್ದ ಅವರು, ಪಾರ್ಸಿ ಸಮುದಾಯವನ್ನು ಸಾಂಪ್ರದಾಯಿಕತೆಯಿಂದ ಮುಕ್ತಗೊಳಿಸಲು ಪ್ರಯತ್ನಿಸಿದರು. ಮನೆ ಮನೆಗೆ ತೆರಳಿ ಶಿಕ್ಷಣದ ಮಹತ್ವವನ್ನು ಸಾರಿದರು. ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಸಂಸ್ಥೆಗಳನ್ನು ಹುಟ್ಟುಹಾಕಿದರು. 1849ರಲ್ಲಿ ಐದು ಶಾಲೆಗಳನ್ನು ಬಾಲಕಿಯರಿಗಾಗಿ ತೆರೆದರು. ಆಗ ಅವರಿಗೆ 24 ವರ್ಷ!

'ರಾಸ್ಟ್ ಗೋಫ್ತಾರ್' (ಟ್ರೂತ್ ಟೆಲ್ಲರ್) ಎಂಬ ಉಚಿತ ಪಾಕ್ಷಿಕವನ್ನು ಆರಂಭಿಸಿದ ನವರೋಜಿ, ಸಮಾಜ ಹಾಗೂ ಮತೀಯ ಸುಧಾರಣೆಗಳ ಅವಶ್ಯಕತೆ ಹಾಗೂ ನಾಗರಿಕರ ಕರ್ತವ್ಯ ಕುರಿತು ಜನರನ್ನು ಜಾಗೃತಿಗೊಳಿಸಲು ಪ್ರಯತ್ನಿಸಿದರು. ಜನಮನ್ನಣೆಯಿಂದಾಗಿ ಪಾಕ್ಷಿಕವನ್ನು ವಾರಪತ್ರಿಕೆಯನ್ನಾಗಿ ಬದಲಿಸಲಾಯಿತು.

1855ರಲ್ಲಿ ಕಾಮಾ ಕುಟುಂಬದವರು ಲಂಡನ್ನಿನಲ್ಲಿ ಭಾರತೀಯರ ಮೊದಲ ವ್ಯಾಪಾರಿ ಸಂಸ್ಥೆಯನ್ನು ಸ್ಥಾಪಿಸಿದಾಗ ಅದರ ಪಾಲುದಾರರಾಗಿ ನವರೋಜಿ ಲಂಡನ್ನಿಗೆ ತೆರಳಿದರು. ಅದೊಂದು ಸಂಕ್ರಮಣ ಕಾಲ. ಗ್ಲಾಡ್‌ಸ್ಟೋನ್, ಕೋಬ್‌ಡನ್ ರೀತಿಯ ನಾಯಕರು ಬ್ರಿಟನ್‌ನಲ್ಲಿ ಉದಾರೀಕರಣದ ಕುರಿತು ಚರ್ಚೆ ಹುಟ್ಟುಹಾಕಿದ್ದರು. ಹರ್ಬರ್ಟ್ ಸ್ಪೆನ್ಸರ್, ಮಿಲ್ ಹಾಗೂ ಥಾಮಸ್ ಕ್ಯಾರ್ಲಿಲ್ ಸಮಾಜ ಪುನರ್‌ರಚನೆಯ ಸಿದ್ಧಾಂತವನ್ನು ಮರುವ್ಯಾಖ್ಯಾನಿಸಿದ್ದರು. ದಾದಾಭಾಯಿ ಅವರ ರಾಜಕೀಯ ಪ್ರಜ್ಞೆ ಪಕ್ವಗೊಂಡಿತು. ಪ್ರಜಾಸತ್ತಾತ್ಮಕ ಸಂಸ್ಥೆಗಳು ಹಾಗೂ ಸಂಸತ್ತು ಹೇಗೆ ಕಾರ್ಯ ನಿರ್ವಹಿಸುತ್ತದೆ ಎನ್ನುವುದನ್ನು ಅವರು ಅಭ್ಯಾಸ ಮಾಡಿದರು.

ನವರೋಜಿ ಅವರ ಹಾದಿ ಸ್ಪಷ್ಟಗೊಂಡಿತು. 'ಭಾರತೀಯರಿಗಾಗಿ ಭಾರತ' ಎನ್ನುವುದನ್ನು ಬಲವಾಗಿ ಪ್ರತಿಪಾದಿಸುವುದು, ಭಾರತದಲ್ಲಿನ ಬ್ರಿಟಿಷ್ ಆಳ್ವಿಕೆಯ ಮಾದರಿಯನ್ನು ಬ್ರಿಟಿಷ್ ನಾಗರಿಕರಿಗೆ ಪರಿಚಯ ಮಾಡಿಕೊಡುವುದು, ನಾಗರಿಕ ಸೇವೆಗಳಿಗೆ ಸೇರಲು ಲಂಡನ್ನಿಗೆ ಬರುವ ಭಾರತದ ವಿದ್ಯಾರ್ಥಿಗಳಿಗೆ ಆಸರೆಯಾಗುವುದು ದಾದಾಭಾಯಿ ಅವರ ಗುರಿಯಾಯಿತು.

1856ರಲ್ಲಿ ಲಂಡನ್ನಿನ ಯುನಿವರ್ಸಿಟಿ ಕಾಲೇಜಿನಲ್ಲಿ ಗುಜರಾತಿ ಭಾಷೆಯ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಕಾಮಾ ಕುಟುಂಬದ ಸಂಸ್ಥೆಯ ವ್ಯಾವಹಾರಿಕ ನಡೆ ನೈತಿಕವಾಗಿ ಸರಿಕಾಣದಿದ್ದಾಗ, 'ನವರೋಜಿ ಆ್ಯಂಡ್ ಕಂಪನಿ' ಆರಂಭಿಸಿ ಹತ್ತಿ ಉದ್ಯಮದಲ್ಲಿ ತೊಡಗಿಕೊಂಡರು. 'ಕ್ವೀನ್' ವಿಮಾ ಕಂಪನಿಯ ನಿರ್ದೇಶಕರಾದರು. ಮ್ಯಾಂಚೆಸ್ಟರ್ ಕಾಟನ್ ಸಪ್ಲೈ ಅಸೋಸಿಯೇಷನ್‌ನ ಸದಸ್ಯರಾದರು.

ನವರೋಜಿ 1865ರಲ್ಲಿ 'ಲಂಡನ್ ಇಂಡಿಯನ್ ಸೊಸೈಟಿ'ಯನ್ನು ಆರಂಭಿಸಿದರು. ಭಾರತೀಯ ದೃಷ್ಟಿಕೋನವನ್ನು ಬ್ರಿಟಿಷ್ ನಾಗರಿಕರ ಮುಂದೆ ಮಂಡಿಸಲು, 'ಈಸ್ಟ್ ಇಂಡಿಯಾ ಅಸೋಸಿಯೇಷನ್' ಅಸ್ತಿತ್ವಕ್ಕೆ ಬಂದಿತು. ಈ ವೇದಿಕೆಯನ್ನು ಬಳಸಿಕೊಂಡ ನವರೋಜಿ 1867ರಲ್ಲಿ 'ಇಂಗ್ಲೆಂಡ್ಸ್ ಡ್ಯೂಟೀಸ್ ಟು ಇಂಡಿಯಾ' ಎಂಬ ವಿಷಯದ ಮೇಲೆ ವಿಚಾರ ಮಂಡಿಸಿದರು. ಭಾರತದ ಸಂಪತ್ತು ಹೇಗೆ ಇಂಗ್ಲೆಂಡಿಗೆ ಹರಿದು ಬರುತ್ತಿದೆ ಹಾಗೂ ಭಾರತೀಯರನ್ನು ಹೇಗೆ ಆಡಳಿತ ವ್ಯವಸ್ಥೆಯಿಂದ ಹೊರಗಿಡುವ ಪ್ರಯತ್ನಗಳು ನಡೆಯುತ್ತಿವೆ ಎನ್ನುವುದನ್ನು ವಿವರಿಸಿದರು. ಅದೇ ವರ್ಷ ಜುಲೈನಲ್ಲಿ 'ಮೈಸೂರು' ಎಂಬ ವಿಷಯವಾಗಿ ವಿಚಾರ ಮಂಡನೆ ಮಾಡಿ, ಮೈಸೂರಿನಲ್ಲಿ ಸ್ಥಳೀಯ ಆಡಳಿತದ ಮುಂದುವರಿಕೆಯನ್ನು ಬ್ರಿಟಿಷ್ ಸರ್ಕಾರ ಒಪ್ಪಿಕೊಳ್ಳುವುದು ಅನಿವಾರ್ಯವೇಕೆ ಎಂದು ಆಧಾರಗಳ ಸಮೇತ ಹೇಳಿದರು.

ಭಾರತದ ಆಡಳಿತ ಸೇವೆಯಲ್ಲಿ ಭಾರತೀಯರು ಹೆಚ್ಚು ಸ್ಥಾನ ಪಡೆಯಬೇಕು; ಆಗಷ್ಟೇ ಭಾರತದ ಜನರ ಸಂಕಷ್ಟಗಳಿಗೆ ಪರಿಹಾರ ಒದಗಿಸಲು, ಸಂಪತ್ತಿನ ಸೋರಿಕೆಯನ್ನು ತಡೆಯಲು ಸಾಧ್ಯ ಎನ್ನುವುದು ನವರೋಜಿ ಅವರ ನಿಲುವಾಗಿತ್ತು. ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ ಸಮಾನ ಅವಕಾಶ ಸಿಗಬೇಕು ಎಂದು ಆಗ್ರಹಿಸಿದರು. ಪರೀಕ್ಷೆಗೆ ಅರ್ಹತೆಯ ಮಾನದಂಡವನ್ನು ಹಾಗೂ ವಿಷಯಸೂಚಿಯನ್ನು ಕೊನೆಗಳಿಗೆಯಲ್ಲಿ ಬದಲಿಸಿ, ಭಾರತೀಯರನ್ನು ಅವಕಾಶವಂಚಿತರನ್ನಾಗಿ ಮಾಡುವ ಪ್ರಯತ್ನಗಳಾದಾಗ ಪ್ರತಿಭಟಿಸಿದರು. ಭಾರತೀಯರು ಬ್ರಿಟಿಷ್ ಆಡಳಿತದ ಅಡಿಯಲ್ಲಿ ಇದ್ದಾರೆ ಎಂದ ಮೇಲೆ, ಬ್ರಿಟಿಷ್ ನಾಗರಿಕರಿಗೆ ಕೊಡಲಾದ ಹಕ್ಕುಗಳು ಭಾರತೀಯರಿಗೂ ದೊರೆಯಬೇಕು ಎಂದು ಒತ್ತಾಯಿಸಿದರು.

ನವರೋಜಿ ಅವರ ಕುರಿತು 'ನವಜೀವನ' ಪತ್ರಿಕೆಯಲ್ಲಿ ಬರೆದಿದ್ದ ಗಾಂಧೀಜಿ 'ಲಂಡನ್‌ನಲ್ಲಿ ಅವರ ಕಚೇರಿಗೆ ನಾನು ಹೋದದ್ದು ಅದೇ ಮೊದಲು. ಅದೊಂದು ಕಿರಿದಾದ ಕೊಠಡಿ. ಒಂದು ಮೇಜು, ಕುರ್ಚಿ ಹಾಗೂ ಪತ್ರಗಳಿಂದ ತುಂಬಿದ್ದ ಆ ಕೊಠಡಿಯಲ್ಲಿ ಮತ್ತೊಂದು ಕುರ್ಚಿ ಹಾಕಲು ಸ್ಥಳದ ಅಭಾವವಿತ್ತು. ಭಾರತೀಯ ವಿದ್ಯಾರ್ಥಿಗಳು ನವರೋಜಿ ಅವರನ್ನು ಯಾವ ಸಮಯದಲ್ಲಿ ಬೇಕಾದರೂ ಸಂಪರ್ಕಿಸಬಹುದಿತ್ತು. ವಿದ್ಯಾರ್ಥಿಗಳಿಗೆ ತಂದೆಯ ಸ್ಥಾನದಲ್ಲಿ ನಿಂತು ಮಾರ್ಗದರ್ಶನ ನೀಡುತ್ತಿದ್ದರು' ಎಂದು ಉಲ್ಲೇಖಿಸಿದ್ದರು.

1873ರಲ್ಲಿ ಭಾರತಕ್ಕೆ ಹಿಂದಿರುಗಿದ ನವರೋಜಿ, 1874ರಲ್ಲಿ ಬರೋಡಾದ ದಿವಾನರಾದರು. ಬಾಂಬೆಯ ಶಾಸಕಾಂಗ ಪರಿಷತ್ತಿನ ಸದಸ್ಯರಾದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಗುವ ಮೊದಲು, ಅದೇ ಉದ್ದೇಶಕ್ಕಾಗಿ ಸುರೇಂದ್ರನಾಥ್ ಬ್ಯಾನರ್ಜಿಯವರು ಸ್ಥಾಪಿಸಿದ್ದ ಭಾರತೀಯ ರಾಷ್ಟ್ರೀಯ ಸಂಘದ ಸದಸ್ಯರಾಗಿ ಇದ್ದರು.

'ಹೋಮ್ ರೂಲ್' ಪ್ರತಿಪಾದಕರಾಗಿದ್ದ ನವರೋಜಿ, ಬ್ರಿಟಿಷ್ ಡೊಮಿನಿಯನ್‌ಗಳಿಗೆ ನೀಡಲಾಗುತ್ತಿದ್ದ ಸ್ವಯಂ ಆಡಳಿತದ ಹಕ್ಕನ್ನು ಭಾರತಕ್ಕೂ ನೀಡಬೇಕು ಎಂದು ಪ್ರತಿಪಾದಿಸಿದರು. ನಂತರ ಇತರ ನಾಯಕರು ಆ ಆಗ್ರಹವನ್ನು ಮುಂದಕ್ಕೆ ಕೊಂಡೊಯ್ದರು. 1885ರಲ್ಲಿ ಕಾಂಗ್ರೆಸ್ ಸ್ಥಾಪನೆಯಾದ ನಂತರ, ನವರೋಜಿ ಅವರು ಇಂಗ್ಲೆಂಡ್‌ಗೆ ತೆರಳಿ ಅಲ್ಲಿ ಪ್ರಭಾವ ಬೀರುವ ಯೋಜನೆಯನ್ನು ಮುಂದುವರಿಸಿದರು. ಐರಿಷ್ ರಾಷ್ಟ್ರೀಯತೆಯ ಪ್ರತಿಪಾದಕ ವಿಲಿಯಂ ಗ್ಲಾಡ್‌ಸ್ಟೋನ್ ಅವರಿಂದ ಸ್ಫೂರ್ತಿ ಪಡೆದು, 1892ರಲ್ಲಿ ಬ್ರಿಟಿಷ್ ಸಂಸತ್ತನ್ನು ಪ್ರವೇಶಿಸಿದರು. ಬ್ರಿಟಿಷ್ ಸಂಸತ್ತು ಪ್ರವೇಶಿಸಿದ ಏಷ್ಯಾದ ಮೊದಲಿಗ ಎನಿಸಿಕೊಂಡರು.

ಮೂರು ಸಂದರ್ಭಗಳಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ನವರೋಜಿ ಅವರು ಗೋಪಾಲಕೃಷ್ಣ ಗೋಖಲೆ, ಗಾಂಧೀಜಿ ಸೇರಿದಂತೆ ಅನೇಕ ನಾಯಕರಿಗೆ ಗುರುಸ್ಥಾನದಲ್ಲಿ ಇದ್ದರು. ಒಂದೆಡೆ, ಬ್ರಿಟಿಷ್ ಆಡಳಿತವನ್ನು ಖಂಡಿಸುತ್ತಾ, ಮತ್ತೊಂದೆಡೆ ಬ್ರಿಟಿಷರ ನ್ಯಾಯಯುತ ಮನೋಭಾವದಲ್ಲಿ ನಂಬಿಕೆ ಉಳಿಸಿಕೊಂಡು, ಭಾರತದ ಸ್ವಾತಂತ್ರ್ಯಕ್ಕಾಗಿ ಧ್ವನಿಯೆತ್ತಿದ ನವರೋಜಿ ಅವರ ಮಾರ್ಗದ ಕುರಿತಾಗಿ ಮಂದಗಾಮಿ ಹಾಗೂ ತೀವ್ರಗಾಮಿ ಗುಂಪುಗಳಲ್ಲಿ ಗುರುತಿಸಿಕೊಂಡಿದ್ದ ಹಲವು ನಾಯಕರಿಗೆ ತಕರಾರಿತ್ತು.

1938ರಲ್ಲಿ ದಾದಾಭಾಯಿ ನವರೋಜಿ ಅವರ ಕುರಿತ ಆರ್.ಪಿ. ಮಸಾನಿ ಅವರು ಬರೆದ ಕೃತಿಗೆ ಮುನ್ನುಡಿ ಬರೆದಿದ್ದ ಗಾಂಧೀಜಿ 'ದಕ್ಷಿಣ ಆಫ್ರಿಕಾದಲ್ಲಿ ಇದ್ದ ಸಂದರ್ಭದಲ್ಲಿ ನವರೋಜಿ ಅವರು ನನಗೆ ಸ್ಫೂರ್ತಿಯಾಗಿದ್ದರು ಮತ್ತು ಅಗತ್ಯವಾದ ಸಲಹೆಗಳನ್ನು ನೀಡುತ್ತಿದ್ದರು. ವಾರಕ್ಕೊಂದರಂತೆ ನಾನು ಅವರಿಗೆ ಪತ್ರ ಬರೆಯುವುದು ಸಾಮಾನ್ಯವಾಗಿತ್ತು ಎಂದು ಬರೆದಿದ್ದರು.

ಭಾರತ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ದಿನಗಳಲ್ಲಿ, ಆಂಗ್ಲರ ನಾಡಿನಲ್ಲಿ ಭಾರತದ ಪತಾಕೆಯಾದವರು ನವರೋಜಿ. ಭಾರತದ ಅನಧಿಕೃತ ರಾಯಭಾರಿಯಾಗಿ ಇಂಗ್ಲೆಂಡಿನಲ್ಲಿ ಭಾರತದ ಪರ ಕೆಲಸ ಮಾಡಿದ, ಸ್ವಾತಂತ್ರ್ಯ ಚಳವಳಿಗೆ ಶಂಖನಾದ ಮಾಡಿದ ಈ ಮಹನೀಯರ ಜನ್ಮದಿನವು ಸೆಪ್ಟೆಂಬರ್ 4ರಂದು ಸದ್ದಿಲ್ಲದೆ ಕಳೆದುಹೋಯಿತು. ಪ್ರಾತಃಸ್ಮರಣೀಯರಾದ ನವರೋಜಿ ಅವರ ದ್ವಿಶತಮಾನೋತ್ಸವ ಸಂದರ್ಭ ದೇಶದ ಸಂಭ್ರಮ ಆಗಬೇಕಲ್ಲವೆ?

# ವಾಚಕರ ವಾಣಿ

### ಯುದ್ಧದ ನಂತರ ಉಳಿದವರಾರು?

**ದೇಶವೊಂದು** ಅಳಿದ ಮೇಲೆ ಗೆದ್ದ ರಾಷ್ಟ್ರದ ಸೈನಿಕರು ಸೋತವರ ನೆಲದಲ್ಲಿ ಏನೇನು ಮಾಡುತ್ತಾರೆ? ಅಮಲು ತೀರುವ ತನಕ ಕೊಳ್ಳೆ-ಕೊಲೆ-ಅತ್ಯಾಚಾರ ಎಸಗುತ್ತಾರೆ. ಸವಾಲೆನಿಸುವ ಗಂಡಸರ ಕಗ್ಗೊಲೆಯ ನಂತರ ಅಗತ್ಯಕ್ಕೆ ತಕ್ಕಂತೆ ಜೀತದಾಳುಗಳನ್ನು ಸೃಷ್ಟಿಸಿ, ಮಹಿಳೆ-ಮಕ್ಕಳನ್ನು ಅಮಾನುಷವಾಗಿ ನಡೆಸಿಕೊಳ್ಳುತ್ತಾರೆ. ಯುದ್ಧ ಅಂತ್ಯವಾಗುವುದು ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯದ ನಂತರವೇ. ಜಗತ್ತಿನ ಯಾವ ದೇಶದ ಇತಿಹಾಸವೂ ಇದಕ್ಕೆ ಹೊರತಲ್ಲ. ಹೀಗಿದ್ದೂ ನಾವು ಆ ಕುಲದವರು– ಈ ಕುಲದವರು, ಇದೇ ನಮ್ಮ ಧರ್ಮ ಎನ್ನುವುದು ಮೂರ್ಖತನವೆನಿಸುತ್ತದೆ. ನಾಗರಿಕತೆಯ ಹಾದಿಯಲ್ಲಿ ಮನುಷ್ಯರಾಗುವುದಕ್ಕೆ ಒಲವು ತೋರುತ್ತಾ ಪ್ರಾಣಿಜನ್ಯ ಹಿಂಸಾಬುದ್ಧಿಯನ್ನು ಉದ್ದೇಶಪೂರ್ವಕವಾಗಿ ತ್ಯಜಿಸಲೆತ್ನಿಸುತ್ತಿದ್ದೇವೆ. ಹಾಗಿದ್ದೂ ಇದು ನನ್ನ ದೇವರು– ಅದು ನಿನ್ನ ದೇವರು ಎನ್ನುವುದು ಭಂಡಾಟವಲ್ಲದೆ ಮತ್ತೇನು? ಮನುಷ್ಯರನ್ನು ಧರ್ಮ-ದೇವರ ನೆಲೆಯಲ್ಲಿ ವಿಭಜಿಸುವ ಮನಃಸ್ಥಿತಿಯು, ಇದುವರೆಗೂ ನಾವು ಪಡೆದ ಶಿಕ್ಷಣದ ಸೋಲಲ್ಲವೆ?

**ಸಿದ್ದೇಗೌಡ ಶಾಂತರಾಜು,** ಬೆಂಗಳೂರು

### ಉಡಾಫೆ ಮಾತಿಗೆ ಲಗಾಮು ಬೇಕು

**ಇತ್ತೀಚೆಗೆ** ಜನಪ್ರತಿನಿಧಿಗಳು ಆಡುವ ಮಾತುಗಳು ಸಮಾಜದ ಸ್ವಾಸ್ಥ್ಯಕ್ಕೆ ಪೂರಕವಾಗಿಲ್ಲ. ಪ್ರಚಾರಪ್ರಿಯತೆಗಾಗಿ ಕೆಲವು ರಾಜಕಾರಣಿಗಳು, ವಿಚಾರದ ಕೊರತೆಯಿಂದಾಗಿ ಕೆಲವರು ವಿಕೃತವಾಗಿ ಮಾತನಾಡುತ್ತಿದ್ದಾರೆ. ಜನಪ್ರತಿನಿಧಿಗಳ ಪ್ರತಿಯೊಂದು ನಡೆಯನ್ನೂ ಸಮಾಜವು ಸೂಕ್ಷ್ಮವಾಗಿ ಗಮನಿಸುತ್ತಿರುತ್ತದೆ. ಸಾರ್ವಜನಿಕ ಬದುಕನ್ನು ಸಹ್ಯವಾಗಿಸುವ ಬಗ್ಗೆ ರಾಜಕಾರಣಿಗಳು ಯೋಚಿಸಬೇಕಿದೆ. ಜನತೆಯ ನಂಬಿಕೆ ಉಳಿಸಿಕೊಂಡು ಸಾಮಾಜಿಕ ಸ್ವಾಸ್ಥ್ಯ ಹಾಳಾಗದಂತೆ ಪ್ರಬುದ್ಧತೆಯಿಂದ ವರ್ತಿಸಬೇಕಿದೆ.

**ಉದಯ ಮ. ಯಂಡಿಗೇರಿ,** ಧಾರವಾಡ

### ಜಿಎಸ್‌ಟಿ ಕಡಿತ ಶ್ಲಾಘನೀಯ

ಅನಾರೋಗ್ಯಕ್ಕೆ ತುತ್ತಾದ ರೋಗಿಗಳಿಗೆ ಔಷಧವೇ ಜೀವರಕ್ಷಕ. ಅಂತಹ ರೋಗಿಗಳಿಗೆ ಪರಿಹಾರ ಒದಗಿಸುವ ದಿಸೆಯಲ್ಲಿ ಕೇಂದ್ರ ಸರ್ಕಾರವು, ಔಷಧ ಮತ್ತು ವೈದ್ಯಕೀಯ ಸಾಧನಗಳ ಮೇಲಿನ ಜಿಎಸ್‌ಟಿಯನ್ನು ಶೇ 12ರಿಂದ ಶೇ 5ಕ್ಕೆ ತಗ್ಗಿಸಿರುವುದು ಒಳ್ಳೆಯ ನಿರ್ಧಾರ. ಇದರಿಂದ ಬಡ ಮತ್ತು ಮಧ್ಯಮ ವರ್ಗದ ರೋಗಿಗಳಿಗೆ ಅನುಕೂಲ ಆಗಲಿದೆ.

**ಪಿ.ಸಿ. ಕಂಗಾಣಿಸೋಮು,** ಮೈಸೂರು

### ಡಿಜೆ ಬಳಕೆಗೆ ಕಡಿವಾಣ ಬೇಕು

**ವಿಜಯಪುರದಲ್ಲಿ** ಗಣೇಶನ ಮೂರ್ತಿ ಮೆರವಣಿಗೆ ವೇಳೆ ಡಿಜೆ ಅಬ್ಬರಕ್ಕೆ 17 ವರ್ಷದ ಬಾಲಕ ಹೃದಯಾಘಾತದಿಂದ ಮೃತಪಟ್ಟಿರುವುದಾಗಿ ವರದಿಯಾಗಿದೆ. ಇದು ಜನರಲ್ಲಿ ಆತಂಕ ಸೃಷ್ಟಿಸಿರುವುದು ಸುಳ್ಳಲ್ಲ. ಯುವಕರು ಗಣಪತಿ ಹಬ್ಬದಂದು ಡಿಜೆ ಅಳವಡಿಸಿಕೊಂಡು ಭಾರೀ ಗದ್ದಲ ಸೃಷ್ಟಿಸುವ ವಿದ್ಯಮಾನಗಳು ಈಚೆಗೆ ಹೆಚ್ಚಿವೆ. ಇದರಿಂದ ಹೃದ್ರೋಗಿಗಳು, ಚಿಣ್ಣರು, ವಯೋವೃದ್ಧರು ತೊಂದರೆಗೆ ಸಿಲುಕುತ್ತಾರೆ. ಜನರ ಪ್ರಾಣಕ್ಕೆ ಕುತ್ತು ತರುವ ಡಿಜೆ ಬಳಕೆಗೆ ನಿಷೇಧ ಹೇರಬೇಕಿದೆ.

**ಜಯವೀರ ಎ.ಕೆ.,** ಖೇಮಲಾಪುರ

### ಬ್ಯಾಲಟ್ ಪೇಪರ್ ಬಳಕೆ ಸ್ವಾಗತಾರ್ಹ

**ಜಿಬಿಎ,** ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಯಂತ್ರದ (ಇವಿಎಂ) ಬದಲು ಮತ ಪತ್ರಗಳ (ಬ್ಯಾಲಟ್ ಪೇಪರ್) ಬಳಕೆಗೆ ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಇವಿಎಂ ಬಳಕೆಯಿಂದ ಮತ ಕಳ್ಳತನವಾಗುತ್ತಿದೆ ಎಂಬ ಗಂಭೀರ ಆರೋಪ ಕೇಳಿಬರುತ್ತಿದೆ. ಇವಿಎಂ ಬಗ್ಗೆ ರಾಜಕೀಯ ಪಕ್ಷಗಳಲ್ಲೇ ವಿಶ್ವಾಸವಿಲ್ಲ. ಇದರ ಬಗ್ಗೆ ದೇಶದಾದ್ಯಂತ ಹೋರಾಟ ನಡೆಯುತ್ತಿದೆ. ಮತ ಕಳ್ಳತನ ತಡೆಯಲು ಇವಿಎಂ ಬದಲಿಗೆ ಮತಪತ್ರ ಬಳಸಿ ಮತ ಚಲಾಯಿಸುವ ವ್ಯವಸ್ಥೆಯನ್ನು ಜಾರಿಗೆ ತರುವುದು ಉತ್ತಮ ತೀರ್ಮಾನ.

**ಮಹೇಶ್ ಕೂದುವಳ್ಳಿ,** ಚಿಕ್ಕಮಗಳೂರು

### ಪೊಲೀಸರ ಮಾದರಿ ಸೇವೆ

**ಹಾವೇರಿ** ಜಿಲ್ಲೆಯ ಹಾನಗಲ್ ತಾಲ್ಲೂಕಿನ ಆಡೂರ ಠಾಣೆ ಪೊಲೀಸ್ ಸಿಬ್ಬಂದಿ ಆರು ವರ್ಷಗಳಿಂದ ರಕ್ತದಾನ ಮಾಡುತ್ತಿರುವ ಸುದ್ದಿ (ಪ್ರ.ವಾ., ಸೆಪ್ಟೆಂಬರ್ 3) ಓದಿ ಸಂತಸವಾಯಿತು. ಥಲಸ್ಸೇಮಿಯಾ ಬಾಧಿತರಿಗೆ ನೆರವಾಗಲು ಸಿಬ್ಬಂದಿ ಮಾಡುತ್ತಿರುವ ಈ ಜನಮುಖಿ ಸೇವೆಗೆ ಸಲಾಂ ಹೇಳಲೇಬೇಕು.

ಇತ್ತೀಚೆಗೆ ಪೊಲೀಸ್ ಠಾಣೆಗಳು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಬದಲಿಗೆ ಕಾನೂನುಬಾಹಿರ ವಿಷಯಗಳಿಂದಲೇ ಹೆಚ್ಚು ಸುದ್ದಿಯಾಗುತ್ತಿವೆ. ಇಂತಹ ಬೆಳವಣಿಗೆಯ ನಡುವೆ ಭಿನ್ನವಾಗಿರುವ ಈ ಪೊಲೀಸ್ ಸಿಬ್ಬಂದಿಯ ಸೇವಾ ಮನೋಭಾವವು ಇತರೆ ಠಾಣೆಗಳ ಸಿಬ್ಬಂದಿಗೂ ಪ್ರೇರಣೆಯಾಗಲಿ.

**ಬಸಪ್ಪ ಎಸ್. ಮುಳ್ಳೂರ,** ಹಲಗತ್ತಿ

### ದಲಿತರ ಮೇಲೆ ಅನಾದರ ಏಕೆ?

**ಒಡಿಶಾದಲ್ಲಿ** ದನ ಕೊಂದ ಶಂಕೆಯ ಮೇರೆಗೆ ಸ್ಥಳೀಯ ಗುಂಪೊಂದು ನಡೆಸಿದ ಹಲ್ಲೆಗೆ 35 ವರ್ಷದ ದಲಿತ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ (ಪ್ರ.ವಾ., ಸೆ. 5). ದೇಶದ ಎಲ್ಲಾ ರಾಜ್ಯಗಳಲ್ಲೂ ದಲಿತರು ಇಂತಹ ಭಯದಲ್ಲೇ ಬದುಕುತ್ತಿದ್ದಾರೆ. ಇನ್ನೊಂದೆಡೆ ಗೋಮಾಂಸ ರಫ್ತು ಮಾಡುತ್ತಿರುವ ದೇಶಗಳ ಪೈಕಿ ಭಾರತವು ಇಡೀ ವಿಶ್ವದಲ್ಲಿಯೇ ಎರಡನೇ ಸ್ಥಾನದಲ್ಲಿದೆ. ದೇಶದಲ್ಲಿ ಅಮಾನವೀಯ ಘಟನೆಗಳು ನಡೆಯುತ್ತಿರುವ ನಡುವೆಯೇ ಗೋಮಾಂಸ ವಹಿವಾಟು ಸಲೀಸಾಗಿ ನಡೆಯುತ್ತಿರುವುದು ಹೇಗೆ? ಆಡಳಿತ ವ್ಯವಸ್ಥೆಯಲ್ಲಿ ಇಂತಹ ದ್ವಂದ್ವ ನಿಲುವು ಸರಿಯಲ್ಲ. ದಲಿತರು ಇನ್ನೆಷ್ಟು ಕಾಲ ಇಂತಹ ದೌರ್ಜನ್ಯಕ್ಕೆ ಒಳಗಾಗಬೇಕು?

**ತಾ.ಸಿ. ತಿಮ್ಮಯ್ಯ,** ಬೆಂಗಳೂರು

**ಚುರುಮುರಿ**

### ಹೀಗೊಂದು ನೆನಪು...

● ಆನಂದ

'ಹಿಗ್ಗಿನ್ಸ್ ಭಾಗವತರ್ ಹೆಸರು ಕೇಳಿದ್ದೀರಾ?' ಮಡದಿ ಕೇಳಿದಳು.

'ಅವರ ಕಛೇರೀನೂ ಕೇಳಿದ್ದೀನಿ. ಎಷ್ಟು ಚೆನ್ನಾಗಿ ದಾಸರ ಕೃತಿಗಳನ್ನು ಹಾಡ್ತಿದ್ದರು' ಎಂದು ನೆನಪು ಮಾಡಿಕೊಂಡೆ.

'ಅವರು ಕ್ರಿಶ್ಚಿಯನ್ ಅಲ್ವಾ?'

'ಹೌದು ಅಮೆರಿಕದವರು. ಇಲ್ಲಿ ಬಂದು ಸಂಗೀತ ಕಲಿತರು. ನಮ್ಮ ಯೇಸುದಾಸ್? ಅವರೂ ಕ್ರಿಶ್ಚಿಯನ್. ವಾತಾಪಿ ಗಣಪತಿ ಭಜೆ ಸೊಗಸಾಗಿ ಹಾಡ್ತಾರೆ. ಅಯ್ಯಪ್ಪ ಭಜನೆ ಮಾಡ್ತಾರೆ'.

'ಯಾರೂ ಆಕ್ಷೇಪಿಸೊಲ್ಲವೆ?'

'ಆಕ್ಷೇಪಣೆ ಯಾಕೆ? ಖುಷಿಯಿಂದ ಕೇಳ್ತಾರೆ ಜನ'.

'ಮತ್ತೆ ಬಿಸ್ಮಿಲ್ಲಾ ಖಾನ್?'

'ಮುಸ್ಲಿಮರಾದರೂ ಪ್ರತಿ ದಿನ ಗಂಗಾ ತೀರದಲ್ಲಿ ಕೂತು ಷೆಹನಾಯ್ ನುಡಿಸ್ತಿದ್ದರಂತೆ. ಅಮೆರಿಕದಲ್ಲಿರುವ ಒಬ್ಬ ಶ್ರೀಮಂತ ಭಾರತೀಯ ಅವರಿಗೆ, ನೀವು ನಮ್ಮೂರಿಗೆ ಬನ್ನಿ, ದೊಡ್ಡ ಬಂಗಲೆ ಕೊಡ್ತೀನಿ, ಅಲ್ಲಿ ಆರಾಮವಾಗಿ ವಾದ್ಯ ನುಡಿಸಿ ಎಂದಾಗ ಅವರು, ಗಂಗಾ ನದೀನೂ ಅಲ್ಲಿಗೆ ತರ್ತೀಯಾ? ಎಂದು ಕೇಳಿದರಂತೆ'.

'ವ್ಹಾ! ಕ್ಯಾ ಬಾತ್ ಹೈ. ಮೊನ್ನೆ ಪರ್ವೀನ್ ಸುಲ್ತಾನ್ ಚಾಮುಂಡೇಶ್ವರಿ ಸ್ತುತಿ ಹಾಡಿದ್ದನ್ನು ಕೇಳಿದೆ ಯೂಟ್ಯೂಬಿನಲ್ಲಿ'.

'ವಿಲಾಯತ್ ಖಾನ್, ಷೇಖ್ ಚಿನ್ನಾ ಮೌಲಾ ಸಾಬ್, ರಶೀದ್ ಖಾನ್ ಹೀಗೆ ಅನೇಕರಿಗೆ ಧರ್ಮ ಅಡ್ಡಿ ಮಾಡೇ ಇಲ್ಲ ಸಂಗೀತ ಕಲಿಯೋದಕ್ಕೆ. ಬೇರೆ ಧರ್ಮಕ್ಕೆ ಸೇರಿದ ಗೀತೆಗಳನ್ನು ಹಾಡೋದಿಕ್ಕೆ'.

'ಮಹಮದ್ ರಫಿ ನೋಡ್ರೀ ಹೇಗೆ ಹಾಡಿದ್ದಾರೆ ಮನ ತಡಪದ್ ಹರಿ ದರ್ಶನ್‌ಕೆ ಲಿಯೆ ಹಾಡನ್ನ? ಮೊನ್ನೆ ಕಾಶ್ಮೀರದ ಗಾಯಕರೊಬ್ಬರು ಭಾಗ್ಯದ ಲಕ್ಷ್ಮೀ ಬಾರಮ್ಮ ಸುಶ್ರಾವ್ಯವಾಗಿ ಹಾಡಿದರಂತೆ. ದುಬಾಯಿಯಲ್ಲಿ ಕೃಷ್ಣನ ಬಗ್ಗೆ ಆಡಿಯೊ ವಿಷುಯಲ್ ಶೋ ಅದ್ಭುತವಾಗಿ ಮೂಡಿ ಬಂದು, ಅನೇಕ ಅರಬ್ಬರು ಖುಷಿಯಿಂದ ಚಪ್ಪಾಳೆ ತಟ್ಟಿದರಂತೆ. ಅದು ಸರಿ, ಈಗ್ಯಾಕೆ ಇದೆಲ್ಲ...'

'ಬಾನು ಮೇಡಂ ದಸರಾ ಟೇಪ್ ಕತ್ತರಿಸ್ತಾರೆ ಎಂದಿದ್ದಕ್ಕೆ ಎಷ್ಟೆಲ್ಲಾ ಕೂಗಾಡ್ತಿದಾರಲ್ಲ ಕೆಲವರು, ಅದಕ್ಕೆ...'

**ಸಂಗತ**

## ಬಾನಂಗಳದ ಅಪೂರ್ವ ಚಂದ್ರ ಚಮತ್ಕಾರ

**ಚಂದ್ರನ ಅಪೂರ್ವ ನೋಟವನ್ನು ಸೆ. 7ರಂದು ಕಣ್ತುಂಬಿಕೊಳ್ಳಬಹುದು. ಈ ಚಂದ್ರಗ್ರಹಣವನ್ನು ತಪ್ಪಿಸಿಕೊಂಡರೆ, ಮತ್ತೆ 2028ರವರೆಗೆ ಕಾಯಬೇಕು.**

● ಬಿ.ಎಸ್. ಶೈಲಜಾ

**ಹುಣ್ಣಿಮೆಯ** ಚಂದ್ರ ಎಂದರೆ ಕವಿಗಳಿಗೆ, ಪ್ರೇಮಿಗಳಿಗೆ, ಕಲಾವಿದರಿಗೆ ಅತ್ಯಂತ ಪ್ರೀತಿ. ಶೀತಲ ಕಿರಣಗಳದೊಂದು ಆಕರ್ಷಣೆಯಾದರೆ, ಅಪೂರ್ವ ಶಾಂತಿಯನ್ನೂ ಅದು ಸೂಚಿಸುತ್ತದೆ. ಸೌಂದರ್ಯ-ಶಾಂತಿಯ ಸಂಕೇತವಾದ ಚಂದ್ರ ಇದ್ದಕ್ಕಿದ್ದಂತೆ ಬಣ್ಣ ಕಳೆದುಕೊಂಡು ಮಂಕಾದರೆ ಹುಟ್ಟುವ ಭಾವನೆಗಳೇ ಬೇರೆ.

ಚಂದ್ರಗ್ರಹಣ ರಾಜನೊಬ್ಬನಿಗೆ ಸನ್ಯಾಸ ಸ್ವೀಕರಿಸಲು ಪ್ರೇರೇಪಿಸಿತು. ಕವಿಯೊಬ್ಬನಿಗೆ ನಿರಾಶಾಭಾವ ಮೂಡಿಸಿತು. ಅಷ್ಟೇ ಆಗಿದ್ದರೆ ಚೆನ್ನಾಗಿತ್ತು. ಮಹಾರಾಜರುಗಳಿಗೆ ಕೇಡನ್ನು ತರುವ ಸಂದೇಶ ಎಂದು ಚಂದ್ರಗ್ರಹಣವನ್ನು ಭಾವಿಸಿದವರೇ ಹೆಚ್ಚು. ಹಾಗಾಗಿ, ತಮ್ಮ ರಾಜನನ್ನು ಆ ದುಷ್ಟಶಕ್ತಿಯಿಂದ ಕಾಪಾಡಲು ತಾತ್ಕಾಲಿಕ 'ರಾಜ'ನೊಬ್ಬನನ್ನು ಸಿಂಹಾಸನದ ಮೇಲೆ ಕೂಡಿಸಿ, ಗ್ರಹಣ ಮುಗಿದ ಕೂಡಲೇ ಅವನನ್ನು ಬಲಿಕೊಡುವ ಸಂಪ್ರದಾಯ ಬ್ಯಾಬಿಲೋನಿಯಾದಲ್ಲಿ ಇತ್ತು. ಭಾರತದಲ್ಲಿ ದೇವಾಲಯಗಳಿಗೆ ದತ್ತಿ ಮತ್ತು ವಿದ್ವಾಂಸರಿಗೆ ದಾನ ನೀಡುವ ಪರಿಪಾಠ ಬೆಳೆದುಬಂದಿತು. ನೂರಾರು ಶಾಸನಗಳು ಹೀಗೆ ಗ್ರಹಣಗಳನ್ನು ದಾಖಲಿಸಿವೆ. ಭೂಮಿಯ ಭ್ರಮಣೆಯ ನಿಧಾನವಾದ ಬದಲಾವಣೆಯನ್ನು ವಿವರಿಸುವಲ್ಲಿ ಇವುಗಳ ಮಹತ್ವ ತಡವಾಗಿಯಾದರೂ ಅರಿವಾಗಿದೆ.

ಭೂಮಿಯ ನೆರಳಿನಲ್ಲಿ ಚಂದ್ರ ಹಾದುಹೋಗುವ ವಿದ್ಯಮಾನವೇ ಚಂದ್ರಗ್ರಹಣ. ಇದರ ಬಗ್ಗೆ ಪ್ರಾಥಮಿಕ ಶಾಲೆಯಲ್ಲೇ ತಿಳಿವಳಿಕೆ ಕೊಡಲಾಗುತ್ತದೆ. ಆದರೂ, ಜನರ ಮನಸ್ಸಿನಿಂದ ಭಯ ಇನ್ನೂ ಮಾಸಿಲ್ಲ. ಸೂರ್ಯಗ್ರಹಣದಂದು ಕಿಟಕಿ ಬಾಗಿಲು ಹಾಕಿ ಕುಳಿತುಕೊಳ್ಳುವರು; ಚಂದ್ರಗ್ರಹಣಕ್ಕೆ ಮುಸುಕಿಟ್ಟು ಮಲಗುವರು. ಹೀಗೆ ಮಾಡುವುದರಿಂದ ಅಪೂರ್ವ ನೈಸರ್ಗಿಕ ಚಮತ್ಕಾರವನ್ನು ನೋಡುವ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಕಾಮನಬಿಲ್ಲು, ಜೋಡಿ ಕಾಮನಬಿಲ್ಲು, ಚಂದ್ರನ ಸುತ್ತ 'ಗೂಡು ಕಟ್ಟುವುದು'-ಇಂತಹ ನೋಟಗಳ ಹಾಗೆ ಗ್ರಹಣವೂ ಒಂದು ಅಪರೂಪದ ಆಕರ್ಷಕ ನೋಟ.

ಭೂಮಿ ಒಂದು ಘನಗೋಳ ಆದ್ದರಿಂದ ಅದರ ನೆರಳು ಗಾಢವಾಗಿ ಕಪ್ಪಾಗಿಯೇ ಇರಬೇಕು. ಆಕಾಶದಲ್ಲೊಂದು ತೆರೆ ಇದ್ದಿದ್ದರೆ ಪರೀಕ್ಷಿಸಬಹುದಾಗಿತ್ತು. ನೆರಳಿಗಿಂತ ಚಿಕ್ಕದಾದ ಚಂದ್ರ ಹೀಗೊಂದು ತೆರೆಯಾಗುವುದೇ ಚಂದ್ರಗ್ರಹಣ. ಆದರೆ, ಭೂಮಿಯನ್ನು ಆವರಿಸಿರುವ ವಾತಾವರಣ ಕಪ್ಪು ನೆರಳಿನ ಬದಲು ಬಣ್ಣ ಬಣ್ಣದ ಲೋಕವನ್ನು ತೆರೆದಿಡುತ್ತದೆ. ಆಕರ್ಷಕ ಸೂರ್ಯೋದಯ, ಸೂರ್ಯಾಸ್ತ, ಚಂದ್ರೋದಯ, ಚಂದ್ರಾಸ್ತಗಳನ್ನು ಪ್ರದರ್ಶಿಸುತ್ತದೆಯಲ್ಲವೇ? ಹಾಗೆಯೇ ನೆರಳಿನಲ್ಲಿ ಮರೆಯಾಗುವ ಚಂದ್ರನಿಗೆ ಬಣ್ಣದ ಲೇಪನ ಮಾಡುತ್ತದೆ. ರಕ್ತವರ್ಣದ ಚಂದ್ರ ಎಂಬುದು ಉತ್ಪ್ರೇಕ್ಷೆ; ಕಿತ್ತಳೆ, ಕಂದು ಅಥವಾ ತಾಮ್ರವರ್ಣ ಎಂಬುದು ಸೂಕ್ತ.



ಸೆಪ್ಟೆಂಬರ್ 7ರ ರಾತ್ರಿ ನೆರಳಿನೊಳಗಿನ ಚಂದ್ರನ ಬಣ್ಣ ತಿಳಿಯಲು ಒಂದು ಅವಕಾಶ ಒದಗಲಿದೆ. ಸ್ವಲ್ಪ ತಡವಾಗಿ ಮಲಗಿದರಾಯಿತಷ್ಟೇ. ರಾತ್ರಿ 9.30ರ ಸುಮಾರಿಗೆ ಚಂದ್ರನತ್ತ ಕಣ್ಣು ಹಾಯಿಸಿ. ಮತ್ತೆ 10ರ ನಂತರ ಏನಾದರೂ ವ್ಯತ್ಯಾಸ ಇದೆಯೇ? ಹತ್ತು ನಿಮಿಷ ಬಿಟ್ಟು ಮತ್ತೆ ನೋಡಿ. ಒಂದು ಮೂಲೆಯಲ್ಲಿ ಸ್ವಲ್ಪ ಮಸಿ ಹತ್ತಿದ ಹಾಗೆ ಕಾಣುವುದು. ಇನ್ನೂ ಹತ್ತು ನಿಮಿಷ ಬಿಟ್ಟು ನೋಡಿದಾಗ ಆ ಭಾಗದಲ್ಲಿ ಕ್ರಮೇಣ ಮಸುಕಾಗುತ್ತಿರುವುದು ಗಮನಕ್ಕೆ ಬರುತ್ತದೆ. 10.45ರ ಸುಮಾರಿಗೆ ಚಂದ್ರ ಮಂಕಾಗಿ ಮಸಿ ಹತ್ತಿದಂತಿದ್ದ ಭಾಗ ವಿಸ್ತಾರವಾಗಿರುವುದು. ಚಂದ್ರನ ಬಣ್ಣ ಸ್ವಲ್ಪ ಕಿತ್ತಳೆಯೇನೋ ಅನ್ನಿಸಬಹುದು. 11ರ ವೇಳೆಗೆ ಬಿಳಿ ಬಣ್ಣ ಪೂರ್ತಿ ಮಾಯವಾಗಿ ಕಂದು ಅಥವಾ ಕಿತ್ತಳೆ ಆಗಬಹುದು. ಯಾವ ಬಣ್ಣ ಆಗಲಿದೆ ಎಂದು ನೋಡಿ ತಿಳಿಯಬೇಕಷ್ಟೆ.

ಚಂದ್ರನ ಸುತ್ತ ಮೋಡ ಇರದಿದ್ದರೆ ನಕ್ಷತ್ರಗಳು ಸ್ಫುಟವಾಗಿ ಕಾಣತೊಡಗುತ್ತವೆ. ಅವು ಅಲ್ಲೇ ಇದ್ದವಲ್ಲ; ಸಂಜೆ ಏಕೆ ಕಾಣಲಿಲ್ಲ? ಚಂದ್ರ ಮಂಕಾದ್ದರಿಂದ ಅವುಗಳ ಮಂದ ಪ್ರಕಾಶ ಗೋಚರಿಸುತ್ತದೆ. ವಿದ್ಯುದ್ದೀಪದ ಜೊತೆಯಲ್ಲಿ ಮೇಣದಬತ್ತಿ ಇಟ್ಟು ನೋಡಿ. ವಿದ್ಯುದ್ದೀಪ ಆರಿಸಿದಾಗ ಮಾತ್ರ ಮೇಣದಬತ್ತಿಯ ಅಸ್ತಿತ್ವ ಗಮನಕ್ಕೆ ಬಂದ ಹಾಗೆ. 11ರಿಂದ 12.22ರವರೆಗೆ ಪೂರ್ಣ ಗ್ರಹಣ. ಅಂದರೆ ಕಳಾಹೀನನಾದ ಚಂದ್ರನ ದರ್ಶನ. 12.30ರ ಹೊತ್ತಿಗೆ ಮತ್ತೆ ಕಿತ್ತಳೆ ಬಣ್ಣದ ಲೇಪನ. ಅಂಚಿನಲ್ಲಿ ತೆಳುವಾಗಿ ಕಾಣಿಸಿಕೊಳ್ಳುವ ಬಿಳಿ ಬಣ್ಣ ಕ್ರಮೇಣ ವಿಸ್ತರಿಸುತ್ತದೆ, 1.26ಕ್ಕೆ ಮತ್ತೆ ಬಿಳಿ ಚಂದ್ರ ಹಾಜರು! ಸುತ್ತಲಿನ ನಕ್ಷತ್ರಗಳು ಮಾಯ!

ನಾವು ಮಾಡುವ ಕೆಲಸವೊಂದಿದೆ. 10.30ರ ಸಮಯದಲ್ಲಿ ವೃತ್ತಾಕಾರದ ನೆರಳು ಚಂದ್ರನ ಮೇಲೆ, ಕಚ್ಚಿ ತಿಂದ ರೊಟ್ಟಿಯ ಆಕಾರ ಮೂಡಿಸಿದೆಯಲ್ಲವೇ? ಭೂಮಿಯ ನೆರಳು ಗುಂಡಗಿದೆ ಎಂದ ಮೇಲೆ ಭೂಮಿ ಗುಂಡಗಿದೆ ಎಂದಾಯಿತಲ್ಲವೇ? ನಿಮ್ಮ ಕಣ್ಣಿನಿಂದಲೇ ಈ ಸತ್ಯವನ್ನು ಖಚಿತಪಡಿಸಿಕೊಳ್ಳಿ. 11ರಿಂದ 12.22ವರೆಗಿನ ಅವಧಿಯಲ್ಲಿ ಹೊರಗೆ ಬಂದು ಕತ್ತೆತ್ತಿ ನೋಡಿ. ಬಹುಶಃ ಚಂದ್ರನನ್ನು ಹುಡುಕಬೇಕಾಗಬಹುದು. ಮೊಬೈಲ್‌ನಿಂದ ಫೋಟೊ ತೆಗೆಯಲು ಪ್ರಯತ್ನಿಸಿ. ಬೆಳಕು ಸಾಲದು ಎಂಬ ಸಂದೇಶ ಬಂದರೆ ಆಶ್ಚರ್ಯವೇನಿಲ್ಲ. ಬೇರೆ ಕ್ಯಾಮೆರಾ ಇದ್ದರೆ ಎಕ್ಸ್‌ಪೋಷರ್ ಹೊಂದಿಸುವ ಪ್ರಯತ್ನ ಮಾಡಿ ಫೋಟೊ ತೆಗೆಯಬಹುದು.

ಗ್ರಹಣ ವೀಕ್ಷಿಸುವ ಈ ಅವಕಾಶ ಕಳೆದುಕೊಂಡರೆ, 2028ರ ಕೊನೆಯ ದಿನದವರೆಗೂ ಕಾಯಬೇಕಾಗುತ್ತದೆ!

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿಶ್ವವಿದ್ಯಾಲಯ ಧನಸಹಾಯ ಆಯೋಗವು (ಯುಜಿಸಿ) ಪದವಿ ಕೋರ್ಸ್‌ಗಳ ಒಂಬತ್ತು ವಿಷಯಗಳಿಗೆ ಸಿದ್ಧಪಡಿಸಿರುವ ಕಲಿಕಾ ಫಲಿತಾಂಶ ಆಧಾರಿತ ಪಠ್ಯಕ್ರಮ ಚೌಕಟ್ಟಿನ (ಎಲ್‌ಒಸಿಎಫ್) ಕರಡು ವಿವಾದಕ್ಕೆ ಗುರಿಯಾಗಿದೆ. ಪಠ್ಯಗಳಲ್ಲಿ ಭಾರತೀಯ ಜ್ಞಾನ ವ್ಯವಸ್ಥೆಯನ್ನು ಅಳವಡಿಸುವ ಆಶಯದಿಂದ ಎಲ್‌ಒಸಿಎಫ್ ರೂಪಿಸಲಾಗಿದೆ ಎನ್ನುವುದು ಯುಜಿಸಿ ಪ್ರತಿಪಾದನೆ. ಯುಜಿಸಿಯ ಈ ಪ್ರಯತ್ನಕ್ಕೆ ಕರ್ನಾಟಕ, ಕೇರಳ ಸೇರಿದಂತೆ ಕೆಲವು ರಾಜ್ಯಗಳು ವಿರೋಧ ವ್ಯಕ್ತಪಡಿಸಿವೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಶಿಕ್ಷಣದ ಮೂಲಕ ಪಠ್ಯಪುಸ್ತಕಗಳಲ್ಲಿ ಆರ್‌ಎಸ್‌ಎಸ್ ಕಾರ್ಯಸೂಚಿಯನ್ನು ಜಾರಿಗೆ ತರುವ ಮೂಲಕ ಶಿಕ್ಷಣವನ್ನು ಕೇಸರೀಕರಣಗೊಳಿಸಲು ಮುಂದಾಗಿದೆ ಎನ್ನುವ ಟೀಕೆ ವ್ಯಕ್ತವಾಗಿದೆ

# ಯುಜಿಸಿಯ ಕರಡು ಪಠ್ಯಕ್ರಮ ಚೌಕಟ್ಟು: ವಿರೋಧ ಏಕೆ?

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ವಿಶ್ವವಿದ್ಯಾಲಯ ಧನಸಹಾಯ ಆಯೋಗವು (ಯುಜಿಸಿ) ರೂಪಿಸಿರುವ ಕಲಿಕಾ ಫಲಿತಾಂಶ ಆಧಾರಿತ ಪಠ್ಯಕ್ರಮ ಚೌಕಟ್ಟು (ಎಲ್‌ಒಸಿಎಫ್) ವಿವಾದಕ್ಕೆ ಗುರಿಯಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ–2020ರ ನಿಯಮಗಳಿಗೆ ತಕ್ಕಂತೆ ಯುಜಿಸಿ ವಿಷಯವಾರು ಕಲಿಕಾ ಫಲಿತಾಂಶ ಆಧಾರಿತ ಪಠ್ಯಕ್ರಮ ಚೌಕಟ್ಟಿನ ಕರಡು ರೂಪಿಸಿದೆ. ಕಾರ್ಯಕ್ರಮ ವಿನ್ಯಾಸ ಮತ್ತು ಪಠ್ಯದಲ್ಲಿ ನಾವೀನ್ಯ ಮತ್ತು ಹೊಂದಿಕೆ ಗುಣವನ್ನು ಉತ್ತೇಜಿಸಲು ಮಾದರಿ ಪಠ್ಯಕ್ರಮವಾಗಿ ಪದವಿ ಕೋರ್ಸ್‌ಗಳ ಒಂಬತ್ತು ವಿಷಯಗಳಲ್ಲಿ (ಮಾನವ ಶಾಸ್ತ್ರ, ರಸಾಯನ ವಿಜ್ಞಾನ, ವಾಣಿಜ್ಯ, ಅರ್ಥಶಾಸ್ತ್ರ, ಗಣಿತ, ಭೂಗೋಳ ವಿಜ್ಞಾನ, ಗೃಹ ವಿಜ್ಞಾನ, ದೈಹಿಕ ಶಿಕ್ಷಣ ಮತ್ತು ರಾಜ್ಯಶಾಸ್ತ್ರ) ಎಲ್‌ಒಸಿಎಫ್ ಕರಡು ಪ್ರಕಟಿಸಿದ್ದು, ಆಕ್ಷೇಪಗಳಿದ್ದರೆ ತಿಳಿಸುವಂತೆ ಶಿಕ್ಷಣ ಸಂಸ್ಥೆಗಳನ್ನು, ಶಿಕ್ಷಣ ತಜ್ಞರನ್ನು ಯುಜಿಸಿ ಕೋರಿದೆ.

ವಿವಿಧ ಪಠ್ಯಗಳಲ್ಲಿ ಭಾರತೀಯ ಜ್ಞಾನ ವ್ಯವಸ್ಥೆಯನ್ನು ಅಳವಡಿಸುವ ಆಶಯದಿಂದ ಎಲ್‌ಒಸಿಎಫ್ ರೂಪಿಸಲಾಗಿದೆ ಎಂದು ಯುಜಿಸಿ ಹೇಳುತ್ತಿದೆ. ನಿದರ್ಶನಕ್ಕೆ, ರಸಾಯನ ವಿಜ್ಞಾನ ವಿಷಯದ ಆರಂಭದಲ್ಲೇ ಹಿಂದೂಗಳ ಜ್ಞಾನದ ದೇವತೆ ಎಂದು ಪರಿಗಣಿಸಲಾಗಿರುವ ಸರಸ್ವತಿಯ ಫೋಟೊ ಬಳಸಿ ಪ್ರಾರ್ಥನೆಯನ್ನು ಪ್ರಕಟಿಸಲಾಗಿದೆ. ವಾಣಿಜ್ಯ ಮತ್ತು ಅರ್ಥಶಾಸ್ತ್ರದಲ್ಲಿ ಕೌಟಿಲ್ಯನ ಅರ್ಥಶಾಸ್ತ್ರವನ್ನು ಸೇರಿಸಲಾಗಿದೆ. ಗಣಿತದಲ್ಲಿ ಕಾಲಗಣನೆ, ಜ್ಯೋತಿಷ್ಯ, ಬೀಜಗಣಿತ ಹಾಗೂ ಕ್ಯಾಲ್ಕುಲಸ್‌ಗೆ ಪ್ರಾಚೀನ ಭಾರತದ ಕೊಡುಗೆಯನ್ನೂ ಸೇರಿಸಲಾಗಿದೆ. ರಾಜ್ಯಶಾಸ್ತ್ರ ಪಠ್ಯದಲ್ಲಿ ಭಾರತೀಯ ಸ್ವಾತಂತ್ರ್ಯ ಹೋರಾಟ ಕುರಿತ ಪಾಠದಲ್ಲಿ ವಿ.ಡಿ.ಸಾವರ್ಕರ್ ಅವರ 'ಇಂಡಿಯನ್ ವಾರ್ ಆಫ್ ಇಂಡಿಪೆಂಡೆನ್ಸ್' ಕೃತಿಯನ್ನು 'ರೀಡಿಂಗ್' (ಹೆಚ್ಚಿನ ಅಧ್ಯಯನದ ಪುಸ್ತಕಗಳ) ಪಟ್ಟಿಯಲ್ಲಿ ಸೇರಿಸಲಾಗಿದೆ. ಅಲ್ಲದೇ, ಸಾವರ್ಕರ್ ಬಗ್ಗೆ ಪಾಠವೂ ಇದೆ. ದೀನ ದಯಾಳ್ ಉಪಾಧ್ಯಾಯರ ಕುರಿತ ಪಾಠವನ್ನೂ ಅಳವಡಿಸಲಾಗಿದೆ.

ಆದರೆ, ಯುಜಿಸಿಯ ಈ ಪ್ರಯತ್ನಕ್ಕೆ ಕರ್ನಾಟಕ ಸೇರಿದಂತೆ ಕೆಲವು ರಾಜ್ಯಗಳು ವಿರೋಧ ವ್ಯಕ್ತಪಡಿಸಿವೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಯುಜಿಸಿಯ ಮೂಲಕ ಪಠ್ಯಪುಸ್ತಕಗಳಲ್ಲಿ ಆರ್‌ಎಸ್‌ಎಸ್ ಕಾರ್ಯಸೂಚಿಯನ್ನು ಜಾರಿಗೆ ತರುವ ಮೂಲಕ ಶಿಕ್ಷಣವನ್ನು ಕೇಸರೀಕರಣಗೊಳಿಸಲು ಮುಂದಾಗಿದೆ ಎನ್ನುವ ಟೀಕೆ ವ್ಯಕ್ತವಾಗಿದೆ. ಕರ್ನಾಟಕ ಸೇರಿದಂತೆ ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳು ಕರಡನ್ನು ವಿರೋಧಿಸಿವೆ. ಶಿಕ್ಷಣ ತಜ್ಞರು, ಎಸ್‌ಎಫ್‌ಐನಂಥ ಕೆಲವು ವಿದ್ಯಾರ್ಥಿ ಸಂಘಟನೆಗಳು ಯುಜಿಸಿ ಕರಡಿಗೆ ವಿರೋಧ ವ್ಯಕ್ತಪಡಿಸಿದ್ದರೆ, ಆಂಧ್ರಪ್ರದೇಶ ಕ್ರಿಶ್ಚಿಯನ್ ಲೀಡರ್ಸ್ ಫೋರಂನಂಥ ಕೆಲವು ಅಲ್ಪಸಂಖ್ಯಾತ ಸಂಸ್ಥೆಗಳು ಕರಡನ್ನು ವಿರೋಧಿಸಿ ಸಹಿ ಸಂಗ್ರಹ ಮಾಡಿವೆ.

ಕರ್ನಾಟಕವು ಈ ಕರಡು ಚೌಕಟ್ಟನ್ನು ವಿರೋಧಿಸಿದೆ. ಅಲ್ಲದೇ, ಕರಡಿನ ಅಧ್ಯಯನ ನಡೆಸುವುದಕ್ಕಾಗಿ ತಜ್ಞರ ಸಮಿತಿ ರಚಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದ್ದಾರೆ.



ಆಧಾರ: ಪಿಟಿಐ, ಯುಜಿಸಿ ವೆಬ್‌ಸೈಟ್, ಮಾಧ್ಯಮ ವರದಿಗಳು

## ವಿರೋಧಿಸುತ್ತಿರುವವರ ವಾದ

- ಕರಡು ಅವೈಜ್ಞಾನಿಕವಾಗಿದ್ದು, ಪ್ರತಿಗಾಮಿತನದಿಂದ ಕೂಡಿದೆ. ಎಲ್‌ಒಸಿಎಫ್ ಶಿಫಾರಸುಗಳು ದೇಶದ ಜಾತ್ಯತೀತ ಮತ್ತು ವೈವಿಧ್ಯತೆಯ ಮೌಲ್ಯಗಳಿಗೆ ವಿರುದ್ಧವಾಗಿವೆ
- ಭಾರತೀಯ ಜ್ಞಾನ ವ್ಯವಸ್ಥೆಯನ್ನು ಶಿಕ್ಷಣದಲ್ಲಿ ಅಳವಡಿಸುವುದು ಎಲ್‌ಒಸಿಎಫ್ ಆಶಯವಾಗಿದೆ. ಆದರೆ, ಭಾರತದಲ್ಲಿ ಎಂದೂ ಒಂದು ಜ್ಞಾನ ವ್ಯವಸ್ಥೆ ಇರಲಿಲ್ಲ. ಬದಲಿಗೆ, ಹಲವು ಜ್ಞಾನ ವ್ಯವಸ್ಥೆಗಳು ಇದ್ದವು. ಕರಡಿನಲ್ಲಿ 'ವೇದಗಳು, ಪಂಚಾಂಗ, ಉಪನಿಷತ್‌ಗಳು, ಭಗವದ್ಗೀತೆ, ಪುರಾಣ, ರಾಮಾಯಣ, ಮಹಾಭಾರತ ಮತ್ತು ಇತರ ಪುರಾತನ ಸಾಹಿತ್ಯ'ದ ಉಲ್ಲೇಖ ಮಾತ್ರ ಇದೆ. ಕೆಳಸ್ತರದ ಜನರಿಗೆ ಸಂಬಂಧಿಸಿದ ಜ್ಞಾನವನ್ನು ಅಳಿಸಿಹಾಕುವ ಪ್ರಯತ್ನ ಇದಾಗಿದೆ.
- ಇದು ಗತವನ್ನು ವರ್ತಮಾನದೊಂದಿಗೆ ಅಸಂಬದ್ಧವಾಗಿ ಬೆಸೆಯುತ್ತದೆ. ಉದಾಹರಣೆಗೆ, ರಾಮರಾಜ್ಯದಂಥ ಪುರಾತನ ಆದರ್ಶವನ್ನು ವರ್ತಮಾನದ ಕಂಪನಿಗಳ ಸಿಎಸ್‌ಆರ್ ಯೋಜನೆಯೊಂದಿಗೆ ಸಮೀಕರಿಸಲಾಗಿದೆ
- ಇದು ವಿಜ್ಞಾನ, ಕಲೆ ಮತ್ತು ಪುರಾಣಗಳ ನಡುವಿನ ಗೆರೆಯನ್ನು ತೆಳುವಾಗಿಸುತ್ತದೆ. ನಿದರ್ಶನಕ್ಕೆ, 'ಪಂಚಕೋಶ' ಎನ್ನುವ ಪಠ್ಯದಲ್ಲಿ 'ಚಕ್ರಗಳನ್ನು ಕ್ರಿಯಾಶೀಲಗೊಳಿಸುವ ಮೂಲಕ ಬುದ್ಧಿಮತ್ತೆಯನ್ನು ಬೆಳೆಸುವುದು' ಎನ್ನುವ ಉಲ್ಲೇಖವಿದೆ. ಇದೇ ರೀತಿ ಗಣಿತವನ್ನು ನಾರದ ಪುರಾಣದೊಂದಿಗೆ ವಿವರಿಸಲಾಗಿದೆ. ವೇದಗಳ ಪ್ರಸ್ತಾಪವೂ ಬರುತ್ತದೆ
- ಕರಡಿನಲ್ಲಿ 'ಇತಿಹಾಸ'ದ ನೆಪದಲ್ಲಿ ರಾಜಕೀಯ ಕಾರ್ಯಸೂಚಿಯನ್ನು ಹೇರುವ ಪ್ರಯತ್ನ ಮಾಡಲಾಗಿದೆ. ರಾಷ್ಟ್ರೀಯ ಚಳವಳಿಯಲ್ಲಿ ಮಹಾತ್ಮ ಗಾಂಧಿ, ಬಾಲಗಂಗಾಧರ ತಿಲಕ್ ಅವರ ಜತೆ ವಿ.ಡಿ. ಸಾವರ್ಕರ್ ಮತ್ತು ದೀನದಯಾಳ್ ಉಪಾಧ್ಯಾಯ ಅವರ ಹೆಸರುಗಳೂ ಸೇರಿವೆ
- ಭಾರತದ ಸಾಂಸ್ಕೃತಿಕ ಇತಿಹಾಸದ ಬಗ್ಗೆ ಹೆಮ್ಮೆ ತರುವ ಅಂಶಗಳಿವೆ. ಆದರೆ, ಉದ್ಯೋಗ ಸಿಗಲು ನೆರವಾಗುವ ಅಂಶಗಳ ಕೊರತೆ ಇದೆ
- ಯಂತ್ರ, ರಂಗೋಲಿಗಳನ್ನು ಗಣಿತದಲ್ಲಿ ಅಳವಡಿಸುವುದರಿಂದ ಮೂಲಕ ಜಾಗತಿಕ ಮಟ್ಟದಲ್ಲಿ ಈ ಕ್ಷೇತ್ರದಲ್ಲಿ ಇದುವರೆಗೆ ಆಗಿರುವ ಅಭಿವೃದ್ಧಿಯನ್ನು ಕಡೆಗಣಿಸಿ, ಹಿಂದಕ್ಕೆ ಚಲಿಸಿದಂತಾಗುತ್ತದೆ.
- ಕರಡಿನಲ್ಲಿರುವ ಅಂಶಗಳು ಮುಸ್ಲಿಂ, ಕ್ರಿಶ್ಚಿಯನ್, ಸಿಖ್ ಮುಂತಾದ, ಹಿಂದೂಯೇತರ ಧರ್ಮಗಳಿಗೆ ಸೇರಿದ ವಿದ್ಯಾರ್ಥಿಗಳ ಕಲಿಕೆಗೆ ತೊಡಕಾಗಲಿವೆ. ಧಾರ್ಮಿಕ ಅರ್ಥಶಾಸ್ತ್ರ, ವೇದಕಾಲದ ಮಾನವಶಾಸ್ತ್ರ ಮುಂತಾದ ಪರಿಕಲ್ಪನೆಗಳು ಅವರಿಗೆ 'ಪರಕೀಯ' ಆಗಿ ಕಾಣಲಿದ್ದು, ವೈವಿಧ್ಯಮಯ ದೇಶದಲ್ಲಿ ಅವರಿಗೆ ತಾವು ಎರಡನೇ ದರ್ಜೆಯ ಪ್ರಜೆಗಳು ಎಂಬ ಭಾವನೆ ಬರುವ ಸಾಧ್ಯತೆ ಇದೆ
- ಸರ್ಕಾರಿ ಸಂಸ್ಥೆಗಳೂ ಸೇರಿದಂತೆ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಿಸಲಾಗುವ ಪಠ್ಯಗಳಲ್ಲಿ ವೇದ, ಪುರಾಣ, ರಾಮಾಯಣದಂಥ ಅಂಶಗಳನ್ನು ಅಳವಡಿಸುವುದರಿಂದ ಶಿಕ್ಷಣದ ಜಾತ್ಯತೀಯ ಸ್ವರೂಪಕ್ಕೆ ಧಕ್ಕೆಯಾಗುತ್ತದೆ
- ಧಾರ್ಮಿಕ ಗ್ರಂಥಗಳ ಕೆಲವು ಸೂಕ್ತಿ, ಉಲ್ಲೇಖಗಳು ನಿರ್ದಿಷ್ಟ ಜಾತಿಗಳ ಪರವಾಗಿದ್ದು, ಅವು ಸಂವಿಧಾನದ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಪರಿಕಲ್ಪನೆಗಳಿಗೆ ವಿರುದ್ಧವಾಗಿವೆ. ಸಾರ್ವಜನಿಕ ಶಿಕ್ಷಣವು ಯಾವುದೇ ಧಾರ್ಮಿಕ ಬೋಧನೆಗಳನ್ನು ಒಳಗೊಳ್ಳುವಂತಿಲ್ಲ, ಯಾವುದೇ ಧರ್ಮದ ಸಾಹಿತ್ಯವನ್ನು ಉತ್ತೇಜಿಸುವಂತಿಲ್ಲ ಎನ್ನುವುದು ನಮ್ಮ ಸಂವಿಧಾನದ ಆಶಯ

### 'ಪ್ರತಿಕ್ರಿಯಿಸಿ'

ಕರಡು ಚೌಕಟ್ಟಿಗೆ ಸಂಬಂಧಿಸಿದಂತೆ ಅಭಿಪ್ರಾಯ, ಆಕ್ಷೇಪಣೆಗಳನ್ನು ವ್ಯಕ್ತಪಡಿಸಲು ಇದೇ 20ರವರೆಗೆ ಯುಜಿಸಿ ಅವಕಾಶ ನೀಡಿದೆ. ಯುಜಿಸಿ ವೆಬ್‌ಸೈಟ್‌ನಲ್ಲಿ (ugc.gov.in/Notices) ಕರಡು ಲಭ್ಯವಿದ್ದು, ಅದರೊಂದಿಗೆ ಗೂಗಲ್ ಫಾರ್ಮ್‌ನ ಲಿಂಕ್ ನೀಡಲಾಗಿದೆ. ಅದರಲ್ಲಿ ವಿವರಗಳನ್ನು ತುಂಬಿ ಪ್ರತಿಕ್ರಿಯೆಗಳನ್ನು ಸಲ್ಲಿಸಬಹುದು ಎಂದು ಯುಜಿಸಿ ಹೇಳಿದೆ.

### ಕರ್ನಾಟಕ ಹೇಳುತ್ತಿರುವುದೇನು?

ಯುಜಿಸಿಯ ಪಠ್ಯಕ್ರಮ ಚೌಕಟ್ಟಿನ ಕರಡಿಗೆ ವಿರೋಧ ವ್ಯಕ್ತಪಡಿಸಿರುವ ಕರ್ನಾಟಕದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಕೇಂದ್ರ ಸರ್ಕಾರವು ತನ್ನ ಸಿದ್ಧಾಂತಗಳನ್ನು ವಿದ್ಯಾರ್ಥಿಗಳ ಮೇಲೆ ಹೇರುತ್ತಿದ್ದು, ಅದನ್ನು ಒಪ್ಪುವ ಮಾತೇ ಇಲ್ಲ ಎಂದು ಹೇಳಿದ್ದಾರೆ. 'ಯುಜಿಸಿ ಪ್ರತಿಯೊಂದು ವಿಚಾರದಲ್ಲಿಯೂ ಮಧ್ಯಪ್ರವೇಶ ಮಾಡುತ್ತಿದೆ. ನಿಯಂತ್ರಣ ಸಂಸ್ಥೆಯಾಗಿರುವ ಅದಕ್ಕೆ ಅದರ ಮಿತಿಗಳೂ ಗೊತ್ತಿರಬೇಕು. ಯುಜಿಸಿಯು ವಿಸ್ತೃತವಾದ ಚೌಕಟ್ಟನ್ನು ರೂಪಿಸಬಹುದೇ ವಿನಾ ಪಠ್ಯವನ್ನಲ್ಲ; ವಿಶ್ವವಿದ್ಯಾಲಯಗಳ ಪಠ್ಯಪುಸ್ತಕ ರಚನಾ ಸಮಿತಿಗಳು ಆ ಅಧಿಕಾರ ಹೊಂದಿರುತ್ತವೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ಬಿಜೆಪಿಯು ಶಿಕ್ಷಣದ ಮೂಲಕ ತನ್ನ ಕಾರ್ಯಸೂಚಿಯನ್ನು ಮಕ್ಕಳ ಮೇಲೆ ಹೇರಲು ನಾವು ಬಿಡುವುದಿಲ್ಲ. ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿದ್ದು, ಕೇಂದ್ರ ಸರ್ಕಾರವು ಈ ರೀತಿ ಮಾಡುವಂತಿಲ್ಲ. ಈ ಹಿಂದೆ ಉಪಕುಲಪತಿಗಳನ್ನು ನೇಮಕ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಂದ ಕಸಿದುಕೊಳ್ಳುವ ನಿಯಮ ರೂಪಿಸಿದ್ದನ್ನು ಮೊದಲು ವಿರೋಧಿಸಿದ್ದೇ ಕರ್ನಾಟಕ. ನಂತರ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳೂ ಅದನ್ನು ವಿರೋಧಿಸಿದವು. ಆ ನಿಯಮವನ್ನು ವಾಪಸ್ ಪಡೆಯಲಾಯಿತು. ಈಗ ಅವರು ಮತ್ತೊಂದು ಪ್ರಯತ್ನ ಮಾಡುತ್ತಿದ್ದಾರೆ' ಎಂದಿದ್ದಾರೆ.

ಕರಡನ್ನು ಅಧ್ಯಯನ ಮಾಡಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ತಜ್ಞರ ಸಮಿತಿಯನ್ನು ರಚಿಸಲಿದೆ. ಅದು ನೀಡುವ ವರದಿ ಆಧರಿಸಿ ತನ್ನ ವಿರೋಧವನ್ನು ಅಧಿಕೃತವಾಗಿ ದಾಖಲಿಸಲಿದೆ.

### ರಸಾಯನ ವಿಜ್ಞಾನದಲ್ಲಿ ಆಯುರ್ವೇದ ಸಿದ್ಧ

- ರಸಾಯನ ವಿಜ್ಞಾನದ ಅಡಿಯಲ್ಲಿ ಬರುವ ಆಹಾರ ವಿಜ್ಞಾನ (ಫುಡ್ ಕೆಮಿಸ್ಟ್ರಿ) ವಿಭಾಗದಲ್ಲಿ ಆಯುರ್ವೇದದ ಪ್ರಕಾರ ಆಹಾರ ವಿಜ್ಞಾನ ಮತ್ತು ಪೋಷಕಾಂಶಗಳು ಹಾಗೂ ರುಚಿಗಳ ಪರಿಚಯ ಪಾಠ ಇದೆ
- ಆಯುರ್ವೇದ, ಚಿಕಿತ್ಸಾ ಪದ್ಧತಿಯನ್ನು ಪರಿಚಯಿಸುವ ಭಾರತದಲ್ಲಿ ಸಾಂಪ್ರದಾಯಿಕ ವೈದ್ಯಕೀಯ ವ್ಯವಸ್ಥೆಗಳು ಎಂಬ ಪಾಠ ಇದ್ದು, ಎರಡೂ ಪದ್ಧತಿಗಳಲ್ಲಿರುವ ಚಿಕಿತ್ಸಾ ವಿಧಾನಗಳ ಬಗ್ಗೆ ವಿವರಿಸಲಾಗಿದೆ
- ಪ್ರಾಚೀನ ಭಾರತದಲ್ಲಿ ರಸಾಯನ ವಿಜ್ಞಾನ ಎಂಬ ಪತ್ರಿಕೆ ಇದ್ದು, ಇದರಲ್ಲಿ ದೇಶದ ಪುರಾತನ ವಿಜ್ಞಾನಿಗಳು, ವಿವಿಧ ಕಾಲಘಟ್ಟಗಳಲ್ಲಿ ರಸಾಯನ ವಿಜ್ಞಾನ ಬೆಳೆದುಬಂದ ಹಾದಿ, ಕಣಾದ ಅಣು ಸಿದ್ಧಾಂತ, ಪರಮಾಣುವಿನ ಪರಿಕಲ್ಪನೆ, ಅಣುಗಳ ರಚನೆ, ಪರಿಮಂಡಲ, ಅಣು ರೋಹಿತ ಮತ್ತು ಕುಂಡಲಿನಿ ಪರಿಕಲ್ಪನೆ ಮುಂತಾದ ವಿವರಣೆಗಳಿವೆ

### ಗಣಿತದಲ್ಲಿ ಕಾಲ ಗಣನೆ

- ಗಣಿತ ಪಠ್ಯದಲ್ಲಿ 'ಭಾರತೀಯ ಗಣಿತದ ತತ್ವಶಾಸ್ತ್ರ' ಎಂಬ ಪತ್ರಿಕೆ ಇದೆ. ಪುರಾತನ ಭಾರತದ 14 ಕಲಿಕಾ ಶಾಖೆಗಳಾದ ಪುರಾಣ, ನ್ಯಾಯ, ಮೀಮಾಂಸೆ, ಧರ್ಮಶಾಸ್ತ್ರ, ಆರು ವೇದಾಂಗಗಳು, ವೇದಾಂಗಗಳ ಪರಿಚಯ ಮತ್ತು ಉಪವೇದ, ಚಾರ್ವಾಕ ಜೈನ ಮತ್ತು ಬುದ್ಧ ದರ್ಶನ, ತರ್ಕಶಾಸ್ತ್ರ ಪ್ರಮಾಣ, ಪ್ರತ್ಯಕ್ಷ, ಅನುಮಾನ, ಉಪಮಾನಗಳ ಬಗ್ಗೆ ವಿವರಣೆಗಳಿವೆ

- 'ಕಾಲ ಗಣನೆ' ಎಂಬ ಇನ್ನೊಂದು ಪಾಠ ಗಣಿತ ಪಠ್ಯದ ಭಾಗವಾಗಿದೆ. ಇದರಲ್ಲಿ ಕಾಲದ ಪರಿಕಲ್ಪನೆ, ಸೂರ್ಯ ಸಿದ್ಧಾಂತ, ವಿ.ಭೃಗು ಸಂಹಿತಾ, ಆರ್ಯಭಟಿಯಂ, ಪಂಚಸಿದ್ಧಾಂತಿಕ, ಸಿದ್ಧಾಂತ ಶಿರೋಮಣಿಗಳಲ್ಲಿರುವ ಕಾಲ ಗಣನೆಯ ವಿವರಣೆ ಬಗ್ಗೆ ಪ್ರಸ್ತಾಪಿಸಲಾಗಿದೆ. ಸೂರ್ಯ, ಚಂದ್ರ, ನಕ್ಷತ್ರಗಳಂತಹ ಖಗೋಳ ಕಾಯಗಳ ಪಾತ್ರ, ಭೂಮಿಯ ಚಲನೆ, ರಾತ್ರಿ, ಹಗಲಿನ ಮೇಲೆ ಅದರ ಪರಿಣಾಮ, ಋತುಗಳು, ಕ್ರಾಂತಿಚಕ್ರ, ರಾಶಿಚಕ್ರಗಳ ಬಗ್ಗೆ ತಿಳಿಹೇಳುವ ವಿವರಗಳು, ಪಂಚಾಂಗದ ವಿವರಗಳು, ಒಳ್ಳೆಯ, ಕೆಟ್ಟ ಮುಹೂರ್ತಗಳು, ಪಂಚಾಗ ಆಧಾರಿತ ಆಚರಣೆಗಳು ಸೇರಿದಂತೆ ಹಲವು ವಿಚಾರಗಳಿವೆ

### ವಾಣಿಜ್ಯ, ಅರ್ಥಶಾಸ್ತ್ರದಲ್ಲಿ ಕೌಟಿಲ್ಯನ ನೀತಿ

- ವಾಣಿಜ್ಯ ಮತ್ತು ಅರ್ಥಶಾಸ್ತ್ರ ಎರಡು ಪಠ್ಯಗಳಲ್ಲೂ ಒಂದೇ ರೀತಿಯ ಪಾಠಗಳು ಇವೆ. ಹಿಂದಿನ ಕಾಲದಲ್ಲಿ ಭಾರತದಲ್ಲಿದ್ದ ವ್ಯಾಪಾರ ಕ್ರಮಗಳು, ನೀತಿಗಳು, ವ್ಯವಹಾರ ತಂತ್ರಗಳು ಇನ್ನಿತರ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ
- ಎರಡೂ ಪಠ್ಯಗಳಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ ಎಂಬ ವಿಷಯದ ಕುರಿತು ಪಾಠ ಇದೆ. ಕೌಟಿಲ್ಯನ ಅರ್ಥಶಾಸ್ತ್ರದ ಮೂಲ ಮಾಹಿತಿಗಳನ್ನು ನೀಡಲಾಗಿದೆ. ಕೌಟಿಲ್ಯನ ವ್ಯಾಪಾರ ನೀತಿಗಳು, ತಂತ್ರಗಳು ಶತಮಾನಗಳಿಂದ ಜಗತ್ತಿನಾದ್ಯಂತ ಇರುವ ನೀತಿ ನಿರೂಪಕರಿಗೆ ಮಾರ್ಗದರ್ಶನ ನೀಡುತ್ತಿವೆ ಎಂದು ಕೋರ್ಸ್‌ನ ಉದ್ದೇಶದಲ್ಲಿ ಹೇಳಲಾಗಿದೆ
- ವಾಣಿಜ್ಯ ಪಠ್ಯದಲ್ಲಿ ಭಾರತೀಯ ನೈತಿಕತೆ ಮತ್ತು ಮೌಲ್ಯಗಳು ಎಂಬ ಇನ್ನೊಂದು ಪತ್ರಿಕೆ ಇದೆ. ವೇದ, ಉಪನಿಷದ್‌ಗಳಲ್ಲಿ ಹೇಳಲಾಗಿರುವ ಧರ್ಮ, ಕರ್ಮ, ಮೋಕ್ಷ ಎಂಬ ತತ್ವಗಳ ಪ್ರಸ್ತಾಪ ಇಲ್ಲಿದೆ



## ರಾಷ್ಟ್ರೀಯ

ನವದೆಹಲಿಯ ವಿಜ್ಞಾನ ಭವನದಲ್ಲಿ ಶುಕ್ರವಾರ ನಡೆದ 'ರಾಷ್ಟ್ರೀಯ ಶಿಕ್ಷಕರ ಪುರಸ್ಕಾರ–2025' ಸಮಾರಂಭದಲ್ಲಿ ಮುರ್ಮು ಅವರು ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ ಶಿಕ್ಷಕಿಯೊಬ್ಬರಿಗೆ ಪ್ರಶಸ್ತಿ ಪ್ರದಾನ ಮಾಡಿದರು —ಪಿಟಿಐ ಚಿತ್ರ

# ಸ್ಮಾರ್ಟ್ ಶಿಕ್ಷಕರು ಎಲ್ಲಕ್ಕಿಂತ ಮುಖ್ಯ: ದ್ರೌಪದಿ ಮುರ್ಮು

ನವದೆಹಲಿ (ಪಿಟಿಐ): ಶಾಲೆಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇರುವ ಸ್ಮಾರ್ಟ್ ಬ್ಲ್ಯಾಕ್‌ಬೋರ್ಡ್, ಸ್ಮಾರ್ಟ್ ತರಗತಿ ಮತ್ತಿತರ ಆಧುನಿಕ ಸೌಲಭ್ಯಗಳಿಗೆ ಅವುಗಳದ್ದೇ ಆದ ಮಹತ್ವವಿದೆ. ಆದರೆ ಸ್ಮಾರ್ಟ್ ಶಿಕ್ಷಕರು ಅದೆಲ್ಲಕ್ಕಿಂತ ಮುಖ್ಯ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಭಿಪ್ರಾಯಪಟ್ಟರು.

ತಾವು ಶಿಕ್ಷಕಿಯಾಗಿದ್ದ ಅವಧಿಯನ್ನು ಸ್ಮರಿಸಿದ ಅವರು, 'ಅದು ಅತ್ಯಂತ ಸುಂದರ ಮತ್ತು ಅರ್ಥಪೂರ್ಣ ಸಮಯ' ಎಂದು ವರ್ಣಿಸಿದರು.

ವಿಜ್ಞಾನ ಭವನದಲ್ಲಿ ಶುಕ್ರವಾರ ನಡೆದ 'ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಅವರು ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ನಂತರ ಮಾತನಾಡಿದ ಅವರು, 'ಸ್ಮಾರ್ಟ್ ಶಿಕ್ಷಕರು ವಿದ್ಯಾರ್ಥಿಗಳ ಉನ್ನತಿಗೆ ಏನು ಅಗತ್ಯವಿದೆ ಎಂದು ತಿಳಿದುಕೊಂಡಿರುತ್ತಾರೆ. ಪ್ರೀತಿ ಮತ್ತು ಸಂವೇದನಾಶೀಲತೆಯಿಂದ ಪರಿಣಾಮಕಾರಿಯಾಗಿ ಮಕ್ಕಳಿಗೆ ಕಲಿಸುತ್ತಾರೆ. ಸಮಾಜ ಮತ್ತು ರಾಷ್ಟ್ರದ ಅಗತ್ಯಕ್ಕೆ ತಕ್ಕಂತಹ ವಿದ್ಯಾರ್ಥಿಗಳನ್ನು ರೂಪಿಸುತ್ತಾರೆ' ಎಂದು ಹೇಳಿದರು.

### ರಾಷ್ಟ್ರಪತಿ ಹೇಳಿದ್ದು...

- ಕೇವಲ ಸ್ಪರ್ಧೆ, ಪುಸ್ತಕ ಜ್ಞಾನದಲ್ಲಿ ಆಸಕ್ತಿ ಹೊಂದಿರುವ ಮತ್ತು ಸ್ವಾರ್ಥ ಇರುವ ವಿದ್ಯಾರ್ಥಿಗಳಿಗಿಂತ ಸಂವೇದನಾಶೀಲ, ಜವಾಬ್ದಾರಿಯುತ ಮತ್ತು ಸಮರ್ಪಣಾ ಭಾವವಿರುವ ವಿದ್ಯಾರ್ಥಿಗಳೇ ಉತ್ತಮ
- ಬಡತನದ ಹಿನ್ನೆಲೆ ಇರುವ ವಿದ್ಯಾರ್ಥಿಗಳು ಶಿಕ್ಷಣದ ಮೂಲಕ ಪ್ರಗತಿಯ ಉತ್ತುಂಗಕ್ಕೆ ಏರಬಹುದು
- ಅಕ್ಷರ ಕಲಿಸಿದ ಶಿಕ್ಷಕರನ್ನು ಜೀವನದುದ್ದಕ್ಕೂ ಸ್ಮರಿಸುವುದೇ ವಿದ್ಯಾರ್ಥಿಗಳು ಶಿಕ್ಷಕರಿಗೆ ನೀಡುವ ಬಹುದೊಡ್ಡ ಕೊಡುಗೆ
- ರಾಷ್ಟ್ರೀಯ ಶಿಕ್ಷಣ ನೀತಿಯು ಭಾರತವನ್ನು ಜಾಗತಿಕ ಜ್ಞಾನದ ಸೂಪರ್ ಪವರ್ ದೇಶವನ್ನಾಗಿಸುವ ಗುರಿ ಹೊಂದಿದೆ

### ಯಾರ್‍ಯಾರಿಗೆ ಪ್ರಶಸ್ತಿ?

ಆಂಧ್ರದ ಮೈಲವರಂ ಡಾ. ಲಕಿರೆಡ್ಡಿ ಹನಿಮಿರೆಡ್ಡಿ ಸರ್ಕಾರಿ ಪದವಿ ಕಾಲೇಜಿನ ತೆಲುಗು ವಿಭಾಗದ ಎಂ. ದೇವಾನಂದ ಕುಮಾರ್ ಅವರು ಪ್ರಶಸ್ತಿ ಪುರಸ್ಕೃತರಲ್ಲಿ ಒಬ್ಬರು. ತಮ್ಮ ನವೀನ ಬೋಧನಾ ಕ್ರಮಕ್ಕಾಗಿ ಅವರಿಗೆ ಪ್ರಶಸ್ತಿ ಲಭಿಸಿದೆ.

ದೇವಾನಂದ ಅವರು ತಾಳೆ ಗರಿ ಬಳಸಿ ಹಸ್ತಪ್ರತಿ ರಚಿಸಿದ್ದಾರೆ ಮತ್ತು ಕಲಿಕೆ ನಿರ್ವಹಣಾ ವ್ಯವಸ್ಥೆಗಾಗಿ (ಎಲ್‌ಎಂಸಿ) ಶೈಕ್ಷಣಿಕ ವಿಡಿಯೊಗಳನ್ನು ಮಾಡಿದ್ದಾರೆ.

ಅರುಣಾಚಲ ಪ್ರದೇಶದ ರಾಜೀವ್ ಗಾಂಧಿ ಕೇಂದ್ರೀಯ ವಿಶ್ವವಿದ್ಯಾಲಯದ ಮನೋವಿಜ್ಞಾನ ವಿಭಾಗದ ಪ್ರೊಶಾಂತೋ ಕೆ.ಆರ್. ಸಹಾ ಅವರಿಗೂ ಈ ಪ್ರಶಸ್ತಿ ದೊರೆತಿದೆ. ವಿಧಿವಿಜ್ಞಾನ ಮನೋವಿಜ್ಞಾನ ಮತ್ತು ನರವಿಜ್ಞಾನದಲ್ಲಿ ಪರಿಣತಿ ಹೊಂದಿರುವ ಅವರು 14 ವರ್ಷಗಳಿಗೂ ಹೆಚ್ಚು ಕಾಲ ಶೈಕ್ಷಣಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ಜೊತೆಗೆ ನರವಿಜ್ಞಾನ ಪ್ರಯೋಗಾಲಯವನ್ನು ಸ್ಥಾಪಿಸಿದ್ದಾರೆ ಮತ್ತು ದೌರ್ಜನ್ಯಕ್ಕೆ ಒಳಗಾದ ಮಕ್ಕಳಿಗೆ ಬೆಂಬಲ ನೀಡಿದ್ದಾರೆ.

ಪ್ರಶಸ್ತಿ ಪ್ರದಾನಕ್ಕಿಂತ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಶಸ್ತಿ ಪುರಸ್ಕೃತ ಶಿಕ್ಷಕರೊಂದಿಗೆ ಸಂವಾದ ನಡೆಸಿದರು.

# ಆಂಧ್ರಪ್ರದೇಶ: ನಿಗೂಢ ರೋಗದಿಂದ 23 ಸಾವು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಗ್ರಾಮವೊಂದರಲ್ಲಿ ಜುಲೈನಿಂದ ಸೆಪ್ಟೆಂಬರ್ 3ರವರೆಗೆ ನಿಗೂಢ ಆರೋಗ್ಯ ಸಮಸ್ಯೆಗಳಿಂದಾಗಿ 23 ಮಂದಿ ಮೃತಪಟ್ಟಿರುವುದು ಆತಂಕಕ್ಕೆ ಕಾರಣವಾಗಿದೆ.

1200 ಜನರು ವಾಸಿಸುತ್ತಿರುವ ಪುಟ್ಟ ಗ್ರಾಮ ತುರಕಪಲೆಂನಲ್ಲಿನ ಪರಿಸ್ಥಿತಿ ಬಗ್ಗೆ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

ಮೃತರಲ್ಲಿ ಬಹುತೇಕರು 55 ವಯಸ್ಸಿನವರಾಗಿದ್ದರು. ಆರಂಭದಲ್ಲಿ ಜ್ವರದ ಲಕ್ಷಣಗಳು ಕಾಣಿಸಿಕೊಂಡಿದ್ದು, ಬಳಿಕ ಅಂಗಾಂಗ ವೈಫಲ್ಯಗೊಂಡು ಕೆಲವೇ ದಿನಗಳಲ್ಲಿ ಮೃತಪಟ್ಟಿದ್ದಾರೆ. ಬ್ಯಾಕ್ಟೀರಿಯ ಸೋಂಕಿನಿಂದಾಗಿ ಕೆಲವರು ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ.

ಮೃತರಲ್ಲಿ ಶೇ 80ರಷ್ಟು ಜನ ಮಧುಮೇಹ, ಅಧಿಕ ರಕ್ತದೊತ್ತಡ, ಮೂತ್ರಪಿಂಡದ ಸಮಸ್ಯೆಯನ್ನು ಹೊಂದಿದ್ದರು ಎಂದು ವೈದ್ಯಕೀಯ ಪರೀಕ್ಷೆಯಲ್ಲಿ ತಿಳಿದುಬಂದಿದೆ. 'ಶನಿವಾರ ರಕ್ತಪರೀಕ್ಷೆಯ ವರದಿಯು ಬರಲಿದ್ದು, ಆ ಬಳಿಕ ಸಾವಿನ ಕಾರಣಗಳು ತಿಳಿದುಬರಲಿದೆ' ಎಂದು ವೈದ್ಯಕೀಯ ಶಿಕ್ಷಣ ನಿರ್ದೇಶಕ ಡಾ. ರಘುನಂದನ್ ಅವರು ತಿಳಿಸಿದ್ದಾರೆ.

## ಗುಂಡಣ್ಣ

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

**06 ಸೆಪ್ಟೆಂಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ:** ಭಾದ್ರಪದ ಶುಕ್ಲ ಚತುರ್ದಶಿ ಗಂ. 25-42 **ನಕ್ಷತ್ರ:** ಧನಿಷ್ಠ ಗಂ. 22-56 **ಯೋಗ:** ಅತಿಗಂಡ ಗಂ. 11-52 **ಕರಣ:** ಗರ ಗಂ. 14-32 ಸಿಂಹ ಮಾಸದ 20 ನೇ ದಿನ. **ಮಳೆ ನಕ್ಷತ್ರ:** ಹುಬ್ಬಾ 2 ನೇ ಪಾದ. **ರಾಹುಕಾಲ:** ಬೆಳಿಗ್ಗೆ 09-00 10-30 **ಸೂರ್ಯೋದಯ:** 06-23 **ಸೂರ್ಯಾಸ್ತ:** 06-36, **ಮುಸ್ಲಿಂ ದಿನಾಂಕ:** 13 ರಬೀಉಲ್ಲಾವಲ್, **ದಿನ ವಿಶೇಷ:** ಅನಂತ ಚತುರ್ದಶಿ, **ಅದೃಷ್ಟ ಸಂಖ್ಯೆ:** 5, 14

**ಮೇಷ:** ಮಾನಸಿಕ ಉದ್ವೇಗ ಕಂಡುಬಂದೀತು. ಪ್ರತಿ ಕಾರ್ಯಕ್ಕೂ ಹಲವು ಬಾರಿ ಪ್ರಯತ್ನ ಪಡಬೇಕಾದೀತು. ದೈಹಿಕ ಮತ್ತು ಧಾರ್ಮಿಕ ಪ್ರಯತ್ನದಿಂದ ದುಷ್ಫಲವನ್ನು ಸುಧಾರಿಸಿಕೊಳ್ಳಬಹುದು. ಧಾರ್ಮಿಕ ಶ್ರದ್ಧೆ ಬೆಳೆಸಿಕೊಳ್ಳಿರಿ.

**ವೃಷಭ:** ಮಕ್ಕಳ ವಿಷಯದಲ್ಲಿ ಸಂಯಮದೊಂದಿಗೆ ವರ್ತಿಸುವುದು ಉತ್ತಮ. ಕುಟುಂಬದ ಜತೆಯಲ್ಲಿ ಸಂತೋಷವಾಗಿ ಕಳೆಯುವ ಹಾಗೆ ಆಗುವುದು. ರಾಜಕೀಯ ವಲಯದಲ್ಲಿನ ಬದಲಾವಣೆಯ ಲಾಭ ಪಡೆಯುವಿರಿ.

**ಮಿಥುನ:** ಆಫೀಸಿನ ಕೆಲಸಗಳಲ್ಲಿ ಕೆಲವೊಂದು ವಿಷಯಗಳನ್ನು ಪರಾಮರ್ಶಿಸಲೇಬೇಕಾದ ಸಮಯ ಬರಲಿದೆ. ಮನೆಯವರ ಬೇಡಿಕೆಗಳನ್ನು ಸ್ವಲ್ಪಮಟ್ಟಿಗೆ ಪೂರೈಸುವಿರಿ. ಜಮೀನಿನ ಕೆಲಸಗಳತ್ತ ಮುತುವರ್ಜಿ ವಹಿಸಿ.

**ಕರ್ಕಾಟಕ:** ಅಪೇಕ್ಷೆಯ ಜತೆಯಲ್ಲಿ ಮತ್ತು ಸಹೋದರರ ಸಹಾಯದ ಮೂಲಕ ಜಮೀನಿನ ಖರೀದಿ ವಿಚಾರದ ಮಾತುಕತೆಗಳು ಜರುಗಲಿವೆ. ಅಧಿಕ ಬಂಡವಾಳವನ್ನು ಹಾಕುವುದರಿಂದ ಕೈ ಸುಡುವಂತಾಗುವುದು.

**ಸಿಂಹ:** ಮಸಾಲೆ ಪದಾರ್ಥ ಅಥವಾ ಖಾದ್ಯಗಳ ಮಾರಾಟಗಾರರಿಗೆ ಅಧಿಕ ಮಟ್ಟದಲ್ಲಿ ಬೇಡಿಕೆಗಳು ಉಂಟಾಗಲಿವೆ. ನಿರೀಕ್ಷಿತ ಕಡೆಗಳಿಂದ ಧನ ಒದಗಿ ಬರುವುದು. ತಂದೆ-ತಾಯಿ ಆರೋಗ್ಯ ಸ್ಥಿತಿ ಉತ್ತಮ.

**ಕನ್ಯಾ:** ಮಹತ್ವದ ವಿಷಯಗಳನ್ನು ಗಂಭೀರವಾಗಿ ಚಿಂತಿಸಿ ನಿರ್ಧರಿಸುವುದು ಉತ್ತಮ. ವೈದ್ಯರು ಅದರಲ್ಲೂ ನರರೋಗ ತಜ್ಞರು ಅಭ್ಯಾಸದಲ್ಲಿ ತೋರಿದ ನಿರ್ಲಕ್ಷ್ಯ ಅಥವಾ ಬೇಜವಾಬ್ದಾರಿತನದಿಂದ ಪಾಪ ಸಂಗ್ರಹವಾಗುವುದು.

**ತುಲಾ:** ವಾಣಿಜ್ಯ ಬೆಳೆಗಳನ್ನು ದಾಸ್ತಾನು ಮಾಡಿಕೊಳ್ಳುವ ಯೋಚನೆ ಸರಿಯಾದದ್ದಾಗಿರುತ್ತದೆ. ವ್ಯವಹಾರಗಳ ಬಗ್ಗೆ ಗಮನ ಹರಿಸಿ. ಪ್ರೀತಿ ಪಾತ್ರರೊಡನೆ ಸಮಯ ಕಳೆಯುವಿರಿ.

**ವೃಶ್ಚಿಕ:** ಸಂದರ್ಶನಕಾರರಿಗೆ ಪ್ರಭಾವಿ ವ್ಯಕ್ತಿಗಳನ್ನು ಸಂದರ್ಶಿಸಲು ಒಂದು ಅವಕಾಶ ಸಿಗುವುದು. ಆರಿಸಿಕೊಂಡ ಮಾರ್ಗದಲ್ಲಿ ಸರಿ– ತಪ್ಪುಗಳ ಬಗ್ಗೆ ಯೋಚಿಸಿ ಏಕಾಗ್ರತೆಯಿಂದ ಮುನ್ನಡೆಯಿರಿ.

**ಧನು:** ಕೌಟುಂಬಿಕ ಅಭಿವೃದ್ಧಿಯಂಥ ವಿಷಯಗಳಿಂದ ಬಹಳ ಖುಷಿ ಸಿಗುವುದು. ಹಣಕಾಸಿನ ವ್ಯವಹಾರದಲ್ಲಿ ಪಾಲುದಾರಿಕೆಯನ್ನು ಪಡೆಯುವಿರಿ. ಆತ್ಮಾಭಿಮಾನವನ್ನು ಸಂರಕ್ಷಿಸಿಕೊಳ್ಳಿ. ಸ್ಫೂರ್ತಿಯಿಂದ ಕಾರ್ಯ ನಿರ್ವಹಿಸಿ.

**ಮಕರ:** ಧನಾಗಮನಕ್ಕೆ ಹಲವು ದಾರಿಗಳು ಕಂಡರೂ, ಸರಿಯಾದ ದಾರಿ ಆರಿಸಿಕೊಳ್ಳಿ. ಧಾರ್ಮಿಕ ವ್ಯಕ್ತಿಗಳಿಂದ ಅನುಕೂಲವಾಗುತ್ತದೆ. ವಿಷ್ಣು ಸಹಸ್ರನಾಮ ಪಠಣದಿಂದ ಶುಭವಾಗುವುದು.

**ಕುಂಭ:** ಯಂತ್ರೋಪಕರಣಗಳ ಮಾರಾಟದಿಂದ ಲಾಭ ಇರಲಿದೆ. ಮನೆ ಕಟ್ಟಲು ಅಥವಾ ಮನೆಯನ್ನು ನವೀಕರಿಸಲು ಸುಸಮಯ. ಬೇಕಾದ ಹಣದ ವ್ಯವಸ್ಥೆ ನಿರಾಯಾಸವಾಗಿ ಆಗಲಿದೆ. ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ ಕಾಣುವುದು.

**ಮೀನ:** ನಿತ್ಯದ ವೃತ್ತಿಗಳಲ್ಲಿ ಬದಲಾವಣೆ ಇರುವುದಿಲ್ಲ. ಪ್ರತಿ ವರ್ಷ ಕರ್ತವ್ಯದಂತೆ ಮಾಡಿಕೊಂಡುಬಂದ ಧಾರ್ಮಿಕ ಕೆಲಸವನ್ನು ಮಾಡುವ ಬಗ್ಗೆ ತೀರ್ಮಾನಿಸಿ. ಬೇಸರ ಕಳೆಯಲು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಿ.

## ಪದಬಂಧ 6156

ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಹಳಬನ ಹಂಬಲವಿದು! (4)
3.ಪೀಠಿಕೆಯನ್ನು ಈ ರೀತಿಯೂ ಹೇಳುವರು (4)
5.ತರಿ ತರಲು ತೋರಿದ ಅರ್ಜೆಂಟು! (4)
7.ಬಿಮ್ಮಾನ ತೋರಿದಾತನ ದುಃಖ (3)
9.ಕೆಡುಕಾಗಲೆಂದು ಬಯಸಿಹೇಳುವ ಮಾತಿಲ್ಲಿಉಲ್ಟಾಆಗಿದೆ (2)
10.ಹೊಟ್ಟೆಕಿಚ್ಚು ಹೀಗೆ ಬಂದಿದೆ (3)
11.ದಡಿಯ ಹಿಡಿದಿರುವ ಬಡಿಗೆ (2)
12.ಲೋಹದ ಹಕ್ಕಿಯಿಲ್ಲಿ ಉಲ್ಟಾಪಲ್ಟಾ ಆಗಿದೆ (3)
13.ಅತಿಯಲ್ಲಿ ದುರ್ಗತಿ! (4)
16.ಭಾನುವಾರವನ್ನು ಹೀಗೂ ಹೇಳುವರು (4)
17.ಸಮಯ ತೋರಿಸುವ ಯಂತ್ರ (4)

**ಮೇಲಿಂದ ಕೆಳಕ್ಕೆ**

1.ಹರಿದಂತದಲ್ಲಿ ಹಸಿರು ಬಣ್ಣವನ್ನು ಹುಡುಕಿ! (3)
2.ಇದು ಬರೀ ಅನ್ನ ಮಾಡುವ ಪಾತ್ರೆ! (3)
3.ವಾರದ ಕೊನೆಗೆ ಬಂದ ಅಭ್ಯರ್ಥಿ (5)
4.ಬಿದಿರಿನಿಂದ ಹೆಣೆದ ಚಾಪೆ (2)
6.ಅರಸನ ಅಪ್ಪಣೆ (5)
8.ಈತ ಬಿಳಿಯ ಕೂದಲುಳ್ಳವನು (5)
10.ಮರದಲ್ಲಿರುವವನಿಗೆ ಬುದ್ಧಿಭ್ರಮಣೆಯೇ? (5)
13.ಪ್ರೀತಿಪಾತ್ರನಾದವನು ಇಲ್ಲಿದ್ದಾನೆ (3)
14.ತೀರದ ಹತ್ತಿರವಿದ್ದಾಗ ಆವರಿಸಿದ ಕತ್ತಲೆ (3)
15.ದುಸ್ತರದಲ್ಲಿಯೇ ಪದರವಿದೆ (2)



### 6155ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**

1.ಅಂಬರ 3.ಪ್ಲುತ 5.ಕಚ
6.ಟೆರಾ 7.ವಿಧಾನಸಭೆ
8.ಮಹಾರಾಜ 11.ಪುರಂದರ
13.ರಾಮನಗರ 16.ಣಜಾ
17.ಹೊಂಗೆ 18.ಗದ್ಯ
19.ಹರಿಣ

**ಮೇಲಿಂದ ಕೆಳಕ್ಕೆ:**

2.ಬಲರಾಮ 4.ತವಂಧಾ
5.ಕಳಸ 7.ವಿಜಯಪುರ
9.ಹಾಲು 10.ವೇದ
12.ರಣಭೇರಿ 14.ಮಲ್ಲಿಗೆ
15.ಗರಗ

## ಸುಡೊಕು 6540

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| 7 | 6 | | | 9 | | | | 8 |
| 1 | | | 8 | | | 5 | | 2 |
| | | 2 | | 6 | | | | |
| | | 7 | | | 9 | 6 | 8 | |
| 4 | 2 | | | 3 | | | 5 | 9 |
| 6 | | | 7 | | 8 | | | |
| 2 | | 5 | 4 | | 7 | 9 | | 6 |
| | | | | | | | | 5 |
| 9 | | 6 | 3 | | 5 | | 4 | 1 |

### 6539 ಸುಡೊಕು

| | | | | | | | | |
|---|---|---|---|---|---|---|---|---|
| 8 | 7 | 3 | 2 | 1 | 9 | 4 | 6 | 5 |
| 6 | 2 | 9 | 4 | 5 | 8 | 7 | 1 | 3 |
| 4 | 1 | 5 | 6 | 7 | 3 | 9 | 2 | 8 |
| 5 | 4 | 2 | 7 | 9 | 6 | 8 | 3 | 1 |
| 3 | 6 | 7 | 8 | 4 | 1 | 5 | 9 | 2 |
| 1 | 9 | 8 | 3 | 2 | 5 | 6 | 4 | 7 |
| 9 | 8 | 1 | 5 | 6 | 2 | 3 | 7 | 4 |
| 2 | 3 | 4 | 9 | 8 | 7 | 1 | 5 | 6 |
| 7 | 5 | 6 | 1 | 3 | 4 | 2 | 8 | 9 |

## ನಿವೃತ್ತ ಶಿಕ್ಷಕ ಆತ್ಮಹತ್ಯೆ

ಕಾಸರಗೋಡು (ಕೇರಳ) (ಪಿಟಿಐ): ಜಿಲ್ಲೆಯ ಮದನಗಲ್ಲುವಿನಲ್ಲಿ ನಿವೃತ್ತ ಶಿಕ್ಷಕರೊಬ್ಬರು ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಮೃತರನ್ನು ಸುಬ್ಬಣ್ಣ ಭಟ್ ಎಂದು ಗುರುತಿಸಲಾಗಿದೆ. 'ವಯೋಸಹಜ ಕಾಯಿಲೆಯಿಂದ ಬಳಲುತ್ತಿರುವ ಪತ್ನಿ ಇತ್ತೀಚೆಗೆ ಚಿಕಿತ್ಸೆ ನಂತರ ಆಸ್ಪತ್ರೆಯಿಂದ ಮನೆಗೆ ಮರಳಿದ್ದರು. ಆರೈಕೆ ಮಾಡುವವರು ಯಾರೂ ಇಲ್ಲದ ಕಾರಣ ಸುಬ್ಬಣ್ಣ ಖಿನ್ನತೆಗೆ ಒಳಗಾಗಿದ್ದರು' ಎಂದು ಸಂಬಂಧಿಕರು ತಿಳಿಸಿದ್ದಾರೆ.

**ಷೇರುಪೇಟೆ ವಹಿವಾಟು** — ಹಿಂದಿನ ಅಂತ್ಯ 80,718 · 7 · ಇಂದಿನ ಅಂತ್ಯ 80,710




**ಎನ್‌ಎಸ್‌ಇ ನಿಫ್ಟಿ** — ಹಿಂದಿನ ಅಂತ್ಯ: 24,734 · ಇಂದಿನ ಅಂತ್ಯ: 24,741 · ದಿನದ ಗರಿಷ್ಠ: 24,832 · 6

**ಮೊಟ್ಟೆ ಧಾರಣೆ (ಎನ್‌ಇಸಿಸಿ)** — ಬೆಂಗಳೂರು: 100 ಕ್ಕೆ ₹560 · 12 ಕ್ಕೆ ₹75 · ಮೈಸೂರು: 100 ಕ್ಕೆ ₹565

**ರಾಮನಗರ ರೇಷ್ಮೆಗೂಡು** — ಮಿಶ್ರತಳಿ(ಸಿ.ಬಿ) ₹300-666 · ದ್ವಿತಳಿ (ಬಿ.ವಿ) ₹444-806

**ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)** — ಆರ್‌ಎಸ್‌ಎಸ್-4 ₹189 · ಆರ್‌ಎಸ್‌ಎಸ್-5 ₹184 · ಗುಡ್ ಲಾಟ್ ₹169

**ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)** — ಶೇಂಗಾ (ರಿಫೈನ್ಡ್) ₹1375 (1370) · ಸೋಯಾ (ರಿಫೈನ್ಡ್) ₹1275 (1280) · ಸೂರ್ಯಕಾಂತಿ (ರಿಫೈನ್ಡ್) ₹1420 (1420) · ಪಾಮೋಲಿನ್ ₹1280 (1280)

# 'ಜಿಎಸ್‌ಟಿ ಪರಿಷ್ಕರಣೆ: ಲಾಭ ಗ್ರಾಹಕರಿಗೆ'

## ವರ್ಗಾವಣೆ ಖಚಿತಪಡಿಸಿಕೊಳ್ಳಲು ಕೇಂದ್ರ ಸರ್ಕಾರ ನಿಗಾ: ಪೀಯೂಷ್ ಗೋಯಲ್

**ಇಷ್ಟು ದೊಡ್ಡ ಬದಲಾವಣೆಯು ರಾತ್ರೋರಾತ್ರಿ ಸಂಭವಿಸಲು ಸಾಧ್ಯವಿಲ್ಲ. ಅಮೆರಿಕವು ಸುಂಕ ಹೆಚ್ಚಿಸುವ ನಿರ್ಧಾರವನ್ನು ಕಳೆದ ತಿಂಗಳಷ್ಟೇ ತೆಗೆದುಕೊಂಡಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು**

**ಪೀಯೂಷ್ ಗೋಯಲ್,** ಕೇಂದ್ರ ಸಚಿವ

ನವದೆಹಲಿ (ಪಿಟಿಐ): ಜಿಎಸ್‌ಟಿ ದರಗಳ ಪರಿಷ್ಕರಣೆಯ ಪ್ರಯೋಜನಗಳನ್ನು ಗ್ರಾಹಕರಿಗೆ ಸಂಪೂರ್ಣವಾಗಿ ವರ್ಗಾಯಿಸುವುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ನಿಗಾವಹಿಸಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಶುಕ್ರವಾರ ಹೇಳಿದರು.

ವಿವಿಧ ವಸ್ತುಗಳ ಮೇಲಿನ ತೆರಿಗೆ ಇಳಿಕೆಯು ಅವುಗಳ ಬೆಲೆಗಳಲ್ಲಿ ಪ್ರತಿಫಲಿಸಲಿವೆ ಎಂಬ ಭರವಸೆಯನ್ನು ಉದ್ಯಮ ಕ್ಷೇತ್ರ ನೀಡಿರುವುದಾಗಿ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಿತ್ಯ ಬಳಕೆಯ ಹತ್ತು ಹಲವು ಉತ್ಪನ್ನಗಳು, ಸೇವೆಗಳ ಮೇಲಿನ ತೆರಿಗೆ ಪ್ರಮಾಣವನ್ನು ಕಡಿಮೆ ಮಾಡುವ ತೀರ್ಮಾನವನ್ನು ಜಿಎಸ್‌ಟಿ ಮಂಡಳಿಯು ಇತ್ತೀಚೆಗೆ ತೆಗೆದುಕೊಂಡಿದ್ದು, ಈ ತೀರ್ಮಾನಗಳು ನವರಾತ್ರಿಯ ಮೊದಲ ದಿನವಾದ ಇದೇ 22ರಿಂದಲೇ ಜಾರಿಗೆ ಬರಲಿವೆ.

ಭಾರತದ ಮೇಲೆ ಅಮೆರಿಕ ಶೇ 50ರಷ್ಟು ಸುಂಕ ವಿಧಿಸಿದ್ದರಿಂದ ಮೋದಿ ಸರ್ಕಾರವು ಜಿಎಸ್‌ಟಿ ಸುಧಾರಣೆ ಕೈಗೊಂಡಿರಬಹುದು ಎಂಬ ವಾದವನ್ನು ಗೋಯಲ್ ಇದೇ ವೇಳೆ ತಿರಸ್ಕರಿಸಿದರು.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಣಕಾಸು ಸಚಿವರು, ಕಾರ್ಯದರ್ಶಿಗಳ ನಡುವೆ ವರ್ಷಪೂರ್ತಿ ನಡೆದ ಸಮಾಲೋಚನೆಯ ಪರಿಣಾಮದಿಂದ ಈ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಯಾವುದೇ ಇತರ ದೇಶದ ನಿರ್ಧಾರಕ್ಕೂ ನಮ್ಮ ಜಿಎಸ್‌ಟಿ ವ್ಯವಸ್ಥೆಯಲ್ಲಿನ ಸುಧಾರಣೆಗೂ ಸಂಬಂಧವಿಲ್ಲ' ಎಂದು ಅವರು ಹೇಳಿದರು.

'ತೆರಿಗೆ ಇಳಿಕೆಯ ಪೂರ್ಣ ಪ್ರಯೋಜನ ಗ್ರಾಹಕರಿಗೆ ದೊರೆಯುವಂತಾಗಬೇಕು. ಇದನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಸರ್ಕಾರ ನಿಗಾವಹಿಸಲಿದೆ. ಅಂತೆಯೇ ರಾಜ್ಯ ಸರ್ಕಾರಗಳೂ ಈ ನಿಟ್ಟಿನಲ್ಲಿ ಮೇಲ್ವಿಚಾರಣೆ ವಹಿಸಬೇಕು' ಎಂದು ಅವರು ಸಲಹೆ ನೀಡಿದರು.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ನೇತೃತ್ವದಲ್ಲಿ ಸೆ. 3ರಂದು ನಡೆದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಕರ್ನಾಟಕ, ತೆಲಂಗಾಣ ರಾಜ್ಯ ಸರ್ಕಾರಗಳು ಈ ಸುಧಾರಣೆಗಳ ಅನುಮೋದನೆಯನ್ನು ತಡೆಯಲು ಯತ್ನಿಸಿದವು. ಆದರೆ ಅಂತಿಮವಾಗಿ ಒಮ್ಮತದಿಂದ ಈ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು ಎಂದು ಗೋಯಲ್ ವಿವರಿಸಿದರು.

ಸ್ವಾತಂತ್ರ್ಯದ ಬಳಿಕ ಪರೋಕ್ಷ ತೆರಿಗೆಯಲ್ಲಿ ಇಂತಹ ಮಹತ್ವದ ಸುಧಾರಣೆ ತಂದಿರುವುದು ಬಹುಶಃ ಇದೇ ಮೊದಲು ಎಂದು ಅವರು ಹೇಳಿದರು.

### 'ಚಿಲ್ಲರೆ ಹಣದುಬ್ಬರ ಇಳಿಕೆ ನಿರೀಕ್ಷೆ'

ಜಿಎಸ್‌ಟಿ ಸರಳೀಕರಣದಿಂದ ಮುಂದಿನ ಆರ್ಥಿಕ ವರ್ಷದಲ್ಲಿ ದೇಶದ ಚಿಲ್ಲರೆ ಹಣದುಬ್ಬರವು ಶೇ 0.65ರಿಂದ ಶೇ 0.75ರಷ್ಟು ಇಳಿಕೆ ಆಗಲಿದೆ ಎಂದು ಎಸ್‌ಬಿಐ ರಿಸರ್ಚ್ ತಿಳಿಸಿದೆ.

ಮನೆ ಬಳಕೆಯ ಅಗತ್ಯ ವಸ್ತುಗಳು ಮತ್ತು ಸೇವೆಗಳ ಮೇಲಿನ ತೆರಿಗೆಯು ಜಿಎಸ್‌ಟಿ ಸರಳೀಕರಣದಿಂದ ಕಡಿಮೆ ಆಗಲಿದೆ. ಇದು ಚಿಲ್ಲರೆ ಹಣದುಬ್ಬರ ಇಳಿಕೆಗೆ ನೆರವಾಗಲಿದೆ ಎಂದು ತಿಳಿಸಿದೆ.

ಅಗತ್ಯ ವಸ್ತುಗಳ (ಅಂದಾಜು 295 ಸರಕುಗಳು) ಮೇಲಿನ ತೆರಿಗೆ ಶೇ 12ರಿಂದ ಶೇ 5ಕ್ಕೆ ಇಳಿದಿದೆ ಅಥವಾ ಶೂನ್ಯವಾಗಿದೆ. ಹೀಗಾಗಿ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 0.25ರಿಂದ ಶೇ 0.30ರಷ್ಟು ಕಡಿಮೆಯಾಗಲಿದೆ.

ಅಲ್ಲದೆ, ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ ಸಹ ಇಳಿಕೆಯಾಗಿದ್ದು, ಶೇ 0.40ರಿಂದ ಶೇ 0.45ರಷ್ಟು ಹಣದುಬ್ಬರ ಕಡಿಮೆಯಾಗಲಿದೆ. ಒಟ್ಟಾರೆ, ಮುಂದಿನ ಆರ್ಥಿಕ ವರ್ಷದ ವೇಳೆಗೆ ಹಣದುಬ್ಬರ ಶೇ 0.65ರಿಂದ ಶೇ 0.75ರಷ್ಟು ಇಳಿಕೆ ಆಗಲಿದೆ ಎಂದು ತಿಳಿಸಿದೆ.

### ಟಾಟಾ ಮೋಟರ್ಸ್ ವಾಹನ ಬೆಲೆ ಇಳಿಕೆ

ದೇಶದ ವಾಹನ ತಯಾರಿಕಾ ಕಂಪನಿ ಟಾಟಾ ಮೋಟರ್ಸ್ ಸೆಪ್ಟೆಂಬರ್ 22ರಿಂದ ಜಾರಿಗೆ ಬರುವಂತೆ ತನ್ನ ಪ್ರಯಾಣಿಕ ವಾಹನಗಳ ಬೆಲೆಯನ್ನು ಕಡಿತಗೊಳಿಸಿದೆ.

ಟಿಯಾಗೊ ಕಾರಿನ ಬೆಲೆಯನ್ನು ₹75 ಸಾವಿರ ಕಡಿಮೆ ಮಾಡಿದೆ. ಟಿಗಾರ್ (₹80 ಸಾವಿರ), ಆಲ್ಟ್ರೋಜ್ (₹1.10 ಲಕ್ಷ), ಪಂಚ್ (₹85 ಸಾವಿರ), ನೆಕ್ಸಾನ್ (₹1.55 ಲಕ್ಷ), ಹ್ಯಾರಿಯರ್ ₹1.4 ಲಕ್ಷ ಮತ್ತು ಸಫಾರಿ ದರ ₹1.45 ಲಕ್ಷದವರೆಗೆ ಕಡಿಮೆ ಮಾಡಲಾಗಿದೆ ಎಂದು ಕಂಪನಿ ತಿಳಿಸಿದೆ.

ಜಿಎಸ್‌ಟಿ ಕಡಿತದ ಪೂರ್ಣ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಲಾಗುವುದು ಎಂದು ಟಾಟಾ ಮೋಟರ್ಸ್ ತಿಳಿಸಿದೆ.

### ಆಭರಣ ಉದ್ಯಮಕ್ಕೆ ನೆಮ್ಮದಿ: ಜಿಜೆಇಪಿಸಿ

'ವಜ್ರ ಮತ್ತು ಆಭರಣ ವಲಯಕ್ಕೆ ಜಿಎಸ್‌ಟಿ ಸರಳೀಕರಣವು ಅತಿದೊಡ್ಡ ನೆಮ್ಮದಿ ನೀಡಿದೆ' ಎಂದು ಹರಳು ಮತ್ತು ಆಭರಣ ರಫ್ತು ಉತ್ತೇಜನ ಮಂಡಳಿ (ಜಿಜೆಇಪಿಸಿ) ಶುಕ್ರವಾರ ತಿಳಿಸಿದೆ.

ಆಭರಣ ಪೆಟ್ಟಿಗೆಗಳ ಮೇಲಿನ ಜಿಎಸ್‌ಟಿಯನ್ನು ಶೇ 12ರಿಂದ ಶೇ 5ಕ್ಕೆ ಇಳಿಸಲಾಗಿದೆ. ಇದರಿಂದ ಸಣ್ಣ ವ್ಯಾಪಾರಿಗಳು ಮತ್ತು ರಫ್ತುದಾರರಿಗೆ ವೆಚ್ಚ ಕಡಿಮೆಯಾಗುತ್ತದೆ. ಪ್ಯಾಕೇಜಿಂಗ್ ಮತ್ತು ಉಡುಗೊರೆ ಗಳನ್ನು ಗ್ರಾಹಕರಿಗೆ ಹೆಚ್ಚು ಕೈಗೆಟುಕುವಂತೆ ಮಾಡಲಿದ್ದು, ವ್ಯಾಪಾರಿಗಳು, ಖರೀದಿದಾರರಿಗೆ ಸಮವಾಗಿ ಪ್ರಯೋಜನ ನೀಡುತ್ತದೆ' ಎಂದು ಜಿಜೆಇಪಿಸಿ ಅಧ್ಯಕ್ಷ ಕಿರಿತ್ ಬನ್ಸಾಲಿ ಹೇಳಿದ್ದಾರೆ.

ಈ ಕ್ರಮಗಳು ದೇಶಿಯ ಬೇಡಿಕೆಯನ್ನು ಹೆಚ್ಚಿಸಲಿದ್ದು, ಕಾರ್ಯಾಚರಣೆಯ ವೆಚ್ಚವನ್ನು ಕಡಿಮೆ ಮಾಡುತ್ತದೆ. ಅಲ್ಲದೆ, ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಮೂಲಕ, ವಜ್ರ ಸಂಸ್ಕರಣೆ, ಆಭರಣ ವಿನ್ಯಾಸ ಮತ್ತು ರಫ್ತಿಗೆ ಪ್ರಮುಖ ಕೇಂದ್ರವಾಗಿ ಭಾರತದ ಸ್ಥಾನವನ್ನು ಭದ್ರಪಡಿಸುತ್ತವೆ ಎಂದು ತಿಳಿಸಿದ್ದಾರೆ.

## ಸುದ್ದಿ 2 ನಿಮಿಷ

### 'ಸುಂಕ: ರಫ್ತುದಾರರಿಗೆ ಪ್ಯಾಕೇಜ್ ನೀಡಲು ಸರ್ಕಾರ ಚಿಂತನೆ'

ನವದೆಹಲಿ (ರಾಯಿಟರ್ಸ್/ ಪಿಟಿಐ): ಅಮೆರಿಕದ ಸುಂಕ ಹೇರಿಕೆಯಿಂದ ತೊಂದರೆಗೆ ಒಳಗಾದ ದೇಶದ ರಫ್ತುದಾರರಿಗೆ ಪರಿಹಾರದ ಪ್ಯಾಕೇಜ್ ನೀಡಲು ಯೋಜಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಖಾಸಗಿ ಸುದ್ದಿವಾಹಿನಿಗೆ ಶುಕ್ರವಾರ ನೀಡಿದ ಸಂದರ್ಶನದಲ್ಲಿ ಅವರು, ಸುಂಕದಿಂದ ತೊಂದರೆಗೆ ಗುರಿಯಾದವರಿಗೆ ನೆರವು ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ ಎಂದು ತಿಳಿಸಿದ್ದಾರೆ. ಭಾರತವು ಜಗತ್ತಿನ ಮೂರನೇ ಅತಿದೊಡ್ಡ ತೈಲ ಆಮದುಗಾರ ಮತ್ತು ಗ್ರಾಹಕ ರಾಷ್ಟ್ರವಾಗಿದೆ. ರಷ್ಯಾದಿಂದ ನಿರಂತರವಾಗಿ ತೈಲ ಖರೀದಿಸಲಾಗುವುದು ಎಂದು ಇದೇ ವೇಳೆ ತಿಳಿಸಿದ್ದಾರೆ.

ಕಳೆದ ತಿಂಗಳು ಅಮೆರಿಕ, ಭಾರತದಿಂದ ರಫ್ತಾಗುವ ಸರಕುಗಳಿಗೆ ಶೇ 50ರಷ್ಟು ಸುಂಕ ವಿಧಿಸಿತ್ತು. ಇದರಿಂದ ದೇಶದ ಜವಳಿ, ಆಭರಣ ಮತ್ತು ಸಾಗರೋತ್ಪನ್ನ, ವಿಶೇಷವಾಗಿ ಸಿಗಡಿ ವಲಯಕ್ಕೆ ತೊಂದರೆ ಆಗಿತ್ತು. ತಮಿಳುನಾಡು ಮತ್ತು ಗುಜರಾತ್‌ನಲ್ಲಿ ಉದ್ಯೋಗ ನಷ್ಟಕ್ಕೆ ಕಾರಣವಾಗಿತ್ತು.

ಸಣ್ಣ ವ್ಯವಹಾರಗಳು ಮತ್ತು ರಫ್ತುದಾರರಿಗೆ 90 ದಿನಗಳವರೆಗೆ ಬಾಕಿ ಇರುವ ಸಾಲಗಳ ಮೇಲೆ ಕ್ರೆಡಿಟ್ ಗ್ಯಾರಂಟಿ ನೀಡಲು ಸರ್ಕಾರ ಯೋಜಿಸಿದೆ ಎಂದು ಸರ್ಕಾರಿ ಮೂಲಗಳನ್ನು ಉಲ್ಲೇಖಿಸಿ ರಾಯಿಟರ್ಸ್ ಈ ಹಿಂದೆ ವರದಿ ಮಾಡಿತ್ತು.

**ಸಾಗಣೆ ಇಳಿಕೆ ಆಗಿಲ್ಲ:** ಅಮೆರಿಕದ ಸುಂಕ ಹೇರಿಕೆಯಿಂದ ದೇಶದಿಂದ ಒಟ್ಟಾರೆ ಸರಕು ಸಾಗಣೆಯಲ್ಲಿ ಯಾವುದೇ ಇಳಿಕೆ ಆಗಿಲ್ಲ ಎಂದು ಕೇಂದ್ರ ಬಂದರು, ಜಲಮಾರ್ಗ ಸಚಿವ ಸರ್ಬಾನಂದ ಸೊನೊವಾಲ್ ಹೇಳಿದ್ದಾರೆ.

### 'ವರ್ಷಾಂತ್ಯಕ್ಕೆ ನಥಿಂಗ್ ಮಳಿಗೆ'

ನವದೆಹಲಿ (ಪಿಟಿಐ): ಲಂಡನ್ ಮೂಲದ ಗ್ರಾಹಕ ತಂತ್ರಜ್ಞಾನ ಕಂಪನಿ ನಥಿಂಗ್, ವರ್ಷಾಂತದ ವೇಳೆಗೆ ಭಾರತದಲ್ಲಿ ತನ್ನ ಮೊದಲ ಮಳಿಗೆಯನ್ನು ಆರಂಭಿಸಲಿದೆ.

ನಥಿಂಗ್‌ನ ಸ್ಮಾರ್ಟ್‌ಫೋನ್‌ಗಳನ್ನು (ಫೋನ್ 3) ಭಾರತದಲ್ಲಿ ತಯಾರಿಸಲಾಗುತ್ತಿದೆ. ಈಗ ಇದನ್ನು ರಫ್ತು ಮಾಡಲಾಗುತ್ತಿದೆ ಎಂದು ಕಂಪನಿಯ ಸಹ-ಸಂಸ್ಥಾಪಕ ಅಕಿಸ್ ಇವಾಂಜೆಲಿಡಿಸ್ ಶುಕ್ರವಾರ 'ಎಕ್ಸ್'ನಲ್ಲಿ ಹೇಳಿದ್ದಾರೆ.

ಇದು ಕೇವಲ ಮೇಕಿಂಗ್ ಇನ್ ಇಂಡಿಯಾ ಮಾತ್ರವಲ್ಲ, ಭಾರತದಲ್ಲಿ ನಿರ್ಮಿಸಿ ಜಗತ್ತಿಗೆ ಕೊಡುವುದಾಗಿದೆ. ಸಿಎಂಎಫ್ ಜೊತೆಗೂಡಿ ಜಾಗತಿಕ ಪ್ರಧಾನ ಕಚೇರಿಯನ್ನು ಭಾರತದಲ್ಲಿ ಸ್ಥಾಪಿಸಲಾಗುವುದು. ಸ್ಥಳೀಯ ಪ್ರತಿಭೆಗಳ ಜೊತೆಗೂಡಿ ನಮ್ಮ ನಾಯಕತ್ವ ತಂಡವನ್ನು ಬಲಪಡಿಸಿಕೊಳ್ಳಲಾಗುವುದು ಮತ್ತು ಕಂಪನಿಯ ಕಾರ್ಯಾಚರಣೆಗೆ ಇದು ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಚಿರಸ್ಮರಣೆ

ಶ್ರೀಮತಿ ನಂಜಮ್ಮ

ನಿಧನ : 06-09-2021

ಲೇಟ್ ಶ್ರೀ ರಾಮಣ್ಣನವರ ಪತ್ನಿ (ಸಂಸ್ಥಾಪಕರು: ಪಲ್ಲವಿ ಕನ್‌ಸ್ಟ್ರಕ್ಷನ್ಸ್)

ಸದಾ ನಿಮ್ಮ ನೆನಪಿನಲ್ಲಿರುವ....

ಡಾ. ಸಿ ರಾಮಚಂದ್ರ, ಡಾ. ಪಲ್ಲವಿ ವಿ.ಆರ್. ಸಂಹಿತಾ ರಾಮಚಂದ್ರ, ಅನ್ವಿತಾ ರಾಮಚಂದ್ರ, ಬಂಧು-ಮಿತ್ರರು

ಪ್ರಥಮ ವರ್ಷದ ಪುಣ್ಯಸ್ಮರಣೆ

ಜನನ: 27.06.1969 · ಮರಣ: 17.09.2024

ಶ್ರೀಮತಿ ಶಾಂತಲಾ

ನೀವು ನಮ್ಮನ್ನು ಅಗಲಿ ಇಂದಿಗೆ ಒಂದು ವರ್ಷ. ನಿಮ್ಮ ಪ್ರೀತಿ, ವಾತ್ಸಲ್ಯ ಮತ್ತು ಮಾರ್ಗದರ್ಶನ ನಮ್ಮ ಜೀವನದ ದಾರಿದೀಪವಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇವೆ.

ಇಂತಿ: ತಂದೆ-ತಾಯಿ, ಪತಿ, ಮಕ್ಕಳು, ಸಹೋದರ, ಅಳಿಯ-ಮಗಳು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಸಮಸ್ತ ಬಂಧು ವರ್ಗದವರು

ಶ್ರದ್ಧಾಂಜಲಿ

ಶ್ರೀ ಎಂ. ವೇಮಣ್ಣ

ಮಾಜಿ ನಿರ್ದೇಶಕರು

ಇವರು ದಿ: 27-08-2025 ರಂದು ದೈವಾಧೀನರಾಗಿದ್ದು ಇವರ ಆತ್ಮಕ್ಕೆ ಶಾಂತಿಯನ್ನು ಮತ್ತು ಇವರ ಕುಟುಂಬಕ್ಕೆ ಇವರ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ

ಇಂತಿ/- ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗ

ಶ್ರೀ ಪ್ರಜಾ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ.

ನಾಗಪ್ಪ ಬ್ಲಾಕ್, ಶ್ರೀರಾಮಪುರ, ಬೆಂಗಳೂರು -21.

ವೈಕುಂಠ ಸಮಾರಾಧನೆ



ಶ್ರೀ ಎಸ್.ಜಿ. ಶೇಖರ್

ಜಂಟಿ ವ್ಯವಸ್ಥಾಪಕ ಧರ್ಮದರ್ಶಿ, ಶ್ರೀ ಸುಬ್ರಹ್ಮಣ್ಯಸ್ವಾಮಿ ಸೇವಾ ಟ್ರಸ್ಟ್ (ರಿ)

ಕೆ.ಜಿ.ಹಳ್ಳಿ ಕಾಲೋನಿ, ಬಸವೇಶ್ವರನಗರ, ಬೆಂಗಳೂರು-79

ಇವರು ದಿನಾಂಕ:28-08-2025ರ ಗುರುವಾರ, ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿನಾಂಕ: 07-09-2025ರ ಭಾನುವಾರ, ಮಧ್ಯಾಹ್ನ 12.30ಕ್ಕೆ ಮೃತರ ಸ್ವಗೃಹದಲ್ಲಿ ಸುಂಡವಾಳು ಗ್ರಾಮ, ರಾವಂದೂರು ಹೋಬಳಿ, ಪಿರಿಯಾಪಟ್ಟಣ ತಾ॥ ಇಲ್ಲಿ ಏರ್ಪಡಿಸಲಾಗಿದೆ.

ದುಃಖತಪ್ತರು: ಕುಟುಂಬದವರು ಮತ್ತು ಆಡಳಿತ ಮಂಡಳಿ – ಶ್ರೀ ಸುಬ್ರಹ್ಮಣ್ಯಸ್ವಾಮಿ ಸೇವಾ ಟ್ರಸ್ಟ್

### ದ್ವಿಚಕ್ರ ವಾಹನ ಮಾರಾಟ ಹೆಚ್ಚಳ ನಿರೀಕ್ಷೆ: ಕ್ರಿಸಿಲ್

ನವದೆಹಲಿ (ಪಿಟಿಐ): ಜಿಎಸ್‌ಟಿ ಸರಳೀಕರಣದಿಂದಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ದ್ವಿಚಕ್ರ ವಾಹನಗಳ ಮಾರಾಟದ ಪ್ರಮಾಣ ಶೇ 5ರಿಂದ ಶೇ 6ರಷ್ಟು ಏರಿಕೆಯಾಗಲಿದೆ. ಇದೇ ವೇಳೆ ಪ್ರಯಾಣಿಕ ವಾಹನಗಳ ಮಾರಾಟ ಶೇ 2ರಿಂದ ಶೇ 3ರಷ್ಟು ಹೆಚ್ಚಳವಾಗಲಿದೆ ಎಂದು ರೇಟಿಂಗ್ ಸಂಸ್ಥೆ ಕ್ರಿಸಿಲ್ ನಿರೀಕ್ಷಿಸಿದೆ.

ಜಿಎಸ್‌ಟಿ ದರ ಕಡಿತದಿಂದ ವಾಹನಗಳ ಬೆಲೆ ಅಂದಾಜು ಶೇ 5ರಿಂದ ಶೇ 10ರಷ್ಟು ಕಡಿತವಾಗಲಿದೆ. ಸಣ್ಣಗಾತ್ರದ ಪ್ರಯಾಣಿಕ ವಾಹನಗಳ ಬೆಲೆ ₹30 ಸಾವಿರದಿಂದ ₹60 ಸಾವಿರ ಕಡಿಮೆ ಆಗಲಿದೆ. ದ್ವಿಚಕ್ರ ವಾಹನಗಳ ಬೆಲೆ ₹3 ಸಾವಿರದಿಂದ ₹7 ಸಾವಿರದವರೆಗೆ ಇಳಿಕೆಯಾಗಲಿದೆ ಎಂದು ಅಂದಾಜಿಸಿದೆ.

'ಹಬ್ಬದ ಋತುವಿನಲ್ಲಿ ದರ ಇಳಿಕೆ ಮಾಡಿರುವುದು ವಾಹನೋದ್ಯಮಕ್ಕೆ ಉತ್ತೇಜನ ನೀಡಲಿದೆ. ಹೊಸ ವಾಹನಗಳ ಬಿಡುಗಡೆ, ಬಡ್ಡಿ ದರ ಇಳಿಕೆಯು ಪ್ರಸಕ್ತ ಆರ್ಥಿಕ ವರ್ಷದ ದ್ವಿತೀಯಾರ್ಧದಲ್ಲಿ ಉದ್ಯಮಕ್ಕೆ ಚಾಲನೆ ನೀಡಲಿದೆ' ಎಂದು ಕ್ರಿಸಿಲ್ ರೇಟಿಂಗ್ಸ್‌ನ ಹಿರಿಯ ನಿರ್ದೇಶಕ ಅನುಜ್ ಸೇಥಿ ಹೇಳಿದ್ದಾರೆ.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

## ಪಿಚೈ, ನಾದೆಲ್ಲ ಹಾಡಿ ಹೊಗಳಿದ ಟ್ರಂಪ್

ಸತ್ಯಾ ನಾದೆಲ್ಲ

ಸುಂದರ್ ಪಿಚೈ

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶ್ವೇತಭವನದಲ್ಲಿ ಗುರುವಾರ ಆಯೋಜಿಸಿದ್ದ ಔತಣಕೂಟದಲ್ಲಿ ಮೈಕ್ರೊಸಾಫ್ಟ್‌ನ ಸಿಇಒ ಸತ್ಯಾ ನಾದೆಲ್ಲ ಮತ್ತು ಗೂಗಲ್‌ನ ಮುಖ್ಯಸ್ಥ ಸುಂದರ್ ಪಿಚೈ ಅವರ ಕಾರ್ಯವನ್ನು ಅದ್ಭುತ ಎಂದು ಹಾಡಿ ಹೊಗಳಿದ್ದಾರೆ. ಮಾಹಿತಿ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದ ನೀತಿಗಳಿಗಾಗಿ ಈ ಇಬ್ಬರೂ ಭಾರತೀಯ-ಅಮೆರಿಕನ್ ಸಿಇಒಗಳು ಟ್ರಂಪ್ ಅವರ ನಾಯಕತ್ವವನ್ನು ಶ್ಲಾಘಿಸಿದ್ದಾರೆ.

'ವಿಶ್ವದ ತಂತ್ರಜ್ಞಾನ ಕ್ಷೇತ್ರದ ಒಂಬತ್ತು ಮೇಧಾವಿಗಳು ಇಂದು ಇಲ್ಲಿ ಸೇರಿದ್ದಾರೆ. ಈ 'ಹೈ ಐಕ್ಯೂ ಗ್ರೂಪ್' ವಿಶ್ವದ ಉದ್ಯಮ ಕ್ಷೇತ್ರದಲ್ಲಿ ಕ್ರಾಂತಿ ಸೃಷ್ಟಿಸುತ್ತದೆ' ಎಂದು ಟ್ರಂಪ್ ಹೆಮ್ಮೆಯಿಂದ ನುಡಿದರು.

ಸತ್ಯಾ ನಾದೆಲ್ಲ ಮತ್ತು ಸುಂದರ್ ಪಿಚೈ ಅವರನ್ನು ಉದ್ದೇಶಿಸಿ, 'ನಿಮ್ಮಿಬ್ಬರ ಬಗ್ಗೆ ನಮಗೆ ಅಪಾರ ಹೆಮ್ಮೆ ಇದೆ' ಎಂದ ಟ್ರಂಪ್, ಅಮೆರಿಕದಲ್ಲಿ ಗೂಗಲ್ ಎಷ್ಟು ಹೂಡಿಕೆ ಮಾಡಲಿದೆ ಎಂದು ಪಿಚೈ ಅವರನ್ನು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಪಿಚೈ, 'ಮುಂದಿನ ಎರಡು ವರ್ಷಗಳಲ್ಲಿ ಕಂಪನಿಯು 250 ಶತಕೋಟಿ ಡಾಲರ್ (₹22 ಲಕ್ಷ ಕೋಟಿಗೂ ಹೆಚ್ಚು) ಹೂಡಿಕೆ ಮಾಡಲಿದೆ' ಎಂದು ಹೇಳಿದರು. ಇದೇ ಪ್ರಶ್ನೆಯನ್ನು ಮೈಕ್ರೊಸಾಫ್ಟ್‌ನ ಸಿಇಒ ಸತ್ಯಾ ನಾದೆಲ್ಲ ಅವರಿಗೆ ಕೇಳಿದಾಗ, 'ಕಂಪನಿಯು ಪ್ರತಿವರ್ಷ ಅಮೆರಿಕದಲ್ಲಿ 80 ಶತಕೋಟಿ ಡಾಲರ್ (₹7 ಲಕ್ಷ ಕೋಟಿಯಿಂದ ₹8 ಲಕ್ಷ ಕೋಟಿಯಷ್ಟು) ಹೂಡಿಕೆ ಮಾಡುತ್ತಿದೆ' ಎಂದರು. ಇಬ್ಬರ ಉತ್ತರದಿಂದ ಸಂತಸಗೊಂಡ ಟ್ರಂಪ್, 'ನೀವಿಬ್ಬರೂ ಚಮತ್ಕಾರವನ್ನೇ ಮಾಡುತ್ತಿದ್ದೀರಿ' ಎಂದು ಬಣ್ಣಿಸಿದರು.

ಔತಣಕೂಟದಲ್ಲಿ ಮೈಕ್ರೊಸಾಫ್ಟ್‌ನ ಸಹ ಸ್ಥಾಪಕ ಬಿಲ್‌ಗೇಟ್ಸ್, ಮೆಟಾದ ಸಿಇಒ ಮಾರ್ಕ್ ಜುಕರ್‌ಬರ್ಗ್, ಗೂಗಲ್ ಸ್ಥಾಪಕ ಸರ್ಗೆ ಬ್ರಿನ್, ಆ್ಯಪಲ್ ಸಿಇಒ ಟಿಮ್ ಕುಕ್, ಐಬಿಎಂ ಅಧ್ಯಕ್ಷ ಮತ್ತು ಸಿಇಒ ಅರವಿಂದ್ ಕೃಷ್ಣಾ, ಓಪನ್ ಎಐನ ಸಿಇಒ ಸ್ಯಾಮ್ ಆಲ್ಟ್‌ಮನ್, ಒರಾಕಲ್‌ನ ಸಿಇಒ ಸಾಫ್ರಾ ಕಾಟ್ಜ್ ಭಾಗವಹಿಸಿದ್ದರು.

ಔತಣಕೂಟದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, 'ವಿಶ್ವದ 7 ಯುದ್ಧಗಳನ್ನು ಮಧ್ಯಸ್ಥಿಕೆ ಮೂಲಕ ನಾನು ನಿಲ್ಲಿಸಿದೆ. ರಷ್ಯಾದ ಅಧ್ಯಕ್ಷರೊಂದಿಗೂ ಶೀಘ್ರ ಮಾತುಕತೆ ನಡೆಸುತ್ತೇನೆ' ಎಂದು ಹೇಳಿದ್ದಾರೆ.

## ವಂಚನೆ ಪಟ್ಟಿಗೆ ಆರ್ ಕಾಂ: ಬಿಒಬಿ

ನವದೆಹಲಿ (ಪಿಟಿಐ): ಬ್ಯಾಂಕ್ ಆಫ್ ಬರೋಡಾ (ಬಿಒಬಿ) ರಿಲಯನ್ಸ್ ಕಮ್ಯುನಿಕೇಷನ್ಸ್ (ಆರ್ ಕಾಂ) ಕಂಪನಿಯ ಸಾಲದ ಖಾತೆಯನ್ನು 'ವಂಚನೆ' ಎಂದು ವರ್ಗೀಕರಿಸಿದೆ. ಕಂಪನಿಯ ನಿರ್ದೇಶಕರಾಗಿದ್ದ ಅನಿಲ್ ಅಂಬಾನಿ ಅವರನ್ನು ಸಹ ಅದರಲ್ಲಿ ಹೆಸರಿಸಿದೆ.

ಬ್ಯಾಂಕ್, ಕಂಪನಿಗೆ ₹2,462 ಕೋಟಿ ಸಾಲ ನೀಡಿತ್ತು. ಈ ಪೈಕಿ ಆಗಸ್ಟ್ 28ರ ವರೆಗೆ ₹1,656 ಕೋಟಿ ಸಾಲ ಬಾಕಿ ಇದೆ. ಈ ಸಂಗತಿಯು 'ಆರ್ ಕಾಂ' ಷೇರುಪೇಟೆಗೆ ನೀಡಿರುವ ಮಾಹಿತಿಯಲ್ಲಿ ಉಲ್ಲೇಖವಾಗಿದೆ. 'ಆರ್ ಕಾಂ'ಗೆ ನೀಡಿರುವ ಸಾಲ 2017ರ ಜೂನ್ 5ರಂದು ಎನ್‌ಪಿಎ ಆಗಿದೆ. ಈಗಾಗಲೇ ಎಸ್‌ಬಿಐ ಮತ್ತು ಬ್ಯಾಂಕ್ ಆಫ್ ಇಂಡಿಯಾ ರಿಲಯನ್ಸ್ ಕಮ್ಯುನಿಕೇಷನ್‌ನ ಸಾಲದ ಖಾತೆ ಮತ್ತು ಅನಿಲ್ ಅಂಬಾನಿಯನ್ನು ವಂಚನೆ ಪಟ್ಟಿಗೆ ಸೇರಿಸಿವೆ.

## ವಿಶ್ವದ ಮೊದಲ ಟ್ರಿಲಿಯನೇರ್ ಆಗುವರೇ ಮಸ್ಕ್?

ಇಲಾನ್ ಮಸ್ಕ್

ನ್ಯೂಯಾರ್ಕ್ (ನ್ಯೂಯಾರ್ಕ್ ಟೈಮ್ಸ್): ಟೆಸ್ಲಾ ಕಂಪನಿಯ ಆಡಳಿತ ಮಂಡಳಿಯು ನೂತನ ವೇತನ ಪ್ಯಾಕೇಜ್ ಅನ್ನು ಶುಕ್ರವಾರ ಪ್ರಸ್ತಾಪಿಸಿದ್ದು, ಮಹತ್ವಾಕಾಂಕ್ಷೆಯ ಕಾರ್ಪೊರೇಟ್ ಗುರಿಗಳನ್ನು ತಲುಪಿದಲ್ಲಿ ಕಂಪನಿಯ ಸಿಇಒ ಇಲಾನ್ ಮಸ್ಕ್ ಅವರು ವಿಶ್ವದ ಮೊದಲ ಟ್ರಿಲಿಯನೇರ್ ಆಗುವ ಸಾಧ್ಯತೆ ಇದೆ.

'ಸೆಕ್ಯುರಿಟೀಸ್ ಫೈಲಿಂಗ್' ಪ್ರಕಾರ, ಈಗಾಗಲೇ ವಿಶ್ವದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿರುವ ಮಸ್ಕ್, ವೇತನ ಪ್ಯಾಕೇಜ್‌ನ ಸಂಪೂರ್ಣ ಮೌಲ್ಯವನ್ನು ಸಂಗ್ರಹಿಸಲು ಮುಂದಿನ ದಶಕದಲ್ಲಿ ಟೆಸ್ಲಾ ಷೇರು ಮಾರುಕಟ್ಟೆ ಮೌಲ್ಯವನ್ನು ಎಂಟು ಪಟ್ಟು ಹೆಚ್ಚಿಸಬೇಕಾಗುತ್ತದೆ.

ಟೆಸ್ಲಾ ಕಂಪನಿಯ ಷೇರುದಾರರು ಅನುಮೋದಿಸಬೇಕಾದ ಪ್ಯಾಕೇಜ್ ಅನ್ನು ನ.6ರಂದು ನಡೆಯುವ ವಾರ್ಷಿಕ ಸಭೆಯಲ್ಲಿ ಮತಕ್ಕೆ ಹಾಕುವ ಸಾಧ್ಯತೆ ಇದೆ.

ಫೋರ್ಬ್ಸ್ ಪ್ರಕಾರ, ಮಸ್ಕ್ ಅವರ ನಿವ್ವಳ ಮೌಲ್ಯ 40 ಸಾವಿರ ಕೋಟಿ ಡಾಲರ್ ಇದೆ. ಟೆಸ್ಲಾ ಷೇರು ಮಾರುಕಟ್ಟೆ ಮೌಲ್ಯವನ್ನು ಭವಿಷ್ಯದಲ್ಲಿ 1.1 ಲಕ್ಷ ಕೋಟಿ ಡಾಲರ್‌ನಿಂದ 8.5 ಲಕ್ಷ ಕೋಟಿ ಡಾಲರ್‌ಗೆ ಏರಿಸಲು ಯಶಸ್ವಿಯಾದರೆ ಹೊಸ ವೇತನವು ಅವರ ಸಂಪತ್ತಿಗೆ 90 ಸಾವಿರ ಕೋಟಿ ಡಾಲರ್ ಸೇರಿಸಬಹುದು. ಇದರಿಂದ ಕಾರ್ಪೊರೇಟ್ ಇತಿಹಾಸದಲ್ಲೇ ಯಾವುದೇ ಕಾರ್ಯನಿರ್ವಾಹಕರಿಗಿಂತ ಹೆಚ್ಚಿನ ಪರಿಹಾರ ಸಿಕ್ಕಂತಾಗುತ್ತದೆ.

## ಮಸೀದಿ ಅಡಿಗಲ್ಲಿನ ಮೇಲೆ ಅಶೋಕ ಲಾಂಛನ ಕೆತ್ತನೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಶ್ರೀನಗರದ ಹಜರತ್‌ಬಲ್ ಮಸೀದಿಯ ನೂತನ ಕಟ್ಟಡದ ಅಡಿಗಲ್ಲಿನ ಮೇಲೆ ಅಶೋಕ ಲಾಂಛನವನ್ನು ಕೆತ್ತಿರುವುದು ವಿವಾದಕ್ಕೆ ಕಾರಣವಾಗಿದೆ.

ಇಲ್ಲಿನ ಮುಸ್ಲಿಮರು ಶುಕ್ರವಾರ–ಕಾಶ್ಮೀರ ವಕ್ಫ್ ಬೋರ್ಡ್ ವಿರುದ್ಧ ಪ್ರತಿಭಟನೆ ನಡೆಸಿದರು. ಪರಿಸ್ಥಿತಿ ಉದ್ವಿಗ್ನಗೊಂಡಿದ್ದು, ಅಶೋಕ ಲಾಂಛನವನ್ನು ಹೊಂದಿದ್ದ ಅಡಿಪಾಯದ ಹಲಗೆಯನ್ನು ಪ್ರತಿಭಟನಕಾರರು ಕಿತ್ತುಹಾಕಿದರು.

ವಕ್ಫ್ ಬೋರ್ಡ್ ಅಧ್ಯಕ್ಷ , ಬಿಜೆಪಿಯ ಮಾಜಿ ನಾಯಕ ದಾರಾಕ್ಷನ್ ಅಂದ್ರಾಬಿ ಮತ್ತು ಇತರರು ಮುಸ್ಲಿಂ ಧಾರ್ಮಿಕ ಭಾವನೆಗೆ ಗಾಸಿ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಇದು ಮುಸ್ಲಿಂ ಆಚರಣೆಗಳ ಸ್ಪಷ್ಟ ಉಲ್ಲಂಘನೆಯಾಗಿದೆ, ಅಧಿಕಾರಿಗಳು ಹೊಣೆ ಹೊರಬೇಕು ಎಂದು ಆಗ್ರಹಿಸಿದ್ದಾರೆ.

ಪ್ರತಿಭಟನೆಯನ್ನು ಖಂಡಿಸಿದ ಅಂದ್ರಾಬಿ ಅವರು, ಇದು ಭಯೋತ್ಪಾದಕ ಕೃತ್ಯವಾಗಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದಿದ್ದಾರೆ.

## ಆರ್‌ಎಸ್‌ಎಸ್: 3 ದಿನಗಳ ಸಮನ್ವಯ ಸಭೆ ಆರಂಭ



ಮೋಹನ್ ಭಾಗವತ್

ಜೋಧಪುರ (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್‌ನ) ಮೂರು ದಿನಗಳ ಅಖಿಲ ಭಾರತ ಸಮನ್ವಯ ಸಭೆಯು ರಾಜಸ್ಥಾನದ ಜೋಧಪುರದಲ್ಲಿ ಶುಕ್ರವಾರ ಆರಂಭವಾಯಿತು.

ಆರ್‌ಎಸ್‌ಎಸ್ ಮುಖ್ಯಸ್ಥರಾದ ಮೋಹನ್ ಭಾಗವತ್ ಹಾಗೂ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರು ಈ ಸಭೆಯಲ್ಲಿ ಭಾಗಿಯಾಗಲಿದ್ದಾರೆ. ರಾಷ್ಟ್ರೀಯ ಏಕತೆ, ಭದ್ರತೆ ಮತ್ತು ಸಾಮಾಜಿಕ ದೃಷ್ಟಿಕೋನಗಳು ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಸಭೆಯಲ್ಲಿ ವ್ಯಾಪಕವಾಗಿ ಚರ್ಚಿಸಲಾಗುವುದು ಎಂದು ಆರ್‌ಎಸ್‌ಎಸ್ ಪದಾಧಿಕಾರಿಗಳು ತಿಳಿಸಿದರು.

ಬಿಜೆಪಿ ರಾಷ್ಟ್ರೀಯ ಘಟಕದ ಅಧ್ಯಕ್ಷ ಜೆ.ಪಿ ನಡ್ಡಾ ಅವರು ಸಭೆಯಲ್ಲಿ ಭಾಗಿಯಾಗಲು ಗುರುವಾರ ಸಂಜೆ ಜೋಧಪುರಕ್ಕೆ ಆಗಮಿಸಿದರು.

ಆರ್‌ಎಸ್‌ಎಸ್ ಹಾಗೂ ಅದರ 32 ಅಂಗಸಂಸ್ಥೆಗಳಿಂದ ಒಟ್ಟು 320 ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದಾರೆ. ಎಲ್ಲ ಸಂಸ್ಥೆಗಳು ಸಭೆಯಲ್ಲಿ ವಾರ್ಷಿಕ ವರದಿಯನ್ನು ಮಂಡಿಸಲಿವೆ. ಸಂಸ್ಥೆಯ ಕೆಲಸ, ಅನುಭವ ಮತ್ತು ಸಾಧನೆ ಕುರಿತು ಮಾಹಿತಿ ನೀಡಲಿವೆ.

ಸಾಮಾಜಿಕ ಸಾಮರಸ್ಯವನ್ನು ಉತ್ತೇಜಿಸುವುದು, ಕುಟುಂಬ ಸಂಸ್ಥೆಯನ್ನು ಬಲಪಡಿಸುವುದು, ಪರಿಸರಸ್ನೇಹಿ ಜೀವನಶೈಲಿಯನ್ನು ಪ್ರೋತ್ಸಾಹಿಸುವುದು ಹಾಗೂ ಸ್ವಾವಲಂಬನೆ ಸೇರಿದಂತೆ ಪ್ರಮುಖ ಅಂಶಗಳು ಸಭೆಯಲ್ಲಿ ಚರ್ಚೆಯಾಗಲಿವೆ.

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ), ಭಾರತೀಯ ಕಿಸಾನ್ ಸಂಘ, ಭಾರತೀಯ ಮಜ್ದೂರ್ ಸಂಘ, ವಿದ್ಯಾ ಭಾರತಿ ಹಾಗೂ ಸಕ್ಷಮ್ ಸೇರಿದಂತೆ ಇತರ ಅಂಗಸಂಸ್ಥೆಗಳು ಸಭೆಯಲ್ಲಿ ಭಾಗಿಯಾಗಲಿವೆ.

ಪಂಜಾಬ್, ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಈಶಾನ್ಯ ಬುಡಕಟ್ಟು ಪ್ರದೇಶಗಳು ಸೇರಿದಂತೆ ದೇಶದ ವಿವಿಧ ಭಾಗಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಕುರಿತು ಚರ್ಚಿಸಲಾಗುತ್ತದೆ.

### ಮುಂಬೈ ಧಾರಣೆ (ಶೇಂಗಾ)

| 05-09-2025 | |
|---|---|
| ಜಾವಾ 70/80(ಹೊಸ) | 10600-10700 |
| ಜಾವಾ 80/90(ಹೊಸ) | 9900-10000 |
| ದಪ್ಪ ಮಧ್ಯಪ್ರದೇಶ (ಹೊಸ) | 7500-7600 |
| ದಪ್ಪ ಗುಜರಾತ್ (ಹೊಸ) | 8500-8600 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1385 (1380) |
| ಒಂದು ವಾರದ ಡೆಲಿವರಿ | 1380 (1375) |
| ಪಾಮ್ ವಾರದ ಡೆಲಿವರಿ | 1278 (1278) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1340 (1345) |
| **ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 1,06,500 (1,05,800) |
| ಬೆಳ್ಳಿ ಕೆ.ಜಿಗೆ | 1,24,400 (1,22,600) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

### 'ಉಕ್ರೇನ್ ಸಂಘರ್ಷದಿಂದ ವ್ಯತಿರಿಕ್ತ ಪರಿಣಾಮ'

ಪರ್ವತನೇನಿ ಹರೀಶ್

ವಿಶ್ವಸಂಸ್ಥೆ (ಪಿಟಿಐ): ಉಕ್ರೇನ್ ಸಂಘರ್ಷವು ದಕ್ಷಿಣ ದೇಶಗಳಲ್ಲಿನ ತೈಲ ಬೆಲೆ ಸೇರಿದಂತೆ ವಿವಿಧ ಕ್ಷೇತ್ರಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂದು ಭಾರತ ಹೇಳಿದೆ.

ರಷ್ಯಾ ಆಕ್ರಮಿತ ಉಕ್ರೇನ್‌ನ ಪ್ರದೇಶಗಳಲ್ಲಿನ ಪರಿಸ್ಥಿತಿ ಕುರಿತಂತೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಡೆದ ಚರ್ಚೆಯಲ್ಲಿ ಭಾರತದ ಕಾಯಂ ಪ್ರತಿನಿಧಿ ಪರ್ವತನೇನಿ ಹರೀಶ್ ಮಾತನಾಡಿದರು.

ಉಕ್ರೇನ್‌ನಲ್ಲಿನ ಸ್ಥಿತಿಯ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, 'ಮುಗ್ಧ ಜೀವಗಳ ಸಾವನ್ನು ಒಪ್ಪಲಾಗದು. ಯುದ್ಧದಿಂದ ಎಂದಿಗೂ ಪರಿಹಾರ ಸಾಧ್ಯವಿಲ್ಲ' ಎಂದು ಹೇಳಿದರು. 'ರಾಜತಾಂತ್ರಿಕ ಪ್ರಯತ್ನಗಳು ಯುದ್ಧವನ್ನು ಕೊನೆಗೊಳಿಸುವ ಮತ್ತು ಶಾಶ್ವತ ಶಾಂತಿಯನ್ನು ಸ್ಥಾಪಿಸುವ ಭರವಸೆ ಹೊಂದಿವೆ' ಎಂದರು.

'ನಮ್ಮ ದೃಷ್ಟಿಕೋನದಲ್ಲಿ ನೊಂದವರ ಧ್ವನಿ ಆಲಿಸಿ, ಸಮಸ್ಯೆಗಳನ್ನು ಪರಿಹರಿಸಬೇಕು. ಶಾಶ್ವತ ಶಾಂತಿ ಸ್ಥಾಪನೆಗಾಗಿ ತುಂಬು ಹೃದಯದಿಂದ ಎಲ್ಲ ಪಾಲುದಾರರು ಭಾಗಿಯಾಗಬೇಕು. ಬದ್ಧತೆ ನಿರ್ಣಾಯಕವಾಗಿರಬೇಕು' ಎಂದಿರುವ ಭಾರತವು, ಈ ದಿಕ್ಕಿನಲ್ಲಿ 'ಇತ್ತೀಚಿನ ಸಕಾರಾತ್ಮಕ ಬೆಳವಣಿಗೆ'ಗಳನ್ನು ಸ್ವಾಗತಿಸುತ್ತದೆ ಎಂದು ಸಭೆಯಲ್ಲಿ ಪ್ರತಿಪಾದಿಸಿದೆ.

## 4,346 ಹುದ್ದೆ ಭರ್ತಿಗೆ ಸಿದ್ಧತೆ

ಎರಡನೇ ಮುಖಪುಟದಿಂದ...

'ಸಿಬ್ಬಂದಿ ಕೊರತೆಯ ಕಾರಣಕ್ಕೆ ವಾರದ ರಜೆಯನ್ನೂ ತ್ಯಾಗ ಮಾಡಿ, ಕೆಲಸ ಮಾಡಬೇಕಾದ ಅನಿವಾರ್ಯ ಸೃಷ್ಟಿಯಾಗಿದೆ' ಎಂದು ಪೊಲೀಸ್ ಸಿಬ್ಬಂದಿ ಅಳಲು ತೋಡಿಕೊಂಡಿದ್ದಾರೆ.

ರಾಷ್ಟ್ರೀಯ ಸಾಮಾಜಿಕ ನ್ಯಾಯದಳದ ರಾಷ್ಟ್ರೀಯ ಅಧ್ಯಕ್ಷ ಆರ್.ಸ್ಕಂದ ಶರತ್ ಅವರು ಕೆಲವು ತಿಂಗಳ ಹಿಂದೆ ಸಲ್ಲಿಸಿದ್ದ ಮನವಿ ಆಧರಿಸಿ, 'ಪೊಲೀಸ್ ಸಿಬ್ಬಂದಿಗೆ ಮೂರು ಪಾಳಿಯಲ್ಲಿ ಕೆಲಸದ ಸಮಯ ನಿಗದಿ ಪಡಿಸುವ ಕುರಿತು ಇಲಾಖೆ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಮೂರು ಪಾಳಿ ಕೆಲಸ ಸಾಧ್ಯವೇ ಎಂಬುದನ್ನು ಪರಿಶೀಲಿಸಿ ವರದಿ ಸಲ್ಲಿಸುವಂತೆ ಗೃಹ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಜುಲೈನಲ್ಲಿ ಪತ್ರ ಬರೆದಿದ್ದರು. ಆ ಕುರಿತು ಪರಿಶೀಲನೆ ನಡೆಯುತ್ತಿದೆ. ಪ್ರಸ್ತುತ ಸಿಬ್ಬಂದಿ ಎರಡು ಪಾಳಿಯಲ್ಲಿ (12 ತಾಸು) ಕೆಲಸ ಮಾಡುತ್ತಿದ್ದಾರೆ. ಸಿಬ್ಬಂದಿ ಕೊರತೆಯಿರುವ ಕಾರಣಕ್ಕೆ ಈಗಿನ ಸ್ಥಿತಿಯಲ್ಲಿ ಮೂರು ಪಾಳಿಯಲ್ಲಿ (ಎಂಟು ತಾಸು) ಕೆಲಸ ನಿಗದಿ ಪಡಿಸುವುದು ಕಷ್ಟ' ಎಂದು ಇಲಾಖೆ ಮೂಲಗಳು ಹೇಳಿವೆ.

**ನೇರ ನೇಮಕಾತಿಗೆ ಮರು ಹಂಚಿಕೆ ಮಾಡಿರುವ ಹುದ್ದೆಗಳ ವಿವರ**

| ಹುದ್ದೆ | ಕಲ್ಯಾಣ ಕರ್ನಾಟಕ | ಕಲ್ಯಾಣ ಕರ್ನಾಟಕೇತರ | ಒಟ್ಟು |
|---|---|---|---|
| ಡಿಟೆಕ್ಟಿವ್ ಸಬ್ ಇನ್‌ಸ್ಪೆಕ್ಟರ್(ಡಿಎಸ್‌ಐ) | 5 | 15 | 20 |
| ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್(ಎಪಿಸಿ) | 275 | 1,375 | 1,650 |
| ನಾಗರಿಕ ಪೊಲೀಸ್ ಕಾನ್‌ಸ್ಟೆಬಲ್(ಸಿವಿಲ್) | 614 | 0 | 614 |
| ವಿಶೇಷ ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್(ಕೆಎಸ್‌ಆರ್‌ಪಿ) | 532 | 1,500 | 2,032 |
| ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ(ಕೆಎಸ್‌ಐಎಸ್‌ಎಫ್) | 340 | 0 | 340 |

**ಹೆಚ್ಚಿನ ಸಂಖ್ಯೆಯಲ್ಲಿ ಖಾಲಿಯಿರುವ ಹುದ್ದೆಗಳ ವಿವರ**

| ಹುದ್ದೆಯ ವಿವರ | ಮಂಜೂರಾತಿ | ಹಾಲಿಬಲ | ಖಾಲಿ ಹುದ್ದೆ |
|---|---|---|---|
| ಪಿಎಸ್‌ಐ(ಸಿವಿಲ್) | 3,842 | 3,374 | 468 |
| ಎಎಸ್‌ಐ(ಸಿವಿಲ್) | 6,494 | 6,030 | 464 |
| ಹೆಡ್ ಕಾನ್‌ಸ್ಟೆಬಲ್(ಸಿವಿಲ್) | 18,459 | 17,640 | 819 |
| ಪೊಲೀಸ್ ಕಾನ್‌ಸ್ಟೆಬಲ್(ಸಿವಿಲ್) | 36,524 | 29,933 | 6,591 |
| ಪಿಎಸ್‌ಐ ಗುಪ್ತವಾರ್ತೆ | 100 | 59 | 41 |
| ಆರ್‌ಎಸ್‌ಐ(ಸಿಎಆರ್/ಡಿಎಆರ್) | 497 | 425 | 72 |
| ಎಆರ್‌ಎಸ್‌ಐ (ಸಿಎಆರ್/ಡಿಎಆರ್) | 2,111 | 2052 | 59 |
| ಎಎಚ್‌ಸಿ(ಸಿಎಆರ್/ಡಿಎಆರ್) | 6,375 | 5,859 | 516 |
| ಎಪಿಸಿ(ಸಿಎಆರ್/ಡಿಎಆರ್) | 13,656 | 10,549 | 3,107 |
| ಆರ್‌ಎಚ್‌ಸಿ(ಕೆಎಸ್‌ಆರ್‌ಪಿ) | 3,948 | 3,706 | 242 |
| ಆರ್‌ಪಿಸಿ(ಕೆಎಸ್‌ಆರ್‌ಪಿ) | 8,047 | 4,217 | 3,830 |

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ವೈಯಕ್ತಿಕ

Lost

ದಾಖಲಾತಿಗಳು ಕಾಣೆಯಾಗಿದೆ

ಕಳೆದಿದೆ ಶಾಂತ ಕೃಷ್ಣಪ್ಪ ಕೋಂ. ಎಸ್.ಎಂ., ಕೃಷ್ಣಪ್ಪ ಆದ ನಾನು, ಧಾತ್ರಿ ತೋಟದಮನೆ, ಶ್ರೀನಿವಾಸಪುರ, ಬಾಗಲೂರು ಪೋಸ್ಟ್, ಬೆಂಗಳೂರು– 562149 ಇಲ್ಲಿ ವಾಸ. ಮನೆಯ ವಸ್ತುಗಳನ್ನು ಸಾಗಾಣೆ ಮಾಡುವಾಗ ಕಳೆದು ಕೊಂಡಿರತಕ್ಕ (1) ಹಕ್ಕು ಬಿಡುಗಡೆಯೂ ರಿಲೀಸ್ ಪತ್ರ ನೋಂದಣಿ ಸಂಖ್ಯೆ 1085/ 1990–2000, 03–06–2006 ರಲ್ಲಿ ನೋಂದಣಿಯಾಗಿದೆ. (2) ಹಕ್ಕು ಬಿಡುಗಡೆಯ ರಿಲೀಸ್ ಪತ್ರ ನೋಂದಣಿ ಸಂಖ್ಯೆ 12580/2005–2006, 04–02–2006ರಲ್ಲಿ ನೋಂದಣಿಯಾಗಿದೆ. ಎರಡು ಪತ್ರಗಳು ಯಲಹಂಕ ಉಪನೋಂದಣೀ ಕಛೇರಿಯಲ್ಲಿ ನೋಂದಣಿಯಾಗಿದೆ. ಈ ಸಂಬಂಧದ ಪತ್ರಗಳನ್ನು ಪತ್ತೆ ಮಾಡುವುದಕ್ಕಾಗಿ "ಕಳೆದು ಹೋದ ವಸ್ತು" ದಾಖಲೆಯ ವರದಿಯಲ್ಲೂ, ಸೀರಿಯಲ್ ನಂ. ಕ್ರಮ ಸಂಖ್ಯೆ 1783844 ಮತ್ತು ಕಳೆದ ರಿಪೋರ್ಟ್ ನಂ. 1783844/ 2025, 03–09–2025ರಲ್ಲಿ ಪ್ರಕಟಿಸಿದೆ.

ಯಾರಿಗಾದರೂ ಸಿಕ್ಕಲ್ಲಿ ಸಂಪರ್ಕಿಸಿ: 9886136816

ಉದ್ಯೋಗಾವಕಾಶ

Wanted

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 9019427194

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Multiple Vacancy

ಬೆಂಗಳೂರಿನ ಪೀಣ್ಯದಲ್ಲಿರುವ ಅತ್ಯಾಧುನಿಕ ಪ್ರೆಸ್ಸಿನಲ್ಲಿ ಹಗಲು/ ರಾತ್ರಿ ಪಾಳಿಯಲ್ಲಿ (SSLC/ PUC ಆಗಿರುವ) ಮೇಷಿನ್ ಆಪರೇಟರ್, ಪ್ಯಾಕಿಂಗ್ ಹೆಲ್ಪರ್, ಶಿಫ್ಟಿಂಗ್ ಹೆಲ್ಪರ್, ಕ್ವಾಲಿಟಿ ಚೆಕ್ಕಿಂಗ್ ಹೆಲ್ಪರ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವೇತನ 20,000 PF/ ESI ಹಾಗೂ ಬೋನಸ್ ಸೌಲಭ್ಯವಿದೆ. ಸಂಪರ್ಕಿಸಿ: 9900944342, 9632936713, 8088985301, 8792481338

ಪ್ರವಾಸ

Travel

ರಿಯಾಯಿತಿ ದರದಲ್ಲಿ ಪ್ರವಾಸಗಳು 7/11 ದಿನಗಳ ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್. 6 ದಿನಗಳ ಬಾಲಿ (ಇಂಡೋನೇಷ್ಯಾ) 9 ದಿನಗಳ ಗುಜರಾತ್ ಸ್ಪೆಷಲ್. 7 ದಿನಗಳ ನಾರ್ತ್ ಈಸ್ಟ್ 11 ದಿನಗಳ ವಿಯೆಟ್ನಾಂ, ಕಾಂಬೋಡಿಯ ಸಂಪರ್ಕಿಸಿ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9900080793 9900099252

WEEKEND CORNER

ಸ್ಪಂದನ ಚಾರಿಟಬಲ್ ಟ್ರಸ್ಟ್ (ರಿ)

ತಿಮ್ಮಲಾಪುರ ರಸ್ತೆ, ದೂಪದಹಳ್ಳಿ, ಕೊಟ್ಟೂರು ತಾಲೂಕು, ವಿಜಯನಗರ ಜಿಲ್ಲೆ–583134 ಮೊ : 9448394686, 7483388919.

E-Mail Id: Naalkudinadabaduku@gmail.com

ಆಶ್ರಯ ಕೇಂದ್ರ

ಹಲವಾರು ವರ್ಷಗಳಿಂದ ನಮ್ಮ ಸಂಸ್ಥೆಯು ಸಾಮಾಜಿಕ ಜವಾಬ್ದಾರಿ ಹೊತ್ತು ಅನಾಥರಿಗೆ, ವಯೋವೃದ್ಧರಿಗೆ, ಅಂಗವಿಕಲರಿಗೆ (ವಿಕಲಚೇತನ) ನಿಶ್ಯಕ್ತರಿಗೆ ಹಾಗೂ ಹಾಸಿಗೆ ಹಿಡಿದಿರುವ ರೋಗಿಗಳಿಗೆ ನಿಲುಕುವ ಆಶ್ರಯ ತಾಣವಾಗಿದೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ದೂರವಾಣಿಗಳಿಗೆ ಸಂಪರ್ಕಿಸಲು ಕೋರಲಾಗಿದೆ

7483388919, 9448394686

# ನಿರ್ದೇಶನದ ಸಾಮರ್ಥ್ಯ ಪ್ರದರ್ಶನ

**ಏಳುಮಲೆ**
- ನಿರ್ಮಾಣ: ತರುಣ್ ಕಿಶೋರ್ ಸುಧೀರ್, ಅಟ್ಲಾಂಟ ನಾಗೇಂದ್ರ
- ನಿರ್ದೇಶನ: ಪುನೀತ್ ರಂಗಸ್ವಾಮಿ
- ತಾರಾಗಣ: ರಾಣಾ, ಪ್ರಿಯಾಂಕಾ ಆಚಾರ್, ಕಿಶೋರ್, ಟಿ.ಎಸ್.ನಾಗಾಭರಣ, ಜಗಪತಿ ಬಾಬು, ಜಗಪ್ಪ ಮತ್ತಿತರರು

ರಾಣಾ, ಪ್ರಿಯಾಂಕಾ

• ಅಭಿಲಾಷ್ ಪಿ.ಎಸ್.

ಹಿಂದಿಯ '9 2 11', ತಮಿಳಿನ 'ಕೃಷಿ', ಕನ್ನಡದ 'ಮ್ಯಾಕ್', 'ಕೇಸ್ ಆಫ್ ಕೊಂಡಾಣ' ಮುಂತಾದವು ಒಂದು ರಾತ್ರಿಯಲ್ಲಿ ನಡೆದ ಘಟನೆಗಳ ಸುತ್ತ ಕಟ್ಟಿದ ಕಥೆಯುಳ್ಳ ಸಿನಿಮಾಗಳು. ಈ ಮಾದರಿಯ ಸಿನಿಮಾಗಳ ಯಶಸ್ಸು ಅವು ಹುಟ್ಟಿಸುವ ಕುತೂಹಲ, ನೀಡುವ ತಿರುವುಗಳು, ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುತ್ತದೆ. 'ಏಳುಮಲೆ' ಈ ನಿಟ್ಟಿನಲ್ಲಿ ಯಶಸ್ವಿ ಪ್ರಯೋಗ. ಈ ಸಿನಿಮಾ ಪುನೀತ್ ರಂಗಸ್ವಾಮಿ ನಿರ್ದೇಶನದ ಸಾಮರ್ಥ್ಯವನ್ನೂ ಪರಿಚಯಿಸಿದೆ.

ಹರೀಶ (ರಾಣಾ) ಮೈಸೂರಿನ ಅನಾಥ ಹುಡುಗ. ಈತ ಟೂರಿಸ್ಟ್ ಗಾಡಿ ಡ್ರೈವರ್. ಮೈಸೂರಿನಲ್ಲಿ ಓದಲು ಬಂದ ತಮಿಳುನಾಡಿನ ಶ್ರೀಮಂತ ಕುಟುಂಬದ ಹುಡುಗಿ ರೇವತಿ (ಪ್ರಿಯಾಂಕಾ) ಜೊತೆ ಪ್ರೀತಿಯಲ್ಲಿ ಬೀಳುತ್ತಾನೆ. ಆಕೆಗೂ ಈತ ಪಂಚಪ್ರಾಣ. ಈ ವಿಷಯ ತಿಳಿದು ರೇವತಿ ಕುಟುಂಬದವರು ಆಕೆಗೆ ಮದುವೆ ಮಾಡಿಸಲು ಸಜ್ಜಾಗುತ್ತಾರೆ. ಮದುವೆಯ ಹಿಂದಿನ ದಿನ ರಾತ್ರಿ (2004 ಅಕ್ಟೋಬರ್ 18) ರೇವತಿ ಮನೆ ಬಿಟ್ಟು ಹರೀಶನೊಂದಿಗೆ ಓಡಿ ಹೋಗಲು ಮಲೆ ಮಹದೇಶ್ವರಕ್ಕೆ ಧಾವಿಸುತ್ತಾಳೆ. ಆಕೆಯನ್ನು ಕರೆತರಲು ಹರೀಶನೂ ಆ ಬೆಟ್ಟಕ್ಕೆ ಪ್ರಯಾಣಿಸುತ್ತಾನೆ. ಇದೇ ವೇಳೆ ಚಾಮರಾಜನಗರದ ಕರ್ನಾಟಕ-ತಮಿಳುನಾಡು ಗಡಿಯಲ್ಲಿನ ಕಾಡಿನೊಳಗೆ, ಅಲ್ಲಿರುವ ಪೊಲೀಸ್ ಠಾಣೆಯೊಳಗೆ ನಡೆಯುವ ಘಟನೆಗಳು ಹರೀಶನ ಜೀವನವನ್ನೇ ಬದಲಾಯಿಸಿ ಬಿಡುತ್ತವೆ. ಕಥೆ ಹೀಗೆ ಮುಂದುವರಿಯುತ್ತಿರುತ್ತದೆ.

ಎರಡು ಗಂಟೆ ಹದಿಮೂರು ನಿಮಿಷದ ಈ ಸಿನಿಮಾದಲ್ಲಿ ಅನಗತ್ಯ ದೃಶ್ಯಗಳಿಲ್ಲ. ಚೊಚ್ಚಲ ಸಿನಿಮಾದಲ್ಲೇ ಏಕ ಸೂತ್ರವಾಗಿ ಚಿತ್ರಕಥೆಯನ್ನು ರಚಿಸಿದ್ದಾರೆ ಪುನೀತ್. ಮೊದಲಾರ್ಧದಲ್ಲಿ ಏಳು ಘಟನೆಗಳನ್ನು ಕಟ್ಟಿಕೊಡುತ್ತಾ ಸಾಹಸವನ್ನು ನಿರ್ದೇಶಕರು ಸಮರ್ಥವಾಗಿ ಮಾಡಿದ್ದಾರೆ. 2004ರಲ್ಲಿ ನಡೆದ 'ಆಪರೇಷನ್ ಕುಕೂನ್' ಎಂಬ ನೈಜ ಘಟನೆಯೊಂದನ್ನು ಆಧಾರವಾಗಿಟ್ಟುಕೊಂಡು ಕಾಲ್ಪನಿಕ ಕಥೆ ಹೆಣೆದಿರುವ ನಿರ್ದೇಶಕರು ಹಲವು ವಿಷಯಗಳನ್ನು ಪ್ರಸ್ತುತಪಡಿಸಿದರೂ ಕಥೆಯ ಬೇರೆಡೆ ಹೊರಳದಂತೆ ಪ್ರೀತಿಯಿಂದಲೇ ಅಂತ್ಯಗೊಳಿಸಿದ್ದಾರೆ. ಕಥೆಯುದ್ದಕ್ಕೂ ಹರೀಶ ಹಾಗೂ ರೇವತಿಯ ಚಡಪಡಿಕೆಯ ಅನುಭವವನ್ನು ದಾಟಿಸುವಲ್ಲಿ ಅವರು ಯಶಸ್ಸು ಕಂಡಿದ್ದಾರೆ. ಎಲ್ಲಾ ಪಾತ್ರಗಳಿಗೂ ಅದರದ್ದೇ ಆದ ತೆರೆ ಅವಧಿಯನ್ನು, ಪ್ರಾಮುಖ್ಯತೆಯನ್ನು ಬರವಣಿಗೆಯಲ್ಲಿ ನೀಡಿದ್ದಾರೆ. ಮೊದಲಾರ್ಧಕ್ಕೆ ಹೋಲಿಸಿದರೆ ದ್ವಿತೀಯಾರ್ಧದ ಕಥೆಯ ವೇಗ ಕೊಂಚ ಕಡಿಮೆ ಎಂದೆನಿಸುತ್ತದೆ.

ಪ್ರೀತಿಯೇ ಶ್ರೇಷ್ಠ ಎಂಬುದನ್ನು ಉಲ್ಲೇಖಿಸುವ ಈ ಕಥೆಯಲ್ಲಿ ಅದಕ್ಕೆ ತಕ್ಕ ಹಾಗೆ ನಟಿಸಿದ್ದಾರೆ ರಾಣಾ ಹಾಗೂ ಪ್ರಿಯಾಂಕಾ. ಮೊದಲ ಸಿನಿಮಾಗೆ ಹೋಲಿಸಿದರೆ ರಾಣಾ ಅವರ ನಟನೆಯಲ್ಲಿ ಪಕ್ವತೆಯಿದೆ. ಈ ಸಿನಿಮಾದಲ್ಲಿ ಅವರ ನಟನೆಯ ಗ್ರಾಫ್ ಏರುತ್ತಲೇ ಹೋಗುತ್ತದೆ. ಕಿಶೋರ್ ಜೊತೆಗಿನ ಅವರ ದೃಶ್ಯಗಳೇ ಇದಕ್ಕೆ ಸಾಕ್ಷಿ. ಮುಗ್ಧ ಹುಡುಗಿಯಾಗಿ ಪ್ರಿಯಾಂಕಾ ನಟನೆ ಚೆನ್ನಾಗಿದೆ. ಒರಟು ಮಾತಿನ ಪೊಲೀಸ್ ಅಧಿಕಾರಿಯಾಗಿ ಕಿಶೋರ್, ನಿವೃತ್ತಿ ಅಂಚಿನಲ್ಲಿರುವ ಮೃದು ಮಾತಿನ ಪೊಲೀಸ್ ಹೆಡ್‌ಕಾನ್‌ಸ್ಟೆಬಲ್ ಆಗಿ ಟಿ.ಎಸ್.ನಾಗಾಭರಣ ಇಡೀ ಸಿನಿಮಾವನ್ನು ಆವರಿಸಿಕೊಂಡಿದ್ದಾರೆ. ಕಥೆಗೆ ಅನುಗುಣವಾಗಿ ಸಿನಿಮಾದೊಳಗಿನ ಪಾತ್ರಗಳಿಗೆ ಚಾಮರಾಜನಗರದ ಕನ್ನಡ, ಗಡಿ ಭಾಗದ ಭಾಷೆಯನ್ನೇ ಉಳಿಸಿಕೊಳ್ಳಲಾಗಿದೆ. ಇದು ನೈಜತೆಯನ್ನು ಸೃಷ್ಟಿಸಿದೆ.

ಸಿನಿಮಾಗೆ ಅದ್ವೈತ ಗುರುಮೂರ್ತಿ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಹೊಸ ರೂಪ ನೀಡಿದೆ. ಕಥೆಯ ವೇಗಕ್ಕೆ ಡಿ.ಇಮ್ಮಾನ್ ಬಿಜಿಎಂ ಸಾಥ್ ನೀಡಿದೆ. 'ಅನುಮಲೆ ಜೇನುಮಲೆ' ಹಾಡು ಚೆನ್ನಾಗಿದೆ.

**ನೋಡಬಹುದಾದ ಚಿತ್ರ.**

**ನಾವು ನೋಡಿದ ಸಿನಿಮಾ**

**ನಾನು ಮತ್ತು ಗುಂಡ 2**
- ನಿರ್ಮಾಣ, ನಿರ್ದೇಶನ: ರಘು ಹಾಸನ್
- ತಾರಾಗಣ: ರಾಕೇಶ್ ಅಡಿಗ, ರಚನಾ ಇಂದರ್, ಗೋವಿಂದೇಗೌಡ ಮತ್ತಿತರರು

# ಬದುಕುಳಿದ ನಾಯಿಯ ಕಥೆ

• ವಿನಾಯಕ ಕೆ.ಎಸ್.

ಶಿವರಾಜ್ ಕೆ.ಆರ್.ಪೇಟೆ ನಾಯಕರಾಗಿ ನಟಿಸಿದ್ದ 'ನಾನು ಮತ್ತು ಗುಂಡ' ಚಿತ್ರ ವಿಭಿನ್ನವಾದ ಕಥಾವಸ್ತುವಿನಿಂದ ಗಮನ ಸೆಳೆದಿತ್ತು. ಆ ಚಿತ್ರದ ನಿರ್ಮಾಪಕರಾಗಿದ್ದ ರಘು ಹಾಸನ್ 'ನಾನು ಮತ್ತು ಗುಂಡ 2' ನಿರ್ಮಾಣದ ಜತೆಗೆ ನಿರ್ದೇಶನವನ್ನೂ ಮಾಡಿದ್ದಾರೆ. ಹೀಗಾಗಿಯೇ ನಿರೀಕ್ಷೆಯಂತೆ ಆ ಚಿತ್ರದ ಮುಂದುವರಿಕೆ ಕಥೆ ಇಲ್ಲಿದೆ. ಅದರಲ್ಲಿ ಶಂಕರನಾಗಿದ್ದ ಶಿವರಾಜ್ ಕೆ.ಆರ್.ಪೇಟೆ ಚಿತ್ರದ ಕೊನೆಯಲ್ಲಿ ತೀರಿಕೊಂಡಿರುತ್ತಾರೆ. ಆದರೆ ಆತ ಸಾಕಿದ್ದ ನಾಯಿ ಗುಂಡ ಬದುಕುತ್ತಿರುತ್ತದೆ. ಗುಂಡನ ಬದುಕು ಏನೆಲ್ಲ ಆಗುತ್ತದೆ ಎಂಬುದೇ 'ನಾನು ಮತ್ತು ಗುಂಡ 2' ಚಿತ್ರದ ಒಟ್ಟಾರೆ ಕಥೆ.

ನಾಯಿಯೇ ಮುಖ್ಯಪಾತ್ರದಲ್ಲಿರುವ ಚಿತ್ರ ಕೂಡಲೇ ಒಂದಷ್ಟು ನಿರೀಕ್ಷೆಗಳು ಸಹಜ. ಜಪಾನ್‌ನ 'ಹಚಿಕೋ' ಈ ಜಾನರ್‌ನಲ್ಲಿ ಅತ್ಯುತ್ತಮ ಚಿತ್ರ. 'ಚಾರ್ಲಿ' ಕೂಡ ನಾಯಿ ಮತ್ತು ಮನುಷ್ಯ ಸಂಬಂಧವನ್ನೇ ಮುಖ್ಯ ಕಥೆಯಾಗಿಟ್ಟುಕೊಂಡು ಗೆದ್ದ ಸಿನಿಮಾ. ಅದೇ ರೀತಿ ಕಥಾಹಂದರ ಈ ಚಿತ್ರದಲ್ಲಿಯೂ ಇದೆ. 'ಹಚಿಕೋ'ದಂತೆ ಇಲ್ಲಿಯೂ ಗುಂಡ, ಮರಣ ಹೊಂದಿದ ತನ್ನ ಮಾಲೀಕ ಮರಳುತ್ತಾನೆಂದು ಕಾಯುತ್ತ, ನರಳುತ್ತ ಇರುತ್ತಾನೆ. ಆಗ ಗುಂಡನಿಗೆ ಜತೆಯಾಗುವುದು ಶಂಕರನ ಮಗ. ಆತನ ಹೆಸರೂ ಶಂಕರ. ಜೂನಿಯರ್ ಶಂಕರ ಮತ್ತು ಗುಂಡನ ಕಥೆಯೇ ಚಿತ್ರದ ಮೊದಲಾರ್ಧ. ಅದ್ಭುತವಾಗಿ ನಟಿಸಿರುವ ನಾಯಿ ಮತ್ತು ಮಾಸ್ಟರ್ ಯುವನ್ ಸಾಯಿ ಪಾತ್ರಗಳನ್ನಿಟ್ಟುಕೊಂಡು ಒಂದು ಭಾವುಕವಾದ, ಪ್ರೇಕ್ಷಕನಿಗೆ ಹತ್ತಿರವಾದ ಸಿನಿಮಾವನ್ನು ಕಟ್ಟಿಕೊಡುವಲ್ಲಿ ನಿರ್ದೇಶಕರು ಸ್ವಲ್ಪ ಎಡವಿದ್ದಾರೆ.

ಗುಂಡ ಮತ್ತು ಪುಟಾಣಿ ಶಂಕರನೊಂದಿಗೆ ಕಥೆ ಪ್ರಾರಂಭವಾಗುತ್ತದೆ. ತಂದೆ ಮತ್ತು ತಾಯಿ ಇಬ್ಬರನ್ನೂ ಕಳೆದುಕೊಂಡ ಶಂಕರನನ್ನು ಭೂರಿ ದಂಪತಿ ಸಾಕಿ ಬೆಳೆಸುತ್ತಾರೆ. 'ಕಾಮಿಡಿ ಕಿಲಾಡಿ' ಖ್ಯಾತಿಯ ಗೋವಿಂದೇಗೌಡ ಮತ್ತು ನಯನಾ ಈ ದಂಪತಿ ಪಾತ್ರ ಮಾಡಿದ್ದಾರೆ. ಹೀಗಾಗಿ ನಿರ್ದೇಶಕರು ಅಲ್ಲಿ ಹಾಸ್ಯವನ್ನು ಬೆರೆಸಲು ಹೋಗಿ ಪ್ರಾರಂಭದಲ್ಲಿಯೇ ಕಥೆ ಒಂಚೂರು ದಿಕ್ಕು ತಪ್ಪುತ್ತದೆ. ಅಪ್ಪ ಶಂಕರನೊಂದಿಗೆ ಗುಂಡನ ನೆನಪುಗಳು, ಮಗ ಶಂಕರನೊಂದಿಗೆ ಗುಂಡನ ಒಂದಷ್ಟು ಚೇಷ್ಟೆಗಳು ಮನಮಿಡಿಯುವಂತಿವೆ. ಇಷ್ಟಾಗಿಯೂ ಕಥೆಗೆ ಸ್ಪಷ್ಟತೆ ಇಲ್ಲದೆ ಕೆಲವಷ್ಟು ಸನ್ನಿವೇಶಗಳು ಅಸಹಜ ಎಂಬ ಭಾವನೆ ಮೂಡುತ್ತವೆ.

ಗುಂಡನಿಗೆ ಹೃದಯಾಘಾತವಾಗುತ್ತದೆ. ಆತ ಹೆಚ್ಚು ಕಾಲ ಬದುಕುಳಿಯುವುದಿಲ್ಲ ಎಂದು ವೈದ್ಯರು ಹೇಳುತ್ತಾರೆ. ಅಲ್ಲಿತನಕವೂ ಕೃತಕ ಎನಿಸುವ ನಾಯಿ ನಟನೆ ಅಲ್ಲಿಂದ ಬೇರೆಯದೇ ತಿರುವು ಪಡೆದುಕೊಳ್ಳುತ್ತದೆ. ಅಲ್ಲಿಂದ ಗುಂಡ ಸಾಯುವ ತನಕವೂ ನಾಯಿ ಮತ್ತು ಮಾಸ್ಟರ್ ಯುವನ್ ಸಾಯಿ ಕಣ್ಣಂಚಲ್ಲಿ ನೀರು ತರಿಸುವಂತೆ ನಟಿಸಿದ್ದಾರೆ. ಈ ಜೋಡಿಯೇ ಚಿತ್ರದ ಬಹುದೊಡ್ಡ ಶಕ್ತಿ. ಗುಂಡ ತೀರಿ ಆರೆಂಟು ವರ್ಷ ಕಳೆದರೂ ಶಂಕರನಿಗೆ ಅದರ ನೆನಪು ಹೋಗಿರುವುದಿಲ್ಲ. ಯುವಕ ಶಂಕರನಾಗಿ ರಾಕೇಶ್ ಅಡಿಗ ಕಾಣಿಸಿಕೊಳ್ಳುವ ಹೊತ್ತಿಗೆ ಚಿತ್ರದ ಮೊದಲಾರ್ಧ ಮುಗಿದಿರುತ್ತದೆ.

ಶಂಕರನಿಗೆ ಗುಂಡ ಊಟಿಯಲ್ಲಿ ಮತ್ತೆ ಮರುಜನ್ಮ ಪಡೆದ ಕನಸು ಬೀಳುತ್ತದೆ. ಮತ್ತೆ ಆತ ಗುಂಡನನ್ನು ಹುಡುಕಿಕೊಂಡು ಹೋಗುತ್ತಾನೆ. ಅಲ್ಲಿ ಪುಟಾಣಿ ಗುಂಡ ಮತ್ತೆ ನಾಯಕಿ ಇಂದು ಸಿಗುತ್ತಾರೆ. ಇಂದುವಾಗಿ ರಚನಾ ಇಂದರ್ ಕಾಣಿಸಿಕೊಂಡಿದ್ದಾರೆ. ಈ ಮೂವರ ಕಥೆಯೇ ಚಿತ್ರದ ದ್ವಿತೀಯಾರ್ಧ. ಛಾಯಾಚಿತ್ರಗ್ರಹಣ, ಹಿನ್ನೆಲೆ ಸಂಗೀತ ನಡೆಯುವ ಸನ್ನಿವೇಶಗಳಿಗೆ ಸೂಕ್ತವಾಗಿವೆ. ಆದರೆ ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ. ಕಥೆಯಲ್ಲಿ ಅನವಶ್ಯ ಹಾಸ್ಯ, ಪ್ರೀತಿಗೆ ಕಡಿವಾಣ ಹಾಕಿ ನಾಯಿ ಮತ್ತು ಮನುಷ್ಯ ಸಂಬಂಧಗಳನ್ನು ಹೇಳುವ ಇನ್ನಷ್ಟು ಭಾವುಕ ಸನ್ನಿವೇಶಗಳಿಗೆ ನಿರ್ದೇಶಕರು ಒತ್ತು ನೀಡಬೇಕಿತ್ತು.

**ನೋಡಬಹುದಾದ ಚಿತ್ರ**

## ಹಾಡಿಗೆ ಪ್ರೇಮ್ ಧ್ವನಿ

ಬಹುತೇಕ ಹೊಸಬರಿಂದಲೇ ಕೂಡಿರುವ 'ಲೈಫ್ ಟು ಡೇ' ಚಿತ್ರದ 'ಸಿಕ್ಕರೇ..ಸಿಕ್ಕರೇ.. ಒಳ್ಳೆ ಹುಡುಗ್ರು ಸಿಕ್ಕರೇ' ಹಾಡಿಗೆ ಜನಪ್ರಿಯ ನಿರ್ದೇಶಕ ಜೋಗಿ ಪ್ರೇಮ್ ಧ್ವನಿಯಾಗಿದ್ದಾರೆ. ಕನ್ನಡ ಮತ್ತು ತಮಿಳಿನಲ್ಲಿ ಏಕಕಾಲಕ್ಕೆ ತಯಾರಾಗುತ್ತಿರುವ ಈ ಚಿತ್ರದ ತಮಿಳು ಅವತರಣಿಕೆಯ ಹಾಡಿಗೆ ಖ್ಯಾತ ಸಂಗೀತ ನಿರ್ದೇಶಕ ಜೀವಿ ಪ್ರಕಾಶ್ ಧ್ವನಿಯಾಗಿದ್ದರು.

ಕಾಂತ ಕನ್ನಲ್ಲಿ ನಿರ್ದೇಶನದ ಚಿತ್ರಕ್ಕೆ ಪ್ರದೀಪ್ ಬಂಡವಾಳ ಹೂಡಿದ್ದಾರೆ. ಕಿರಣ್ ಆದಿತ್ಯಗೆ ನಾಯಕಿಯಾಗಿ ಲೇಖಚಂದ್ರ ಕಾಣಿಸಿಕೊಂಡಿದ್ದಾರೆ. ಶ್ರೀಧರ್ ವಿ.ಸಂಭ್ರಮ್ ಸಂಗೀತ ನಿರ್ದೇಶನವಿದೆ.

ತಬಲ ನಾಣಿ, ಅಪೂರ್ವ, ಕಾಕ್ರೋಚ್ ಸುಧಿ ಮತ್ತು ಜಗಪ್ಪ ತಾರಾಗಣದಲ್ಲಿದ್ದಾರೆ. ಗುರುಪ್ರಸಾದ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಚಿತ್ರ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

## ‘ಅತಿಥಿ’ಗಳಿಲ್ಲದೇ ಬೋಧನೆ ಸ್ಥಗಿತ

ಒಂದನೇ ಮುಖಪುಟದಿಂದ...

‘ಹಳ್ಳಿಗಳಲ್ಲಿ ಹೆಣ್ಣು ಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸುವುದು ಇಂದಿಗೂ ದುಸ್ತರವಾಗಿದೆ. ನಿತ್ಯವೂ 15 ಕಿ.ಮೀ ದೂರದಿಂದ ಬರುತ್ತೇವೆ. ನಿತ್ಯವೂ ಒಂದೆರಡು ತರಗತಿಯಷ್ಟೇ ನಡೆಯುತ್ತವೆ. ಮನೆಯಲ್ಲಿ ಈ ಕಾಲೇಜಿನ ಸ್ಥಿತಿ ಹೇಳಿದರೆ ಬಿಡುವಂತೆ ಹೇಳುತ್ತಾರೆ. ನಮ್ಮದು ಮೂಕವೇದನೆಯಾಗಿದೆ’ ಎನ್ನುತ್ತಾರೆ ಚಳ್ಳಕೆರೆ ತಾಲ್ಲೂಕು ಸಾಣಿಕೆರೆಯ ಎನ್.ಎಚ್. ಪುಟ್ಟಮ್ಮ.

**ಯುಜಿಸಿ ವಿದ್ಯಾರ್ಹತೆ ಕಡ್ಡಾಯವೇ ತೊಡಕು:** ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರಾಗಿ ಕೆಲಸ ಮಾಡುವವರು ಸ್ನಾತಕೋತ್ತರ ಪದವಿ ಜತೆಗೆ ಎನ್‌ಇಟಿ ಅಥವಾ ಕೆ-ಸೆಟ್ ತೇರ್ಗಡೆ ಹೊಂದಿರಬೇಕು. ಪಿಎಚ್.ಡಿ ಪಡೆದಿರಬೇಕು ಎಂದು ಕೆಲ ವರ್ಷಗಳ ಹಿಂದೆಯೇ ಯುಜಿಸಿ ನಿಯಮ ರೂಪಿಸಿತ್ತು. ಪ್ರಥಮದರ್ಜೆ ಕಾಲೇಜುಗಳಲ್ಲೂ ಇಂತಹ ಅರ್ಹ ಅತಿಥಿ ಉಪನ್ಯಾಸಕರನ್ನೇ ನೇಮಕ ಮಾಡಿಕೊಳ್ಳಬೇಕು ಎಂದು ಸೂಚಿಸಿತ್ತು.

ಯುಜಿಸಿ ವಿದ್ಯಾರ್ಹತೆ ಇಲ್ಲದ ಉಪನ್ಯಾಸಕರು ಹೈಕೋರ್ಟ್ ಮೊರೆಹೋಗಿದ್ದರು. ವಿಚಾರಣೆ ನಡೆಸಿದ ಕೋರ್ಟ್, ‘ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೆ ಯುಜಿಸಿ ನಿಗದಿ ಮಾಡಿರುವ ಅರ್ಹತೆಗಳನ್ನೇ ಅತಿಥಿ ಉಪನ್ಯಾಸಕರ ಆಯ್ಕೆಗೂ ಅನ್ವಯಿಸಬೇಕು’ ಎಂದು ತೀರ್ಪು ನೀಡಿತ್ತು. ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದ ಉನ್ನತ ಶಿಕ್ಷಣ ಇಲಾಖೆ, ಯುಜಿಸಿ ನಿಗದಿ ಮಾಡಿರುವ ಅರ್ಹತೆ ಹೊಂದಿಲ್ಲದ ಅತಿಥಿ ಉಪನ್ಯಾಸಕರ ಸೇವೆಯನ್ನು 2024–25ನೇ ಸಾಲಿಗೆ ಮುಂದುವರಿಸಿತ್ತು. ಇದನ್ನು ಪ್ರಶ್ನಿಸಿ ಹೊಸದಾಗಿ ಯುಜಿಸಿ ಅರ್ಹತೆ ಪಡೆದಿದ್ದ ಕೆಲವರು ರಿಟ್ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಯುತ್ತಿದ್ದು, ನೇಮಕಾತಿ ಪ್ರಕ್ರಿಯೆ ವಿಳಂಬವಾಗಿದೆ.

### ಮಣಿಪುರ ಏಕತೆ ಸಮನ್ವಯ ಸಮಿತಿ ಕಿಡಿ
# ‘ಎಸ್‌ಒಒ ವಿಸ್ತರಣೆ ಜನವಿರೋಧಿ’

ಪ್ರಜಾವಾಣಿ ವಾರ್ತೆ

**ಗುವಾಹಟಿ:** ಗಲಭೆಪೀಡಿತ ಮಣಿಪುರದಲ್ಲಿ ಕುಕಿ ಸಂಘಟನೆಗಳೊಂದಿಗಿನ ಕಾರ್ಯಾಚರಣೆ ನಿಗ್ರಹ ಒಪ್ಪಂದವನ್ನು (ಎಸ್‌ಒಒ) ಕೇಂದ್ರ ಸರ್ಕಾರವು ವಿಸ್ತರಿಸಿದ ಒಂದು ದಿನದ ನಂತರ, ಬಹುಸಂಖ್ಯಾತ ಮೈತೇಯಿ ಸಮುದಾಯವನ್ನು ಪ್ರತಿನಿಧಿಸುವ ಪ್ರಭಾವಿ ಸಂಸ್ಥೆಗಳ ವೇದಿಕೆಯಾದ ‘ಮಣಿಪುರ ಏಕತೆ ಸಮನ್ವಯ ಸಮಿತಿ’ಯು (ಸಿಒಸಿಒಎಂಐ) ಇದನ್ನು ‘ಜನವಿರೋಧಿ ನಡೆ’ ಎಂದು ಕರೆದಿದೆ.

‘ಈ ಗುಂಪುಗಳು ಮಾಡಿದ ಭಯೋತ್ಪಾದಕ ಹಾಗೂ ಅಪರಾಧ ಕೃತ್ಯಗಳ ಹೊರತಾಗಿ ಎಸ್‌ಒಒ ವಿಸ್ತರಣೆಯು ಮಣಿಪುರದ ಸ್ಥಳೀಯ ಜನರ ಹಿತಾಸಕ್ತಿಗಳಿಗೆ ವಿರುದ್ಧವಾದ ನಿರ್ಧಾರವಾಗಿದೆ. ಕೇಂದ್ರ ಸರ್ಕಾರದ ಜನವಿರೋಧಿ ನಡೆಯನ್ನು ದೃಢವಾಗಿ ವಿರೋಧಿಸುವ ತನ್ನ ನಿಲುವನ್ನು ಸಿಒಸಿಒಎಂಐ ಪುನರುಚ್ಚರಿಸುತ್ತದೆ’ ಎಂದು ಸಮಿತಿಯ ಸಂಚಾಲಕ ಲೈಖುರಾಮ್ ಜಯಂತ ತನ್ನ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮೈತೇಯಿ ಮಹಿಳಾ ಜಾಗೃತ ಗುಂಪು ‘ಇಮಾಗಿ ಮೀರಾ’ ಸಹ ಎಸ್‌ಒಒ ವಿಸ್ತರಿಸಿರುವುದಕ್ಕೆ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

ಕನಿಷ್ಠ 25 ಬಂಡುಕೋರ ಗುಂಪುಗಳನ್ನು ಒಳಗೊಂಡ ಎರಡು ಪ್ರಮುಖ ವೇದಿಕೆಗಳಾದ ‘ಕುಕಿ ರಾಷ್ಟ್ರೀಯ ಸಂಘಟನೆ (ಕೆಎನ್‌ಒ)’ ಮತ್ತು ‘ಯುನೈಟೆಡ್ ಪೀಪಲ್ಸ್ ಫ್ರಂಟ್ (ಯುಪಿಎಫ್)’ ಜೊತೆಗಿನ ಎಸ್‌ಒಒ ಒಪ್ಪಂದವನ್ನು ರದ್ದುಪಡಿಸಲು 2023ರ ಮಾರ್ಚ್ 10ರಂದು ಮಣಿಪುರ ಸಚಿವ ಸಂಪುಟ ಸಭೆಯು ನಿರ್ಧರಿಸಿತ್ತು. ಅದನ್ನು ಸಿಒಸಿಒಎಂಐ 2024ರಲ್ಲಿ ಪುನರುಚ್ಚರಿಸಿತ್ತು. ಕೆಎನ್‌ಒ ಮತ್ತು ಯುಪಿಎಫ್ 2008ರಿಂದ ಎಸ್‌ಒಒ ಅಡಿಯಲ್ಲಿದ್ದು, ಈ ವರ್ಷ ಫೆಬ್ರುವರಿಯಲ್ಲಿ ಸ್ಥಗಿತಗೊಂಡಿತ್ತು. ಮೈತೇಯಿ ಸಂಘಟನೆಗಳ ವಿರೋಧದಿಂದಾಗಿ ಕೇಂದ್ರ ಸರ್ಕಾರವು ವಿಸ್ತರಣೆ ಮಾಡುವುದನ್ನು ವಿಳಂಬ ಮಾಡಿತ್ತು. ಮಣಿಪುರದಲ್ಲಿ ಫೆಬ್ರುವರಿಯಿಂದ ರಾಷ್ಟ್ರಪತಿ ಆಳ್ವಿಕೆ ಜಾರಿಯಲ್ಲಿದೆ.

**ಮುಖ್ಯಾಂಶಗಳು**
- ಎಸ್‌ಒಒ ರದ್ದುಪಡಿಸಲು ಸಿಒಸಿಒಎಂಐ ಒತ್ತಾಯ
- ಮಣಿಪುರ ಜನರ ಹಿತಾಸಕ್ತಿಗಳಿಗೆ ವಿರುದ್ಧವಾದ ನಿರ್ಧಾರ
- ಕೇಂದ್ರವನ್ನು ತರಾಟೆಗೆ ತೆಗೆದುಕೊಂಡ ‘ಇಮಾಗಿ ಮೀರಾ’

# ‘ಚೀನಾ ಜತೆಗಿನ ಗಡಿ ವ್ಯಾಜ್ಯವೇ ಸವಾಲು’

ಪ್ರಜಾವಾಣಿ ವಾರ್ತೆ

**ಲಖನೌ:** ಪಾಕಿಸ್ತಾನದ ಪ್ರಾಯೋಜಿತ ಭಯೋತ್ಪಾದನೆಯ ಜೊತೆಗೆ ಚೀನಾದೊಂದಿಗಿನ ಗಡಿ ವ್ಯಾಜ್ಯ ಸಹ ದೇಶ ಎದುರಿಸುತ್ತಿರುವ ಅತಿದೊಡ್ಡ ಸವಾಲಾಗಿದೆ ಎಂದು ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಶುಕ್ರವಾರ ಹೇಳಿದರು.

ಗೋರಖಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಪ್ರಸ್ತುತ ಯುದ್ಧದ ನಿಯಮಗಳು ಬದಲಾಗಿವೆ. ಸೈಬರ್ ಮತ್ತು ಬಾಹ್ಯಾಕಾಶ ಯುದ್ಧಗಳೂ ಸೇರ್ಪಡೆಯಾಗಿವೆ’ ಎಂದರು.

ಬಾಲಾಕೋಟ್ ದಾಳಿ ನಂತರ ಭಾರತ, ಪಾಕಿಸ್ತಾನ ಎರಡೂ ವಿಭಿನ್ನ ರೀತಿಯಲ್ಲಿ ಪಾಠ ಕಲಿತಿವೆ. ದೂರಗಾಮಿ ಶಸ್ತ್ರಾಸ್ತ್ರಗಳತ್ತ ಭಾರತ ಗಮನಹರಿಸಿದರೆ; ಪಾಕಿಸ್ತಾನವು ವಾಯುರಕ್ಷಣಾ ವ್ಯವಸ್ಥೆ ಬಲಪಡಿಸುವುದರತ್ತ ಚಿತ್ತ ಹರಿಸಿದೆ ಎಂದು ತಿಳಿಸಿದರು.

ಆಪರೇಷನ್ ಸಿಂಧೂರದ ಸಂದರ್ಭದಲ್ಲಿ ‘ಯೋಜಿತ ದಾಳಿ’, ‘ಗುರಿಯ ಆಯ್ಕೆ’ ಸೇರಿದಂತೆ ಎಲ್ಲ ರೀತಿಯ ಸ್ವಾತಂತ್ರ್ಯವನ್ನು ಸೇನೆಗೆ ನೀಡಲಾಗಿತ್ತು ಎಂದು ಹೇಳಿದರು.

‘ಮೊದಲಿಗೆ ಪಾಕಿಸ್ತಾನದ ಉಗ್ರರ ಅಡುಗುದಾಣಗಳ ಮೇಲೆ ಗುರಿಯಿಟ್ಟು ದಾಳಿ ನಡೆಸಲಾಯಿತು. ಆದರೆ ನಂತರ ರಾಜಕೀಯ ನಾಯಕರೊಂದಿಗಿನ ಚರ್ಚೆ ಬಳಿಕ ಬಹಾವಲಪುರ ಮತ್ತು ಮುರೀದಕೆ ಮೇಲಿನ ದಾಳಿ ಸಹ ಅಗತ್ಯ ಎಂಬ ಅರಿವಾಯಿತು’ ಎಂದರು.

ಅನಿಲ್ ಚೌಹಾಣ್

ಜರ್ಮನಿಯ ರಾಜಕೀಯ ವಿಶ್ಲೇಷಕರೊಬ್ಬರ ‘ಯುದ್ಧವು ರಾಜಕೀಯದ ವಿಸ್ತೃತ ರೂಪ’ ಎಂಬ ಹೇಳಿಕೆಯನ್ನು ಉಲ್ಲೇಖಿಸಿ, ‘ಯುದ್ಧ ಮತ್ತು ಭೌಗೋಳಿಕ ರಾಜಕೀಯವನ್ನು ಪತ್ಯೇಕವಾಗಿ ನೋಡಬಾರದು’ ಎಂದು ಅವರು ಪ್ರತಿಪಾದಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ನಾಯಕತ್ವದ ಸೂಚನೆಯಂತೆ ಸೇನೆ ಕಾರ್ಯನಿರ್ವಹಿಸುತ್ತದೆ. ಸರ್ಕಾರಕ್ಕೆ ಹೆಚ್ಚು ಆಯ್ಕೆಗಳನ್ನು ನೀಡುವುದು ಸೇನೆಯ ಹೊಣೆ ಎಂದು ಹೇಳಿದರು.

# ಮಳೆ: 950 ಮಂದಿ ಸ್ಥಳಾಂತರ

### ಜಮ್ಮು: 283 ಮನೆಗಳಿಗೆ ಹಾನಿ, ಹಲವು ರಸ್ತೆಗಳಲ್ಲಿ ಸಂಚಾರ ರದ್ದು

**ಜಮ್ಮು (ಪಿಟಿಐ):** ಜಮ್ಮು ಮತ್ತು ಕಾಶ್ಮೀರದ ರಂಬನ್ ಜಿಲ್ಲೆಯಲ್ಲಿ ಭಾರಿ ಮಳೆ, ದಿಢೀರ್ ಪ್ರವಾಹ ಮತ್ತು ಭೂಕುಸಿತದಿಂದ ಉಂಟಾದ ಅವಘಡಗಳಿಂದಾಗಿ 283 ಮನೆಗಳಿಗೆ ಹಾನಿಯಾಗಿದ್ದು, ಸುಮಾರು 950 ಮಂದಿಯನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಯಿತು.

ಜಿಲ್ಲೆಯ 84 ರಸ್ತೆಗಳು, 98 ನೀರು ಸರಬರಾಜು ಯೋಜನೆಗಳು ಮತ್ತು 71 ಪವರ್ ಫೀಡರ್‌ಗಳಿಗೂ ಹಾನಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ದ್ರುಬಲಾದಲ್ಲಿ ಸಂಭವಿಸಿದ ಮೇಘಸ್ಫೋಟದಲ್ಲಿ ನಾಲ್ಕು ಮಂದಿ ಮೃತಪಟ್ಟಿದ್ದಾರೆ ಮತ್ತು ಮಹಿಳೆಯೊಬ್ಬರು ನಾಪತ್ತೆಯಾಗಿದ್ದಾರೆ ಎಂದು ರಂಬನ್‌ನ ಉಪ ಜಿಲ್ಲಾಧಿಕಾರಿ ಅಲ್ತಾಸ್ ಖಾನ್ ತಿಳಿಸಿದರು.

ಸತತವಾಗಿ ಸುರಿಯುತ್ತಿರುವ ಮಳೆಯ ಕಾರಣ 84 ರಸ್ತೆಗಳು ಹಾನಿಗೊಳಗಾಗಿವೆ. ಈ ಪೈಕಿ 30 ರಸ್ತೆಗಳನ್ನು ದುರಸ್ತಿ ಮಾಡಲಾಗಿದೆ ಎಂದು ಹೇಳಿದರು.

ರಸ್ತೆಗಳು ಮತ್ತು ನೀರು ಸರಬರಾಜು ಮೂಲಸೌಕರ್ಯದ ದುರಸ್ತಿ ಕಾರ್ಯ ಪ್ರಗತಿಯಲ್ಲಿದೆ. ಸ್ಥಳಾಂತರಗೊಂಡ ಕುಟುಂಬಗಳಿಗಾಗಿ ವೈದ್ಯಕೀಯ ಶಿಬಿರಗಳನ್ನು ತೆರೆಯಲಾಗಿದೆ ಎಂದು ಮಾಹಿತಿ ನೀಡಿದರು.

**ದಕ್ಷಿಣ ಕೊರಿಯಾ ಪ್ರಜೆಗಳ ರಕ್ಷಣೆ**

ಲೇಹ್/ಜಮ್ಮು: ಚಾರಣದ ಸಂದರ್ಭದಲ್ಲಿ ಗಂಭೀರವಾಗಿ ಅನಾರೋಗ್ಯಕ್ಕೆ ತುತ್ತಾಗಿದ್ದ, ದಕ್ಷಿಣ ಕೊರಿಯಾದ ಇಬ್ಬರು ಪ್ರಜೆಗಳನ್ನು ಭಾರತೀಯ ಸೇನೆ ರಕ್ಷಿಸಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದರು. ಆದರೆ, ಚಿಕಿತ್ಸೆ ಸಂದರ್ಭದಲ್ಲಿ ಚಾರಣಿಗರೊಬ್ಬರು ಮೃತಪಟ್ಟಿದ್ದಾರೆ ಎಂದು ಅವರು ಹೇಳಿದರು.

ಜಮ್ಮುವಿನಲ್ಲಿ ಸಂಭವಿಸಿದ ದಿಢೀರ್ ಪ್ರವಾಹದಿಂದಾಗಿ ಮನೆ ಎದುರು ರಾಶಿ ಬಿದ್ದಿದ್ದ ಮಣ್ಣನ್ನು ವ್ಯಕ್ತಿಯೊಬ್ಬರು ಬೇರೆಡೆ ಹಾಕಿದರು —ಎಎಫ್‌ಪಿ ಚಿತ್ರ

**350 ಯಾತ್ರಿಗಳ ಸುರಕ್ಷಿತ ರವಾನೆ**

ಶಿಮ್ಲಾ/ ಬಿಲಾಸಪುರ: ಮಣಿಮಹೇಶ್ ಯಾತ್ರೆಗೆ ತೆರಳಿ ಅತಂತ್ರರಾಗಿದ್ದ ಸುಮಾರು 350 ಯಾತ್ರಾರ್ಥಿಗಳನ್ನು ಹಿಮಾಚಲ ಪ್ರದೇಶದ ಭರಮೌರ್‌ನಿಂದ ಚಂಬಾಕ್ಕೆ ಭಾರತೀಯ ವಾಯುಪಡೆಯ ಹೆಲಿಕಾಪ್ಟರ್‌ಗಳ ಮೂಲಕ ಸುರಕ್ಷಿತವಾಗಿ ಸ್ಥಳಾಂತರಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದರು.

ಆಗಸ್ಟ್ 15ರಿಂದ ಆರಂಭವಾದ ಮಣಿಮಹೇಶ್ ಯಾತ್ರೆ ಸಂದರ್ಭದಲ್ಲಿ 17 ಯಾತ್ರಾರ್ಥಿಗಳು ಮೃತಪಟ್ಟಿದ್ದಾರೆ. ಚಂಬಾ ಜಿಲ್ಲೆಯ ವಿವಿಧೆಡೆ ನೂರಾರು ಯಾತ್ರಾರ್ಥಿಗಳು ಅತಂತ್ರರಾಗಿದ್ದಾರೆ.

**ಯಮುನಾ ನದಿ ನೀರಿನ ಮಟ್ಟ ಅಲ್ಪ ಇಳಿಕೆ:** ದೆಹಲಿಯ ಹಳೆಯ ರೈಲ್ವೆ ಸೇತುವೆ ಸಮೀಪ ಯಮುನಾ ನದಿಯ ನೀರಿನ ಮಟ್ಟ ಶುಕ್ರವಾರ 207.31 ಮೀಟರ್‌ಗೆ ಇಳಿಕೆಯಾಗಿದೆ. ಇದಕ್ಕೂ ಮುನ್ನಾದಿನ 207.48 ಮೀಟರ್‌ಗೆ ಏರಿಕೆಯಾಗುವ ಮೂಲಕ ಈ ಋತುವಿನ ಗರಿಷ್ಠ ಮಟ್ಟ ತಲುಪಿತ್ತು.

## ಗೋಪ್ಯ ಚಿತ್ರೀಕರಣ: ಪೈಲಟ್ ಸೆರೆ

**ನವದೆಹಲಿ (ಪಿಟಿಐ):** ದೆಹಲಿಯ ಶನಿ ಬಜಾರ್‌ನಲ್ಲಿ ಗೋಪ್ಯವಾಗಿ ಮಹಿಳೆಯೊಬ್ಬರ ವಿಡಿಯೊ ಚಿತ್ರೀಕರಿಸಿರುವ ಆರೋಪದಡಿ ಖಾಸಗಿ ವಿಮಾನವೊಂದರ ಪೈಲಟ್ ಒಬ್ಬನನ್ನು ಬಂಧಿಸಲಾಗಿದೆ.

ಕಿಶನ್‌ಗಢ ಮಾರುಕಟ್ಟೆಯಲ್ಲಿ ಆರೋಪಿ ಪ್ರಿಯದರ್ಶಿ (31) ವಿಡಿಯೊ ಚಿತ್ರೀಕರಿಸುತ್ತಿರುವುದು ತಿಳಿಯುತ್ತಿದ್ದಂತೆಯೇ ಮಹಿಳೆ ಆತನಿಗೆ ಎಚ್ಚರಿಕೆ ನೀಡಿದ್ದಾರೆ. ಸ್ಥಳೀಯ ಗುಪ್ತಚರ ಮತ್ತು ರಹಸ್ಯ ಮಾಹಿತಿಗಾರರ ಸಹಾಯದಿಂದ ವ್ಯಕ್ತಿಯನ್ನು ಪತ್ತೆ ಮಾಡಲಾಗಿದೆ. ವಿಚಾರಣೆ ವೇಳೆ ಆತ ಮಹಿಳೆಯ ಒಪ್ಪಿಗೆಯಿಲ್ಲದೆ ವಿಡಿಯೊ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

## ವಿವಾದಕ್ಕೆ ಗ್ರಾಸವಾದ ಪವಾರ್ ಹೇಳಿಕೆ

**ಮುಂಬೈ:** ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್, ಕರ್ತವ್ಯ ನಿರತ ಮಹಿಳಾ ಪೊಲೀಸ್ ಅಧಿಕಾರಿಯೊಬ್ಬರಿಗೆ ಛೀಮಾರಿ ಹಾಕಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ವಿವಾದಕ್ಕೆ ಗ್ರಾಸವಾಗಿದೆ.

ಸೋಲಾಪುರದ ಮೇಧಾ ತಾಲ್ಲೂಕಿನ ಕುದ್ರು ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಅಕ್ರಮವಾಗಿ ಕಲ್ಲುಮಿಶ್ರಿತ ಮಣ್ಣನ್ನು ಬಳಸಿಕೊಂಡಿದ್ದರ ವಿರುದ್ಧ ಕ್ರಮ ವಹಿಸಲು ಪೊಲೀಸ್ ಅಧಿಕಾರಿ ಅಂಜನಾ ಕೃಷ್ಣಾ ತೆರಳಿದ್ದರು. ಎನ್‌ಸಿಪಿಯ ಸ್ಥಳೀಯ ಕಾರ್ಯಕರ್ತರೊಬ್ಬರು ಸ್ಥಳದಲ್ಲೇ ಅಜಿತ್ ಪವಾರ್ ಅವರಿಗೆ ಕರೆ ಮಾಡಿ, ಉಪ ಮುಖ್ಯಮಂತ್ರಿ ಜತೆಗೆ ನೇರವಾಗಿ ಮಾತನಾಡುವಂತೆ ಅಧಿಕಾರಿಯ ಕೈಗೆ ಮೊಬೈಲ್ ಕೊಟ್ಟಿದ್ದರು.

ಅಧಿಕಾರಿಯನ್ನು ಉದ್ದೇಶಿಸಿ ‘ಎಷ್ಟು ಧೈರ್ಯ ನಿನಗೆ? ಎಂದು ಅಜಿತ್ ಪವಾರ್ ಜೋರು ಧ್ವನಿಯಲ್ಲಿ ಪ್ರಶ್ನಿಸಿದ್ದರು.

### ಭವಿಷ್ಯ ನಿಧಿ ವಂತಿಗೆ ಪಾವತಿಸುವಲ್ಲಿ ವೈಫಲ್ಯ • ಕರ್ನಾಟಕ ಹೈಕೋರ್ಟ್‌ಗೆ ‘ಸುಪ್ರೀಂ’ ಸೂಚನೆ
# ‘ಹಣ ಮರುಪಾವತಿ: ಹಕ್ಕು ವಿವಾದ ಇತ್ಯರ್ಥಪಡಿಸಿ’

ಪ್ರಜಾವಾಣಿ ವಾರ್ತೆ

**ನವದೆಹಲಿ:** ಭವಿಷ್ಯನಿಧಿ ವಂತಿಗೆ ಪಾವತಿಸುವಲ್ಲಿ ವಿಫಲವಾಗಿರುವ ಅಕ್ರೊಪೆಟಲ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್ ಕಂಪನಿಯ ಸ್ವತ್ತುಗಳ ಮಾರಾಟದಿಂದ ಸಂಗ್ರಹವಾಗಿರುವ ಹಣದ ಮೇಲೆ, ಇಪಿಎಫ್‌ಒ ಹಾಗೂ ಸಾಲ ನೀಡಿರುವ ಎಕ್ಸಿಸ್ ಬ್ಯಾಂಕ್ ಮತ್ತು ಇತರ ಎರಡು ಬ್ಯಾಂಕುಗಳ ಪೈಕಿ ಯಾರು ಮೊದಲು ಹಕ್ಕು ಹೊಂದಿದ್ದಾರೆ ಎಂಬ ಬಗ್ಗೆ ನಿರ್ಧರಿಸುವಂತೆ ಕರ್ನಾಟಕ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ಸೂಚಿಸಿದೆ.



ಈ ವಿಚಾರವಾಗಿ ಎಡೆಲ್‌ವೀಸ್ ಅಸೆಟ್ ರಿಕನ್‌ಸ್ಟ್ರಕ್ಷನ್ ಲಿಮಿಟೆಡ್‌ನ (ಇಎಆರ್‌ಎಲ್) ಮೇಲ್ಮನವಿ ವಜಾಗೊಳಿಸಿ ಕರ್ನಾಟಕ ಹೈಕೋರ್ಟ್ ಕಳೆದ ವರ್ಷ ಫೆಬ್ರುವರಿ 1ರಂದು ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮನಾಥ್, ಸಂಜಯ ಕರೋಲ್ ಹಾಗೂ ಸಂದೀಪ್ ಮೆಹ್ತಾ ಅವರು ಇದ್ದ ನ್ಯಾಯಪೀಠವು, ಇಎಆರ್‌ಎಲ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿತು.

ಈ ವಿವಾದಕ್ಕೆ ಸಂಬಂಧಿಸಿ ಕಕ್ಷಿದಾರರರಾಗಿರುವ ಎಲ್ಲ ಸಂಸ್ಥೆಗಳು ಹೈಕೋರ್ಟ್ ಮುಂದೆ ತಮ್ಮ ವಾದ ಮಂಡಿಸಲು ಸ್ವತಂತ್ರವಾಗಿವೆ ಎಂದೂ ಪೀಠ ಹೇಳಿದೆ.

ವಿಚಾರಣೆ ವೇಳೆ, ಇಎಆರ್‌ಎಲ್ ಪರ ಹಿರಿಯ ವಕೀಲ ಕೃಷ್ಣನ್ ವೇಣುಗೋಪಾಲ್, ‘ಬಾಕಿ ಇರುವ ವಂತಿಗೆ ಹಣದ ಮೇಲೆ ಇಪಿಎಫ್‌ಒಗೆ ಮೊದಲ ಹಕ್ಕು ಇದೆ’ ಎಂದರು.

‘ಕಂಪನಿಗೆ ಸಾಲ ನೀಡಿರುವ ಬ್ಯಾಂಕುಗಳ ಪೈಕಿ ಎಕ್ಸಿಸ್ ಬ್ಯಾಂಕ್, ಒಂದು ಸ್ವತ್ತನ್ನು ₹12 ಕೋಟಿಗೆ ಮಾರಾಟ ಮಾಡಿದೆ. ಕಂಪನಿಯ ಎರಡು ಸ್ವತ್ತುಗಳನ್ನು ಒಟ್ಟು ₹7 ಕೋಟಿಗೆ ಮಾರಾಟ ಮಾಡಿದೆ. ಹೀಗಾಗಿ, ಇಪಿಎಫ್‌ಒ ತನಗೆ ಬರಬೇಕಾದ ಬಾಕಿ ಮೊತ್ತವನ್ನು ಎಕ್ಸಿಸ್ ಬ್ಯಾಂಕ್‌ನಿಂದ ವಸೂಲು ಮಾಡಿಕೊಳ್ಳಬಹುದು’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

‘ಪಿಎಫ್ ಕಾಯ್ದೆಯಡಿ, ಬಾಕಿ ಮೊತ್ತವನ್ನು ಎಕ್ಸಿಸ್ ಬ್ಯಾಂಕಿನಿಂದ ಮಾಡಿಕೊಳ್ಳಬೇಕೇ ಹೊರತು ಮೇಲ್ಮನವಿದಾರರಿಂದಲ್ಲ’ ಎಂದೂ ವಾದಿಸಿದರು.

ಇಪಿಎಫ್‌ಒ ಪರ ಹಾಜರಿದ್ದ ವಕೀಲ ದುಷ್ಯಂತ ಪರಾಶರ, ‘ಮೇಲ್ಮನವಿದಾರರ ಅರ್ಜಿಯನ್ನು ವಜಾಗೊಳಿಸಿರುವ ಹೈಕೋರ್ಟ್‌ನ ಕ್ರಮ ಸರಿಯಾಗಿಯೇ ಇದೆ’ ಎಂದರು.

‘ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 35ರ ಪ್ರಕಾರ, ಬ್ಯಾಂಕಿನ ಸಾಲ ಮರುಪಾವತಿಯೇ ಆದ್ಯತೆಯಾಗಲಿದೆ. ಹೀಗಾಗಿ, ಭವಿಷ್ಯನಿಧಿ ವಂತಿಗೆ ಸಂಬಂಧಿಸಿ ಬ್ಯಾಂಕಿನಿಂದ ಯಾವುದೇ ವಸೂಲಾತಿ ಮಾಡುವ ಹಾಗಿಲ್ಲ’ ಎಂದು ಎಕ್ಸಿಸ್ ಬ್ಯಾಂಕ್ ಪರ ಹಾಜರಿದ್ದ ಹಿರಿಯ ವಕೀಲ ಗೋಪಾಲ್ ಜೈನ್, ಪೀಠಕ್ಕೆ ತಿಳಿಸಿದರು.

ಎಲ್ಲ ಕಕ್ಷಿದಾರರ ವಾದ ಆಲಿಸಿದ ಪೀಠ, ‘ವಸೂಲಾಗಬೇಕಾದ ಬಾಕಿ ಮೊತ್ತದ ಮೇಲೆ ಇಪಿಎಫ್‌ಒ, ಎಕ್ಸಿಸ್ ಬ್ಯಾಂಕ್, ಎಸ್‌ಬಿಐ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್ (ಈಗ ಎಸ್‌ಬಿಐನಲ್ಲಿ ವಿಲೀನವಾಗಿದೆ) ಪೈಕಿ ಯಾರಿಗೆ ಮೊದಲ ಹಕ್ಕು ಇದೆ ಎಂಬ ಬಗ್ಗೆ ಹೈಕೋರ್ಟ್ ನಿರ್ಧರಿಸಲಿದೆ’ ಎಂದು ಪೀಠ, ಅರ್ಜಿ ವಿಲೇವಾರಿ ಮಾಡಿತು.

**‘ದಾಖಲೆ ಇಲ್ಲದ ವಹಿವಾಟು: ಅಲ್ಲಗಳೆಯಲಾಗದು’**

ಚೆಕ್, ಬ್ಯಾಂಕ್ ವರ್ಗಾವಣೆ ದಾಖಲೆ ಅಥವಾ ರಶೀದಿ ಇಲ್ಲ ಎಂಬ ಕಾರಣಕ್ಕೆ ಹಣಕಾಸಿನ ವಹಿವಾಟು ನಡೆದೇ ಇಲ್ಲ ಎನ್ನಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಹಣದ ವಹಿವಾಟು ಎಂದಮೇಲೆ ಅದರಲ್ಲಿ ನಗದು ಕೂಡ ಇರಬಹುದು. ಅದು ಅಸಹಜವೇನೂ ಅಲ್ಲ’ ಎಂದು ಕೋರ್ಟ್ ತಿಳಿಸಿದೆ.

ವ್ಯಕ್ತಿಯೊಬ್ಬರು ಅಧಿಕೃತ ವಿಧಾನಗಳ ಮೂಲಕ (ನೆಗೋಶಿಯಬಲ್ ಇನ್‌ಸ್ಟ್ರುಮೆಂಟ್ಸ್ ಅಥವಾ ಬ್ಯಾಂಕ್ ವಹಿವಾಟು) ಹಣ ವರ್ಗಾವಣೆಯನ್ನು ಸಾಬೀತುಪಡಿಸಲು ಸಾಧ್ಯವಾಗದೇ ಇದ್ದರೆ, ಅಂತಹ ಮೊತ್ತವನ್ನು ನಗದು ಮೂಲಕ ಪಾವತಿಸಲಾಗಿಲ್ಲ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಅದರಲ್ಲೂ ಸಾಲ ಮರುಪಾವತಿ ಕುರಿತು ಸ್ಪಷ್ಟವಾಗಿ ವಚನಪತ್ರ ಇದ್ದಲ್ಲಿ ಹಾಗೆ ನಿರ್ಧರಿಸಲು ಆಗುವುದಿಲ್ಲ ಎಂದು ನ್ಯಾಯಮೂರ್ತಿಗಳಾದ ಅಹ್ಸಾನುದ್ದೀನ್ ಅಮಾನುಲ್ಲಾ ಮತ್ತು ವಿಪುಲ್.ಎಂ ಪಾಂಚೋಲಿ ಅವರ ಪೀಠ ಹೇಳಿದೆ.

## ಅನ್ಯಾಯದ ವಿರುದ್ಧ ‘ಸುಪ್ರೀಂ’ಗೆ ಮನವಿ

ಕಪಿಲ್ ಸಿಬಲ್

**ನವದೆಹಲಿ (ಪಿಟಿಐ):** ಫೆಬ್ರುವರಿ 2020ರಲ್ಲಿ ನಡೆದ ದೆಹಲಿ ಗಲಭೆ ಪ್ರಕರಣದಲ್ಲಿ ವಿದ್ಯಾರ್ಥಿ ಕಾರ್ಯಕರ್ತ ಉಮರ್ ಖಾಲಿದ್‌ಗೆ ದೆಹಲಿ ಹೈಕೋರ್ಟ್ ಮತ್ತೊಮ್ಮೆ ಜಾಮೀನು ನಿರಾಕರಿಸಿದ್ದು, ಈ ‘ಅನ್ಯಾಯ’ದ ವಿರುದ್ಧ ಸುಪ್ರೀಂ ಕೋರ್ಟ್ ಮೊರೆಹೋಗುವುದಾಗಿ ಹಿರಿಯ ವಕೀಲ ಕಪಿಲ್ ಸಿಬಲ್ ಹೇಳಿದ್ದಾರೆ.

‘ಉಮರ್ ಖಾಲಿದ್‌ಗೆ ಜಾಮೀನು ನಿರಾಕರಿಸಿರುವುದು ಸಂವಿಧಾನದ 21ನೇ ವಿಧಿಯ (ಜೀವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ರಕ್ಷಣೆ) ಉಲ್ಲಂಘನೆಯಾಗಿದೆ. ಇದರ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಲಾಗುವುದು’ ಎಂದು ಅವರು ಹೇಳಿದ್ದಾರೆ.

ಉಮರ್ ಖಾಲಿದ್ 4 ವರ್ಷ, 11 ತಿಂಗಳು ಮತ್ತು 15 ದಿನಗಳಿಂದ ಬಂಧನದಲ್ಲಿದ್ದಾರೆ. ಖಾಲಿದ್, ಶಾರ್ಜೀಲ್ ಇಮಾಮ್ ಸೇರಿ 9 ಜನರ ಜಾಮೀನು ಅರ್ಜಿಯನ್ನು ದೆಹಲಿ ಹೈಕೋರ್ಟ್ ಮಂಗಳವಾರ ತಿರಸ್ಕರಿಸಿತ್ತು.

## ಶಾಸ್ತ್ರ ವಿವಿ ಡೀನ್‌ಗೆ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ ಪ್ರದಾನ

**ನವದೆಹಲಿ:** ಶಾಸ್ತ್ರ ವಿಶ್ವವಿದ್ಯಾಲಯದ ಕಂಪ್ಯೂಟಿಂಗ್ ವಿಭಾಗದ ಡೀನ್ ಮತ್ತು ಪ್ರಾಧ್ಯಾಪಕ ಡಾ.ಶಂಕರ್ ಶ್ರೀರಾಮ್ ಅವರು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ಸಮ್ಮುಖದಲ್ಲಿ ಭಾರತದ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರಿಂದ ‘ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ’ಯನ್ನು ಸ್ವೀಕರಿಸಿದರು.

ನವದೆಹಲಿಯ ವಿಜ್ಞಾನ ಭವನದಲ್ಲಿ ಸೆ.5ರ ಶಿಕ್ಷಕರ ದಿನದಂದು ನಡೆದ ಅದ್ದೂರಿ ಸಮಾರಂಭದಲ್ಲಿ ಶಿಕ್ಷಕ ಡಾ.ಶ್ರೀರಾಮ್ ಅವರು ಎಂಜಿನಿಯರಿಂಗ್ ಶಿಕ್ಷಣ ವಿಭಾಗದಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದ ಏಕೈಕ ತಮಿಳುನಾಡಿನ ಶಿಕ್ಷಕ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಪ್ರಶಸ್ತಿಯು ಗೌರವ ಪ್ರಮಾಣಪತ್ರ, ಪದಕ, ₹ 25 ಸಾವಿರ ನಗದನ್ನು ಹೊಂದಿದ್ದು, ದೇಶದ ವಿವಿಧ ಭಾಗಗಳ 21 ಶಿಕ್ಷಕರಿಗೆ ಪ್ರಶಸ್ತಿ ನೀಡಲಾಯಿತು.

ಪ್ರಸ್ತುತಿ: ಪಿ.ವಿ ಬ್ರ್ಯಾಂಡ್ ಸ್ಪಾಟ್

# ದಕ್ಷಿಣ ವಲಯ ಬೃಹತ್ ಮೊತ್ತ

## ದುಲೀಪ್ ಟ್ರೋಫಿ ಸೆಮಿಫೈನಲ್: ದ್ವಿಶತಕ ತಪ್ಪಿಸಿಕೊಂಡ ಜಗದೀಶನ್

• ಗಿರೀಶ ದೊಡ್ಡಮನಿ

**ಮುಖ್ಯಾಂಶಗಳು**

- ಉತ್ತರ ವಲಯದ ನಿಶಾಂತ್ ಸಿಂಧುಗೆ ಪಂಚಗುಚ್ಛ
- ರಿಕಿ ಭುಯ್, ತನಯ್ ಅರ್ಧಶತಕ
- ಸತತ ಎರಡು ದಿನ ಬ್ಯಾಟಿಂಗ್ ಮಾಡಿದ ದಕ್ಷಿಣ ವಲಯ

**ಬೆಂಗಳೂರು:** ಭಾರತ ಕ್ರಿಕೆಟ್ ತಂಡದ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಅವರ ಎದುರು ದ್ವಿಶತಕ ಸಂಭ್ರಮ ಆಚರಿಸುವ ನಾರಾಯಣ ಜಗದೀಶನ್ ಕನಸು ಕೈಗೂಡಲಿಲ್ಲ. ಕೇವಲ ಮೂರು ರನ್‌ಗಳ ಅಂತರದಲ್ಲಿ ಅವರು ಈ ಅವಕಾಶದಿಂದ ವಂಚಿತರಾದರು.

ನಗರದ ಹೊರವಲಯದ ಸಿಂಗಹಳ್ಳಿಯಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಸೆಮಿಫೈನಲ್ ಎರಡನೇ ದಿನದಾಟದಲ್ಲಿ ಜಗದೀಶನ್ (197; 352ಎ, 4X16, 6X2) ಅವರು ರನೌಟ್ ಆಗುವುದರೊಂದಿಗೆ ಅಮೋಘ ಇನಿಂಗ್ಸ್‌ಗೆ ತೆರೆಬಿತ್ತು. ಆದರೆ ಅವರ ನಂತರವೂ ಉಳಿದ ಬ್ಯಾಟರ್‌ಗಳು ದಕ್ಷಿಣ ವಲಯದ ರನ್ ಬೇಟೆಯನ್ನು ಮುಂದುವರಿಸಿದರು. ಇದರಿಂದಾಗಿ ಉತ್ತರ ವಲಯದ ಆಟಗಾರರು ಸತತ ಎರಡನೇ ದಿನ ಮೈದಾನದಲ್ಲಿ ಬೆವರು ಹರಿಸಬೇಕಾಯಿತು.

ಹದವಾದ ಬಿಸಿಲು ಹರಡಿದ್ದ ಶುಕ್ರವಾರ ದಿನದಾಟದ ಮುಕ್ತಾಯಕ್ಕೆ ದಕ್ಷಿಣ ವಲಯವು 169.2 ಓವರ್‌ಗಳಲ್ಲಿ 536 ರನ್‌ಗಳ ಬೃಹತ್ ಮೊತ್ತ ಗಳಿಸಿತು. ಗುರುವಾರ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದು ಎಷ್ಟು ದೊಡ್ಡ ತಪ್ಪು ಎಂದು ಉತ್ತರ ವಲಯದ ನಾಯಕ ಅಂಕಿತ್ ಕುಮಾರ್ ಪರಿತಪಿಸುವಂತೆ ದಕ್ಷಿಣ ವಲಯದ ಬ್ಯಾಟರ್‌ಗಳು ಮಾಡಿದರು. ಮೊದಲ ದಿನದಾಟದಲ್ಲಿ ತಂಡವು 81 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 297 ರನ್ ಗಳಿಸಿತ್ತು. ಶತಕ ಗಳಿಸಿದ್ದ ಜಗದೀಶನ್ (148 ರನ್) ಮತ್ತು ನಾಯಕ ಮೊಹಮ್ಮದ್ ಅಜರುದ್ದೀನ್ (11 ರನ್) ಕ್ರೀಸ್‌ನಲ್ಲಿದ್ದರು.

ಎರಡನೇ ದಿನದ ಮೊದಲ ಓವರ್ ಹಾಕಿ ಅನ್ಷುಲ್ ಕಾಂಬೋಜ್ ಅವರ ಎರಡನೇ ಎಸೆತದಲ್ಲಿಯೇ ಅಜರುದ್ದೀನ್ ಅವರು ನಿಶಾಂತ್ ಸಿಂಧು ಪಡೆದ ಅಮೋಘ ಕ್ಯಾಚ್‌ಗೆ ನಿರ್ಗಮಿಸಿದರು. ಕ್ರೀಸ್‌ಗೆ ಬಂದ ರಿಕಿ ಭುಯ್ ಅವರೊಂದಿಗೆ ಜಗದೀಶನ್ ಜೊತೆಯಾಟ ಬೆಸೆದರು. ಐದನೇ ವಿಕೆಟ್ ಜೊತೆಯಾಟದಲ್ಲಿ 87 ರನ್ (194ಎ) ಸೇರಿಸಿದರು. ಜಗದೀಶನ್ 163 ರನ್ ಗಳಿಸಿದ್ದ ಸಂದರ್ಭದಲ್ಲಿ ಸ್ಲಿಪ್ ಫೀಲ್ಡರ್ ನಿಶಾಂತ್ ಕ್ಯಾಚ್ ಕೈಚೆಲ್ಲಿ 'ಜೀವದಾನ' ನೀಡಿದ್ದರು.

> ನನ್ನ ಮತ್ತು ರಿಕಿ ನಡುವಿನ ಸಂವಹನದ ಲೋಪದಿಂದಾಗಿ ರನ್‌ಔಟ್ ಸಂಭವಿಸಿತು. ಇದೆಲ್ಲವೂ ಆಟದ ಭಾಗವಷ್ಟೇ. ಆ ಕ್ಷಣ ಬೇಸರವಾದರೂ ನಂತರ ಮರೆತು ಮುಂದುವರಿಯಬೇಕು
>
> **ಎನ್. ಜಗದೀಶನ್,** ದಕ್ಷಿಣ ವಲಯದ ಬ್ಯಾಟರ್

ಆದರೆ ಊಟದ ವಿರಾಮಕ್ಕೆ ಇನ್ನೇನು ಮೂರೇ ನಿಮಿಷಗಳು ಬಾಕಿಯಿದ್ದವು. ಮಯಂಕ್ ದಾಗರ್ ಎಸೆತವನ್ನು ಪಾಯಿಂಟ್‌ನತ್ತ ಹೊಡೆದ ರಿಕಿ ಒಂಟಿ ರನ್ ಪಡೆಯಲು ಮುಂದಡಿಯಿಟ್ಟು ಕ್ಷಣಾರ್ಧದಲ್ಲಿ ಮನಸ್ಸು ಬದಲಿಸಿ ಹಿಂದೆ ಬಂದರು. ಆದರೆ ನಾನ್‌ಸ್ಟ್ರೈಕರ್‌ನಲ್ಲಿದ್ದ ಜಗದೀಶನ್ ವೇಗವಾಗಿ ಓಡಿ ರಿಕಿ ಪಕ್ಕದಲ್ಲಿ ಬಂದುಬಿಟ್ಟಿದ್ದರು!

ಫೀಲ್ಡರ್‌ಗಳು ಈ ಅವಕಾಶ ಬಿಡಲಿಲ್ಲ. ರನ್‌ಔಟ್ ಮಾಡಿ ಕೇಕೆ ಹಾಕಿದರು. ಕುಪಿತಗೊಂಡ ಜಗದೀಶನ್ ಅವರು ರಿಕಿಯತ್ತ ಹೊರಳಿ ಅಸಮಾಧಾನ ವ್ಯಕ್ತಪಡಿಸುತ್ತ ಡ್ರೆಸ್ಸಿಂಗ್ ರೂಮ್‌ನತ್ತ ನಡೆದರು. ಡಗ್‌ಔಟ್‌ನ ಕಂಬಕ್ಕೆ ಬ್ಯಾಟ್‌ನಿಂದ ಹೊಡೆದರು.

**ರಿಕಿ–ತನಯ್ ಅರ್ಧಶತಕ:** ಜಗದೀಶನ್ ನಿರ್ಗಮಿಸಿದಾಗ 37 ಗಳಿಸಿ ಆಡುತ್ತಿದ್ದ ರಿಕಿ ಭುಯ್ (54; 131ಎ, 4X3, 6X2) ಅರ್ಧಶತಕದ ಗಡಿ ದಾಟಿದರು. ಸಲ್ಮಾನ್ ನಿಜಾರ್ ಅವರೊಂದಿಗೆ 6ನೇ ವಿಕೆಟ್ ಜೊತೆಯಾಟದಲ್ಲಿ 36 ರನ್ ಸೇರಿಸಿದರು.

ಅವರು ಔಟಾದ ನಂತರ ಕ್ರೀಸ್‌ಗೆ ಬಂದ ತನಯ್ ತ್ಯಾಗರಾಜನ್ 116 ಎಸೆತಗಳಲ್ಲಿ 58 ರನ್ ಗಳಿಸಿದರು. ಇದರಿಂದಾಗಿ ತಂಡವು ದೊಡ್ಡ ಮೊತ್ತ ದಾಖಲಿಸಿತು. ದಿನದಾಟದ ಮುಕ್ತಾಯಕ್ಕೆ 22 ನಿಮಿಷ ಬಾಕಿಯಿದ್ದಾಗ ದಕ್ಷಿಣ ವಲಯ ಆಲೌಟ್ ಆಯಿತು. ನಿಶಾಂತ್ ಐದು ವಿಕೆಟ್ ಗಳಿಸಿದರು.

ಇನ್ನುಳಿದಿರುವ ಎರಡು ದಿನಗಳಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಗಳಿಸುವ ಕಠಿಣ ಸವಾಲು ಉತ್ತರ ವಲಯ ತಂಡದ ಮುಂದಿದೆ.

**ಸಂಕ್ಷಿಪ್ತ ಸ್ಕೋರು:** ಸೆಮಿಫೈನಲ್ 1: ಮೊದಲ ಇನಿಂಗ್ಸ್: ದಕ್ಷಿಣ ವಲಯ: 169.2 ಓವರ್‌ಗಳಲ್ಲಿ 536 (ಎನ್. ಜಗದೀಶನ್ 197, ರಿಕಿ ಭುಯ್ 54, ಸಲ್ಮಾನ್ ನಿಜಾರ್ 29, ತನಯ್ ತ್ಯಾಗರಾಜನ್ 58, ಗುರಜಪನೀತ್ 29, ವಿ. ಕೌಶಿಕ್ 11, ಅನ್ಷುಲ್ ಕಾಂಬೋಜ್ 67ಕ್ಕೆ2, ನಿಶಾಂತ್ ಸಿಂಧು 125ಕ್ಕೆ5) ವಿರುದ್ಧ ಉತ್ತರ ವಲಯ.

**ಸೆಮಿಫೈನಲ್ 2:** ಮೊದಲ ಇನಿಂಗ್ಸ್: ಪಶ್ಚಿಮ ವಲಯ: 108 ಓವರ್‌ಗಳಲ್ಲಿ 438 (ತನುಷ್ ಕೋಟ್ಯಾನ್ 76, ಶಾರ್ದೂಲ್ ಠಾಕೂರ್ 64, ಖಲೀಲ್ ಅಹಮದ್ 82ಕ್ಕೆ2, ಸತೀಶ್ ಜೈನ್ 121ಕ್ಕೆ3, ಹರ್ಷ ದುಬೆ 118ಕ್ಕೆ3) **ಕೇಂದ್ರ ವಲಯ:** 67 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 229 (ಆಯುಷ್ ಪಾಂಡೆ 40, ದನೀಶ್ ಮಾಳೆವರ್ 76, ಶುಭಂ ಶರ್ಮಾ ಬ್ಯಾಟಿಂಗ್ 60, ರಜತ್ ಪಾಟೀದಾರ್ ಬ್ಯಾಟಿಂಗ್ 47, ಅರ್ಜನ್ ನಾಗವಸ್ವಾಲಾ 15ಕ್ಕೆ1, ಧರ್ಮೇಂದ್ರಸಿಂಹ ಜಡೇಜ 38ಕ್ಕೆ1)

ಪಂದ್ಯವನ್ನು ವೀಕ್ಷಿಸಿದ ಭಾರತ ಕ್ರಿಕೆಟ್ ತಂಡದ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಪಿಟಿಐ ಚಿತ್ರಗಳು

### ರಜತ್ ಬಳಗದ ದಿಟ್ಟ ಹೋರಾಟ

ದುಲೀಪ್ ಟ್ರೋಫಿ ಟೂರ್ನಿಯ ಎರಡನೇ ಸೆಮಿಫೈನಲ್‌ನಲ್ಲಿ ಪಶ್ಚಿಮ ವಲಯವು ಗಳಿಸಿರುವ ದೊಡ್ಡ ಮೊತ್ತಕ್ಕೆ ರಜತ್ ಪಾಟೀದಾರ ನಾಯಕತ್ವದ ಕೇಂದ್ರ ವಲಯ ತಂಡವು ದಿಟ್ಟ ಪ್ರತಿಕ್ರಿಯೆ ನೀಡಿದೆ.

ಪಶ್ಚಿಮ ವಲಯ ತಂಡವು 108 ಓವರ್‌ಗಳಲ್ಲಿ 438 ರನ್ ಗಳಿಸಿತು. ಅದಕ್ಕುತ್ತರವಾಗಿ ಕೇಂದ್ರ ವಲಯವು ಉತ್ತಮ ಆರಂಭ ಮಾಡಿದ್ದು 2 ವಿಕೆಟ್‌ಗೆ 229 ರನ್ ಕಲೆಹಾಕಿದೆ. ಆಯುಷ್ ಪಾಂಡೆ (40; 59ಎ, 4X8) ಮತ್ತು ದನೀಶ್ ಮಾಳೆವರ್ (76; 136ಎ, 4X12, 6X1) ಮೊದಲ ವಿಕೆಟ್ ಜೊತೆಯಾಟದಲ್ಲಿ 67 ರನ್ ಸೇರಿಸಿದರು. 18ನೇ ಓವರ್‌ನಲ್ಲಿ ಆಯುಷ್ ಪಾಂಡೆ ಔಟಾದ ನಂತರ ದನೀಶ್ ಮತ್ತು ಶುಭಂ ಶರ್ಮಾ ಎರಡನೇ ವಿಕೆಟ್ ಜೊತೆಯಾಟದಲ್ಲಿ 93 ರನ್ ಸೇರಿಸಿದರು. ಧರ್ಮೇಂದ್ರಸಿಂಹ ಜಡೇಜ ಅವರು ದನೀಶ್ ಅವರನ್ನು ಔಟ್ ಮಾಡಿ ಜೊತೆಯಾಟ ಮುರಿದರು.

ಆದರೆ ಶುಭಂ (ಬ್ಯಾಟಿಂಗ್ 60; 148ಎ) ಜೊತೆಗೂಡಿದ ನಾಯಕ ರಜತ್ (ಬ್ಯಾಟಿಂಗ್ 47; 59ಎ) ಇನಿಂಗ್ಸ್‌ಗೆ ಬಲ ತುಂಬಿದರು. ತಂಡಕ್ಕೆ ಮೊದಲ ಇನಿಂಗ್ಸ್ ಮೊತ್ತ ಚುಕ್ತಾ ಮಾಡಲು ಇನ್ನೂ 209 ರನ್‌ಗಳು ಬೇಕು.

ದಕ್ಷಿಣ ವಲಯ ತಂಡದ ಎನ್. ಜಗದೀಶನ್ ಮತ್ತು ರಿಕಿ ಭುಯ್

197 ರನ್ | 352 ಎಸೆತ | 16 ಬೌಂಡರಿ | 2 ಸಿಕ್ಸರ್

# ಮುಂಬಾಗೆ ಶರಣಾದ ಬುಲ್ಸ್

## ಪ್ರೊ ಕಬಡ್ಡಿ: ಬೆಂಗಳೂರು ತಂಡಕ್ಕೆ ಸತತ ಮೂರನೇ ಸೋಲು

**ವಿಶಾಖಪಟ್ಟಣ:** ನಿರಾಶಾದಾಯಕ ಪ್ರದರ್ಶನ ಮುಂದುವರಿಸಿದ ಬೆಂಗಳೂರು ಬುಲ್ಸ್ ತಂಡ ಪ್ರೊ ಕಬಡ್ಡಿ ಲೀಗ್ 12ನೇ ಆವೃತ್ತಿಯ ತನ್ನ ಮೂರನೇ ಪಂದ್ಯದಲ್ಲಿ ಯು ಮುಂಬಾ ತಂಡದ ವಿರುದ್ಧ 20 ಅಂಕಗಳ ಹೀನಾಯ ಸೋಲು ಕಂಡಿತು.

ಇದರೊಂದಿಗೆ ಬೆಂಗಳೂರು ತಂಡ ಹಾಲಿ ಟೂರ್ನಿಯಲ್ಲಿ ಹ್ಯಾಟ್ರಿಕ್ ಸೋಲಿಗೆ ಒಳಗಾದ ಮೊದಲ ತಂಡ ಎನಿಸಿತು. ವಿಶ್ವನಾಥ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ಮೊದಲ ಹಣಾಹಣಿಯಲ್ಲಿ ಬೆಂಗಳೂರು ತಂಡ 28-48 ಅಂಕಗಳಿಂದ ಮುಂಬಾಗೆ ಶರಣಾಯಿತು. ಕೋಚ್ ಬಿ.ಸಿ. ರಮೇಶ್ ಗರಡಿಯಲ್ಲಿ ಪಳಗಿರುವ ಬುಲ್ಸ್, ಲೀಗ್ ಪಟ್ಟಿಯಲ್ಲಿ ಪಾಯಿಂಟ್ ಖಾತೆ ತೆರೆಯಲು ವಿಫಲವಾಗಿದೆ.

ಬುಲ್ಸ್ ಪರ ಆಶೀಷ್ ಮಲಿಕ್ ಮತ್ತು ಅಲಿರೇಜಾ ತಲಾ ಆರು ಅಂಕ ಗಳಿಸಿದರು. ಉಳಿದವರು ವಿಫಲರಾದರು. ಮೂರನೇ ಜಯ ದಾಖಲಿಸಿದ ಮುಂಬಾ ತಂಡದ ಪರ ಅಜಿತ್ ಚೌಹಾನ್ (13 ಅಂಕ) ಅಮೋಘ ಪ್ರದರ್ಶನ ನೀಡಿ ಗೆಲುವಿನ ರೂವಾರಿಯೆನಿಸಿದರು. ಕ್ರಮವಾಗಿ ಆರು ಮತ್ತು ಐದು ಅಂಕಗಳನ್ನು ಗಳಿಸಿದ ಸತೀಶ್ ಕಣ್ಣನ್ ಹಾಗೂ ರಿಂಕು ಗೆಲುವಿನ ಅಂತರವನ್ನು ಹಿಗ್ಗಿಸಲು ನೆರವಾದರು.

ಟ್ಯಾಕಲ್ ಮತ್ತು ರೇಡಿಂಗ್ ಎರಡು ವಿಭಾಗಗಳಲ್ಲೂ ಬುಲ್ಸ್ ಪ್ರದರ್ಶನ ಸಂಪೂರ್ಣ ನಿಸ್ತೇಜಗೊಂಡಿತು.

**ಹರಿಯಾಣಗೆ ಮಣಿದ ಯೋಧಾಸ್:** ಡಿಫೆಂಡರ್‌ಗಳಾದ ಕೆ. ರಾಹುಲ್ ಹಾಗೂ ರಾಹುಲ್ ಸೇತಪಾಲ್ ಅವರ ನೇತೃತ್ವದ ಬಲಿಷ್ಠ ರಕ್ಷಣಾ ಕೋಟೆ ಭೇದಿಸುವಲ್ಲಿ ಎಡವಿದ ಯುಪಿ ಯೋಧಾಸ್ ತಂಡವು ದಿನದ ಎರಡನೇ ಪಂದ್ಯದಲ್ಲಿ 32–37ರಿಂದ ಹರಿಯಾಣ ಸ್ಟೀಲರ್ಸ್ ಎದುರು ಮಂಡಿಯೂರಿತು.

ಕೆ. ರಾಹುಲ್ 6 ಬಾರಿ ಎದುರಾಳಿಗಳನ್ನು ಟ್ಯಾಕಲ್ ಮಾಡಿದರೆ, ರಾಹುಲ್ ಸೇತಪಾಲ್ 5 ಟ್ಯಾಕಲ್ ಪಾಯಿಂಟ್ಸ್ ಪಡೆದರು. ರೇಡಿಂಗ್‌ನಲ್ಲಿ ನವೀನ್ ಕುಮಾರ್ 6 ಅಂಕ ಗಳಿಸಿದರು.

ಯೋಧಾಸ್ ಪರ ಕನ್ನಡಿಗ ಗಗನ್ ಗೌಡ (13 ಪಾಯಿಂಟ್ಸ್) ಏಕಾಂಗಿ ಹೋರಾಟ ತೋರಿದರಾದರೂ, ಸಹ ಆಟಗಾರರಿಂದ ಅವರಿಗೆ ಉತ್ತಮ ಬೆಂಬಲ ದೊರೆಯಲಿಲ್ಲ.

**ಶನಿವಾರದ ಪಂದ್ಯಗಳು:**
ಪಟ್ನಾ ಪೈರೇಟ್ಸ್–ಬೆಂಗಳೂರು ಬುಲ್ಸ್ (ರಾತ್ರಿ 8)
ತಮಿಳು ತಲೈವಾಸ್–ಗುಜರಾತ್ ಜೈಂಟ್ಸ್ (ರಾತ್ರಿ 9)

ಬೆಂಗಳೂರು ಬುಲ್ಸ್ ರೇಡರ್‌ನನ್ನು ಕ್ಯಾಚ್ ಮಾಡಿದ ಮುಂಬಾ ಆಟಗಾರರು

# ಸಂಕಷ್ಟದಲ್ಲಿ ಕೆಎಸ್‌ಸಿಎ ಕೋಲ್ಟ್ಸ್

ಪ್ರಜಾವಾಣಿ ವಾರ್ತೆ

**ಮೈಸೂರು:** ವಿಪಿನ್ ಶರ್ಮಾ ಅವರ (40ಕ್ಕೆ 4) ಪರಿಣಾಮಕಾರಿ ಬೌಲಿಂಗ್ ದಾಳಿಗೆ ಸಿಲುಕಿದ ಆತಿಥೇಯ ಕೆಎಸ್‌ಸಿಎ ಕೋಲ್ಟ್ಸ್ ತಂಡವು 2ನೇ ಇನ್ನಿಂಗ್ಸ್‌ನಲ್ಲಿ ಹಿಮಾಚಲ ಪ್ರದೇಶ ತಂಡದ ವಿರುದ್ಧ 7ಕ್ಕೆ 135 ರನ್‌ಗೆ ಕುಸಿದು ಸಂಕಷ್ಟಕ್ಕೆ ಸಿಲುಕಿದೆ.

ಇಲ್ಲಿನ ಎಸ್‌ಜೆಸಿಇ ಮೈದಾನದಲ್ಲಿ ನಡೆಯುತ್ತಿರುವ ಕ್ಯಾಪ್ಟನ್ ಕೆ.ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಶುಕ್ರವಾರ ಹಿಮಾಚಲ ಪ್ರದೇಶವು ಮೊದಲ ಇನ್ನಿಂಗ್ಸ್‌ನಲ್ಲಿ 91.1 ಓವರ್‌ಗಳಲ್ಲಿ 303 ರನ್‌ಗೆ ಆಲೌಟ್ ಆಗಿ, 163 ರನ್‌ಗಳ ಮುನ್ನಡೆ ಸಾಧಿಸಿತು. ಕೆಎಸ್‌ಸಿಎ ತಂಡದ ಶಿಖರ್ ಶೆಟ್ಟಿ 55ಕ್ಕೆ 5 ವಿಕೆಟ್ ಪಡೆದು ಮಿಂಚಿದರು.

ಎರಡನೇ ಇನಿಂಗ್ಸ್ ಆರಂಭಿಸಿದ ಕೆಎಸ್‌ಸಿಎ ತಂಡಕ್ಕೆ ವಿಪಿನ್ ಶರ್ಮಾ ಆಘಾತ ನೀಡಿದರು. ಆರಂಭಿಕರಾದ ಪ್ರಖರ್ ಚತುರ್ವೇದಿ (0) ಹಾಗೂ ವಿಶಾಲ್ ಓನತ್ ಅವರನ್ನು ಬೇಗನೆ ಔಟ್ ಮಾಡಿದರು. ನೆಲೆಯೂರುತ್ತಿದ್ದ ಹರ್ಷಿಲ್ (21) ಅವರನ್ನು ದಿವೇಶ್ ಶರ್ಮಾ, ಕೆ.ಪಿ. ಕಾರ್ತಿಕೇಯ (20) ಅವರನ್ನು ಅರ್ಪಿತ್ ಗುಲೇರಿಯಾ ಪೆವಿಲಿಯನ್‌ಗೆ ದಾರಿ ತೋರಿಸಿದರು.

ನಾಯಕ ಅನೀಶ್ವರ್ ಗೌತಮ್ (ಔಟಾಗದೇ 36) ಅವರು ಬೌಲರ್ ಮೊಹಸಿನ್ ಖಾನ್ (46) ಅವರೊಂದಿಗೆ 65 ರನ್‌ಗಳನ್ನು ಸೇರಿಸಿ ತಂಡಕ್ಕೆ ಉಪಯುಕ್ತ ಕಾಣಿಕೆ ನೀಡಿದರು. ದಿನದಾಟದ ಅಂತ್ಯಕ್ಕೆ ಶಿಖರ್ ಶೆಟ್ಟಿ (1) ಜೊತೆ ಕ್ರೀಸ್‌ನಲ್ಲಿದ್ದು, ತಂಡವು ಸೋಲಿನ ಭೀತಿಯಲ್ಲಿದೆ.

**ಸಂಕ್ಷಿಪ್ತ ಸ್ಕೋರ್:** ಎಸ್‌ಜೆಸಿಇ ಕ್ರೀಡಾಂಗಣ: ಮೊದಲ ಇನ್ನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ್: 41 ಓವರ್‌ಗಳಲ್ಲಿ 140. ಹಿಮಾಚಲ ಪ್ರದೇಶ: 91.1 ಓವರ್‌ಗಳಲ್ಲಿ 303 (ಅಂಕುಶ್ ಬೈನ್ಸ್ 96. ಶಿಖರ್ ಶೆಟ್ಟಿ 55ಕ್ಕೆ5). ಎರಡನೇ ಇನ್ನಿಂಗ್ಸ್: 32 ಓವರ್‌ಗಳಲ್ಲಿ 7ಕ್ಕೆ 135 (ಮೊಹಸಿನ್ ಖಾನ್ 46. ವಿಪಿನ್ ಶರ್ಮಾ 40ಕ್ಕೆ 4)

**ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ:** ಮೊದಲ ಇನ್ನಿಂಗ್ಸ್: ಆಂಧ್ರ ಕ್ರಿಕೆಟ್ ಸಂಸ್ಥೆ: 83.5 ಓವರ್‌ಗಳಲ್ಲಿ 257. ಬರೋಡ ಕ್ರಿಕೆಟ್ ಸಂಸ್ಥೆ: 96 ಓವರ್‌ಗಳಲ್ಲಿ 6ಕ್ಕೆ 285 (ಸುಕ್ರೀತ್ ಪಾಂಡೆ ಔಟಾಗದೇ 81, ನಿನಾದ್ ರತ್ವಾ 62. ಕೆಎಸ್‌ಎನ್ ರಾಜು 47ಕ್ಕೆ 3)

5 ವಿಕೆಟ್ ಗೊಂಚಲು ಪಡೆದ ಕೆಎಸ್‌ಸಿಎ ಕೋಲ್ಟ್ಸ್ ತಂಡದ ಶಿಖರ್ ಶೆಟ್ಟಿ

## ಚಿಟಿಕೆ ಸುದ್ದಿ

### ಭಾರತ ಕ್ರಿಕೆಟ್ ತಂಡದ ಜೆರ್ಸಿ ಪ್ರಾಯೋಜಕತ್ವ ಇನ್ನಷ್ಟು ದುಬಾರಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಪೋಷಾಕು ಪ್ರಾಯೋಜಕತ್ವವು ದುಬಾರಿಯಾಗಲಿದೆ. ದ್ವಿಪಕ್ಷೀಯ ಸರಣಿಗಳಲ್ಲಿ ಪಂದ್ಯವೊಂದಕ್ಕೆ ₹3.5 ಕೋಟಿ ಮತ್ತು ಬಹುರಾಷ್ಟ್ರಗಳ ಟೂರ್ನಿಯಲ್ಲಿ ಪ್ರತಿ ಪಂದ್ಯಕ್ಕೆ ₹1.5 ಕೋಟಿ ನಿಗದಿಯಾಗುವ ಸಾಧ್ಯತೆ ಇದೆ. ಪ್ರಸ್ತುತ ಜೆರ್ಸಿ ಪ್ರಾಯೋಜಕತ್ವ ಮೌಲ್ಯವು ₹3.17 ಕೋಟಿ ಮತ್ತು ₹1.12 ಕೋಟಿ ಇದೆ.

ಐಸಿಸಿ ಮತ್ತು ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಆಯೋಜಿತ ಟೂರ್ನಿಗಳಲ್ಲಿ ಈ ಪ್ರಾಯೋಜಕತ್ವ ಮೌಲ್ಯವು ಅನ್ವಯವಾಗಲಿದೆ. ಮುಂಬರುವ ಏಷ್ಯಾ ಕಪ್ ಟೂರ್ನಿ ಬಳಿಕ ಜಾರಿಯಾಗುವ ಸಾಧ್ಯತೆ ಇದೆ. ಇದರಿಂದ ಬಿಸಿಸಿಐಗೆ ₹400 ಕೋಟಿ ಆದಾಯ ಬರುವ ನಿರೀಕ್ಷೆ ಇದೆ.

### ಭಾರತಕ್ಕೆ ಇಂದು ಕತಾರ್ ಸವಾಲು

ದೋಹಾ (ಪಿಟಿಐ): ಭಾರತ ಫುಟ್‌ಬಾಲ್ ತಂಡ, ಇಲ್ಲಿನ ಅಬ್ದುಲ್ಲಾ ಬಿನ್ ಖಲೀಫಾ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ಎಎಫ್‌ಸಿ 23 ವರ್ಷದೊಳಗಿನವರ ಏಷ್ಯನ್ ಕಪ್ 2026ರ ಕ್ವಾಲಿಫೈರ್ಸ್ ಪಂದ್ಯದಲ್ಲಿ ಆತಿಥೇಯ ಕತಾರ್ ತಂಡವನ್ನು ಎದುರಿಸಲಿದೆ

ಮೊತ್ತ ಮೊದಲ ಬಾರಿ ಏಷ್ಯಾ ಮಟ್ಟದಲ್ಲಿ ಅರ್ಹತೆ ಪಡೆಯುವ ಗುರಿಯಲ್ಲಿ ಭಾರತ ತಂಡವಿದೆ. ಗುಂಪು ಹಂತದಲ್ಲಿ ವಿಜೇತವಾಗುವ ತಂಡ ಸೌದಿ ಅರೇಬಿಯಾದಲ್ಲಿ 2026ರಲ್ಲಿ ನಡೆಯುವ ಏಷ್ಯನ್ ಕಪ್‌ಗೆ ಅರ್ಹತೆ ಪಡೆಯಲಿದೆ.

### ತವರಿನ ವಿದಾಯ ಪಂದ್ಯದಲ್ಲಿ ಮೆಸ್ಸಿ ಮಿಂಚು

ಬ್ಯೂನೊ ಏರ್ಸ್ (ಎಪಿ): ತವರಿನಲ್ಲಿ ಅರ್ಜೆಂಟೀನಾ ತಂಡದ ಪರ ಕೊನೆಯ ಪಂದ್ಯ ಆಡಿದ ಲಯೊನೆಲ್ ಮೆಸ್ಸಿ ಅದನ್ನು ಸ್ಮರಣೀಯವಾಗುವಂತೆ ಮಾಡಿದರು. ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯದಲ್ಲಿ ಅರ್ಜೆಂಟೀನಾ ಗುರುವಾರ 3–0 ಗೋಲುಗಳಿಂದ ಜಯಗಳಿಸಿತು. ಇದರಲ್ಲಿ ಮೆಸ್ಸಿ ಎರಡು ಗೋಲುಗಳನ್ನು ಬಾರಿಸಿದರು.

ಅರ್ಜೆಂಟೀನಾ ಈ ಸುತ್ತಿಗೆ ಮೊದಲೇ ವಿಶ್ವಕಪ್‌ಗೆ ಅರ್ಹತೆ ಪಡೆದಿತ್ತು. ಮೆಸ್ಸಿ ಕೊನೆಯ ಬಾರಿ ತವರಿನಲ್ಲಿ ಅಂತರರಾಷ್ಟ್ರೀಯ ಪಂದ್ಯದಲ್ಲಿ ಆಡುವ ಕಾರಣ ಕ್ರೀಡಾಂಗಣ ಭರ್ತಿಯಾಗಿತ್ತು.

'ತವರಿನಲ್ಲಿ ಈ ರೀತಿಯಲ್ಲಿ ವೃತ್ತಿಜೀವನ ಕೊನೆಗೊಳಿಸುವುದು ನನ್ನ ಕನಸಾಗಿತ್ತು' ಎಂದು ಮೆಸ್ಸಿ ಪ್ರತಿಕ್ರಿಯಿಸಿದರು.

## ಅಮೆರಿಕದ ಓಪನ್ ಟೆನಿಸ್: ಒಸಾಕಾ ಓಟ ಸೆಮಿಫೈನಲ್‌ನಲ್ಲಿ ಅಂತ್ಯ • ಪೆಗುಲಾಗೆ ನಿರಾಶೆ

# ಪ್ರಶಸ್ತಿಗೆ ಸಬಲೆಂಕಾ– ಅನಿಸಿಮೋವಾ ಸೆಣಸು

ನ್ಯೂಯಾರ್ಕ್ (ಎಎಫ್‌ಪಿ): ಹಾಲಿ ಚಾಂಪಿಯನ್ ಹಾಗೂ ವಿಶ್ವದ ಅಗ್ರ ಕ್ರಮಾಂಕದ ಆಟಗಾರ್ತಿ ಅರಿನಾ ಸಬಲೆಂಕಾ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಫೈನಲ್‌ನಲ್ಲಿ ಅಮಂಡಾ ಅನಿಸಿಮೋವಾ ಅವರನ್ನು ಎದುರಿಸಲಿದ್ದಾರೆ. ಅನಿಸಿಮೋವಾ ಅವರು ಗುರುವಾರ ನಡೆದ ಸೆಮಿಫೈನಲ್‌ನಲ್ಲಿ ಜಪಾನ್‌ನ ನವೋಮಿ ಒಸಾಕಾ ಅವರ ಯಶಸ್ಸಿನ ಹೋರಾಟಕ್ಕೆ ತೆರೆಯೆಳೆದರು.

2014ರಲ್ಲಿ ಸೆರೆನಾ ವಿಲಿಯಮ್ಸ್ ಅವರ ನಂತರ ನ್ಯೂಯಾರ್ಕ್‌ನಲ್ಲಿ ಪ್ರಶಸ್ತಿ ಉಳಿಸಿಕೊಂಡ ಮೊದಲ ಆಟಗಾರ್ತಿಯಾಗುವ ಪ್ರಯತ್ನದಲ್ಲಿರುವ ಸಬಲೆಂಕಾ ಸೆಮಿಫೈನಲ್ ಪಂದ್ಯದಲ್ಲಿ ಅಮೆರಿಕದ ಜೆಸಿಕಾ ಪೆಗುಲಾ ಅವರನ್ನು 4–6, 6–3, 6–4 ರಿಂದ ಹಿಮ್ಮೆಟ್ಟಿಸಿದರು. 2024ರಲ್ಲಿ ಇವರಿಬ್ಬರು ಫೈನಲ್‌ನಲ್ಲಿ ಮುಖಾಮುಖಿಯಾಗಿದ್ದರು.

27 ವರ್ಷದ ಸಬಲೆಂಕಾ ಸತತ ಮೂರನೇ ಬಾರಿ ಇಲ್ಲಿ ಫೈನಲ್ ತಲುಪಿದ್ದಾರೆ. 'ಇದು ಕಠಿಣ ಪಂದ್ಯವಾಗಿತ್ತು. ಆಕೆ (ಪೆಗುಲಾ) ಎಂದಿನ ರೀತಿ ಅಮೋಘವಾಗಿಯೇ ಆಡಿದರು. ನಾನು ಈ ಗೆಲುವಿಗೆ ತುಂಬಾ ಶ್ರಮ ಹಾಕಬೇಕಾಯಿತು' ಎಂದು ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿರುವ ಬೆಲರೂಸ್‌ನ ಆಟಗಾರ್ತಿ ಪ್ರತಿಕ್ರಿಯಿಸಿದರು.

ಸಬಲೆಂಕಾ ಈ ಮೂಲಕ ಕಳೆದ ಐದು ಗ್ರ್ಯಾನ್‌ಸ್ಲಾಮ್‌ಗಳ ಪೈಕಿ ನಾಲ್ಕರಲ್ಲಿ ಫೈನಲ್ ತಲುಪಿದಂತಾಗಿದೆ. ಆದರೆ 2024ರ ಅಮೆರಿಕ ಓಪನ್ ನಂತರ ಅವರು ಯಾವುದೇ ಪ್ರಮುಖ ಟೂರ್ನಿಯಲ್ಲಿ ಕಿರೀಟ ಧರಿಸಿಲ್ಲ. ಈ ವರ್ಷ ಆಸ್ಟ್ರೇಲಿಯನ್ ಓಪನ್ ಮತ್ತು ಫ್ರೆಂಚ್ ಓಪನ್‌ನಲ್ಲಿ ರನ್ನರ್ ಅಪ್ ಆಗಿದ್ದರು.

ಸಬಲೆಂಕಾ ಈಗ, ವಿಂಬಲ್ಡನ್ ಸೆಮಿಫೈನಲ್‌ನಲ್ಲಿ ಅನಿಸಿಮೋವಾ ಎದುರು ಅನುಭವಿಸಿದ ಸೋಲಿಗೆ ಸೇಡುತೀರಿಸುವ ತವಕದಲ್ಲಿದ್ದಾರೆ.

ಎಂಟನೇ ಶ್ರೇಯಾಂಕದ ಅನಿಸಿಮೋವಾ 6–7 (4–7), 7–5 (7–3), 6–3 ರಿಂದ 23ನೇ ಶ್ರೇಯಾಂಕದ ಒಸಾಕಾ ಅವರನ್ನು ಸೋಲಿಸಿದಾಗ ನ್ಯೂಯಾರ್ಕ್‌ನಲ್ಲಿ ಮಧ್ಯರಾತ್ರಿ ಕಳೆದಿತ್ತು. ಒಸಾಕಾ ಇಲ್ಲಿ ಎರಡು ಬಾರಿ ಚಾಂಪಿಯನ್ ಆಗಿದ್ದರು.

ಮಾತೃತ್ವ ವಿರಾಮದ ನಂತರ 2024ರ ಆರಂಭದಲ್ಲಿ ಸಕ್ರಿಯ ಟೆನಿಸ್‌ಗೆ ಮರಳಿದ ಬಳಿಕ ಒಸಾಕಾ ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಸೆಮಿಫೈನಲ್ ಹಂತ ತಲುಪಿದ್ದರು.



ಜಪಾನ್‌ನ ನವೋಮಿ ಒಸಾಕಾ ಅವರನ್ನು ಸೆಮಿಫೈನಲ್‌ನಲ್ಲಿ ಸೋಲಿಸಿದ ಸಂಭ್ರಮದಲ್ಲಿ ಅಮೆರಿಕದ ಆಟಗಾರ್ತಿ ಅಮಂಡಾ ಅನಿಸಿಮೋವಾ ಎಎಫ್‌ಪಿ ಚಿತ್ರಗಳು

ಯುಕಿ ಭಾಂಬ್ರಿ– ಮೈಕೆಲ್ ವೀನಸ್ ಜೋಡಿ

### ಭಾಂಬ್ರಿ ಯಶಸ್ಸಿನ ಓಟ ಅಂತ್ಯ

ನ್ಯೂಯಾರ್ಕ್ (ಪಿಟಿಐ): ಭಾರತದ ಯುಕಿ ಭಾಂಬ್ರಿ ಅವರು ಅಮೆರಿಕ ಓಪನ್ ಪುರುಷರ ಡಬಲ್ಸ್ ಸೆಮಿಫೈನಲ್‌ನಲ್ಲಿ ಗುರುವಾರ ಸೋಲನುಭವಿಸಿದರು.

ಆದರೆ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರಲ್ಲಿ ಸೆಮಿಫೈನಲ್ ತಲುಪಿದ್ದು 33 ವರ್ಷ ವಯಸ್ಸಿನ ದೆಹಲಿ ಆಟಗಾರನ ಅತ್ಯುತ್ತಮ ಸಾಧನೆಯಾಗಿ ದಾಖಲಾಯಿತು. ನ್ಯೂಜಿಲೆಂಡ್‌ನ ಮೈಕೆಲ್ ವೀನಸ್ ಜೊತೆಗೂಡಿ ಆಡಿದ ಅವರು 7–6 (2), 6–7 (5), 4–6ರಿಂದ ನೀಲ್ ಸ್ಕುಪ್‌ಸ್ಕಿ- ಜೋ ಸಾಲಿಸ್ಬರಿ ಜೋಡಿಗೆ ಮಣಿಯಬೇಕಾಯಿತು.

ಫ್ಲಷಿಂಗ್ ಮೆಡೋಸ್‌ನಲ್ಲಿ ಭಾರತ– ನ್ಯೂಜಿಲೆಂಡ್ ಆಟಗಾರರ ಜೋಡಿ 11ನೇ ಮತ್ತು 4ನೇ ಶ್ರೇಯಾಂಕದ ಜೋಡಿಯನ್ನು ಸೋಲಿಸಿ ಗಮನ ಸೆಳೆದಿತ್ತು. ಲಿಯಾಂಡರ್ ಪೇಸ್, ಮಹೇಶ್ ಭೂಪತಿ, ರೋಹನ್ ಬೋಪಣ್ಣ ಅವರ ಪರಂಪರೆಯಲ್ಲಿ ಭಾಂಬ್ರಿ ಸಹ ನಡೆದಂತಾಗಿದೆ.

# ಸುಮಿತ್, ನೀರಜ್ ಶುಭಾರಂಭ

ಲಿವರ್‌ಪೂಲ್ (ಬ್ರಿಟನ್) (ಪಿಟಿಐ): ಭಾರತದ ಸುಮಿತ್ ಕುಂದು ಹಾಗೂ ನೀರಜ್ ಪೋಗಟ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಶುಭಾರಂಭ ಮಾಡಿದರು.

ಸುಮಿತ್

ಭರವಸೆಯ ಬಾಕ್ಸರ್ ಸುಮಿತ್ ಅವರು ಮಿಡ್ಲ್‌ವೇಟ್ ವಿಭಾಗದಲ್ಲಿ ಜೋರ್ಡಾನ್‌ನ ಮೊಹಮ್ಮದ್ ಅಲ್ ಹುಸೇನ್ ಅವರನ್ನು 5–0 ಬೌಟ್‌ಗಳಲ್ಲಿ ಮಣಿಸಿದರು. ಚುರುಕಾದ ಹೊಡೆತ ಹಾಗೂ ಬಲಿಷ್ಠ ಪಂಚ್‌ಗಳೊಂದಿಗೆ ಆರಂಭದಿಂದಲೇ ಪಂದ್ಯದ ಹಿಡಿತ ಸಾಧಿಸಿದ ಅವರು, ಎದುರಾಳಿಗೆ ಚೇತರಿಸಿಕೊಳ್ಳಲು ಅವಕಾಶವನ್ನೇ ನೀಡಲಿಲ್ಲ.

ಮಹಿಳೆಯರ 65 ಕೆ.ಜಿ. ವಿಭಾಗದಲ್ಲಿ ನೀರಜ್ ಅವರು 3–2ರಿಂದ ಫಿನ್ಲೆಂಡ್‌ನ ಕ್ರಿಸ್ಟಾ ಕೊವಲೈನೆನ್ ಎದುರು ಗೆಲುವು ಸಾಧಿಸಿದ್ದರು. ತೀವ್ರ ಪೈಪೋಟಿಯಿಂದ ಕೂಡಿದ್ದ ಈ ಪಂದ್ಯ ಗೆಲ್ಲಲು ನೀರಜ್ ಹೆಚ್ಚಿನ ಶ್ರಮ ಹಾಕಬೇಕಾಯಿತು.

ಇದಕ್ಕೂ ಮೊದಲು, ಮಹಿಳೆಯರ 70 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿರುವ ಸನಾಮಾಚ ಚಾನು ಅವರು 4–1ರಿಂದ ಡೆನ್ಮಾರ್ಕ್‌ನ ಡಿಟ್ಟೆ ಫ್ರೊಸ್ಟೊಮ್ ಅವರನ್ನು ಅಧಿಕಾರಯುತವಾಗಿ ಮಣಿಸಿದರು. ಮಣಿಪುರದ ಈ ಆಟಗಾರ್ತಿಯು ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ವಿಶ್ವ ಬಾಕ್ಸಿಂಗ್ ಕಪ್ ಚಿನ್ನದ ಪದಕ ವಿಜೇತೆ ನಟಾಲ್ಯ ಬೊಗ್ದನೊವಾ ಅವರ ಸವಾಲು ಎದುರಿಸಬೇಕಿದೆ.

ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತೆ ಜಸ್ಮೈನ್ ಲಂಬೋರಿಯಾ ಅವರು 57 ಕೆ.ಜಿ. ವಿಭಾಗದಲ್ಲಿ ದರಿಯಾ ಒಲ್ಗಾ ಹುತರಿನಾ (ಉಕ್ರೇನ್) ಎದುರು 5–0ಯಿಂದ ನಿರಾಯಾಸವಾಗಿ ಗೆಲುವು ಸಾಧಿಸಿದರು.

ಆದರೆ, ಹೆವಿ ವೇಟ್ ವಿಭಾಗದಲ್ಲಿ ಸ್ಪರ್ಧಿಸಿರುವ ಹರ್ಷ್ ಚೌಧರಿ ಅವರು ಪೋಲೆಂಡ್‌ನ ಟೂಟಕ್ ಆ್ಯಡಮ್ಸ್ ಎದುರು ಸೋತು ಮೊದಲ ಸುತ್ತಿನಲ್ಲೇ ಟೂರ್ನಿಯಿಂದ ಹೊರಬಿದ್ದರು.

# ಪ್ರಜ್ಞಾನಂದ, ಅರ್ಜುನ್‌ಗೆ ಜಯ

ಐಲ್ ಆಫ್ ಮ್ಯಾನ್ (ಪಿಟಿಐ): ಭಾರತದ ಆರ್.ಪ್ರಜ್ಞಾನಂದ ಮತ್ತು ಅರ್ಜುನ್ ಇರಿಗೇಶಿ, ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಜಯಗಳಿಸಿದರು. ಆದರೆ ಗುಕೇಶ್, ವಿದಿತ್ ಗುಜರಾತಿ ತಮ್ಮ ಪಂದ್ಯಗಳನ್ನು ಡ್ರಾ ಮಾಡಿಕೊಳ್ಳಬೇಕಾಯಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಪ್ರಜ್ಞಾನಂದ, ಇವಾನ್ ಝುಮ್ಲಿಯಾನ್‌ಸ್ಕಿ ಮಣಿಸಿದರೆ, ಅರ್ಜುನ್, ಹಯಿಕ್ ಮಾರ್ಟಿರೊರಿಸಿಯಾನ್ ಅವರನ್ನು ಸೋಲಿಸಿದರು. ನಿಹಾಲ್ ಸರಿನ್, ಅರುಮ್ ಹಕೊಬ್ಯಾನ್ ವಿರುದ್ಧ ಗೆದ್ದರು. ಅಭಿಮನ್ಯು ಮಿಶ್ರಾ, ಅಲೆಕ್ಸಿ ಸರನಾ ವಿರುದ್ಧ ಗೆಲುವು ಪಡೆದರು. ದಿವ್ಯಾ ದೇಶಮುಖ್, ಅಲೆಕ್ಸಾಂಡರ್ ಡೊರ್ಚೆಂಕೊ ಜೊತೆ ಡ್ರಾ ಮಾಡಿಕೊಂಡರು.

ಗುಕೇಶ್, ಯಾಗಿಝ್ ಎರ್ಡೊಗ್ಮಸ್ ಜೊತೆ, ವಿದಿತ್ ಸ್ವದೇಶದ ಅಭಿಮನ್ಯು ಪುರಾಣಿಕ್ ಜೊತೆ ಪಾಯಿಂಟ್ ಹಂಚಿಕೊಂಡರು.

## ಏಷ್ಯಾ ಕಪ್: ಭಾರತ– ಚೀನಾ ಪಂದ್ಯ ಇಂದು

# ಫೈನಲ್ ಸ್ಥಾನದ ಮೇಲೆ ಗಮನ

ರಾಜಗೀರ್ (ಪಿಟಿಐ): ಆತಿಥೇಯ ಭಾರತ ತಂಡವು ಏಷ್ಯಾ ಕಪ್ ಪುರುಷರ ಹಾಕಿ ಟೂರ್ನಿಯ ಫೈನಲ್‌ಗೆ ಒಂದೇ ಹೆಜ್ಜೆ ದೂರದಲ್ಲಿದೆ. ಉತ್ಸಾಹದಲ್ಲಿರುವ ಹರ್ಮನ್‌ಪ್ರೀತ್ ಸಿಂಗ್ ಪಡೆಯು ಶನಿವಾರ ನಡೆಯುವ ಸೂಪರ್ ಫೋರ್ ಹಂತದ ಕೊನೆಯ ಪಂದ್ಯದಲ್ಲಿ ಚೀನಾ ತಂಡವನ್ನು ಎದುರಿಸಲಿದೆ.

ಸೂಪರ್ ಫೋರ್ ಮೊದಲ ಪಂದ್ಯದಲ್ಲಿ ದಕ್ಷಿಣ ಕೊರಿಯಾ ವಿರುದ್ಧ ಸೋಲಿನಿಂದ ಬಚಾವಾಗಿದ್ದ ಭಾರತ ತಂಡ, ಮಲೇಷ್ಯಾ ವಿರುದ್ಧ ತೋರಿದ ಆಟದಿಂದ ಉಲ್ಲಸಿತವಾಗಿದೆ. ಹೀಗಾಗಿ ಅಪಾಯಕಾರಿ ಚೀನಾ ವಿರುದ್ಧದ ಪಂದ್ಯಕ್ಕೆ ವಿಶ್ವಾಸದೊಡನೆ ಕಣಕ್ಕಿಳಿಯಲಿದೆ.

ಭಾರತ 2 ಪಂದ್ಯಗಳಿಂದ 4 ಅಂಕ ಗಳಿಸಿದ್ದು, ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಚೀನಾ ಮತ್ತು ಮಲೇಷ್ಯಾ ತಲಾ ಮೂರು ಅಂಕ ಗಳಿಸಿವೆ. ಕೊರಿಯಾ (1 ಅಂಕ) ಕೊನೆಯ ಸ್ಥಾನದಲ್ಲಿದೆ. ಮೊದಲ ಎರಡು ಸ್ಥಾನ ಗಳಿಸುವ ತಂಡಗಳು ಫೈನಲ್ ಪ್ರವೇಶಿಸಲಿವೆ. ಈ ಪರಿಸ್ಥಿತಿಯಲ್ಲಿ ಡ್ರಾ ಮಾಡಿಕೊಂಡರೂ ಭಾರತ ಮುನ್ನಡೆಯಲಿದೆ.

ಮಲೇಷ್ಯಾ ಎದುರಿನ ಗೆಲುವಿನ ನಂತರ ಮಾತನಾಡಿದ ಕೋಚ್ ಕ್ರೇಗ್ ಫುಲ್ಟನ್ ಅವರು 'ತಂಡ ಇನ್ನೂ ಪೂರ್ಣ ಪ್ರಮಾಣದ ಪ್ರದರ್ಶನ ಮಟ್ಟಕ್ಕೆ ತಲುಪಿಲ್ಲ' ಎಂದಿದ್ದರು.

ಮಿಡ್‌ಫೀಲ್ಡ್ ವಿಭಾಗ ಉತ್ತಮ ಪ್ರದರ್ಶನ ನೀಡಿದೆ. ಫಾರ್ವರ್ಡ್ ಆಟಗಾರರ ಜೊತೆ ಅವರ ಸಂಯೋಜನೆ ಮಲೇಷ್ಯಾ ವಿರುದ್ಧದ ಪಂದ್ಯದಲ್ಲಿ ಗಮನಸೆಳೆದಿತ್ತು. ಹಾರ್ದಿಕ್ ಅವರಂತೂ ಉತ್ಸಾಹದ ಚಿಲುಮೆಯಾಗಿದ್ದರು. ಮನ್‌ಪ್ರೀತ್ ಅವರ ಅನುಭವವೂ ತಂಡಕ್ಕೆ ನೆರವಾಯಿತು.

ಆದರೆ ತಂಡ ಹಿನ್ನಡೆ ಕಂಡಿದ್ದು– ಪಾಲಿಗೆ ಬಂದ ಅವಕಾಶಗಳನ್ನು ಪರಿವರ್ತಿಸುವಲ್ಲಿ. ಹೀಗಾಗಿ ದಾಳಿಯ ವೇಳೆ ಏಕಾಗ್ರತೆ ಮತ್ತು ಸಂಯಮ ವಹಿಸುವ ಅಗತ್ಯವಿದೆ. ಪೆನಾಲ್ಟಿ ಕಾರ್ನರ್ ಪರಿವರ್ತನೆ ವಿಷಯದಲ್ಲೂ ಸುಧಾರಣೆ ಆಗಬೇಕಾಗಿದೆ. ಆರಂಭದಲ್ಲಿ ಹರ್ಮನ್‌ಪ್ರೀತ್ ಯಶಸ್ಸು ಕಂಡರೂ ನಂತರ ಅದೇ ಲಯದಲ್ಲಿ ಮುಂದುವರಿದಿಲ್ಲ. ಜುಗರಾಜ್, ಸಂಜಯ್, ಅಮಿತ್ ರೋಹಿದಾಸ್ ಸಹ ಸುಧಾರಿತ ಆಟವಾಡಬೇಕಿದೆ.

ಗುಂಪು ಹಂತದಲ್ಲಿ ಭಾರತದ ಎದುರಿನ 4–3 ಸೋಲಿನ ನಂತರ ಚೀನಾ ಸುಧಾರಿತ ಆಟವಾಡಿದೆ. ವಿಶ್ವ ಕ್ರಮಾಂಕದಲ್ಲಿ 22ನೇ ಸ್ಥಾನದಲ್ಲಿರುವ ಚೀನಿ ಪಡೆ ಪಂದ್ಯಗಳಲ್ಲಿ ಗಟ್ಟಿ ಮನೋಬಲ ಪ್ರದರ್ಶಿಸಿದೆ. ಹೀಗಾಗಿ ಸಣ್ಣ ತಪ್ಪು ಸಹ ಭಾರತ ತಂಡದ ಪಾಲಿಗೆ ದುಬಾರಿಯಾಗಬಹುದು. ಈ ಟೂರ್ನಿಯ ವಿಜೇತರು ಮುಂದಿನ ವರ್ಷದ ವಿಶ್ವಕಪ್‌ಗೆ ನೇರ ಅರ್ಹತೆ ಪಡೆಯುವ ಕಾರಣ ಈ ಪಂದ್ಯವನ್ನು ಲಘುವಾಗಿ ತೆಗೆದುಕೊಳ್ಳುವಂತಿಲ್ಲ.

ಮಲೇಷ್ಯಾ, ಶನಿವಾರ ಸೂಪರ್‌ಫೋರ್‌ನ ಇನ್ನೊಂದು ಪಂದ್ಯದಲ್ಲಿ ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದೆ.

**ಪಂದ್ಯ ಆರಂಭ:** 7.30

ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್, ಸುಮಿತ್ ಪಿಟಿಐ ಸಂಗ್ರಹ ಚಿತ್ರ

## ಮಹಿಳಾ ಏಷ್ಯಾ ಕಪ್ ಹಾಕಿ: 11–0 ಗೆಲುವಿನೊಡನೆ ಶುಭಾರಂಭ

# ಭಾರತಕ್ಕೆ ಸುಲಭದ ತುತ್ತಾದ ಥಾಯ್ಲೆಂಡ್

ಹಾಂಗ್‌ಝೌ (ಚೀನಾ) (ಪಿಟಿಐ): ಉದಿತಾ ದುಹಾನ್ ಮತ್ತು ಬ್ಯೂಟಿ ಡುಂಗ್‌ಡುಂಗ್ ಅವರು ಗಳಿಸಿದ ಅವಳಿ ಗೋಲುಗಳ ನೆರವಿನಿಂದ ಭಾರತ ತಂಡ, ಮಹಿಳೆಯರ ಏಷ್ಯಾ ಕಪ್ ಹಾಕಿ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಶುಕ್ರವಾರ ಥಾಯ್ಲೆಂಡ್ ತಂಡವನ್ನು 11–0 ಗೋಲುಗಳಿಂದ ಸೋಲಿಸಿತು.

ಉದಿತಾ ಅವರು ಪಂದ್ಯದ 30ನೇ ಮತ್ತು 52ನೇ ನಿಮಿಷ ಪೆನಾಲ್ಟಿ ಕಾರ್ನರ್‌ಗಳ ಮೂಲಕ ಗೋಲುಗಳನ್ನು ಗಳಿಸಿದರು. ಡುಂಗ್‌ಡುಂಗ್ ಅವರು 45 ಮತ್ತು 54ನೇ ನಿಮಿಷ ಗೋಲು ಹೊಡೆದರು.

ಭಾರತದ ಇತರ ಗೋಲುಗಳನ್ನು– ಮುಮ್ತಾಝ್ ಖಾನ್ (7ನೇ ನಿಮಿಷ), ಸಂಗೀತಾ ಕುಮಾರಿ (10ನೇ), ನವನೀತ್ ಕೌರ್ (16ನೇ), ಲಾಲ್ರೆಮ್‌ಸಿಯಾಮಿ (18ನೇ), ತೋಡಂ ಸುಮನ್ ದೇವಿ (49ನೇ), ಶರ್ಮಿಳಾ ದೇವಿ (57ನೇ) ಮತ್ತು ರುತುಜಾ ದಾದಾಸೊ ಪಿಸಳ್ (60ನೇ ನಿಮಿಷ) ಅವರು ಗಳಿಸಿದರು.

ಗೋಲುಗಳು ಸೂಚಿಸಿರುವಂತೆ ಭಾರತ ಈ ಪಂದ್ಯದಲ್ಲಿ ಸಂಪೂರ್ಣ ಮೇಲುಗೈ ಸಾಧಿಸಿತ್ತು. ವಿಶ್ವ ಕ್ರಮಾಂಕದಲ್ಲಿ ಪ್ರಸ್ತುತ 9ನೇ ಸ್ಥಾನದಲ್ಲಿರುವ 'ನೀಲಿ ಧಿರಿಸಿನ ವನಿತೆಯರು' ವಿರಾಮದ ವೇಳೆಗೆ 5–0 ಗೋಲುಗಳಿಂದ ಮುಂದಿದ್ದರು. ವಿಶ್ವಕ್ರಮಾಂಕದಲ್ಲಿ ಥಾಯ್ಲೆಂಡ್ 30ನೇ ಸ್ಥಾನದಲ್ಲಿದೆ.

ಭಾರತ ಈ ಪಂದ್ಯದಲ್ಲಿ 9 ಪೆನಾಲ್ಟಿ ಕಾರ್ನರ್‌ಗಳಲ್ಲಿ ಐದನ್ನು ಗೋಲುಗಳಾಗಿ ಪರಿವರ್ತಿಸಿತು. ಥಾಯ್ಲೆಂಡ್‌ಗೆ ಪೆನಾಲ್ಟಿ ಕಾರ್ನರ್‌ಗಳೇ ಲಭ್ಯವಾಗಲಿಲ್ಲ.

ಭಾರತ ತನ್ನ ಮುಂದಿನ ಪಂದ್ಯವನ್ನು ಶನಿವಾರ ಜಪಾನ್ ವಿರುದ್ಧ ಆಡಲಿದೆ. ಗುಂಪಿನ ಅಂತಿಮ ಪಂದ್ಯದಲ್ಲಿ ಸೆಪ್ಟೆಂಬರ್ 8ರಂದು ಸಿಂಗಪುರ ತಂಡವನ್ನು ಎದುರಿಸಲಿದೆ.

ಎಂಟು ತಂಡಗಳು ತಲಾ ನಾಲ್ಕರಂತೆ ಎರಡು ಗುಂಪುಗಳಲ್ಲಿವೆ. ಮೊದಲ ಎರಡು ಸ್ಥಾನ ಗಳಿಸಿದ ತಂಡಗಳು ಸೂಪರ್ ಫೋರ್ ಹಂತಕ್ಕೆ ಮುನ್ನಡೆಯಲಿವೆ. ಈ ಹಂತದಲ್ಲಿ ಮೊದಲೆರಡು ಸ್ಥಾನ ಪಡೆಯುವ ತಂಡಗಳು ಸೆ. 14ರಂದು ಫೈನಲ್ ಆಡಲಿವೆ. ಫೈನಲ್‌ನಲ್ಲಿ ಗೆಲ್ಲುವ ತಂಡ 2026ರಲ್ಲಿ ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಮಹಿಳಾ ವಿಶ್ವಕಪ್ ಹಾಕಿ ಟೂರ್ನಿಗೆ ನೇರ ಅರ್ಹತೆ ಪಡೆಯಲಿದೆ.

ಭಾರತ ತಂಡವು ಅನುಭವಿಗಳಾದ ಗೋಲ್‌ಕೀಪರ್ ಸವಿತಾ ಪೂನಿಯಾ ಮತ್ತು ಡ್ರ್ಯಾಗ್‌ಫ್ಲಿಕರ್ ದೀಪಿಕಾ ಅವರಿಲ್ಲದೇ ಈ ಟೂರ್ನಿಯಲ್ಲಿ ಆಡುತ್ತಿದೆ. ಇಬ್ಬರೂ ಗಾಯಾಳಾಗಿದ್ದಾರೆ.

ಭಾರತ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ನವನೀತ್ ಕೌರ್ 'ಎಕ್ಸ್' ಚಿತ್ರ

ಪ್ರಜಾವಾಣಿ ಶನಿವಾರ • ಸೆಪ್ಟೆಂಬರ್ 6, 2025

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331


RERA No. PRM/KA/RERA/1251/310/PR/030125/007344

RAJESHWARI AASHIRVAD
Develop | Build | Sale

www.aashirvad.net

ನೀವು ಹೂಡಿಕೆ ಮಾಡುವ ಹಣ ಮತ್ತು ಸೈಟು ಸುರಕ್ಷಿತವಾಗಿರಲು
RERA ಮತ್ತು BMRDA ಅನುಮೋದಿತ ನಿವೇಶನಗಳನ್ನೇ ಖರೀದಿಸಿ

BMRDA & RERA APPROVED
A-KHATA ನಿವೇಶನಗಳು
ದೊಡ್ಡ ಆಲದ ಮರದ ಹತ್ತಿರ, KHB ಲೇಔಟ್ ಗೆ ಹೊಂದಿಕೊಂಡಿದೆ
ಮೈಸೂರು ರಸ್ತೆ

10 mns Chalaghatta Metro Station
10 mns Bangalore Mysore Expressway
15 mns Kengeri Railway Station
5 km Kempegowda BDA Layout

OFFER PRICE ₹2699/- PER SQFT
FESTIVAL OFFER ₹2 Lakhs DISCOUNT

✓ ನೋಂದಣಿಗೆ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ
✓ ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ
✓ ಎಲ್ಲಾ ಕಾನೂನಾತ್ಮಕ ದಾಖಲೆಗಳನ್ನು ಹೊಂದಿದೆ
✓ ಲೇಔಟ್ ಅಭಿವೃದ್ಧಿಯಾಗಿದೆ

6399889911

Layout Video Scan Here

SITE DIMENSIONS: 30X35, 30X40 ODD DIMENSIONS



DMR PROPERTIES

30 mins drive from YESHWANTHPUR Railway Station

NOW BUY YOUR OPEN PLOTS AT BEST AFFORDABLE PRICE

ನೀವು ಕೂಡ ಎಂಜಾಯ್ ಮಾಡಿ?

SPOT BOOKING OFFER ₹2 Lakhs Discount*

ಬೆಂಗಳೂರು ನಗರಕ್ಕೆ ಸಮೀಪ ಇರುವ
DMR ಫಾರಂ ಲ್ಯಾಂಡ್

LIVE WITH NATURE | YOUR OWN COTTAGE | WEEKEND GETAWAY

ನೆಲಮಂಗಲ ಹತ್ತಿರ
ಬೆಂಗಳೂರು - ಮಂಗಳೂರು ಹೈವೇ ರಸ್ತೆ
with Club House

ONE TIME INVESTMENT Life Time Enjoyment

*conditions apply

HIGHLIGHTS :
- ಬೆಂಗಳೂರು ನಗರಕ್ಕೆ ಅತ್ಯುತ್ತಮ ಸಂಪರ್ಕ
- ಬೆಂಗಳೂರು ಕೆಐಎಎಲ್ ವಿಮಾನ ನಿಲ್ದಾಣ ರಸ್ತೆಗೆ ಕೇವಲ 8 ನಿಮಿಷಗಳ ಪ್ರಯಾಣ.
- ನಮ್ಮ ಮೆಟ್ರೋ ಕೇವಲ 15 ನಿಮಿಷಗಳ ದೂರದಲ್ಲಿದೆ
- ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಆಸ್ಪತ್ರೆ ಹತ್ತಿರ
- ರಾಷ್ಟ್ರೀಯ ಹೆದ್ದಾರಿ ಹತ್ತಿರ

AMENITIES :
- ಎಂಟ್ರನ್ಸ್ ಆರ್ಚ್
- ಸುತ್ತಲೂ ಕಾಂಪೌಂಡ್ ಗೋಡೆ
- ಲ್ಯಾಂಡ್ ಸ್ಕ್ಯಾಪಿಂಗ್ ಉದ್ಯಾನವನಗಳು
- ಕ್ರಿಕೆಟ್ ಸ್ಟೇಡಿಯಂ
- CCTV 24/7
- ಪ್ರತಿ ಸೈಟಿಗೂ ಪ್ರತ್ಯೇಕ ನೀರು ಸರಬರಾಜು
- ವಿದ್ಯುತ್
- 24x7 ಸೆಕ್ಯೂರಿಟಿ,
- ಬೀದಿ ದೀಪಗಳು
- ದೇವಸ್ಥಾನ
- ಕ್ಲಬ್ ಹೌಸ್ ಮತ್ತು ಸ್ವಿಮ್ಮಿಂಗ್ ಪೂಲ್
- ವಾಕಿಂಗ್ ಟ್ರಯಲ್
- ಜಾಗಿಂಗ್ ಪಾರ್ಕ್
- ಡ್ರೈನೇಜ್
- ಕಿಡ್ಸ್ ಪ್ಲೇ ಏರಿಯಾ
- ವಿಶಾಲವಾದ ಟಾಂಬರ್ ರಸ್ತೆಗಳು
- ಹನಿ ನೀರಾವರಿ ವ್ಯವಸ್ಥೆ

ನೋಂದಣಿಗೆ ಸಿದ್ಧವಾಗಿದೆ

For Booking Contact: 9620528963, 9036558777



ಶರಣ್ಯ ಫಾರ್ಮ್ಸ್
Sharanya Farms
Create your own Sunshine

ನಿಮ್ಮ ಕನಸಿನ ತೋಟದ ಮನೆ
ನನಸು ಮಾಡುವುದೇ ನಮ್ಮ ಆದ್ಯತೆ

MS REALTIES
A TRADITION OF TRUST

Sharanya Hillview Farms
Phase- II

51 acre fully gated community
"Experience Luxury Amidst Nature" - Dive into our ready Swimming Pool while anticipating upcoming Resort Amenities

ಶ್ರೀಗಂಧದ ಮರದೊಂದಿಗೆ ನಿಮ್ಮ ಹಣವನ್ನು ಬೆಳೆಸಿ

Bengaluru-Mysuru Road

RESORT: Club House, Restaurant, Cottages

ಫಾರ್ಮ್ ಲ್ಯಾಂಡ್ ಖರೀದಿಸಿ - ನಿರ್ವಹಣೆ ನಮ್ಮದು, ಲಾಭ ನಿಮ್ಮದು

*Actual Pictures of farmhouse

*T&C Apply

ಒಂದು ಹೂಡಿಕೆಯಿಂದ ನಾಲ್ಕು ಲಾಭಗಳು!

ಫಾರಂ ಲ್ಯಾಂಡ್ ಖರೀದಿಸಿ ನಿಮಗೂ ಮತ್ತು ನಿಮ್ಮ ಕುಟುಂಬದವರಿಗೆ ರೆಸಾರ್ಟ್ ಸೌಲಭ್ಯ ಉಚಿತವಾಗಿ ಪಡೆಯಿರಿ.

ಇಲ್ಲಿನ ಫಲವತ್ತಾದ ಭೂಮಿಯಲ್ಲಿ ಶ್ರೀಗಂಧ ಮರಗಳ ಅಧಿಕ ಲಾಭ ಪಡೆಯಿರಿ.

ನಿಮ್ಮ ಫಾರಂ ಹೌಸ್ ಅನ್ನು ಬಾಡಿಗೆಗೆ ನೀಡುವುದರ ಮೂಲಕ ಪ್ರತಿ ತಿಂಗಳು ಆದಾಯ ಪಡೆಯಿರಿ.

ಇಂದಿನ ನಿಮ್ಮ ಹೂಡಿಕೆಯ ಮೇಲೆ ಮುಂದಿನ ದಿನಗಳಲ್ಲಿ ದುಪ್ಪಟ್ಟು ಲಾಭ ಪಡೆಯಿರಿ ಹಾಗೂ ಒಂದು ಹೂಡಿಕೆಯಿಂದ ಇನ್ನು ಅನೇಕ ಲಾಭಗಳನ್ನು ಪಡೆಯಿರಿ.

www.sharanyafarms.com

ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ:

70 26 26 22 33

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

## REAL ESTATE SELLING

### Sites

### Banashankari

**SITE FOR** SALE IN BANASHANKARI 6TH Stage 2nd Block 20x30 E/F, 10th Block-40x60 W/F, 4thBlock-20x30 W/F, 6th Block-20X30 W/F. Contact: 9535575774

**BDA SITES** Available @`Banashankari 6th Stage all Blocks 20x30, 30x40, 40x60 50x80 In Good Location Contact: 99722-06988

**AVAILABLE BANASHANKARI** 6th Stage, 6th Block 30x40, W/F,Near 100" Road Budget Friendly Call Lingaraju: 9663393533

**AVAILABLE BANSHANKARI** 6TH STAGE 6TH BLOCK 20×30 #971 W/F 68 LAKHS CONTACT OWNER 8050908920/ 9986866661

**BSK 6TH** Stage 5th Block East Facing 30x40 on 60 ft Road Contact: 7022435107

### BTM Layout

**SITE FOR** SALE BTM 2ND STAGE, 40*60, SOUTH EAST CORNER: CONTACT VICTORY PROPERTIES. 7411692219/8618576685

### Jigani

**KHB Sites in Surya City Near Jigani STRRA & BMRDA Approved Plots**
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

### Jakkur

**MCECHS LAYOUT** excellent location wide road 700 Sft S/F Site for sale 15,000/ Sft. Call: 98451-84220

### Kempegowda Layout

**KEMPEGOWDA LAYOUT,** Commercial/ Residential BDA Site for Sale 20x30, 30x40, 40x60, 50x80 Contact Kumar 9945119449

**KEMPEGOWDA LAYOUT,** 30x40 1st Block, 'K' Sector, Site No. 391, (Near Ring Road). Mobile: 9880201861

### Nagarabhavi

**40X60 BDA** SITE SALE Nagarbhavi Health Layout, Opposite Park, South Facing Semi Commercial Contact: 9980409820

### Outer Ring Road

**ORR(MAGADI RD-TUMKUR** Rd) facing corner commercial site 2,800 Sqft near Pipeline/Chowdeshwarinagar Rs. 22,000 call: 9980555558

### Sarjapur Road

**COMMERCIAL BDA** Site For Sale on HARLUR Road, Sarjapur Road Price 15000/- Sft. Contact: 9980577227

### Vishweshwariah Layout

**BDA SITE** SALE VISHWESHWARAIAH LAYOUT 1ST BLOCK 30X40 EAST FACE 13000/- NEGOTIABLE DIRECT OWNER MEETING CONTACT: 8892901567

**BUYING/ SELLING** 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

**SMV 6TH** BLOCK Attach, Commercial 30x50 BBMP A Khatha Site Sale 10500/- Per Sqft: 9964971895

**DIRECT OWNER** Near Metro Station, Vishweshwaraiah Layout, Kempegowda Layout 30x40, 40x60, 50x80 Commercial: 9620696913/ 9880781399

### Hennur

**BYRATHI KANAKASHREE** layout excellent location 1385 Sft site S/F opposite park for sale 12,500/ Sft. Call: 98451-84220

### Kengeri Satellite Town

***30X40 E/F** BBMP* 'A' Khata Site-Sale KENGERI SATELLITE TOWN, Arunachalam Layout,Clear Title.₹.10000/-. 9742681666/ 9886634578

### Commerical

### Kempegowda Layout

**50×80** Commercial Site 80 feet Road attached **and 30×40** Residential Site 30 feet Road attached @ Nadaprabhu Kempegowda Layout in Kommagatta 9000/ sqft fixed. **Call: 9900040218**

### HSR Layout

**HSR 1ST** Sector Sale Semi-Commercial 40x60 North Facing 4Lakhs Rent Getting @ 10.5Cr Negotiable Shivu: 9880004149

### Flat

### Basavanagudi

**BASAVANAGUDI SALE** FLAT BRAND NEW 2050 SFT NEAR KR PARK OC-CC 3.4 Crore NEGO. SHIVU 9880004149

### Kanakapura Road

**SALE OF FLATS** Close to Silk Institute Metro & Nice Road Flats with Feel of A Villa 3 BHK starts from 1.25Cr. Private Varanda Space, RERA APPROVED, 100%Vastu Compliant Homes, Balinese Theme Land Space, with 60+Amenities. Call: 9743859000.

## ಕ್ಲಾಸಿಫೈಡ್ಸ್ WEEKEND CORNER

### Farm House/ Land/ Resorts

### Kanakapura Road

**SALE KANAKAPURA** TOWN Near City Bus-Stand 2 Acre Land Sufficient Water and Electricity Contact: 9945928994

### House

### Padmanabha Nagar

**SITE FOR** SALE 1,666 sqft. R.K. Layout, Near Hillside Hospital, BDA 'A' Katha, 1 Lac Rental income G+2, 3 shops Rs. 20,000 /sqft. Facing: East, South, West Corner Site. JAGADISH 9513557466

### Moodalpalya

**15X40 SOUTH** G+2 Building 5 Houses, East Door, SVG Nagar, Moodalapalya, E-Katha 83L Owner 9739957911

### Industrial & Factory

### General

**SALE-AT KUNIGAL** 22,000sqft KIADB Industrial Corner Site, Opposite'to Johnson factory, 250mtrs from Highway,'Clear titles. Owner 9900276199.

### Residential/ Commercial

### Devanahalli

**NANDIHILLS BENGALURUNORTH** 19602 Sqft converted eKhata gated 15furnished rooms rental income 6L Sale 10Cr Ph:9900106706

### Multiple Locations

**REAL ESTATE**- We undertake Property Maintenance, Civil, Painting, Electrical, Plumbing. Carpentry. Farm-house. Houses. Offices. Industrial shed's etc- Invest on Small Agricultural plots around Bangalore South, Harohalli, Jigani, Maralwadi etc.and get Good returns in Resale Business- Property Monitoring- Property Management- Rental/ Buying/Selling of All kinds of properties. Contact- Victory Properties: Mobile: 7411692219/ 8618576685/ 9686894972 info@victoryproperties.in www.victoryproperties.in

### Villas/Bunglows

### Double Road

**FOR SALE** INDEPENDENT Bunglow 40x60 East Facing E Khata Road Hitting Brokers Excuse Call: 9242795350

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

## REAL ESTATE BUYING

### Industrial & Factory

### Multiple Locations

**WANTED CITY** Limits Private Industrial Land from 10,000sq.ft. upto 2 Acres and KIADB Land measuring 10,000sq.ft. to 4 Acres in Bangalore Urban & Rural District. Call Verna Developers, Barton Center, MG Road, BLR. 9353128035/ 9916310226.

### Resedential/ Commercial

### Multipal Locations

**WANTED RESIDENTIAL** Property 1200 to 10,000sft in Jayanagar, Basavanagudi, Chamrajpet, JP Nagar, Banashankari 2nd Stage, Koramangala and Indiranagar. Call Verna Developers, Barton Centre, MG Road. 9916310226/ 9353128035. (Brokers Excuse)

### Sites

### Multiple Locations

**WANTED BDA SITES** Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout. Contact: SAPTHAGIRI. 9036360366.

### Vishweshwariah Layout

***BUYING/ SELLING*** 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

**WANTED VISHWESHWARAIAH** Layout 30x40 & 40x60 BDA Property Contact: 7899570235

## BUILDERS ESSENTIAL

### Water Proofing

**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

## RENTAL PROPERTIES

### Accommodation Available

### Commercial

**BBMP 'A'** KHATHA Prime Property around 85,000 sqft. around 500 mts. from Kengeri Metro Available for Long LEASE. Built to Suit for Companies, School, College etc. 9483509169

**SHOP SHOW** Room 800 to1000 sq Feet For Rent in Sheshadripuram Main Road Contact: Srinivas: 9448463652, Arjun:8762687674

**TOLET**
Location Near Karumariyamma Temple, VI Block, Rajajinagar, Bangalore - 560010.
Behind Magadi Road, Metro Station - 50 meter distance
**TWO B.H.K.**
Second Floor - East Facing
Advance Rs. 50,000/- Monthly Rent Rs.12,000/-
**ONE B.H.K.**
First Floor - West Facing
Advance Rs. 40,000/- Monthly Rent Rs.8,000/-
**Contact : 9731860063**

## JOB OPPORTUNITIES

### General

**WANTED TELE** CALLERS Experienced female. Accommodation also available. Basaveshwaranagara Bangalore. 8217593354/ 9964617174

## BUSINESS

### Business to Business

### Business

**COLLATERALS/ JOINT VENTURES/** Finance for big Projects/ Take Overs/ Buying/ Selling/ Any Other Good Projects. Vamshadhara Projects And Services. Dr.Swamy Naidu:- 9342247637.

**FOR OUTDOOR** Branding, Autoback, Bus back, Cycle, Mobile Van, Police Barricades, Hoardings No parking boards. branding for Educational institutions, Corporates, Business, Jewellery Brands, FMNG's/ Small Eateries/ Events branding Contact Venuscast Technologies Pvt.Ltd. (UAE& Bangalore). www.Venuscast.com Call:9482303339/ 8722123445/ 9538123445

**INSURANCE FOR** Life, General, Health, Automobile, Factories, Business, Educational institutions, Students, international Travel/ Private &Public sector employees insurances. Contact Victory Fin Services. www.victoryfinservices.com. Call: 7411692219/ 8618576685/ 9482303339

### Finance

**LOANS ARRANGED** for Housing, Business, Educational institutions, Personal, Automobile, Govt.Employees, Software Employees from Banks. Contact Victory Fin Services. www.victoryfinservices.com Call: 7411692219/ 8618576685/ 9482303339

### Business Offers

### Finance

**MSME LOANS** Available for Any Startup Companies,Any Existing Companies NOTE:Also one Approved Loan Available Contact-7204995189

### General

**WE BUY INDUSTRIES,** Industrial Metal Scraps, Copper, Alluminium, Building Dismantle/ Demolition contract in and around Bengaluru and Karnataka immediate payment. Call Verna Metals, Barton Centre, MG Road. 9620253180.

## PERSONAL

### Change of Name

**ಹೆಸರು ಬದಲಾವಣೆ**
ನಾನು, **ಹರಿಬಾಬು ಬಿ,** ಬಾಲಕೃಷ್ಣ ಅವರ ಪುತ್ರ, ನಂ. 88/4, ಪಿಳ್ಳಯ್ಯರ್ ಕೋವಿಲ್ ಸ್ಟ್ರೀಟ್, ವಿ.ಟಿ.ಸಿ: ಕೋಟ್ಟೈ ಮೋಟ್ಟೂರ್, ಜಿಲ್ಲೆ: ವೆಲ್ಲೋರ್, ರಾಜ್ಯ: ತಮಿಳುನಾಡು, ಪಿನ್ ಕೋಡ್: 632059, ನಲ್ಲಿ ವಾಸಿಸುತ್ತಿದ್ದು, ದಿನಾಂಕ 03/09/2025 ರ ಪ್ರಮಾಣ ಪತ್ರದ ಪ್ರಕಾರ ನನ್ನ ಹೆಸರನ್ನು **ಹರಿ ಬಾಲಕೃಷ್ಣ** ಎಂದು ಬದಲಿಸಿಕೊಂಡಿದ್ದೇನೆ. ಇಂದಿನಿಂದ ನನ್ನನ್ನು **ಹರಿ ಬಾಲಕೃಷ್ಣ** ಎಂದು ಕರೆಯಲಾಗುವುದು.

DH DECCAN HERALD Classifieds
More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-*
FOR 15 WORDS

www.dhclassifieds.com
BOOK NOW
*Conditions apply
Book your ad with us now! For more details contact:
+91 9845114560| +91 9886213331
+91 9731810277 | +91 9900428036 | 080-45557163/164

DH DECCAN HERALD
Classifieds
More value, more impact
ಪ್ರಜಾವಾಣಿ
EDUCATION

Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
9731810277 | 9886213331
9845114560 | 9900428036
080- 45557163/164
*Conditions apply

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
# ಕ್ಲಾಸಿಫೈಡ್ಸ್


ಡಿಸ್–ಮ್ಯಾಕ್ಸ್ ಪ್ರಾಪರ್ಟೀಸ್

JOY OF LIVING

DS MAX®

Where Every Home is a Perfect Blend of Design, Elegance, and Emotion

LUXURIOUS 2, 3 & 4-BHK
APARTMENTS

Yelahanka | Silkboard | Banashankari
Chandapura | Airport Road | Tumkur Road
Electronic City | Magadi Road | Attibele
Jigani | Mysore Road | Whitefield
Sarjapura | Bannerghatta Road

₹60 L - ₹2 Cr*

Visit our website or talk to our advisors for the complete portfolio.

www.dsmaxproperties.com

+91 8880 758 758

CREDAI BENGALURU

*T & C Apply



FACILITY MANAGEMENT SERVICES

For Apartment & Commercial Complexes

MEP | Security Services | Gardening
Landscaping | STP | WTP | RO Maintenance
Swimming Pool Maintenance
Housekeeping

CALL : 9164 022 000



ELEGANT INTERIORS

Directly From Our Factory

False Ceilings | Furniture
Modular Kitchens | TV Units
Wardrobes | Painting & Wallpapers
Storage Units

CALL : 9164 056 000

REFER & EARN

Refer Us to your Friends & Relatives and Get Rewarded

2, 3 & 4-BHK Homes
Interiors
Facility Management Services

CALL : 9164 043 000

REFER A LAND

Refer Us To A Landowner For JV / Outright Purchase In Any Part Of Bengaluru

Residential Land | Commercial Land

CALL : 8880 463 463

*T & C Apply

**Disclaimer:** This advertisement provides indicative information only. Images are for representation, and all prices are base and subject to applicable taxes and statutory payments. Please contact our Sales Team or visit our website for complete details. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. **Visit: www.rera.karnataka.gov.in**

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331